Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಣ್ಣೋಟದ ಹೆಗ್ಗಳಿಕೆ


**(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2019 – ಧಾರವಾಡ, ನೆನಪಿನ ಹೊತ್ತಗೆ)**

**ಸಂ:**

ಶಾರದಾ ಗೋಪಾಲ

ಸುನಂದಾ ಕಡಮೆ

ರಾಜೇಶ್ವರಿ ಜೋಶಿ



*ಪ್ರಕಟಣೆ*

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ**

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಹೆಣ್ಣೋಟದ ಹೆಗ್ಗಳಿಕೆ**

(ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2019, ಧಾರವಾಡದ ನೆನಪಿನ ಹೊತ್ತಗೆ)

*ಸಂಪಾದನೆ:*
**ಶಾರದಾ ಗೋಪಾಲ,** 57, ಸೋನಿ ತೇಜಸ್ವಿನಗರ ಧಾರವಾಡ, ಫೋ: 9902840033
**ಸುನಂದಾ ಕಡಮೆ,** ನಾಗಸುಧೆ, ಕಾಳಿಕಾದೇವಿ ನಗರ, ಹುಬ್ಬಳ್ಳಿ.ಫೋ: 9901445030,
**ರಾಜೇಶ್ವರಿ ಜೋಶಿ ಕಾದಂಬಿನಿ,** ನಾರಾಯಣಪುರ, ಧಾರವಾಡ, ಫೋ: 9480189642

ಪುಟಗಳು: vi+178=184
ಬೆಂಬಲ ಬೆಲೆ: 100 ರೂ.
ಪ್ರಕಟಣೆ ವರ್ಷ: 2020
ಹಕ್ಕುಗಳು: ಒಕ್ಕೂಟದ್ದು

*ಪ್ರಕಟಣೆ:* ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಧಾರವಾಡ
*ಪ್ರಕಟಣೆಗೆ ಧನಸಹಾಯ:*
ಶ್ರೀ ಮಂಜುನಾಥ್ ಅದ್ದೆಯವರಿಂದ ತಮ್ಮ ತಾಯಿ **ದಿ. ಲಕ್ಷ್ಮಮ್ಮ** ಅವರ ಗೌರವಾರ್ಥ.

ಮುಖಪುಟ ಮತ್ತು ಪುಟ ವಿನ್ಯಾಸ: ಶರತ್ ಎಚ್ ಕೆ
ಮುದ್ರಣ:

**HeNNu Notada HeggaLike**

(Memoirs of international women`s day 2019, Dharwad)

*Edited by*
Sharada Gopal, Tejaswinagar, Dharwad, Mob: 9902840033
Sunanda Kadame, Hubballi, Mob: 9901445030
Rajeshwari Joshi, Dharwad, Mob: 9480189642

Pages: vi+178=184
Support Price: 100 Rs.
First edition published in: 2020
Copy right: Publisher

*Published by:*
All Karnataka Federation of Women Against Atrocities, Dharwad
*Sponsored By:*
Sri Manjunath Adde in the memory of his mother Late Smt. Lakshmamma

Cover page and inner design: Sharath H K

Printed at:

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

## ಪರಿವಿಡಿ

ಇಂತು ಸಾಗಿದೆವು ನಾವು – *ಸುನಂದಾ ಕಡಮೆ, ಶಾರದಾ ಗೋಪಾಲ* / 01
ಒಕ್ಕೂಟದ ಸಂವಿಧಾನ / 07

**ಹೆಜ್ಜೆಯಿಡುವ ಮುನ್ನ**

ಧಾರವಾಡದ ಮಹಿಳಾ ಸಾಂಸ್ಕೃತಿಕ ಪರಂಪರೆ – *ಡಾ. ಹೇಮಾ ಪಟ್ಟಣಶೆಟ್ಟಿ* / 12
ಚುನಾವಣೆ ಒಳ ಹೊರಗೆ – *ಸಂವಾದ: ಡಾ. ಎಚ್. ಎಸ್. ಅನುಪಮಾ* / 15
ಬೆಳಗಾವಿ ವಿಧಾನಸಭಾ ಅಧಿವೇಶನದ ವೇಳೆ ಹಂಚಿದ ಕರಪತ್ರ / 25
ನಮ್ಮ ದೇಶದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರು ಆಟಕ್ಕುಂಟು, ಲೆಕ್ಕಕ್ಕಿಲ್ಲ:
*ಶಾರದಾ ಗೋಪಾಲ* / 29
ಧಾರವಾಡದ ಅಧ್ಯಯನ ಶಿಬಿರ: *ಪವಿತ್ರ ಜ್ಯೋತಿಗುಡ್ಡೆ* / 32
ವಾರ್ಧಾ ಅಧ್ಯಯನ ಪ್ರವಾಸ: *ವಾಣಿ ಪೆರಿಯೋಡಿ* / 40
ಕೌದಿಯಂತಾ ಮಹಿಳಾ ಚಳುವಳಿ: *ಡಾ. ಸಬಿತಾ ಬನ್ನಾಡಿ* / 45

**ಅಕ್ಕ ಕೇಳೇ..**

ಅರಿವಿನ ಪಯಣ  ಇದು ನಿರಂತರ ಪಯಣ: *ಸವಿತಾ, ಭಾರತಿ* / 49
ತಾರತಮ್ಯದಿಂದ ದೂರ ದೂರ: *ಅಕ್ಕಮ್ಮ ಅರಗಂಜಿ* / 53
ಅರಿವಿನೆಡೆಗೆ ನನ್ನ ಪಯಣ: *ದಿಲಶಾದ್ ಸುತಾರ* / 55
ಅರಿವಿನತ್ತ ನನ್ನ ಪಯಣ: *ರಾಜೇಶ್ವರಿ* / 57
ಧಾರವಾಡ ಜಿಲ್ಲೆಯಾದ್ಯಂತ ಯಶಸ್ವೀ ಅರಿವಿನ ಪಯಣ: *ಸುನಂದಾ ಕಡಮೆ* / 59

**'ಬೆಳಗೋಣ ಸಾಲು ದೀಪ'**

ಕಪ್ಪು ಉಡುಪಿನಲ್ಲಿ ಮಹಿಳೆಯರು ಕರಪತ್ರ / 62
ಬೆಳಗೋಣ ಸಾಲು ದೀಪದ ಮೌನ ಜಾಗೃತಿ: *ರಜನಿ ಗರುಡ* / 65
ಯುದ್ಧ ಸಲ್ಲದು! ಶಾಂತಿ ಬೇಕು!: *ಶಾರದಾ ಗೋಪಾಲ* / 68

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಸಾಹಿತ್ಯ ಸಮ್ಮೇಳನದಲ್ಲಿ ಒಕ್ಕೂಟ**

ಮನುವಾದ ಎತ್ತಿ ಹಿಡಿದ ಸಾಹಿತ್ಯ ಸಮ್ಮೇಳನ: *ಸುನಂದಾ ಕಡಮೆ* / 72
ಪುರುಷ ಜಂಭವ ಹೊತ್ತು: *ದಾಕ್ಷಾಯಿಣಿ ಹುಡೇದ* / 75
ಅ–ಸ್ಪರ್ಶ: *ಡಾ. ಸಬಿತಾ ಬನ್ನಾಡಿ* / 76
ಹೇಳಬೇಕಿತ್ತು ಅಂದೇ: *ಡಾ. ಎಚ್. ಎಸ್. ಅನುಪಮಾ* / 77

**ನಮ್ಮ ಸೀಟು ನಮ್ಮದು**

ಮತ್ತೆ ಬರಬಾರದೇ ಧಾರವಾಡದಲ್ಲಿ ಮಹಿಳಾ ಸಮ್ಮೇಳನ: *ವಿಜಯಲಕ್ಷ್ಮಿ ಗದಗಿನ* / 80
ಪಯಣದಲೊಂದು ವಿಶ್ವಾಸದ ನಡೆ: *ನಿರ್ಮಲಾ ಶೆಟ್ಟರ್* / 84
ಪ್ರತಿ ರಾಜ್ಯ, ಜಿಲ್ಲೆಯಲ್ಲೂ ನಡೆಯಬೇಕು: *ಗೌರಮ್ಮ ದೊಡಮನಿ* / 86
ಬನ್ನಿ, ಕೈಗೆ ಕೈ ಜೋಡಿಸೋಣ: *ರಾಜೇಶ್ವರಿ ಜೋಶಿ* / 87

**ಮೆರವಣಿಗೆ ಹೊರಟೆವು**

ಒಕ್ಕೂಟದ ಕರಪತ್ರ / 90
ಆಹ್ವಾನ ಪತ್ರಿಕೆಗಳು / 99
ಹಾಡಿನ ಹುಚ್ಚವ್ವಾ: *ಸವಿತಾ ನಾಗಭೂಷಣ* / 104
ಅತಿಥಿಗಳ ಪರಿಚಯ: *ದು. ಸರಸ್ವತಿ* / 106
ಮಹಿಳೆ ಮತ್ತು ರಾಜಕೀಯ ಪ್ರಜ್ಞೆ: *ಮಣಿಮಾಲಾ, ದೆಹಲಿ* / 111
ಅಧಿಕಾರ ರಾಜಕಾರಣ ಮತ್ತು ಮಹಿಳಾ ಪ್ರಾತಿನಿಧ್ಯ: *ಶಾಂತಲಾ ದಾಮ್ಲೆ* / 121
ದಮನಿತ ನೆಲೆಯಿಂದ ಮಹಿಳಾ ಪ್ರಾತಿನಿಧ್ಯ: *ಕಾವೇರಿ ಎಚ್. ಎಂ.* / 125
ಮಹಿಳಾ ರಾಜಕೀಯ ಪ್ರಜ್ಞೆ ಮತ್ತು ಪ್ರಜಾತಂತ್ರ: *ಸಿರಿ ಗೌರಿ* / 127
ಸಾಮೂಹಿಕ ನಾಯಕತ್ವದತ್ತ ಮಹಿಳಾ ರಾಜಕಾರಣ: *ಸ್ವರ್ಣ ಭಟ್* / 130
ಮಹಿಳೆ ಮತ್ತು ರಾಜಕೀಯ ಪ್ರಜ್ಞೆ: *ಎನ್.ಗಾಯತ್ರಿ* / 133
ನಮ್ಮದು ಪ್ರೀತಿಯ ರಾಜಕೀಯ: *ಡಾ. ಲತಾ ಪ್ರತಿಭಾ ಮಧುಕರ್* / 139
ಹೆಣ್ಣು ಇಲ್ಲದ ಜಗತ್ತನ್ನ ಕಲ್ಪಿಸಿಕೊಳ್ಳಾಕ ಸಾಧ್ಯ ಇಲ್ಲ: *ಡಾ. ಮೀನಾಕ್ಷಿ ಬಾಳಿ* / 144
ದೇಶಭಕ್ತಿ ಮತ್ತು ಯುದ್ಧೋನ್ಮಾದ: *ಅಮರ್‌ಜಿತ್ ಕೌರ್* / 151
ವಿಶಿಷ್ಟ ಅನುಭವ: *ಶಾರದಾ ಪಾಟೀಲ್* / 158
ಕೊನೆಯ ಮಾತು / 161

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೆಣ್ಣು ಹಾದಿಯ ನಂದಾದೀಪಗಳಂತೆ ಹೋರಾಟ ರೂಪಿಸಿದ
ಮದ್ಯ ನಿಷೇಧ ಆಂದೋಲನ ಮತ್ತು ಅಂಗನವಾಡಿ ಸೋದರಿಯರಿಗೆ..

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಇಂತು ಸಾಗಿದೆವು ನಾವು..

**2018**ರ ಮಾರ್ಚ್ 8 ಹಾಗೂ 9 ರಂದು ಶಿವಮೊಗ್ಗೆಯಲ್ಲಿ ನಮ್ಮ ಒಕ್ಕೂಟದ ಮಹಿಳಾ ದಿನ ಆಚರಣೆಯಾಗುತ್ತಿದ್ದ ಸಮಯದಲ್ಲಿ ನಾನು ಉತ್ತರ ಕರ್ನಾಟಕ ಲೇಖಕಿಯರ ಸಂಘದ ಕಾರ್ಯಾಧ್ಯಕ್ಷೆಯಾಗಿದ್ದೆ. ಧಾರವಾಡದ ಹಿರಿಯ ಲೇಖಕಿ ಹೇಮಾ ಪಟ್ಟಣಶೆಟ್ಟಿ ಅಧ್ಯಕ್ಷೆಯಾಗಿದ್ದರು. ನಾನು ಹಾಗೂ ಹೇಮಕ್ಕ 2017 ರಲ್ಲಿ ವಿಜಯಪುರದಲ್ಲಿ ನಡೆದ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡಿದ್ದೆವು. ನಂತರ ಕೊಪ್ಪಳದಲ್ಲಿ ನಡೆದಾಗ ನಮಗೆ ಅನಿವಾರ್ಯ ಕಾರಣದಿಂದ ಹೋಗಲಾಗಿರಲಿಲ್ಲ. ಆ ನಂತರ ಮಹಿಳಾ ಸಮಾವೇಶದ ತಯಾರಿಯು ಶಿವಮೊಗ್ಗೆಯಲ್ಲಿ ನಡೆದಾಗ ಕರವಸ್ತ್ರಗಳನ್ನು ಕೊಂಡು ಸಂಘದ ಸದಸ್ಯೆಯರಿಗೆ ವಿತರಿಸಿ, ಒಕ್ಕೂಟದ ಕಾರ್ಯಕಲಾಪಗಳ ಕುರಿತು ಅರಿವು ಮೂಡಿಸಿದ್ದೆವು. ಹಾಗಾಗಿ ಶಿವಮೊಗ್ಗ ಸಮಾವೇಶಕ್ಕೆ ನಮ್ಮ ಲೇಖಕಿಯರ ಸಂಘದಿಂದ ಒಂದು ದೊಡ್ಡ ಗುಂಪೇ ಹೊರಡುವ ತಯಾರಿ ನಡೆಸಿದ್ದೆವು. ಆದರೆ ಕೊನೇ ಘಳಿಗೆಯಲ್ಲಿ ಅನಿವಾರ್ಯ ಕಾರಣಗಳಿಂದ ನಾನೊಬ್ಬಳೇ ಹೊರಡುವದಾಯ್ತು. ಇನ್ನು ಲೇಖಕಿಯರ ಸಂಘದಲ್ಲಿಲ್ಲದಿದ್ದರೂ ಗುಲಾಬಿ ಬಿಳಿಮಲೆಯವರೊಡನೆ ಫೇಸ್ಬುಕ್ಕಿನಲ್ಲಿ ಸಂಪರ್ಕಿಸಿದ ಶಾರದಾ ಪಾಟೀಲ ಅವರು ಅಂದು ನಾನು ಶಿವಮೊಗ್ಗೆಗೆ ಹೊರಡುವ ಬಸ್ಸಿನಲ್ಲೇ ಹತ್ತಿಕೊಂಡರು. ನಮ್ಮಿಬ್ಬರ ಪರಿಚಯ ಸ್ನೇಹವಾಯಿತು.

ಅಲ್ಲಿ ಸಮಾವೇಶ ನಡೆಯುತ್ತಿದ್ದಾಗಲೇ ಅನುಪಮಾ, ಸರಸ್ವತಿ, ವಾಣಿಯವರು, '2019ರ ಸಮಾವೇಶವನ್ನು ಧಾರವಾಡದಲ್ಲಿ ಮಾಡುತ್ತೀರಾ? ಚರ್ಚಿಸಿಕೊಳ್ಳಿ. ಒಪ್ಪಿಗೆಯಿದ್ದರೆ ಸಾಂಕೇತಿಕವಾಗಿ ಇಲ್ಲಿಂದ ಗಿಡ ಒಯ್ಯುವ ಸಂಪ್ರದಾಯವಿದೆ' ಎಂದಿದ್ದರಿಂದ ನಾನು ಹೇಮಕ್ಕನಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ಆ ಕ್ಷಣವೇ ಅವರು ಒಪ್ಪಿಗೆ ಕೊಟ್ಟು ಗಿಡ ತರಲು ಹೇಳಿದರು. ನನಗೋ ಸಮಾವೇಶ ಅಂದಕೂಡಲೇ ಪ್ರತಿ ವರ್ಷ ಮೇ ಸಾಹಿತ್ಯ ಮೇಳವನ್ನು ಧಾರವಾಡದಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬಂದ ಬಸೂ ಸೂಳಿಭಾವಿ ಹಾಗೂ ಅವರ ಗುಂಪಿನ ಮೇಲೆ ಎಲ್ಲಿಲ್ಲದ ವಿಶ್ವಾಸವಿತ್ತು. ನಂತರ ಧಾರವಾಡದಲ್ಲಿ ತಮ್ಮ ಸಾಮಾಜಿಕ ಕೆಲಸಗಳಲ್ಲಿ ತುಂಬಾ ಕ್ರಿಯಾಶೀಲರಾಗಿರುವ ಶಾರದಾ ಗೋಪಾಲ ಇದ್ದಾರೆ ಎಂಬ ಧೈರ್ಯ. ಜೊತೆಗೆ ರಾಜೇಶ್ವರಿ ಜೋಶಿ, ರಜನಿ ಗರುಡ, ಸಿಸ್ಟರ್ ಲಿನೆಟ್ ಮತ್ತು ಎಐಎಂಎಸ್ಎಸ್ ಮಧುಲತಾರಂಥ ಸೋದರಿಯರ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಬೆಂಬಲ ಖಂಡಿತಾ ಸಿಗುತ್ತದೆ ಎಂಬ ನಂಬಿಕೆಯಿತ್ತು. ಹೀಗೆ ನಾನು ಹಾಗೂ ಶಾರದಾ ಪಾಟೀಲ ಮಹಿಳಾ ಚೇತನದ ಸಂಕೇತವಾದ ಹಸಿರು ಗಿಡವೊಂದನ್ನು ಜಾಥಾ ಉದ್ಘಾಟನೆಯ ವೇಳೆ ತೆಗೆದುಕೊಂಡು ಧಾರವಾಡಕ್ಕೆ ತರುವುದರ ಮೂಲಕ ಒಕ್ಕೂಟದ 2019ರ ಮಹಿಳಾ ಸಮಾವೇಶ ಧಾರವಾಡಕ್ಕೆ ಬಂತು.

ನಂತರ ಸಂಗಾತಿಗಳ ಮೊದಲ ಸಭೆಯನ್ನು ನಾಗಸುಧೆ ಜಗಲಿಯಲ್ಲಿ ಹಮ್ಮಿಕೊಂಡೆವು. ಮೇಲೆ ಹೆಸರಿಸಿದ ಎಲ್ಲ ಸಹೋದರಿಯರೂ ಸಂತೋಷದಿಂದ ಕೈಜೋಡಿಸಿದರು. ನಂತರ ಧಾರವಾಡದಲ್ಲಿ ಸೇರಿದ ಸಭೆಯಲ್ಲಿ ವಾಣಿಯವರು ಶಿವಮೊಗ್ಗಾ ಸಮಾವೇಶದಲ್ಲಿ ಉಳಿದ ಹಣದ ಇಡುಗಂಟನ್ನು ನಮ್ಮ ಕೆಲಸಗಳಿಗೆ ಮೊದಲ ಕಾಣಿಕೆಯಾಗಿ ಸಮರ್ಪಿಸಿದ್ದು ಮರೆಯಲಾರದ ಘಳಿಗೆ. ಆನಂತರ ಕೆಲಸ ಯೋಜಿಸಲು, ಹಂಚಿಕೊಳ್ಳಲು ನಿಯಮಿತವಾಗಿ ಸಭೆ ಸೇರುತ್ತಿದ್ದ ನಮ್ಮ ಸಂಗಾತಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಗೌರಮ್ಮ ದೊಡಮನಿ, ಬಸಂತಿ ಹಪ್ಪಳದ, ಅಕ್ಕಮ್ಮ ಅರಗಂಜಿ, ಅರುಂಧತಿ ದೇಶಪಾಂಡೆ ದಂಪತಿ, ಶಂಕರಗೌಡ ಸಾತ್ಮಾರ, ಲಡಾಯಿ ಬಸೂ, ಯುವತಿಯರಾದ ಸವಿತಾ, ಭಾರತಿ ಹೀಗೆ ಬಳಗ ಬೆಳೆಯುತ್ತಾ ಹೋಯಿತು. ಶಾರದಾ ಗೋಪಾಲ ಅವರ ಸಂಘಟನೆಯ ಸಹೋದರಿಯರೂ ಜೊತೆಯಾದರು. ಆರಂಭದಒಕ್ಕೂಟದ ಸಭೆಯೊಂದರಲ್ಲಿ ವಿಜಯಪುರದಿಂದ ಬಂದ ಪ್ರೊ. ಸಬಿಹಾ ಮತ್ತು ಪ್ರೊ. ಸುನಂದಮ್ಮ ಮೇಡಂಸಹ ಇದ್ದರು.

ಮಾರ್ಚ್ ಸಮಾವೇಶದ ಪೂರ್ವಭಾವಿಯಾಗಿ ಧಾರವಾಡದ ನೆಲದಲ್ಲಿ ಜನಜಾಗೃತಿ ನಡೆಸಲೋಸುಗ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡೆವು. 'ಮಹಿಳೆ ಮತ್ತು ಚುನಾವಣೆಯ ಒಳ–ಹೊರಗು', ಕೃಷಿ ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಅಧ್ಯಯನ ಶಿಬಿರ, ವಾರ್ಧಾ, ನಾಗಪುರಕ್ಕೆ ಅಧ್ಯಯನ ಪ್ರವಾಸ, ಇವು ಒಕ್ಕೂಟವನ್ನು ಧಾರವಾಡದ ಗೆಳತಿಯರಿಗೆ ಸರಿಯಾಗಿ ಪರಿಚಯಿಸಿದವು. ತದನಂತರದ ದಿನಗಳಲ್ಲಿ ಬಸ್‌ನಲ್ಲಿ ಮಹಿಳಾ ಸೀಟಿನ ಕುರಿತಾಗಿ ಅಂದೋಲನ, ಅರಿವಿನ ಪಯಣ, ಕಪ್ಪು ಉಡುಪಿನಲ್ಲಿ ಮಹಿಳೆ, ಸಾರ್ವಜನಿಕರಿಂದ ಹಣ ಸಂಗ್ರಹಣೆ ಮುಂತಾದ ಕೆಲಸ ಕಾರ್ಯಗಳು ನಮಗೆ ಒಕ್ಕೂಟದ ಸ್ವರೂಪ, ಕಾರ್ಯವಿಧಾನ, ಧೋರಣೆಗಳ ಬಗೆಗೆ ಮನದಟ್ಟು ಮಾಡುತ್ತ ಸಾಗಿದವು. ಆಗಾಗ ಅಖಿಲಾ, ಸಬಿತಾ, ರೇಖಾಂಬಾ, ಮಲ್ಲಿಗೆ, ಗುಲಾಬಿ, ಮರ್ಲಿನ್, ವಿಜಯಮ್ಮ ಮುಂತಾದ ಸಂಗಾತಿಗಳ ಪ್ರೋತ್ಸಾಹವೂ ದೊರೆಯಿತು. ಪವಿತ್ರಾ, ಚೈತ್ರಾ, ಜ್ಯೋತಿ ಹಿಟ್ನಾಳ ಆಗಾಗ ಬಂದು ಅರಿವಿನ ಪಯಣದಲ್ಲಿ ಪಾಲ್ಗೊಳ್ಳುತ್ತಿದ್ದರು. ವಾಣಿ ಪೆರಿಯೋಡಿ ಅವರಂತೂ ಸರಿಯೇ ಸರಿ, ಧಾರವಾಡದ ಗುಂಪಿನ ಭಾಗವೇ ಆಗಿದ್ದರು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ, ಸಮುದಾಯದವರಿಗಾಗಿ ನಡೆಸುವ 'ಅರಿವಿನ ಪಯಣ'ದ ಕುರಿತು ಧಾರವಾಡದ ಸಂಗಾತಿಗಳಿಗಾಗಿ ರಂಗಾಯಣದಲ್ಲಿ ಒಂದು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ತರಬೇತಿಯನ್ನೂ ವಾಣಿ, ಸರಸ್ವತಿ, ಅನುಪಮಾ ನಡೆಸಿಕೊಟ್ಟರು. ಅದರಲ್ಲಿ ಒಂದು ಗಂಟೆಯಲ್ಲಿ ನಾವು ಹೇಳಬೇಕಾಗಿರುವ ವಿಷಯಗಳು, 'ನೀಲಿ ರಿಬ್ಬನ್' ಎಂಬ ನಾಟಕ, ಹಾಡುಗಳು, ಮೂರ್‍ನಾಲ್ಕು ಕತೆಗಳು ಎಲ್ಲ ಸೇರಿ ಕಿರುಪುಸ್ತಕ ರೂಪದಲ್ಲಿ ಅಣಿಯಾದವು. ನಾವು ಒಂದೊಂದು ಗುಂಪಾಗಿ ಮಾಡಿಕೊಂಡು ಧಾರವಾಡ ಜಿಲ್ಲೆಯ ಎಂಟೂ ತಾಲೂಕುಗಳನ್ನು ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ನಿರಂತರವಾಗಿ ಸಂದರ್ಶಿಸಿದೆವು. ಶಾಲಾ ಕಾಲೇಜುಗಳಲ್ಲಿ,ಸಮುದಾಯದ ಮಹಿಳೆಯರ ಜೊತೆಯಲ್ಲಿ, ಹಾಸ್ಟೆಲುಗಳಲ್ಲಿ ಅರಿವಿನ ಪಯಣ ಅಭಿಯಾನ ನಡೆಸಿದ್ದು ಅವಿಸ್ಮರಣೀಯ. ಎಷ್ಟು ಸಾಧ್ಯವೋ ಅಷ್ಟು ಕಡೆ ಹೋದೆವು. ಆದರೂ ಎಲ್ಲಾ ತಾಲೂಕುಗಳನ್ನು ತಲುಪಲಿಕ್ಕಾಗದಿರುವ ವಿಷಾದವೂ ಇದೆ. ಇದರ ಅನುಭಗಳನ್ನು ಕೆಲವು ಸಂಗಾತಿಗಳು ಹಂಚಿಕೊಂಡಿದ್ದಾರೆ.

**– ಸುನಂದಾ ಕಡಮೆ**

ಬಲು ಉತ್ಸಾಹದಿಂದ ಒಕ್ಕೂಟದ ಕಾರ್ಯಕ್ರಮಗಳನ್ನು ಎಲ್ಲರೊಂದಿಗೆ ನಡೆಸಿಕೊಂಡು ಹೋಗುತ್ತಿದ್ದ ಸುನಂದಾ ಅಮೆರಿಕೆಗೆ ಹೊರಟು ನಿಂತಾಗ ಅರಿವಿನ ಪಯಣವೇ ಗಕ್ಕೆಂದು ನಿಂತ ಅನುಭವ ಎಲ್ಲರಿಗಾಯಿತು. ಹುಬ್ಬಳ್ಳಿ, ಹುಬ್ಬಳ್ಳಿಯ ಗ್ರಾಮಾಂತರ ತಾಲೂಕುಗಳಲ್ಲದೇ ಬೇರೆ ಕಡೆ ಕೂಡ ಕರೆದರೆ ಖುಷಿಯಿಂದ ಬರುತ್ತಿದ್ದರು ಸುನಂದಾ. ಆದರೆ ಧಾರವಾಡ, ಅಳ್ನಾವರ, ನವಲಗುಂದ ಇವೆಲ್ಲ ತಾಲೂಕುಗಳನ್ನು ನಾವು ಇತರರು ನಡೆಸಿಕೊಂಡು ಹೋಗುತ್ತಿದ್ದುದರಿಂದ ಅದೃಷ್ಟವಶಾತ್ ಹೆಚ್ಚಿಗೆ ಪೆಟ್ಟು ಬೀಳಲಿಲ್ಲ.

ಅರಿವಿನ ಪಯಣ ಆರಂಭಿಸುವುದಕ್ಕೂ ಮೊದಲು ಪ್ರಚಾರ ಮತ್ತು ಹಣ ಸಂಗ್ರಹಣೆಗಾಗಿ ಅರಿವಿನ ಪಯಣ ಚಿಕ್ಕ ಹೊತ್ತಗೆ ಮತ್ತು ಕರವಸ್ತ್ರಗಳನ್ನು ತಯಾರು ಮಾಡಿಟ್ಟುಕೊಳ್ಳಬೇಕಿತ್ತು. ಲಿಂಗ ತಾರತಮ್ಯ, ಜಾತಿ ತಾರತಮ್ಯ, ಕೆಲಸದ ಘನತೆ, ಬೆವರಿನ ಗೌರವ ಇವೆಲ್ಲ ವಿಚಾರದ ಬಗೆಗೂ ಪುಟ್ಟ ನಾಟಕ, ಹಾಡು, ಕತೆಗಳಿರುವಂಥ ಪುಟ್ಟ ಪುಸ್ತಿಕೆ. ತಯಾರು ಮಾಡಿಕೊಳ್ಳಲು ಅನುಪಮಾರ ಮಾರ್ಗದರ್ಶನ ಬಹಳವಿತ್ತು. ಕರವಸ್ತ್ರ ಮಾತ್ರ ಸಾಕಷ್ಟು ಗುದ್ದಾಡಿಸಿತು. ರಾಜೇಶ್ವರಿ ಪಟ್ಟು ಬಿಡದೆ ಈಚಲಕರಂಜಿಯ ತಮ್ಮ ಗೆಳತಿಯನ್ನು ಸಂಪರ್ಕಿಸಿ ಕಡಿಮೆ ದರದ, ಉತ್ತಮ ಗುಣಮಟ್ಟದ ಬಟ್ಟೆಗಳನ್ನು ತರಿಸಿ ಲಿನೆಟ್ ಮತ್ತು ರ್‍ಯಾಪಿಡ್‌ನ ಸಹಾಯದಿಂದ ಒಕ್ಕೂಟದ ಲೋಗೋ ಸಂದೇಶ ಹೊತ್ತ ಚೆಂದದ ಕರವಸ್ತ್ರಗಳನ್ನಾಗಿಸಿದರು.

ಈ ಬಾರಿ ಒಕ್ಕೂಟದ ಮುಖ್ಯ ವಿಚಾರಗಳೆರಡಿದ್ದವು: ಒಂದು; ಚುನಾವಣೆಯಲ್ಲಿ ಮಹಿಳಾ ಪ್ರಾತಿನಿಧ್ಯ ಎಷ್ಟಿದೆ, ಹೇಗಿದೆ ಎಂಬ ವಿಚಾರ. 2018ರಲ್ಲಿ ರಾಜ್ಯದ ವಿಧಾನಸಭಾ ಚುನಾವಣೆ ಮುಗಿದಿದ್ದು, 2019ರ ಲೋಕಸಭಾ ಚುನಾವಣೆಯ ಹೊಸ್ತಿಲಿನಲ್ಲಿ ದೇಶ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನಿಂತಿರುವಾಗ ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಮತ್ತು ಗುಣಮಟ್ಟಗಳೆರಡರ ಬಗೆಗೂ ಮಹಿಳಾ ಮತದಾರರಲ್ಲಿ ಚಿಂತನೆಯನ್ನು ಹುಟ್ಟು ಹಾಕಬೇಕೆಂದು ಒಕ್ಕೂಟವು ವರ್ಷವಿಡೀ ಹತ್ತು ಜಿಲ್ಲೆಗಳಲ್ಲಿ ಕಾರ್ಯಕ್ರಮ ಏರ್ಪಡಿಸಿತು. 10 ಜಿಲ್ಲಾ ಕೇಂದ್ರಗಳಲ್ಲಿ ಸ್ಥಳೀಯ ಸಂಘಟನೆಗಳನ್ನು ಜೊತೆಗೂಡಿಸಿಕೊಂಡು ಚುನಾವಣೆ ಮತ್ತು ಮಹಿಳಾ ಭಾಗವಹಿಸುವಿಕೆಯ ಕುರಿತಾಗಿ ತಜ್ಞರು ಮತ್ತು ಮಹಿಳಾ ರಾಜಕಾರಣಿಗಳ ಅನುಭವಗಳನ್ನು ಹಂಚಿತು. ಸಂವಾದಗಳನ್ನು ನಡೆಸಿತು.

ಎರಡನೆಯದಾಗಿ, ರಾಜ್ಯದೆಲ್ಲೆಡೆ ಜನರ ಗಮನ ಸೆಳೆದಿದ್ದ ಮದ್ಯ ನಿಷೇಧ ಆಂದೋಲನದ ಚಳುವಳಿ. 2018ರ ಆರಂಭದಲ್ಲಿ ರಾಯಚೂರಿನಲ್ಲಿ 35,000 ಮಹಿಳೆಯರು ಸೇರಿ ಮೇಧಾ ಪಾಟ್ಕರ್ ಮುಂದಾಳತ್ವದಲ್ಲಿ ರಾಜ್ಯದಲ್ಲಿ ಸಂಪೂರ್ಣ ಮದ್ಯ ನಿಷೇಧಕ್ಕೆ ಒತ್ತಾಯಿಸಿದರು. 2018ರ ಅಕ್ಟೋಬರ್ ಎರಡರಂದು ಜಿಲ್ಲೆ, ಜಿಲ್ಲೆಗಳಲ್ಲಿ ಅಬಕಾರಿ ಇಲಾಖೆಗೆ ಹೋಗಿ, 'ನಿಮ್ಮ ಇಲಾಖೆಯನ್ನು ಮುಚ್ಚಿ, ಇಲ್ಲವೇ ಗಾಂಧೀಜಿಯ ಫೋಟೋ ಹಾಕಿಕೊಳ್ಳದೇ ಅದನ್ನು ನಮಗೆ ಕೊಡಿ' ಎಂದು ವಿನೂತನ ಪ್ರತಿಭಟನೆ ನಡೆಸಿದರು. ಬೆಳಗಾವಿಯ ವಿಧಾನಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆದಾಗ ನಮ್ಮ ಒಕ್ಕೂಟವು ಮದ್ಯ ನಿಷೇಧ ಆಂದೋಲನದಲ್ಲಿ ಭಾಗಿಯಾಗಿ ಗ್ರಾಮೀಣ ಭಾಗದ ಹೆಣ್ಮಕ್ಕಳ ನೋವಿನ ದನಿಗೆ ಸಾಥ್ ಕೊಟ್ಟಿತು. 2019 ಜನವರಿಯಲ್ಲಿ ಚಿತ್ರದುರ್ಗದಿಂದ ಬೆಂಗಳೂರಿನ ವಿಧಾನಸೌಧದವರೆಗೆ ನಡೆದ ಮದ್ಯ ನಿಷೇಧ ಕಾಲ್ನಡಿಗೆ ಜಾಥಾದಲ್ಲಿ ಒಕ್ಕೂಟದ ಗೆಳತಿಯರು ಪಾಲ್ಗೊಂಡರು. ಸಮಾವೇಶದ ವಿಚಾರ ಸಂಕಿರಣದಲ್ಲಿಯೂ ಕೂಡ ಶಾಂತಲಾ ದಾಮ್ಲೆ, ಕಾವೇರಿ, ಸಿರಿಗೌರಿ, ಸ್ವರ್ಣ ಭಟ್ ಇವರಿಂದ ಈ ವಿಚಾರಗಳು ಪ್ರತಿಧ್ವನಿಸಿವೆ.

ಒಕ್ಕೂಟ ಈ ವರ್ಷ ವಿಶೇಷವಾಗಿ ನಾಡಿನ ಗಮನ ಸೆಳೆದದ್ದು ಧಾರವಾಡದಲ್ಲಿಯೇ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಿಂದ. ಸಮ್ಮೇಳನದಲ್ಲಿ 1000 ಸುಮಂಗಲಿಯರು ಪೂರ್ಣಕುಂಭ ಹೊತ್ತು ಅಧ್ಯಕ್ಷರ ಮೆರವಣಿಗೆಯಲ್ಲಿ ನಡೆಯಲಿದ್ದಾರೆಂಬ ಹೇಳಿಕೆಯು ಒಕ್ಕೂಟದ ಗೆಳತಿಯರ ಆತ್ಮಾಭಿಮಾನವನ್ನು ಕೆಣಕಿತು. ಮಹಿಳೆಯರಿಗೆ ಅಪಮಾನ ಮಾಡುವ ಅಂಥದ್ದೊಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಡಿ ಎಂದು ಮನವಿ ಮಾಡಿದಾಗಲೂ ಕೇಳದೆಯೆ ಮುಂದುವರೆಸಿದಾಗ ಅಲ್ಲಿಯೇ ಒಂದು ಮಳಿಗೆಯನ್ನು ಬಾಡಿಗೆ ಪಡೆದು, ಒಳಗೆ ಕುಳಿತೇ ಪ್ರತಿಭಟಿಸಿತು ಒಕ್ಕೂಟ. ಈ ಪ್ರತಿರೋಧದ ಅನುಭವವನ್ನು ಸುನಂದಾ ಕಟ್ಟಿಕೊಟ್ಟಿದ್ದಾರೆ. ಅನುಪಮ, ಸಬಿತಾ ಬನ್ನಾಡಿ, ದಾಕ್ಷಾಯಿಣಿ ಹುಡೇದ ಇವರೆಲ್ಲ ತಮಗೆ ಸಿಕ್ಕ ಅವಕಾಶದಲ್ಲಿ ಕವನಗಳ ಮೂಲಕ ವೇದಿಕೆಯ ಮೇಲೇ ಪೂರ್ಣ ಕುಂಭ ಮೆರವಣಿಗೆಯನ್ನು ವಿರೋಧಿಸಿದರು.

ಇತ್ತ ಕಾರ್ಯಕ್ರಮಗಳೂ ನಡೆಯಬೇಕು, ಅತ್ತ ಅವುಗಳ ಬಗ್ಗೆ ಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟಣೆಯೂ ಆಗುತ್ತಿರಬೇಕು. ಹೊರಜಿಲ್ಲೆಗಳಲ್ಲಿ ಇರುವವರಿಗೆ ಒಕ್ಕೂಟದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೆಲಸ ಕಾರ್ಯ ಕುರಿತು ತಿಳಿಯಲೂಬೇಕು. ಅನುಮತಿ ಪಡೆಯಬೇಕು, ಪತ್ರ ಬರೆಯಬೇಕು, ಜನರನ್ನು ಸಂಘಟಿಸಬೇಕು, ದುಡ್ಡು ಎತ್ತಬೇಕು, ಹೊರಗಿನಿಂದ ಬರುವವರಿಗೆ ವಸತಿ ವ್ಯವಸ್ಥೆ ಮಾಡಬೇಕು.. ಒಂದು ಕಡೆ ಲಕ್ಷ್ಯ ವಹಿಸಿದರೆ ಇನ್ನೊಂದು ಕಡೆ ಲಕ್ಷ್ಯ ಕಡಿಮೆಯಾಗುತ್ತದೆ. ಹಾಗಾಗದಂತೆ ಬೇರೆ ಬೇರೆ ತಂಡಗಳನ್ನು ರಚಿಸಿಕೊಂಡು ಕೆಲಸಗಳನ್ನು ಹಂಚಿಕೊಂಡೆವು. ಇವೆಲ್ಲದರಲ್ಲಿ ಪಾಲ್ಗೊಂಡ ರಾಜೇಶ್ವರಿ, ಸುನಂದಾ, ರಜನಿ, ದಿಲಶಾದ ಇವರೆಲ್ಲ 'ಅರಿವಿನ ಪಯಣ', 'ಕಪ್ಪು ಉಡುಪಿನಲ್ಲಿ ಮಹಿಳೆಯರು', 'ಬಸ್ ಅಭಿಯಾನ' ಮತ್ತು ಒಟ್ಟಿಗೆ ಕೆಲಸ ಮಾಡಿದ ತಮ್ಮ ಅನುಭವಗಳನ್ನು ಲೇಖನಿ ರೂಪಕ್ಕಿಳಿಸಿ ಪತ್ರಿಕೆಗಳಿಗೆ ಕಳಿಸಿಕೊಟ್ಟರು, ಪ್ರಕಟವೂ ಆದವು.

ಪ್ರೀತಿ, ವಿಶ್ವಾಸದಿಂದ ಜೊತೆಗೆ ಸಾಗುವ ಹತ್ತು ಹಲವು ಅನುಭವಗಳನ್ನು ಕಟ್ಟಿಕೊಟ್ಟ ಎರಡು ದಿನಗಳ ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದ ದಿನ ಬಂದೇಬಿಟ್ಟಿತು. ಮುಖ್ಯ ಅತಿಥಿಗಳ ಆಹ್ವಾನ, ಇರುವಿನ ವ್ಯವಸ್ಥೆ ಎಲ್ಲದರ ಪೂರ್ತಿ ಜವಾಬ್ದಾರಿ ಹೊತ್ತು ಅನುಪಮಾ, ಸರಸ್ವತಿಯವರು ನಮ್ಮ ದೊಡ್ಡ ಜವಾಬ್ದಾರಿಯನ್ನು ಹಗುರ ಗೊಳಿಸಿದರು. ಇನ್ನು ಎಐಎಂಎಸ್‌ಎಸ್‌ದ ಗೆಳತಿಯರಾದ ಮಧುಲತಾ, ಪ್ರಭಾವತಿ, ಗಂಗಾ, ವಿಜಯಲಕ್ಷ್ಮಿ ಇವರೆಲ್ಲ ಹೊರ ಊರುಗಳಿಂದ ಬಂದ ಗೆಳತಿಯರನ್ನು ಸರಿಯಾದ ವಸತಿಗೃಹಗಳಿಗೆ ಕಳಿಸುವ, ಮರುದಿನ ಮೆರವಣಿಗೆಗೆ ಎಲ್ಲರನ್ನೂ ಕರೆತರುವ ಕೆಲಸದ ಜವಾಬ್ದಾರಿಯನ್ನು ಹೊತ್ತರು. ಈ ಸಮಯದಲ್ಲಿ ಜಯಶ್ರೀ ಮಾಡಿದ ಕೆಲಸ ಅತ್ಯಂತ ಶ್ಲಾಘನೀಯ. ಯಾವ ಕೆಲಸ ಹಿಂದೆ ಬಿದ್ದರೂ ಅಲ್ಲಿ ಲಿನೆಟ್ ಪ್ರತ್ಯಕ್ಷ. ಹೊರಗಿನಿಂದ ಯಾರು ಬಂದರೂ ಲಿನೆಟ್ ಅವರ ಮನೆಯಲ್ಲಿದೆ ಜಾಗ. ಅವರ ಮನೆ, ಆಫೀಸು, ಟೀಮು ಎಲ್ಲವೂ ಒಕ್ಕೂಟಮಯವಾಗಿಹೋಗಿತ್ತು. ಸಾಮಾನಿರಿಸಿಕೊಳ್ಳಲು ಜಾಗ ಒದಗಿಸಿದ ಬಸವ ಪೀಠ ಮತ್ತು ಜಿಲ್ಲಾ ಮಹಿಳಾ ತರಬೇತಿ ಕಾಲೇಜು, ಇವರೆಲ್ಲರಿಗೂ ನಮ್ಮ ಧನ್ಯವಾದ ಸಲ್ಲಬೇಕು. ಲಿನೆಟ್ ಅವರ ಸಂಘಟನಾ ಚಾತುರ್ಯ, ರಾಜೇಶ್ವರಿ, ದಿಲಶಾದ, ಅಕ್ಕಮ್ಮ, ಸವಿತಾ ಇವರಲ್ಲಡಗಿದ್ದ ಅಭಿನಯ ಕಲೆ, ವಿಜಯಲಕ್ಷ್ಮಿಯ ಕಲಾತ್ಮಕತೆ, ಎಲ್ಲಕ್ಕಿಂತ ಮುಖ್ಯವಾಗಿ ನಗರ ಸಭೆ ಅಧಿಕಾರಿಗಳ ಜೊತೆಗೆ ಮಾತುಕತೆಯಿಂದ ಹಿಡಿದು ಪಾತ್ರೆಗಳನ್ನು ತೊಳೆಯುವವರೆಗೆ ಜೊತೆಯಾಗಿ ನಿಂತ ಬಸೂ ಸೂಳಿಬಾವಿಯವರ ಬೇಷರತ್ ಸಹಕಾರ, ಅಕ್ಕಮ್ಮ, ಬಸಂತಿ, ಸುಶೀಲಾ ಅವರ ಅಡಿಗೆ, ಇಸಬೆಲ್ಲಾ ಅವರ ಬಾಳೆಹಣ್ಣಿನ ರಾಶಿ, ಕೆ. ಎಚ್. ಪಾಟೀಲ್‌ರ ಫೋಟೋಗಳು, ಶಂಕರ ಹಲಗತ್ತಿಯವರ ಸಲಹೆ ಸಹಕಾರ, ಊಟ ನೀಡುವ ಮೇಲುಸ್ತುವಾರಿ ವಹಿಸಿಕೊಂಡ ಗದಗದ ದಲಿತ ಕಲಾಮಂಡಳಿಯ ಅಣ್ಣತಮ್ಮಂದಿರು – ಈ ಎಲ್ಲ ಗೆಳೆಯ, ಗೆಳತಿಯರ ಸ್ನೇಹಮಯ ವ್ಯಕ್ತಿತ್ವ ಪರಿಚಯವಾದದ್ದು, ನಮಗೆ ದಕ್ಕಿದ್ದು ಈ ಸಮ್ಮೇಳನದಿಂದಾಗಿಯೇ. ಒಟ್ಟಿಗೆ ಹಾಡಿದೆವು, ಒಟ್ಟಿಗೆ ಕುಣಿದೆವು, ಒಟ್ಟಿಗೆ ಉಂಡುತಿಂದೆವು, ಒಟ್ಟಿಗೆ ಕೆಲಸ ಮಾಡಿದೆವು. ಒಟ್ಟಾರೆ ಈ ಧಾರವಾಡ ಸಮಾವೇಶ ನಮಗೆ ತುಂಬ ಸಮಾಧಾನ, ಸಂತೃಪ್ತಿ ಹಾಗೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಾರ್ಥಕ್ಯದ ಭಾವ ತಂದಿದೆ. ಈ ಸ್ಮರಣ ಸಂಚಿಕೆಯ ತಯಾರಿ ಎಲ್ಲವನ್ನೂ ಮರುಕಳಿಸಿ ಮತ್ತೊಮ್ಮೆ ಅನುಭವಿಸುವಂತೆ ಮಾಡಿದೆ. ಎಂದೂ ಬರೆಯದವರೂ–ಅಕ್ಕಮ್ಮ, ವಿಜಯಲಕ್ಷ್ಮಿ, ಸವಿತಾ, ಭಾರತಿ, ಗೌರಮ್ಮ– ಬರೆದುಕೊಟ್ಟಿದ್ದಾರೆ. ನಮ್ಮ ಪ್ರೀತಿಯ ನವ್ಯಾ ಕಡಮೆ ಸಂಭ್ರಮದ ಘಳಿಗೆಗಳನ್ನು ಛಾಯಾಚಿತ್ರ ಮತ್ತು ವೀಡಿಯೋಗಳಲ್ಲಿ ಸೆರೆಹಿಡಿದು ಪುಸ್ತಕ ತಯಾರಿಗೆ ತುಂಬ ಸಹಾಯ ಮಾಡಿದ್ದಾಳೆ.

ಅಂದು, ಇಂದು, ಮುಂದೆಯೂ ಒಟ್ಟಿಗೆ ಇರುವ ಎಲ್ಲ ಜೀವಗಳಿಗೂ ಮತ್ತೊಮ್ಮೆ ವಂದನೆ, ಧನ್ಯವಾದ.

**– ಶಾರದಾ ಗೋಪಾಲ**

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

## ನಮ್ಮ ಸಂವಿಧಾನ

**ಸ್ವಾತಂತ್ರ್ಯ, ಸಮಾನತೆ, ಬಂಧುತ್ವವೇ ಜೀವಾಳವಾದ ನಮ್ಮ ಸಂವಿಧಾನದಲ್ಲಿ ಶ್ರದ್ಧೆ, ನಂಬಿಕೆಗಳನ್ನಿರಿಸಿರುವ ನಾವು, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಂಗಾತಿಗಳು**. ಒಕ್ಕೂಟವು ಒಂದು ಸಂಘವಲ್ಲ, ಸಂಸ್ಥೆಯಲ್ಲ, ಸಂಘಟನೆಯಲ್ಲ, ಬದಲಿಗೆ ಹಲವು ಜನಪರ, ಜೀವಪರ, ಪ್ರಜಾಸತ್ತಾತ್ಮಕ ಸಂಘಟನೆಗಳ ಒಗ್ಗಟ್ಟಿನ ಜಾಲ. ಸಮಾನತೆ, ಸ್ವಾತಂತ್ರ್ಯ, ಸೋದರಿತ್ವ, ಪ್ರಜಾಸತ್ತಾತ್ಮಕ ಮೌಲ್ಯ ಮತ್ತು ಸಾಮಾಜಿಕ ನ್ಯಾಯಗಳಲ್ಲಿ ನಂಬಿಕೆ ಇರುವವರೆಲ್ಲ ಇದರ ಸದಸ್ಯರು. ಪ್ರೀತಿ ಮತ್ತು ನಿರ್ಭೀತಿಯೇ ಪ್ರವೇಶ ಶುಲ್ಕ. ಈ ನೆಲ, ಜನ, ಭಾಷೆ, ಅಭಿಪ್ರಾಯಗಳನ್ನು ಸಮಾನ ಗೌರವದಲ್ಲಿ ಕಾಣುವುದೇ ನಮ್ಮ ಧರ್ಮ.

**ನಾವು, ಈ ನೆಲದ ಹೆಣ್ಣುಗಳ ಆಶಯ, ಕನಸು ಇವು:**

- ಲಿಂಗ, ಲಿಂಗತ್ವ, ಜಾತಿ, ವರ್ಗ, ಮತ, ಧರ್ಮ, ಸಂಸ್ಕೃತಿ, ಜನಾಂಗ, ಯುದ್ಧ, ಸಿದ್ಧಾಂತ, ಗಡಿ, ಭಾಷೆಗಳ ಹೆಸರಿನಲ್ಲಿ ನಡೆಯುವ ಹಿಂಸೆ, ಅತ್ಯಾಚಾರ, ತಾರತಮ್ಯಗಳಿರದ, ಭಯಮುಕ್ತ ನಾಡನ್ನು ಕಟ್ಟಲು ನಾವು ಬದ್ಧರಾಗುತ್ತೇವೆ.
- ಪಾರಂಪರಿಕವಾಗಿ ಬಂದ ಮಹಿಳೆಯರ ಜ್ಞಾನ, ಅನುಭವ, ಕೌಶಲ್ಯ, ದುಡಿಮೆ, ಆತ್ಮಗೌರವನ್ನು ಎತ್ತಿಹಿಡಿಯುತ್ತೇವೆ.
- ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನ ಗೌರವದೊಂದಿಗೆ ಕಾಣುವಂತಹ ವ್ಯವಸ್ಥೆಯನ್ನು ರೂಪಿಸಲು, ಮನಸುಗಳನ್ನು ಕಟ್ಟಲು ದುಡಿಯುತ್ತೇವೆ.
- ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ ಸಾಮಾಜಿಕ ನ್ಯಾಯ ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲು, ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಸಮಾನ ಮಹಿಳಾ ಪ್ರಾತಿನಿಧ್ಯ ದೊರೆಯಲು ಶ್ರಮಿಸುತ್ತೇವೆ.
- ಮಹಿಳೆಯರ ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಕ್ಕಾಗಿ, ಸಂಘಟಿತ– ಅಸಂಘಟಿತ ವಲಯದ ಎಲ್ಲ ದುಡಿಮೆಗಾರರಿಗೆ ಗೌರವದಿಂದ ಬದುಕಲು ಸಾಧ್ಯಮಾಡುವ ವೇತನ ಮತ್ತು ಆರೋಗ್ಯಕರ, ಲೈಂಗಿಕ ಕಿರುಕುಳಮುಕ್ತ ಕೆಲಸದ ವಾತಾವರಣಕ್ಕಾಗಿ ಶ್ರಮಿಸುತ್ತೇವೆ. ಆಧುನಿಕ ಜೀತಪದ್ಧತಿಯಾದ ಗುತ್ತಿಗೆ ಪದ್ಧತಿ, ಅತಿದುಡಿಮೆ, ಒತ್ತಾಯದ ದುಡಿಮೆಗಳನ್ನು ನಿಲ್ಲಿಸಲು ಯತ್ನಿಸುತ್ತೇವೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ದೇವದಾಸಿ ಪದ್ಧತಿ ಕೊನೆಗೊಳಿಸಲು ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ, ವಸತಿ ಮತ್ತು ಉದ್ಯೋಗ ದೊರಕಿಸಿಕೊಡಲು, ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಯಲು, ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಿಸಲು ಶ್ರಮಿಸುತ್ತೇವೆ.
- ದಲಿತ, ದಮನಿತ, ಅಸಹಾಯಕ ಮಹಿಳೆಯರೂ ಸೇರಿದಂತೆ ಎಲ್ಲ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ–ಕಿರುಕುಳ–ಅತ್ಯಾಚಾರ ಕೊನೆಗೊಳಿಸಲು ಶ್ರಮಿಸುತ್ತೇವೆ. ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ, ಆಸಿಡ್ ದಾಳಿ, ಮಹಿಳೆ ಮತ್ತು ಮಕ್ಕಳ ಮಾರಾಟ, ವರದಕ್ಷಿಣೆ, ಸಾರಾಯಿ ಮಾರಾಟವೇ ಮೊದಲಾದ ಅನಿಷ್ಟ ಪದ್ಧತಿಗಳನ್ನು ನಿಲ್ಲಿಸಲು ದುಡಿಯುತ್ತೇವೆ. ಬಾಲಕಾರ್ಮಿಕ ಪದ್ಧತಿಯನ್ನು ನಿಲ್ಲಿಸಲು, ಮಕ್ಕಳಿಗೆ ಆರೋಗ್ಯಕರ ಸಾಮಾಜಿಕ ವಾತಾವರಣ ನಿರ್ಮಿಸಲು ಶ್ರಮಿಸುತ್ತೇವೆ. ಗಂಡುಹೆಣ್ಣು ಭೇದಭಾವವನ್ನು ಬಾಲ್ಯದಿಂದಲೇ ತೊಡೆದುಹಾಕಲು, ಶಾಲಾಪಠ್ಯಗಳಲ್ಲಿ ಲಿಂಗಸೂಕ್ಷ್ಮತೆಯ ವಿಷಯ ಸೇರಿಸಲು ಮತ್ತು ಲಿಂಗಸೂಕ್ಷ್ಮತೆಯ ಕಾರ್ಯಾಗಾರಗಳನ್ನು ನಡೆಸಲು ಯತ್ನಿಸುತ್ತೇವೆ.
- ಬಂಡವಾಳ ಹೂಡಿಕೆಯ ವಿಷಯದಲ್ಲಿ ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆಯ ಜಾರಿಗಾಗಿ ದುಡಿಯುತ್ತೇವೆ.
- ದಲಿತ, ಆದಿವಾಸಿ, ಲಿಂಗತ್ವ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಇನ್ನಿತರ ಎಲ್ಲ ಅಲ್ಪಸಂಖ್ಯಾತ ಮತ್ತು ಅಂಚಿಗೆ ಸರಿಸಲಾದವರ ಮಾನವ ಹಕ್ಕುಗಳನ್ನು ಗೌರವಿಸುತ್ತೇವೆ. ಅದಕ್ಕಾಗಿ ಅವರು ಮಾಡುತ್ತಿರುವ ಹೋರಾಟಗಳನ್ನು ಬೆಂಬಲಿಸುತ್ತೇವೆ.
- ಈ ನೆಲದಲ್ಲಿ ಹುಟ್ಟಿದ, ಈ ನೆಲದಲ್ಲಿ ನೆಲೆಯಾಗಿರುವ ಎಲ್ಲ ಧರ್ಮಗಳ ಜೀವಪರ ಮೌಲ್ಯಗಳನ್ನು ಗೌರವಿಸುತ್ತೇವೆ, ನಡೆ, ನುಡಿಗಳಲ್ಲಿ ಅಳವಡಿಸಿಕೊಳ್ಳುತ್ತೇವೆ. ಈ ನೆಲದ ಸಮನ್ವಯ/ಸಹಿಷ್ಣು ಬಹುಸಂಸ್ಕೃತಿಯನ್ನು ಗೌರವಿಸಿ ಕಾಪಾಡುತ್ತೇವೆ.
- ಮುಟ್ಟಿನ ಹೆಸರಿನಲ್ಲಿ ಆಚರಿಸುವ ಮೈಲಿಗೆ, ಪಾಪ–ಪುಣ್ಯ–ಶ್ರೇಷ್ಠ–ಕನಿಷ್ಠ–ಶಾಪ–ಸ್ವರ್ಗ–ನರಕವೇ ಮೊದಲಾದ ಮಹಿಳಾವಿರೋಧಿ, ಜೀವವಿರೋಧಿ ನಂಬಿಕೆ–ಮೌಢ್ಯಾಚರಣೆಗಳನ್ನು ಕೊನೆಗಾಣಿಸಲು ದುಡಿಯುತ್ತೇವೆ.
- ಶ್ರಮದ ದುಡಿಮೆಯನ್ನು ಗೌರವಿಸುತ್ತೇವೆ ಮತ್ತು ಅಂತಹ ದುಡಿಮೆಗೆ ಕೈಜೋಡಿಸುತ್ತೇವೆ.ದೇಸಿ ಮತ್ತು ಕೈ ಉತ್ಪನ್ನಗಳನ್ನು ಬಳಸುತ್ತೇವೆ.
- ಮಲಬಾಚುವ ಪದ್ಧತಿಯೂ ಸೇರಿದಂತೆ ಯಾವುದೇ ಸ್ವರೂಪದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲ, ಜಾತಿ ತಾರತಮ್ಯ ಮಾಡುವುದಿಲ್ಲ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆಹಾರದಲ್ಲಿ ಭೇಧವೆಣಿಸುವುದಿಲ್ಲ. ಹಿಂಸೆಯನ್ನೆಂದೂ ಬೆಂಬಲಿಸುವುದಿಲ್ಲ. ಮಹಿಳೆಯರಿಗೆ ಅವಮಾನಕರ ಮತ್ತು ನಿಂದನಾಸೂಚಕವಾಗಿರುವ ಪದ ಬಳಸುವುದಿಲ್ಲ. ಅಂತಹ ಜಾಹೀರಾತು/ಸಂಗತಿಗಳನ್ನು ಒಪ್ಪುವುದಿಲ್ಲ.

- ಜೀವಪರ, ಪರಿಸರ, ಜನಪರ ಅಭಿವೃದ್ಧಿ ಮಾದರಿಗಳನ್ನು ಬೆಂಬಲಿಸುತ್ತೇವೆ ಅದಕ್ಕಾಗಿ ದುಡಿಯುತ್ತೇವೆ. ಆ ನಿಟ್ಟಿನಲ್ಲಿ ಸರಳ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುತ್ತೇವೆ
- ಒಕ್ಕೂಟದ ಸಂವಿಧಾನಕ್ಕೆ ಅನುಗುಣವಾಗಿ ಕೈಗೊಳ್ಳುವ ಕೆಲಸ/ಕಾರ್ಯಕ್ರಮ/ ಚಟುವಟಿಕೆಗಳನ್ನು ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕವೇ ಸಾಮೂಹಿಕವಾಗಿ ತೀರ್ಮಾನಿಸಿ ಕೈಗೊಳ್ಳುತ್ತೇವೆ. ನಂತರ ಕಡ್ಡಾಯವಾಗಿ ಅವಲೋಕನ ಮಾಡಿಕೊಳ್ಳುತ್ತೇವೆ.
- ಯಾವುದೇ ಸಾಂಸ್ಥೀಕೃತ ಧನಸಹಾಯವನ್ನು ತೆಗೆದುಕೊಳ್ಳದೇ ಸಾರ್ವಜನಿಕವಾಗಿ ಹಣ ಸಂಗ್ರಹಿಸಿ ಒಕ್ಕೂಟದ ಕಾರ್ಯಕ್ರಮಗಳನ್ನು ನಡೆಸುತ್ತೇವೆ. ಹಣ ದುರುಪಯೋಗವಾಗದಂತೆ ಪಾರದರ್ಶಕವಾಗಿ ಎಲ್ಲವನ್ನು ಲೆಕ್ಕವಿಟ್ಟು ಸಾರ್ವಜನಿಕರಿಗೆ ಒಪ್ಪಿಸುತ್ತೇವೆ.
- ಒಕ್ಕೂಟದ ಆಗುಹೋಗುಗಳಲ್ಲಿ ಹುಟ್ಟಬಹುದಾದ ಭಿನ್ನಾಭಿಪ್ರಾಯಗಳನ್ನು, ಮನಸ್ತಾಪಗಳನ್ನು ಸಹನೆ/ ತಾಳ್ಮೆ ಮತ್ತು ಮುಕ್ತ ಚರ್ಚೆಗಳ ಮೂಲಕ ಬಗೆಹರಿಸಿಕೊಳ್ಳುತ್ತೇವೆ.
- ಅಧಿಕಾರ ವಿಕೇಂದ್ರೀಕರಣವಿರುವ, ಶ್ರೇಣೀಕರಣವಿಲ್ಲದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯವನ್ನು ಆಧರಿಸಿದ ಸಾಮೂಹಿಕ ನಾಯಕತ್ವ ಕಟ್ಟಲು ಶ್ರಮಿಸುತ್ತೇವೆ. ಆ ನಿಟ್ಟಿನಲ್ಲಿ ಯುವ ಪೀಳಿಗೆಗೆ ಓದು, ಅಧ್ಯಯನ, ಕಲೆ, ಬರವಣಿಗೆ ಇತ್ಯಾದಿ ಕಲಿಕೆಯ ಹೊಸಹೊಸ ಅವಕಾಶಗಳನ್ನು ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.
- ಕಾಲಕಾಲಕ್ಕೆ ಸಂಗಾತಿಗಳು ಒಟ್ಟು ಸೇರಿ ಚರ್ಚಿಸಿ, ಅಗತ್ಯ ಬಿದ್ದಲ್ಲಿ ಈ ಸಂವಿಧಾನಕ್ಕೆ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅವಕಾಶವನ್ನು ಮುಕ್ತವಾಗಿರಿಸಿದ್ದೇವೆ.

ಕೇಳು ಸಂಗಾತಿ, ಇದು ನಮ್ಮ ಹೃದಯದ ದನಿ,
ಬಾ ನಮ್ಮೊಡನೆ, ಇದು ಸಕಲರ ಏಳಿಗೆಯ ಸಮತೆಯ ಹಾದಿ.
ಅದು ಅರಿವಿನ ಹಾದಿ, ಅದು ಕರುಣದ ಹಾದಿ,
ಅದು ಮೈತ್ರಿಯ ಹಾದಿ, ಅದು ಸಮಚಿತ್ತದ ಹಾದಿ,
ಅದು ನೆಲ, ಜಲ, ಜೀವಗಳ ಉಳಿವಿನ ಹಾದಿ..

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಜ್ಜೆಯಿಡುವ ಮುನ್ನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಧಾರವಾಡದ ಮಹಿಳಾ ಸಾಂಸ್ಕೃತಿಕ ಪರಂಪರೆ

**– ಡಾ. ಹೇಮಾ ಪಟ್ಟಣಶೆಟ್ಟಿ**

**ಧಾ**ರವಾಡಕ್ಕೆ ಭವ್ಯವಾದ ಸಾಂಸ್ಕೃತಿಕ ಪರಂಪರೆ ಇದೆ. ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಧರ್ಮ, ಕುಶಲಕಲೆ, ವಾಣಿಜ್ಯ, ಪತ್ರಿಕಾ ವ್ಯವಸಾಯ– ಹೀಗೆ ಹಲವು ಆಯಾಮಗಳಲ್ಲಿ ಧಾರವಾಡ ಮೊದಲಿನಿಂದಲೂ ಕರ್ನಾಟಕದ ನಕಾಶೆಯಲ್ಲಿ ಒಂದು ವಿಶಿಷ್ಟ ಹಾಗೂ ಮಹತ್ವದ ಸ್ಥಾನ ಪಡೆದುಕೊಂಡಿದೆ.

ಏಳು ಗುಡ್ಡಗಳ ನಡುವೆ, ಗುಪ್ತಗಾಮಿನಿ ಶಾಲ್ಮಲೆಯನ್ನು ಗರ್ಭೀಕರಿಸಿಕೊಂಡ ಧಾರವಾಡ, ಸುಂದರವಾದ ಹಚ್ಚಹಸುರಿನ, ಸದಾ ನಳವಳಿಸುವ ಪ್ರಕೃತಿ ಸೊಬಗಿನ ಬೀಡು. ಬೆಳವಲದ ಹತ್ತಿ, ಗೋದಿ, ಜೋಳ, ಹಾಗೂ ಮಲೆನಾಡಿನ ಭತ್ತ, ಕಬ್ಬುಗಳನ್ನೂ ಬೆಳೆಯಬಲ್ಲ ವಿಶಿಷ್ಟ ಸತ್ವ ಈ ಭೂಮಿ ತಾಯಿಯದು. ಇಲ್ಲಿಯ ಸ್ವಾದಿಷ್ಟ ಪೇಡೆ, ನವಲೂರ ಪೇರಲ, ಆಪೂಸ ಮಾವಿನ ಹಣ್ಣುಗಳು ವಿದೇಶಗಳಲ್ಲೂ ಹೆಸರಾಗಿವೆ.

ಕರ್ನಾಟಕದ ಚರಿತ್ರೆಯಲ್ಲಿಯೂ, ಜನಮಾನಸದಲ್ಲಿಯೂ ವಿಶೇಷ ಸ್ಥಾನ ಪಡೆದ ಧಾರವಾಡ ಕನ್ನಡದ ಜಾಗೃತ ಸ್ಥಳ. ಕರ್ನಾಟಕ ಏಕೀಕರಣದ ಪರಿಕಲ್ಪನೆ ಹಾಗೂ ಹೋರಾಟ ಮೊಳೆತದ್ದೇ ಈ ನೆಲದಲ್ಲಿ. ಮುಂದೆ ಗೋಕಾಕ ಚಳವಳಿಯಂಥ ಹಲವು ಆಂದೋಲನಗಳನ್ನು ಹುಟ್ಟು ಹಾಕಿದ, ನೇತೃತ್ವ ವಹಿಸಿ, ಕರ್ನಾಟಕದ ಉದ್ದಕ್ಕೂ ಪ್ರೇರೇಪಿಸಿದ ಶ್ರೇಯಸ್ಸು ಧಾರವಾಡದ್ದು.

ಈ ನೆಲದ ಮಣ್ಣಿನ ಗುಣವೋ, ನೀರ ಗುಣವೋ ಇಲ್ಲಿ ಸುಳಿವ ಗಾಳಿಯ ಗುಣವೋ... ಅಂತೂ ಚರಿತ್ರೆ, ಇತಿಹಾಸ, ಕಲಾವಿಕಾಸದ ಮಾರ್ಗದಲ್ಲಿ ಸದಾ ಮುಂಚೂಣಿಯಲ್ಲಿದೆ ಧಾರವಾಡ.

ಇಲ್ಲಿ ಬ್ರಿಟಿಷ್ ಅಧಿಕಾರಿ ಥ್ಯಾಕರೆಯ ಗೋರಿ ಮತ್ತು ಸ್ಮಾರಕಗಳು ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಪ್ರಥಮ ವೀರಾಗ್ರಣಿ ಕಿತ್ತೂರು ಚೆನ್ನಮ್ಮನ ಶೌರ್ಯ, ಕೆಚ್ಚುಗಳನ್ನೇ ನೆನಪಿಸುತ್ತವೆ. ಧಾರವಾಡದ ಸಾಹಿತ್ಯಕ ಸಾಂಸ್ಕೃತಿಕ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತೊಡಗಿಕೊಂಡು ಸ್ತ್ರೀಯರ ಬದುಕಿಗೆ ಹೊಸ ಭಾಷ್ಯ ಬರೆದ ಮಹಿಳೆಯರನ್ನು ಸ್ಮರಿಸಬೇಕಾದ ಸಂದರ್ಭ ಇದು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅದರಲ್ಲಿ ಭಾಗೀರಥಿಬಾಯಿ ಪುರಾಣಿಕರ ಹೆಸರು ಅಗ್ರ ಮಾನ್ಯವಾದುದು. ನೊಂದ, ತಿರಸ್ಕೃತ, ಅನಾಥ ಹೆಣ್ಣುಮಕ್ಕಳಿಗೆ ಅವರು ತಾಯಿಯಾಗಿ ಸಾಂತ್ವನ ನೀಡಿದ ದೀರೋದಾತ್ತ ಮಹಿಳೆ. ಬಾಲವಿಧವೆ, ತಮ್ಮ ಆಸ್ತಿಯೆನ್ನೆಲ್ಲ ಮಾರಿ 1925ರಲ್ಲಿ ವನಿತಾ ಸೇವಾ ಸಮಾಜ ಆರಂಭಿಸಿದರು. ನಿರ್ಗತಿಕ ಹೆಂಗಸರಿಗೆ ಆಶ್ರಯ ನೀಡಿ ಹೊಸ ಜೀವನದ ಹಾದಿ ತೋರಿದರು.ಬಾಲವಿಧವೆ ಆಗಿದ್ದ ಉಮಾಬಾಯಿ ಕುಂದಾಪುರ 1921ರಲ್ಲಿ 'ಹಿಂದುಸ್ಥಾನಿ ಸೇವಾ ದಳ' ಸೇರಿ, ನಂತರ 'ತಿಲಕ ಕನ್ಯಾ ಶಾಲೆ' ಆರಂಭಿಸಿ, ಅದರ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಿದ್ದರು. ಶತಾಯುಷಿಯಾಗಿ ಬದುಕಿದ ಇವರು 1934ರಲ್ಲಿ ಸ್ವಾತಂತ್ರ್ಯ ಆಂದೋಲನದಲ್ಲಿ ಜೇಲುವಾಸವನ್ನೂ ಅನುಭವಿಸಿದರು.ಸರದಾರ ವೀರನಗೌಡರ ಪತ್ನಿ ನಾಗಮ್ಮ ಪಾಟೀಲ(1908) ಅವರು ಗಾಂಧೀಜಿ ಅವರ ಆದೇಶದಂತೆ ಹುಬ್ಬಳ್ಳಿಯಲ್ಲಿ "ಹರಿಜನ ಬಾಲಿಕಾಶ್ರಮ"ವನ್ನು ಆರಂಭಿಸಿದರು. ಇಬ್ಬರು ಹರಿಜನ ಬಾಲಿಕೆಯರಿಂದ ಸುರು ಆದದ್ದು ಮುಂದೆ "ಮಹಿಳಾ ವಿದ್ಯಾ ಪೀಠ" ಎಂದು ಬೆಳೆದು ನಿಂತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಜೇಲು ಅನುಭವಿಸಿದ ನಾಗಮ್ಮನವರು ಕರ್ನಾಟಕದ ಪ್ರಥಮ ಎಂ.ಎಲ್.ಎ. ಆಗಿದ್ದರು. ಅವರ ಮಗಳು ಲೀಲಾವತಿ ಮಾಗಡಿ ಅವರೂ ತಾಯಿಯ ಹಾದಿಯಲ್ಲಿಯೇ ಸಾಧನೆಯನ್ನು ಮಾಡಿದರು. ಧಾರವಾಡದಿಂದ ಲೋಕಸಭೆಗೆ ಆಯ್ಕೆಯಾದ ಮೊದಲ ಮಹಿಳೆ ಸರೋಜಿನಿ ಮಹಿಷಿ. ಅವರು ನೆಹರು ಮಂತ್ರಿಮಂಡಳದಲ್ಲಿ ಕಾನೂನು ಮಂತ್ರಿಯಾಗಿದ್ದರು. ಮೊದಲ ಮಹಿಳಾ ಎಂ.ಎಲ್.ಸಿ. ಆದವರು ಪರ್ವೀನ್ ಕಮಲಾನಿ. ಸ್ವಾತಂತ್ರ್ಯ ಹೋರಾಟದಲ್ಲಿ ಜೇಲು ಕಂಡ ಮತ್ತೊಬ್ಬ ಮಹಿಳೆ ಶಕುಂತಲಾ ದಾಬಡೆ. ಇನ್ನು ಶಕುಂತಲಾ ಕುರ್ತಕೋಟಿಯವರ ಗಾಂಧಿ ತತ್ತ್ವ ಪರಿಪಾಲನೆ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನಕ್ಕೆ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ.

ಧಾರವಾಡದ ಹೆಸರನ್ನು ಅಂತಾರಾಷ್ಟ್ರೀಯ ಖ್ಯಾತಿಗೇರಿಸಿದವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ್ತಿ ಗಂಗೂಬಾಯಿ ಹಾನಗಲ್ಲ. ಅವರ ಮಗಳು ಕೃಷ್ಣಾ ಹಾಗೂ ಶಾರದಾ ಹಾನಗಲ್ಲರ ಸಾಧನೆಯನ್ನೂ ನೆನಪಿಸಿಕೊಳ್ಳಬೇಕು. ಧಾರವಾಡದ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಕಿಯಾಗಿದ್ದ ಸಂತೂಬಾಯಿ ನೀಲಗಾರ ಆಧುನಿಕ ಕನ್ನಡದ ಮೊದಲ ಕಾದಂಬರಿ ಬರೆದವರು. 1926ರಲ್ಲಿ 'ಸುಭಾಷಿತಗಳು' ಪುಸ್ತಕವನ್ನು ರಚಿಸಿದ ಗಿರಿಜಾದೇವಿ ಇಚ್ಚಂಗಿಮಠ ಸಾರ್ವಜನಿಕ ಕಾರ್ಯಗಳಲ್ಲಿಯೂ ತೊಡಗಿಕೊಂಡವರು. ಸ್ತ್ರೀ ಲೋಕದ ಹಲವು ಆಯಾಮಗಳನ್ನು ತಮ್ಮ ಕಥೆಗಳಲ್ಲಿ ತೆರೆದಿಟ್ಟ ಶ್ಯಾಮಲಾದೇವಿ ಬೆಳಗಾಂವಕರ್ ಅವರು ಜಯಕರ್ನಾಟಕ ಪತ್ರಿಕೆಯ ಸಂಪಾದಕಿ ಆಗಿಯೂ ಕಾರ್ಯ ನಿರ್ವಹಿಸಿದರು. ಅಲ್ಲದೆ ರಾಷ್ಟ್ರ ಮಟ್ಟದ ಮಹಿಳಾ ಸಂಘಟನೆಯಲ್ಲಿ ಕೆಲಸ ಮಾಡಿದ ಗರಿಮೆ ಅವರದು. ನಂತರದ ದಿನಗಳಲ್ಲಿ ಸರಸ್ವತಿ ದೇವಿ ಗೌಡರ, ಶಾಂತಾದೇವಿ ಮಾಳವಾಡ ಗೀತಾ ಕುಲಕರ್ಣಿ ಮುಂತಾದ ಲೇಖಕಿಯರು ಕನ್ನಡ ಸಾಹಿತ್ಯಕ್ಕೆ ವಿಶೇಷ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೊಡುಗೆಯನ್ನು ನೀಡಿದ್ದಾರೆ.

ವನಿತಾ ಸೇವಾ ಸಮಾಜದಲ್ಲಿ ಶಿಕ್ಷಕಿಯರ ತರಬೇತಿ ಕಾಲೇಜಿನ ಪ್ರಾಚಾರ್ಯರಾದ ವೆಂಕಮ್ಮಾ ಕೊಯಮತ್ತೂರ ಅವರು ಅಲ್ಲಿಂದ ಪ್ರಕಟವಾಗುತ್ತಿದ್ದ ವೀರಮಾತೆ ಪತ್ರಿಕೆಯ ಕಾರ್ಯಕಾರಿ ಸಂಪಾದಕ ಕಾರ್ಯ ನಿರ್ವಹಿಸಿದವರು.

ರಂಗಭೂಮಿಗಂತೂ ಸಾಕಷ್ಟು ಮಹಿಳೆಯರ ಶ್ರಮ ಸಂದಿದೆ. ಹಾವೇರಿಯ ಜುಬೇದಾಬಾಯಿ ಸವಣೂರ ಅನೇಕ ನಾಟಕಗಳಲ್ಲಿ ನಟಿಸಿದ್ದಲ್ಲದೆ ಸ್ವತಃ ಹಾಡುತ್ತಿದ್ದರು. ಗಾನ ಕೋಗಿಲೆ ಎಂಬ ಬಿರುದಿಗೆ ಪಾತ್ರರಾಗಿದ್ದರು. ಶಾಂತಾ ಹುಬ್ಳೀಕರ ರಂಗ ನಟಿಯಾಗಿದ್ದವರು ಹಿಂದಿ ಚಲನಚಿತ್ರ ತಾರೆಯಾಗಿ ಖ್ಯಾತರಾದರು. ಧಾರವಾಡದಲ್ಲಿ ಹುಟ್ಟಿ ಬೆಳೆದ ಲೀಲಾ ಚಿಟ್ನಿಸ್ ಮರಾಠಿ ಹಾಗೂ ಹಿಂದಿ ಚಿತ್ರಗಳಲ್ಲಿ ಸಾಹಸಮಯ ಸ್ಟಂಟ್ ಪಾತ್ರಗಳಲ್ಲಿ ಮಿಂಚಿದರು. ಹಿಂದಿ ಚಿತ್ರರಂಗದ ಖ್ಯಾತ ತಾರೆ ಲೀನಾ ಚಂದಾವರಕರ ಅವರನ್ನೂ ಮರೆಯುವಂತಿಲ್ಲ.

ಜಾನಪದ ಕಲಾವಿದೆ ಫಕ್ಕೀರವ್ವ ನವಲಗುಂದ ತಾಲೂಕಿನ ಗುಡಿಸಾಗರದವರು. ದೇವದಾಸಿಯಾಗಿದ್ದೂ ಅದನ್ನು ಧಿಕ್ಕರಿಸಿ ಬಾಳಿದವರು. ಗೀಗೀ ಪದ, ಸಾಂಪ್ರದಾಯದ ಹಾಡುಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ತನ್ನ ಮಾಂತ್ರಿಕ ಸ್ವರದಿಂದಾಗಿ ಆರಂಭದ ಸರಸ್ವತಿ ಸ್ತುತಿಯಲ್ಲಿಯೇ ಕೇಳುಗರನ್ನು ಸಮ್ಮೋಹನಗೊಳಿಸುತ್ತಿದ್ದರು.

ಇನ್ನು ಅಂದಿನ ದಿನಗಳಲ್ಲಿ ತಮ್ಮ ಚಿತ್ರ, ಪೇಂಟಿಂಗ್ ಮೂಲಕ ಜನಮನ್ನಣೆ ಪಡೆದವರು ತಾರಾಬಾಯಿ ಪವಾರ.

ಹೀಗೆ ಮಹಿಳೆಯ ಸಾಂಪ್ರದಾಯಿಕ ಪಾತ್ರವನ್ನು ಬದಲಿಸಿ, ಹೊಸ ಪಾತ್ರಗಳ ಅವಕಾಶವನ್ನು ತೆರೆದು ತೋರಿದ ಹಲವು ಹೆಸರುಗಳು ಇವೆ. ಅದಲ್ಲದೆಹೆಕ್ಕಿ ತೆಗೆಯಬೇಕಾದ ಹೆಸರುಗಳು ಅದೆಷ್ಟಿವೆಯೋ!

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಚುನಾವಣೆ ಒಳ ಹೊರಗೆ - ಸಂವಾದ

**– ಡಾ. ಎಚ್. ಎಸ್. ಅನುಪಮಾ**

**2018**ರ ಕರ್ನಾಟಕ ವಿಧಾನಸಭಾ ಚುನಾವಣೆ ಇಡಿಯ ಭಾರತದ, ಅಷ್ಟೇ ಅಲ್ಲ, ವಿಶ್ವದ ಗಮನವನ್ನೇ ಸೆಳೆಯಿತು. ಜನಮತ ಪ್ರಜಾತಂತ್ರದ ಜೀವಾಳ, ನಿಜ. ಆದರೆ ದೊರೆತಿರುವ ಜನಮತ ನಿಜವಾಗಿಯೂ ಯಾವುದೇ ಒಂದು ಪಕ್ಷಕ್ಕೆ ಬಹುಮತ ನೀಡಿಲ್ಲ ಎನ್ನುವುದು ಗಮನಿಸುವಂಥಾದ್ದು. ಏಕೆ ಅತಂತ್ರ ವಿಧಾನಸಭೆ ನಿರ್ಮಾಣವಾಯಿತು? ದಿನದಿಂದ ದಿನಕ್ಕೆ ಚುನಾವಣಾ ರಾಜಕೀಯವೇಕೆ ಪ್ರಜಾಪ್ರಭುತ್ವ ಆಶಯಗಳಿಂದ ದೂರ ಸಾಗುತ್ತಿದೆ? ಏಕೆ ಮಹಿಳೆಯರನ್ನು ನಿರ್ಲಕ್ಷಿಸಲಾಗುತ್ತಿದೆ? ಮಹಿಳಾ ಪ್ರಾತಿನಿಧ್ಯವು ಸದನದಲ್ಲಿ ಹಾಗೂ ಮಂತ್ರಿಮಂಡಲದಲ್ಲಿ ಕ್ಷೀಣವಾಗಿರಲು ಕಾರಣಗಳೇನು? ಮಹಿಳೆಯರೇಕೆ ಚುನಾವಣಾ ರಾಜಕೀಯದಲ್ಲಿ ಭಾಗವಹಿಸಲು ಹಿಂಜರಿಯುತ್ತಿದ್ದಾರೆ? ಸೂಕ್ತ ಮಹಿಳಾ ಪ್ರಾತಿನಿಧ್ಯ ದೊರಕಿದಲ್ಲಿ ಪ್ರಜಾಪ್ರಭುತ್ವದ ಆಶಯಗಳು ಜೀವಂತವಾಗುಳಿಯಬಲ್ಲವೆ? ಹಣ–ಜಾತಿ–ಕುಟುಂಬ ಹಿನ್ನೆಲೆ ಇಲ್ಲದವರೇಕೆ ಚುನಾವಣೆಯಲ್ಲಿ ಮತಗಳಿಸಲು ವಿಫಲರಾಗುತ್ತಿದ್ದಾರೆ? ಸ್ವಾತಂತ್ರ್ಯಕ್ಕಾಗಿ ಜೀವ ಸವೆಸಿದವರು, ಸಂವಿಧಾನ ಕರ್ತೃಗಳು ಬಯಸಿದ ದಿಸೆಯಲ್ಲಿ ನಮ್ಮ ಸಮಾಜ, ಸರ್ಕಾರಗಳು ಸಾಗುತ್ತಿವೆಯೆ? ಒಬ್ಬ ಪ್ರಜೆಯಾಗಿ, ಒಬ್ಬ ಮಹಿಳೆಯಾಗಿ, ಒಬ್ಬ ಅಧಿಕಾರಿಯಾಗಿ, ಒಬ್ಬ ರಾಜಕಾರಣಿಯಾಗಿ, ಹೋರಾಟಗಾರರಾಗಿ, ಬರಹಗಾರರಾಗಿ ಚುನಾವಣೆಯ ನಮ್ಮ ಅನುಭವಗಳೇನು? ಚುನಾವಣೆ, ಫಲಿತಾಂಶ ಕುರಿತ ನಮ್ಮ ಅನಿಸಿಕೆ, ಆಶಯ, ತಕರಾರುಗಳೇನು? ಆತಂಕ ನಿವಾರಣೆಗಿರುವ ಹೊರದಾರಿಗಳಾವುವು?

ಇವೇ ಮುಂತಾದ ಹತ್ತು ಹಲವು ವಿಷಯಗಳ ಹಂಚಿಕೊಳ್ಳಲು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಕರ್ನಾಟಕದ ಕೆಲವೆಡೆಗಳಲ್ಲಿ 'ಚುನಾವಣೆ: ಒಳ ಹೊರಗೆ' ಎಂಬ ಸರಣಿ ಕಾರ್ಯಕ್ರಮಗಳನ್ನು 2018ರಲ್ಲಿ ನಡೆಸಿತು. ಚಿಂತಕರಿಂದ ರಾಜಕೀಯ ವಿಶ್ಲೇಷಣೆ, ಹಾಗೂ ಮಹಿಳಾ ಜನಪ್ರತಿನಿಧಿಗಳಿಂದ ಅನುಭವ ಕಥನಗಳನ್ನು ಹಂಚಿಕೊಳ್ಳುವಂತೆ ಹತ್ತು ಜಿಲ್ಲೆಗಳಲ್ಲಿ ಒಂದೊಂದು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮೊದಲ ಕಾರ್ಯಕ್ರಮವನ್ನು ಶಿವಮೊಗ್ಗದಲ್ಲಿ ಜೂನ್ 17ರಂದು ನಡೆದು ದಿನೇಶ್

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅಮಿನ್‌ಮಟ್ಟು, ಶಾರದಾ ಪೂರ್ವಾ ನಾಯ್ಕ್, ಯಮುನಾ ಗಾಂವ್ಕರ್, ನಾದಿರಾ ಪರ್ವೀನ್ ಮೊದಲಾದ ಸಂಪನ್ಮೂಲ ವ್ಯಕ್ತಿಗಳಲ್ಲದೆ, ಜಿಲ್ಲೆಯಾದ್ಯಂತ ಮತ್ತು ಹೊರಜಿಲ್ಲೆಗಳಿಂದ ಬರುವ ಸಮಾನ ಮನಸ್ಕರು ಚರ್ಚೆಯಲ್ಲಿ ಭಾಗವಹಿಸಿದರು. ನಂತರ ಕೊಪ್ಪಳದ ಸಾಹಿತ್ಯ ಭವನದಲ್ಲಿ ಜೂನ್ 24 ರಂದು ನಡೆದ ಕಾರ್ಯಕ್ರಮದಲ್ಲಿ ಪ್ರೊ. ಮುಜಾಫರ್ ಅಸಾದಿ, ಮಾಲತಿ ನಾಯ್ಕ್, ಮಹಾದೇವಿ ಕಂಬಳಿ, ರಾಜ್ಯ ಬಾರ್ ಕೌನ್ಸಿಲ್ ಸದಸ್ಯರಾದ ಸಂಧ್ಯಾ ಮಾದಿನೂರ್ ಅವರು 'ಮಹಿಳಾ ಮೀಸಲಾತಿ'ವಿಷಯವಾಗಿ ಮಾತನಾಡಿದರು.

ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಜುಲೈ 8, 2018ರಂದು 'ಚುನಾವಣೆ: ಮಹಿಳಾ ಅನುಭವ' ನಡೆಯಿತು. ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಸಿ. ಮೋಟಮ್ಮ ಅವರು ಅದರಲ್ಲಿ ಭಾಗವಹಿಸಿದ್ದರು. ಯಾವುದೇ ಕೌಟುಂಬಿಕ ಹಿನ್ನೆಲೆಯಿಲ್ಲದೆ ತಾವು ತಮ್ಮ ಚಳುವಳಿ, ಜನಸಂಪರ್ಕದ ಬೆಂಬಲದಿಂದ ಚುನಾವಣೆ ಎದುರಿಸಿದ್ದು, ಸಿಹಿ ಕಹಿ ಅನುಭವಗಳನ್ನು ಅವರು ಹಂಚಿಕೊಂಡರು. ಅವರಲ್ಲದೇ ಜಿಲ್ಲಾ ಪಂಚಾಯ್ತಿ ಸದಸ್ಯೆ, ಅಧ್ಯಕ್ಷೆಯಾಗಿದ್ದ ಅನಿತಾ ತಮ್ಮ ಅನುಭವದ ಬಗೆಗೆ ವಿಸ್ತೃತವಾಗಿ ಮಾತನಾಡಿದ್ದರು. ಮಹಿಳಾ ರಾಜಕಾರಣಿಗಳು 'ಅಡ್ಜಸ್ಟ್ ಮಾಡಿಕೊಂಡು ಹೋಗಲು' ಬಯಸುತ್ತಾರೆ ಎಂಬ ಅವರ ಹೇಳಿಕೆ ಸ್ವಲ್ಪ ವಿವಾದಕ್ಕೂ ಕಾರಣವಾಯಿತು.

ಆಗಸ್ಟ್ 5, 2018ರಂದು ಹೊಸಪೇಟೆಯಲ್ಲಿ ಗೌತಮ ಬುದ್ಧ ಫಂಕ್ಷನ್ ಹಾಲ್, ಅಂಬೇಡ್ಕರ್ ಭವನದಲ್ಲಿ 'ಚುನಾವಣೆ – ಸುಧಾರಣೆ' ಕುರಿತು ಪ್ರೊ. ಚಂದ್ರ ಪೂಜಾರಿ ಅವರು, 'ಚುನಾವಣೆ: ಮಹಿಳಾ ಅನುಭವ' ಕುರಿತು ಬಿ. ಮಾಳಮ್ಮ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಹಗರಿಬೊಮ್ಮನಹಳ್ಳಿಅವರು ಮಾತನಾಡಿದರು.ಅಂಬಮ್ಮ, ದೇವರಗುಡಿ ಪಂಚಾಯ್ತಿ ಉಪಾಧ್ಯಕ್ಷರು, ನವಜೀವನ ಮಹಿಳಾ ಒಕ್ಕೂಟ, ಸಿಂಧನೂರು; ನೂರ್ ಜಹಾನ್, ನಗರಸಭೆ ಸದಸ್ಯರು, ಹೊಸಪೇಟೆ ಇವರೆಲ್ಲ ಅನುಭವ ಹಂಚಿಕೊಂಡರು. ಮಹಿಳಾ ಮೀಸಲಾತಿ ಕುರಿತುಡಾ. ಎಂ. ಉಷಾ ಮಾತನಾಡಿದರು. ನಂತರ ಮೈಸೂರಿನಲ್ಲಿ ಆಗಸ್ಟ್ 19, 2018ರಂದು ಕಿರುರಂಗ ಮಂದಿರ, ರಂಗಾಯಣದಲ್ಲಿ ಸಂವಾದ ಕಾರ್ಯಕ್ರಮ ನಡೆಯಿತು. 'ಮಹಿಳೆ–ರಾಜಕಾರಣ–ಹೊಸದಿಕ್ಕು' ಕುರಿತು ಪ್ರೊ ಉಮಾಪತಿ ಮತ್ತು ನಂದಿನಿ ಜಯರಾಂ ಮಾತನಾಡಿದರೆ; ಶ್ರೀಮತಿ ಬಿ.ಟಿ.ಲಲಿತಾ ನಾಯಕ್, ಮಾಜಿ ಸಚಿವೆ; ಸುನಿತಾ ವೀರಪ್ಪ ಗೌಡ, ಮಾಜಿ ಜಿ.ಪಂ. ಅಧ್ಯಕ್ಷರು, ಮಾಜಿ ಶಾಸಕರು; ಡಾ. ಪುಷ್ಪಾ ಅಮರನಾಥ್, ಮಾಜಿ ಜಿ.ಪಂ. ಅಧ್ಯಕ್ಷರು; ಮಾಲವಿಕಾ ಗುಬ್ಬಿವಾಣಿ, ಮಹಿಳಾ ಹೋರಾಟಗಾರರು; ನಯಿಮಾ ಸುಲ್ತಾನಾ, ಮೈಸೂರು ಜಿ.ಪಂ. ಅಧ್ಯಕ್ಷರು; ರೆಹನಾ ಬಾನು, ಮಾಜಿ ಅಧ್ಯಕ್ಷರು, ಮೃಗಾಲಯ ಪ್ರಾಧಿಕಾರ ಇವರೆಲ್ಲ 'ಚುನಾವಣೆ: ಮಹಿಳಾ ಅನುಭವ'ವನ್ನು ಹಂಚಿಕೊಂಡರು.

ವಿಜಯಪುರದಲ್ಲಿ 'ಮಹಿಳಾ ಮೀಸಲಾತಿ' ಕುರಿತು ಪ್ರೊ.ಆರ್. ಸುನಂದಮ್ಮ, 'ಚುನಾವಣೆ: ಮಹಿಳಾ ಅನುಭವ' ಕುರಿತು ಸುಮನ್ ಕೋಲಾರ್, ಮಾಜಿ ಉಪಾಧ್ಯಕ್ಷರು,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಜಿಲ್ಲಾ ಪರಿಷತ್, ವಿಜಯಪುರ; 'ಮಹಿಳಾ ಪ್ರಾತಿನಿಧ್ಯ: ಸವಾಲು–ಸಾಧ್ಯತೆ' ಕುರಿತು ಎಚ್. ಟಿ. ಭರತ್ ಕುಮಾರ; 'ಚುನಾವಣೆ – ಸುಧಾರಣೆ' ಬಗ್ಗೆ ಶ್ರೀ ಶಿವಸುಂದರ್ ಮಾತನಾಡಿದರು. ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಸಬಿಹಾ ಅಧ್ಯಕ್ಷತೆವಹಿಸಿದ್ದರು. ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ 26 ಸೆಪ್ಟೆಂಬರಿನಲ್ಲಿ ಚುನಾವಣೆ ಒಳಹೊರಗೆ ಕಾರ್ಯಕ್ರಮ ನಡೆಯಿತು. ವಕೀಲರಾದ ನೀತಾ ಪೋದ್ದಾರ್ ಅವರು ಮಾತನಾಡಿದರೆ, ಅಸ್ಮಾ ತಹಶೀಲ್ದಾರ, ಶೋಭಾ ಕಟ್ಟಿಮನಿ, ಭಾರತಿ ಬಾಂದುರ್ಗೆ ಇವರೆಲ್ಲ ತಮ್ಮ ರಾಜಕೀಯದ ಮತ್ತು ಚುನಾವಣೆಯ ಅನುಭವಗಳನ್ನು ಹಂಚಿಕೊಂಡರು.

ಮಂಗಳೂರಿನಲ್ಲಿ ಅಕ್ಟೋಬರ್ 13ರಂದು ಚುನಾವಣೆ ಸಂವಾದ ನಡೆಯಿತು. ಮಾಜಿ ಸಚಿವೆ ಶಕುಂತಲಾ ಶೆಟ್ಟಿ ಪಾಲ್ಗೊಂಡಿದ್ದರು. ಚುನಾವಣಾ ರಾಜಕಾರಣ ಮತ್ತು ಪ್ರಜಾಪ್ರಭುತ್ವದ ಬಿಕ್ಕಟ್ಟುಗಳ ಬಗೆಗೆ ಶಿವಸುಂದರ್ ಆಳ ವಿಶ್ಲೇಷಣೆ ನಡೆಸಿದರು. ನಂತರ ಜೊಹ್ರಾ, ಧನಲಕ್ಷ್ಮಿ ಮೊದಲಾದ ವಿವಿಧ ಹಂತಗಳ ಮಹಿಳಾ ಜನಪ್ರತಿನಿಧಿಗಳು ತಮ್ಮ ಅನುಭವ ಹಂಚಿಕೊಂಡರು. ನಂತರ ತುಮಕೂರಿನ ಕನ್ನಡಭವನದಲ್ಲಿ 2018, ಅಕ್ಟೋಬರ್ 30 ರಂದು 'ಚುನಾವಣೆ: ಒಳ ಹೊರಗೆ' ಕಾರ್ಯಕ್ರಮ ನಡೆಯಿತು. ಅದರ ಎರಡನೆಯ ಭಾಗವಾಗಿ 'ರಾಜಕಾರಣದಲ್ಲಿ ಮಹಿಳಾ ಅನುಭವ' ಸಂವಾದ ಗೋಷ್ಠಿ ಮಧ್ಯಾಹ್ನ ನಡೆಯಿತು. ಚುನಾವಣೆಯ ನೇರ ಅನುಭವ ಇರುವ ಹೊಸಬರು, ಹಳಬರು, ರಾಜಕೀಯದ ಅರಿವು ಇರುವ ಉಪನ್ಯಾಸಕರು, ಸಮಾಜಸೇವಕರು ಸೇರಿದಂತೆ ಸುಮಾರು 10 ಮಂದಿ ವೇದಿಕೆ ಮೇಲೆ ಇದ್ದು ರಾಜಕೀಯದಲ್ಲಿ ಮಹಿಳಾ ಅನುಭವ ಕುರಿತ ಸಂವಾದ ನಡೆಯಿತು. ಜೊತೆಗೆ ಸಭಿಕರಲ್ಲೂ ಅನೇಕರು ಉತ್ಸಾಹದಿಂದ ಚರ್ಚೆಯಲ್ಲಿ ಪಾಲ್ಗೊಂಡರು. ಬೆಂಗಳೂರಿನಲ್ಲಿಯೂ ಸಂವಾದ ಕಾರ್ಯಕ್ರಮ ನಡೆದು ಅದರಲ್ಲಿ ವೈ. ಎಸ್. ವಿ. ದತ್ತ ಮನೋಜ್ಞವಾಗಿ ತಮ್ಮ ಅನುಭವ, ಅಭಿಪ್ರಾಯ ಹಂಚಿಕೊಂಡರು. ಮಾಜಿ ಸಚಿವೆ ರಾಣಿ ಸತೀಶ್, ಬಂಜಗೆರೆ ಜಯಪ್ರಕಾಶ್, ಡಾ. ವಿಜಯಾ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸೌಮ್ಯಾ ಮೊದಲಾದವರು ಭಾಗವಹಿಸಿ ಅಭಿಪ್ರಾಯ ಹಂಚಿಕೊಂಡರು.

ಒಟ್ಟು ಚುನಾವಣಾ ಸಂವಾದ ಕಾರ್ಯಕ್ರಮದಲ್ಲಿ ಕೇಳಿಬಂದ ಕೆಲವು ಮುಖ್ಯ ಅಂಶಗಳು ಇವು:

- 25 ವರುಷಗಳಲ್ಲಿ ಸ್ಥಳೀಯ ರಾಜಕಾರಣದಲ್ಲಿ ಮಹಿಳಾ ಪ್ರತಿನಿಧಿಗಳು ಮಾಡಿದ ಸಾಧನೆಗಳು ಲಕ್ಷಾಂತರ. ಒಂದು ಕಡೆಯಿಂದ ಕುಟುಂಬದ ಕೈಗೊಂಬೆಯಂತಹ ಹಲವರು ಇದ್ದರೂ ಕೂಡಾ, ಅದನ್ನು ಮೀರಿ ಕೆಲಸ ಮಾಡಿದವರನ್ನು ಕೂಡಾ ದೊಡ್ಡ ಸಂಖ್ಯೆಯಲ್ಲಿ ನಾವು ಕಾಣಬಹುದು.
- ಮೀಸಲಾತಿ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಮಹಿಳೆಯರು ಇರುವಲ್ಲಿ, ಮತದಾನದ ಪ್ರಮಾಣ ಬಹಳ ಕಡಿಮೆ ಎಂದು ಕಂಡುಬರುತ್ತಿದೆ. ಏನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕಾರಣ, ಮಹಿಳೆಯರಿಗೆ ಓಟು ಹಾಕಲು ಇರುವ ಅಸಡ್ಡೆಯೇ?

- ಬಡಜನರು, ಆದಿವಾಸಿಗಳು, ಮುಸ್ಲಿಂ ಸಮುದಾಯದವರು, ತಳವರ್ಗದವರು ಮತದಾನ ಮಾಡುತ್ತಾರೆ, ಮಾಡದೆ ಇರುವುದು ಎಂದರೆ, ಮುಂದುವರೆದವರು. ಅವರಿಗೆ ಎಲ್ಲಾ ಸೌಕರ್ಯ ಬೇಕು, ಉತ್ತಮ ಸೌಲಭ್ಯ ಪಡೆಯಬೇಕು, ಒಳ್ಳೆಯ ನೌಕರಿಯೊಂದಿಗೆ ಮೆರೆಯಬೇಕು, ಆದರೆ ಮಹಡಿ ಇಳಿದು ಬಂದು ಮತದಾನ ಮಾಡಲು ಅವರಿಗೆ ಪುರುಸೊತ್ತಿಲ್ಲ. ರಾಜ್ಯದಲ್ಲೇ ಅತಿಕಡಿಮೆ ಮತದಾನ ಆಗುವ ಪ್ರದೇಶಗಳಲ್ಲಿ ಬೆಂಗಳೂರು ಮುಂದಿದೆ.
- ಓಟು ಹಾಕದವರಿಗೆ, ಕೈಯಲ್ಲಿ ಮಸಿ ಹಚ್ಚಿಸಿಕೊಳ್ಳದವರಿಗೆ, ಏನಾದರೂ ಒಂದು ಸೌಲಭ್ಯ ಕಿತ್ತುಹಾಕಬೇಕು. ಕಡ್ಡಾಯ ಮತದಾನ ಕಾನೂನು ಬರಬೇಕು.
- ಜನಪ್ರತಿನಿಧಿ ಆದ ಕೂಡಲೇ ಹೆಣ್ಣು ಮಕ್ಕಳು ತಮ್ಮ ಹೆಸರಿನೊಂದಿಗೆ ಗಂಡನ ಹೆಸರು ಸೇರಿಸಬಾರದು. ಹಾಗೆ ಸೇರಿಸುವುದಾದರೆ ಅವರ ಗಂಡನ ಹೆಸರಿನಲ್ಲಿ ಹೆಂಡತಿ ಹೆಸರು ಸೇರಿರಬೇಕು.
- 2019ರ ಲೋಕಸಭಾ ಚುನಾವಣೆಗೆ ಟಿಕೇಟು ಸಿಕ್ಕರೆ ಸ್ಪರ್ಧಿಸಲು ಯಾರು ತಯಾರಿದ್ದೀರಿ ಎಂಬ ಪ್ರಶ್ನೆಯ ಹಿನ್ನಲೆಯಲ್ಲಿ ಕೆಲವು ಚರ್ಚೆಗಳು ಆದವು. ಯಾವ ಪಕ್ಷ ಅಂತ ನೋಡಬೇಕಾಗುತ್ತದೆ. ಚುನಾವಣೆಗೆ ನಿಲ್ಲಲು, ಹಣ ಇಲ್ಲ, ಯಾರು ಕೊಡುತ್ತಾರೆ; ಸೋತರೆ ಪರವಾಗಿಲ್ಲ, ಸ್ಪರ್ಧಿಸುವುದು ಅಗತ್ಯ – ಹೀಗೇ. ನಾವು ಅಲ್ಲಲ್ಲಿ ಸ್ವತಂತ್ರ ಅಭ್ಯರ್ಥಿಗಳನ್ನು ಹಾಕಿ ಹಣ ಚೆಲ್ಲದೆ, ಪ್ರಚಾರ ಮಾಡಬೇಕು. ಇಂತಹ ಒಂದು ಸಾಧ್ಯತೆಯನ್ನು ತೋರಿಸಬೇಕು ಎಂಬ ಚರ್ಚೆಯೂ ಆಯಿತು. 'ನಾನಲ್ಲಿ ಕೆಲಸ ಮಾಡಿಲ್ಲ, ಸುಮ್ಮನೆ ಟಿಕೆಟ್ ಕೊಟ್ಟರೂ ನಿಲ್ಲುವುದಿಲ್ಲ' ಎಂದು ಯಾರಾದರೂ ಹೇಳಿಯಾರೇನೋ ಎಂದು ಹಾಕಿದ ಪ್ರಶ್ನೆಗೆ ಆ ಉತ್ತರ ಬರಲಿಲ್ಲ!
- "ನಮ್ಮ ಪಕ್ಷದಲ್ಲಿ ನಾನು ಅನಾಥೆ. 25–30 ವರ್ಷದಿಂದ ಸಂಘಟನೆ ಕೆಲಸಕ್ಕೆ ಕರೆದು ಬೇಕಾದ ಹಾಗೆ ದುಡಿಸಿಕೊಳ್ಳುತ್ತಾರೆ. ಆದರೆ ಚುನಾವಣೆಯಲ್ಲಿ ಅವಕಾಶ ಕೊಡಲ್ಲ. ದುಡ್ಡಿಲ್ಲದಿರುವುದೇ ಕಾರಣವೋ, ಬೇರೆ ಒಳ ರಾಜಕಾರಣವೋ ಗೊತ್ತಿಲ್ಲ. ನನ್ನ ಯೋಗ್ಯತೆಗೆ ಒಂದು ಕಾರ್ಪೊರೇಟರ್ ಕೂಡಾ ಆಗಲಿಕ್ಕೆ ಆಗಿಲ್ಲ." ಎಂದು ತುಮಕೂರಿನ ಒಬ್ಬರು ತಮ್ಮ ನೋವು ಹಂಚಿಕೊಂಡರು. ಹೀಗೇ ಟಿಕೆಟ್ ಆಕಾಂಕ್ಷಿ ಆದ ಇನ್ನು ಕೆಲವರಿಗೆ, ಹಣ ಎಷ್ಟು ಇದೆ ಅಂತ ನೇರ ಕೇಳಿದ್ದೂ ಇದೆ. ಟಿಕೆಟ್ ಮಾತ್ರ ಯಾರಿಗೋ ಕೊಟ್ಟಿದ್ದಾರೆ.
- ಟಿಕೆಟ್ ಸಿಗದೇ ಇದ್ದರೆ, ಸ್ವತಂತ್ರವಾಗಿ ಸ್ಪರ್ಧಿಸಲು ಮುಂದಾಗಬೇಕು ಎಂದು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಲೀಲಾದೇವಿ ಆರ್. ಪ್ರಸಾದ್ ಸೂಚನೆ ಕೊಟ್ಟರು. ಅರ್ಹರಾಗಿದ್ದರೆ, ಜನಬೆಂಬಲ ಇದ್ದರೆ, ಟಿಕೆಟ್ ಕೊಡದವರನ್ನು ಜನರೇ ನಿಲ್ಲಿಸಿ ಗೆಲ್ಲಿಸುವಂತಹ ಕಾಲ ಬರಬೇಕು ಎಂಬ ಮಾತೂ ಕೇಳಿಬಂತು.

- ಮಹಿಳೆಯರು ಯಾಕೆ ಒಂದು ವೋಟ್ ಬ್ಯಾಂಕ್ ಆಗಬಾರದು? ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಪ್ರತಿನಿಧಿ ಆಗುತ್ತಾರೆ. ಹಾಗೆ ಮಹಿಳೆಯರ ಹೆಸರನಲ್ಲಿ ಕೇಳುವಂತಾಗಬೇಕು. ಉದಾಹರಣೆಗೆ, 50% ಟಿಕೆಟ್ ಮಹಿಳೆಯರಿಗೆ ಕೊಟ್ಟರೆ ಮಾತ್ರ ನಮ್ಮ ಓಟು ನಿಮಗೆ ಅಂತ ಒತ್ತಾಯಿಸಲು ಸಾಧ್ಯ ಆಗಬೇಕು. ಇಂತಹ ಇಶ್ಯೂಗಳನ್ನು ನಿಖರವಾಗಿ ಗುರುತಿಸಿಕೊಳ್ಳಬೇಕು.
- ಇದೀಗ ಪ್ರಬಲರ ಪ್ರಭುತ್ವ ಆಗಿದೆ, ಪ್ರಜಾಪ್ರಭುತ್ವ ಆಗಿಲ್ಲ.
- ಮಹಿಳಾ ಮತಬ್ಯಾಂಕ್ ಬಗೆಗೆ ಸಾಕಷ್ಟು ವರುಷಗಳಿಂದ ಮಾತುಕತೆ ನಡೆಯುತ್ತಿದೆ. ಇಂದಿರಾ ಗಾಂಧಿಗೆ ಸಿಂಪತಿ ಓಟು ಸಿಕ್ಕಿತ್ತು. ಬಿಹಾರದಲ್ಲಿ ನಿತೀಶ್ ಕುಮಾರ್‌ಗೆ ಜಾತಿ ಬೆಂಬಲ ಇರಲಿಲ್ಲ. ಅವರು ಮಹಿಳೆಯರ ಓಟನ್ನು ಗುರುತಿಸಿ ಪಡೆಯುವ ಒಂದು ಪ್ರಯತ್ನ ನಡೆದಿತ್ತು.
- ಮಹಿಳೆಯರು ಏಕಜಾತಿಯ ಸಮುದಾಯವಲ್ಲ. ಪಕ್ಷ, ಜಾತಿಗಳಲ್ಲಿ ಹಂಚಿಹೋಗಿದ್ದಾರೆ. ಇವರು ಪ್ರಭಾವಶಾಲಿ ಮತದಾರರು ಅಂತ ತೋರಿಸಬೇಕಾಗಿದೆ. ಅದು ಒಂದು ದೊಡ್ಡ ಸವಾಲು.
- ರಾಜಕೀಯ ಪಕ್ಷಗಳು ನಮಗೆ ಮೋಸ ಮಾಡಿ ಬದುಕುತ್ತಿದ್ದಾರೆ, ದುಡಿಸಿಕೊಳ್ಳುತ್ತಾರೆ, ಬೈಯುತ್ತಾರೆ. ದುಡ್ಡಿದ್ದರೆ ಮಾತ್ರ ಬೆಲೆ. ನಾವು ನಿರಂತರ ಜನ ಸೇವೆ ಮಾಡಬೇಕು. ಸಮಾಜ ಸೇವೆ ಮಾಡಿ, ಜನರೊಂದಿಗೆ ಒಡನಾಡಿ ಅವರ ನಂಬಿಕೆ ಪಡೆದುಕೊಳ್ಳಬೇಕು.
- ಹೊರದೇಶದಿಂದ ನಾವು ಕೆಲವು ಅಂಶಗಳನ್ನು ಕಲಿಯಬೇಕಾಗಿದೆ. ಸ್ವೀಡನ್‌ನಲ್ಲಿ, 7 ಮಂದಿ ಹೆಣ್ಣು ಮಕ್ಕಳು ಪ್ರಧಾನ ಸ್ಥಾನಗಳಲ್ಲಿ ಇದ್ದಾರೆ. ರುವಾಂಡ, ಬಡದೇಶ, ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ಕೊಡುವಲ್ಲಿ ಮೊದಲಿಗಿದೆ.
- ಭಾಗವಹಿಸಿದ ಗ್ರಾಮ ಪಂಚಾಯತ್ ಸದಸ್ಯರು ತಮ್ಮ ಕೆಲಸಗಳನ್ನು ಹಂಚಿಕೊಂಡರು. “ಲೇಡೀಸೆಲ್ಲ ಒಟ್ಟಿಗೇ ಹೋಗಿ ಕೆಲಸ ಮಾಡಿಸ್ಕೊಳ್ಳುತ್ತೇವೆ, ಬಾಲ್ಯವಿವಾಹ ತಡೆದಿದ್ದೇವೆ. ಚೆನ್ನಾಗಿ ಕೆಲಸ ಮಾಡುತ್ತೇವೆ.” ಎಂದು ಉತ್ಸಾಹದಿಂದ ಮಾತನಾಡಿದರು.
- ಚುನಾವಣೆ ಸುಧಾರಣೆಯ ದೃಷ್ಟಿಯಿಂದ ನೋಡಿದರೆ, ಮತ್ತೆ ಮತ್ತೆ ಒಬ್ಬರೇ ಓಟಿಗೆ ನಿಲ್ಲಬಾರದು. ಎಲ್ಲರಿಗೂ ನಿಗದಿತ ಅವಧಿ ಇರಬೇಕು. ಹೊಸ ನಾಯಕರು ಹುಟ್ಟಿಕೊಳ್ಳಬೇಕು. ಹಳಬರು ತೆರವು ಮಾಡಬೇಕು. ಅಮೆರಿಕಾದಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

2 ಬಾರಿ ಮಾತ್ರ ಅಧ್ಯಕ್ಷ ಸ್ಥಾನಕ್ಕೆ ಬರಲು ಸಾಧ್ಯ. ಹಾಗೇ ಭಾರತದಲ್ಲಿಯೂ ಯಾವುದೇ ಚುನಾವಣೆಗೆ ಎರಡು ಬಾರಿ ಮಾತ್ರ ಸ್ಪರ್ಧಿಸಬೇಕು ಎಂಬ ನಿಯಮ ಬರಬೇಕು. ವಯೋನಿವೃತ್ತಿ, ಕನಿಷ್ಠ ವಿದ್ಯಾರ್ಹತೆ ಮತ್ತು ಸೀಮಿತ ಅವಧಿ ಇರಬೇಕು.

- ಜನಕ್ಕೆ ಮಹಿಳೆಯರ ಸಾಮರ್ಥ್ಯದ ಬಗ್ಗೆ ನಂಬಿಕೆಯೇ ಇಲ್ಲದ್ದರಿಂದ ಹೀಗಾಗುತ್ತಿದೆ.
- ಕೆಲವೆಲ್ಲ ಪ್ರಯೋಗಗಳು ನಡೆಯುತ್ತಿವೆ. ಮಹಾರಾಷ್ಟ್ರದ ಒಂದು ಸಂಘಟನೆಯವರು ಚುನಾವಣಾ ಕಣಕ್ಕೆ ಇಳಿಯಬಲ್ಲ ಹೆಣ್ಣುಮಕ್ಕಳನ್ನು ಗುರುತಿಸಿ, ಅವರ ಮನೆಯ ಪುರುಷರಿಗೆ ತರಬೇತಿ ನೀಡುತ್ತಿದ್ದಾರೆ. ಚುನಾವಣೆಯ ದಿನಗಳಲ್ಲಿ, ನಂತರ ಅವರ ಮನೆಯ ಸ್ಪರ್ಧಿ ಹೆಣ್ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕೆಂದು ತಿಳಿ ಹೇಳುತ್ತಿದ್ದಾರೆ. ಇದು ಯಶಸ್ವಿಯೂ ಆಗಿದೆ.
- ಭೂತಾನದಲ್ಲಿ, ಆಸಕ್ತ ಮಹಿಳೆಯರಿಗೆ ಸೀರಿಯಸ್ ಆಗಿ ತರಬೇತಿ ಕೊಡಲಾಗುತ್ತದೆ, ಸರಕಾರವೇ ಇದನ್ನು ನಿರ್ವಹಿಸುತ್ತದೆ.
- ಗ್ರಾಕೂಸಂ ಸಂಸ್ಥೆ ತಳಸ್ತರದ ಸಮುದಾಯದ ಮಹಿಳೆಯರನ್ನು ರಾಯಚೂರು ಸುತ್ತಮುತ್ತ ಪಂಚಾಯತ್ ಚುನಾವಣೆಗೆ ಸ್ಪರ್ಧಿಸಲು ಸಹಕಾರ ನೀಡಿದೆ. ಅಲ್ಲಿಂದಲೂ ಅನೇಕ ಯಶಸ್ಸಿನ ಕತೆಗಳು ಕೇಳಿಬರುತ್ತವೆ.
- ಯಾಕೆ ಜನರಿಗೆ, ಸರಳವಾಗಿ ನೇರವಾಗಿ ಮಾತಾಡುವ, ಭ್ರಷ್ಟರಲ್ಲದ ಜನರನ್ನು ಜನನಾಯಕರಾಗಿ ಸ್ವೀಕರಿಸುವುದಕ್ಕೆ ಆಗುವುದಿಲ್ಲ?
- ಇವೆಲ್ಲದರ ನಡುವೆ ಗುಲ್ಬರ್ಗಾದಲ್ಲಿ ನಡೆದ ಘಟನೆ ನೆನಪಿಟ್ಟುಕೊಳ್ಳಬೇಕು. ಜಿಲ್ಲಾ ಪಂಚಾಯತ್‌ನ ಎಲ್ಲಾ ಮಹಿಳಾ ಪ್ರತಿನಿಧಿಗಳು ಸೇರಿ ತಮ್ಮ ಗಂಡಂದಿರನ್ನು ಸಭೆಯಲ್ಲಿ ಕೂರಲು ಬಿಡಬೇಕು ಎಂದು ಧರಣಿ ಮಾಡಿದ್ದರು. ಇದು ಸಾಂವಿಧಾನಿಕವಾಗಿ ಸಾಧ್ಯವಿಲ್ಲ. ಆದರೂ ಇದು ಎಂತಹಾ ವಿಪರ್ಯಾಸ! ಒಬ್ಬ ಜಿ.ಪಂ.ನಲ್ಲಿ ಸಹಾಯಕ ಇಂಜಿನಿಯರರು ಹೇಳಿದರು: ತನ್ನ 12 ವರ್ಷದ ವೃತ್ತಿ ಜೀವನದ ಅನುಭವದಲ್ಲಿ ಯಾವೊಬ್ಬ ಮಹಿಳಾ ಜನಪ್ರತಿನಿಧಿಯೂ ಗಂಡ/ತಮ್ಮ/ಮಗ/ಅಪ್ಪ ಯಾರಾದರೂ ಒಬ್ಬರಿಲ್ಲದೆ ಬಂದೇ ಇಲ್ಲ ಎಂದರು.
- ನಿಮ್ಮ ಕ್ಷೇತ್ರದಲ್ಲಿ 4 ಜನ ನಿಂತಿದ್ದಾರೆ. ಒಬ್ಬರು ಅತಿ ತಳಸಮುದಾಯದ, ಪ್ರಾತಿನಿಧ್ಯವೇ ಇರದ ಸಮುದಾಯದ ವ್ಯಕ್ತಿ. ಮತ್ತೊಬ್ಬರು ಮಹಿಳೆ. ಮತ್ತೊಬ್ಬರು ಸದನದಲ್ಲಿರುವುದಕ್ಕೆ ತುಂಬ ಅರ್ಹತೆಯುಳ್ಳವರು. ಮತ್ತೊಬ್ಬರು ಯಾವ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪಕ್ಷ ನೀವು ಗೆಲ್ಲಲೆಂದು ಬಯಸುವಿರೋ ಆ ಪಕ್ಷದಿಂದ ನಿಂತಿರುವವರು. ಚುನಾವಣೆ ದಿನ ಮತ ಚಲಾಯಿಸಬೇಕಾದರೆ ಈ ನಾಲಕ್ಕು ಅರ್ಹತೆ, ಜಾತಿ, ಹೆಣ್ಣು, ಪಕ್ಷ – ಅಂಶಗಳಲ್ಲಿ ಯಾವುದಕ್ಕೆ ಆದ್ಯತೆ ನೀಡುತ್ತೀರಿ ಎಂಬ ಊಹಾತ್ಮಕ ಪ್ರಶ್ನೆ ಮುಂದಿಡಲಾಯಿತು. ಅರ್ಹತೆ ಅಂದರೆ ರಾಜಕೀಯ ಚಾಕಚಕ್ಯತೆ, ಮುತ್ಸದ್ದಿತನ, ಸದನದ ತಿಳುವಳಿಕೆ ಇತ್ಯಾದಿ. ಇವರನ್ನು ಚುನಾಯಿಸಿದರೆ ನಮ್ಮ ಕೆಲಸ ಮಾಡುವ ಸಾಮರ್ಥ್ಯ ಇದೆ. ಜಾತಿ ಈ ಜಾತಿಯ ಪ್ರಾತಿನಿಧ್ಯವೇ ಇಲ್ಲ, ಇದೊಂದು ಅವಕಾಶ ಇದೆ. ಹೆಣ್ಣು ಮೊದಲೇ ಮಹಿಳೆಯರ ಸಂಖ್ಯೆ ಕಡಿಮೆ ಇವರಿಗೆ ಓಟು ಹಾಕಿದರೆ ಒಂದು ಜನ ಹೆಚ್ಚಾಗುತ್ತದೆ. ಪಕ್ಷ ಈ ಪಕ್ಷ ಗೆಲಿಸದೆ ಹೋದರೆ ತುಂಬಾ ಅಪಾಯವಿದೆ. ಇಂತಹ ಸಂದರ್ಭದಲ್ಲಿ ಯಾವುದಕ್ಕೆ ಆದ್ಯತೆ ಕೊಡುತ್ತೇವೆ. ಈ ಪ್ರಶ್ನೆ ಮುಂದಿಟ್ಟ ತಕ್ಷಣ ಅರ್ಹತೆಗೆ ಅನೇಕ ಮಂದಿ ಕೈ ಎತ್ತಿದರು. ಆಮೇಲೆ ಕೆಲವರು ಉಳಿದವಕ್ಕೆ. ಏನೇ ಇರಲಿ, ನಿರ್ಧಾರ ತೆಗೆದುಕೊಳ್ಳುವಲ್ಲಿ ಹಲವು ಸೂಕ್ಷ್ಮಗಳಿವೆ, ಮಹಿಳೆ ಎಂದಾಗಲೀ, ಮುಸ್ಲಿಂ ಎಂದಾಗಲೀ, ದಲಿತ ಎಂದಾಗಲೀ ಒಂದು ವೋಟ್ ಬ್ಯಾಂಕು ರೂಪುಗೊಳ್ಳದಿರಲು ಇವೆಲ್ಲ ತೊಡಕುಗಳಿವೆ ಎಂಬ ಮಾತು ಬಂತು.

- ಲೋಹಿಯಾ ಪದೇಪದೇ ಸೋತರೂ ನಿಲ್ಲುತ್ತಿದ್ದರು: ಯಾಕೆಂದು ಕೇಳಿದರೆ 'ಸೋತವರ ನೋವು ಅರಿಯಲು, ಅವರ ಆತ್ಮವಿಶ್ವಾಸ ಹೆಚ್ಚಿಸಲು' ಎನ್ನುತ್ತಿದ್ದರು. ಅಂಬೇಡ್ಕರ್ 'ನಾವು ಸೋಲುತ್ತೇವೆ, ಆದರೂ ವೋಟು ಕೊಡಿ, ಏಕೆಂದರೆ ಒಂದು ಪರಿಣಾಮಕಾರಿ ವಿರೋಧ ಪಕ್ಷ ಕಟ್ಟಬೇಕು' ಎನ್ನುತ್ತಿದ್ದರು. ಹಾಗಾಗಿ ಚುನಾವಣೆಯ ಗೆಲುವನ್ನು ಸಂಭ್ರಮಿಸಿ, ಸೋತವರನ್ನು ನಾವು ಬಿಟ್ಟುಬಿಡಬಾರದು, ಅವರ ಜೊತೆಗೇ ಇರಬೇಕು. ಸೋತವರೆಲ್ಲ ನಮ್ಮವರೇ ಆಗಿರುತ್ತಾರೆ.
- ಅಧಿಕಾರ ಎಂಬುದು ಅನುಭವಿಸಬೇಕಾದ ಆಸ್ತಿ ಅಲ್ಲ, ಹಂಚಿಕೊಳ್ಳಬೇಕಾದ ಮೌಲ್ಯ, ಇದು ನಮ್ಮ ಮಹಿಳಾ ರಾಜಕಾರಣಿಗಳಿಗೆ, ಉಳಿದವರಿಗೆ ಅರ್ಥವಾಗಬೇಕು. ಎರಡನೇ ಹಂತದ ನಾಯಕತ್ವ ಬೆಳೆಸಬೇಕು.
- ಇದೊಂದು ಪ್ರಕ್ರಿಯೆ ಶುರುವಾಗಿದೆ, ನಿಗದಿತ ಸಮಯಕ್ಕೆ ಒಮ್ಮೆ ಚುನಾಯಿತ ಮಹಿಳಾ ಪ್ರತಿನಿಧಿಗಳೊಂದಿಗೆ, ಎಲ್ಲಾ ಇತರ ಅಸ್ಮಿತೆ ಮರೆತು ಮಹಿಳೆಯರಾಗಿ ಸೇರಬೇಕು, ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆ ತರಲು ಪರಸ್ಪರ ಸಹಕಾರ ನೀಡಬೇಕು.

*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇದರ ಮುಂದಿನ ಭಾಗವಾಗಿ, ಈ ಬಾರಿ ನಮ್ಮ ಕರ್ನಾಟಕದ ಶಾಸನ ಸಭೆಯಲ್ಲಿ ಆಯ್ಕೆಯಾಗಿ ಬಂದಿರುವ ಒಂಭತ್ತು ಮಹಿಳಾ ಪ್ರತಿನಿಧಿಗಳಿಗೂ ಬೆಳಗಾವಿ ಅಧಿವೇಶನದಲ್ಲಿ ರಾಜಕೀಯ ಪ್ರಾತಿನಿಧ್ಯದ ಹಕ್ಕೊತ್ತಾಯವನ್ನು ಮುಂದಿಡುವ ಬಗೆಗೆ ಮಾತನಾಡಲು ಒಂದು ಮನವಿಯನ್ನು ಬರೆದು ಕಳಿಸಲಾಗಿತ್ತು. ಅದರ ಪ್ರತಿ ಇಂತಿದೆ:

ಗೆ:

- ಕೆ. ಪೂರ್ಣಿಮಾ, ಹಿರಿಯೂರು, (ಬಿಜೆಪಿ)
  hiriyur.mlakarnataka.gov.in 9886468169
- ರೂಪಾಲಿ ಸಂತೋಷ ನಾಯಕ್, ಕಾರವಾರ (ಬಿಜೆಪಿ)
  Karwar.mlakarnataka.gov.in 9686427278
- ಲಕ್ಷ್ಮಿ ಆರ್ ಹೆಬ್ಬಾಳ್ಕರ್, ಬೆಳಗಾವಿ ಗ್ರಾಮಾಂತರ (ಕಾಂಗ್ರೆಸ್)
  belgaumrural.mlakarnataka.gov.in 94484 56178/ 0831–2940358
- ಕನೀಜ್ ಫಾತಿಮಾ, ಗುಲ್ಬರ್ಗಾ ಉತ್ತರ (ಕಾಂಗ್ರೆಸ್)
  Gulbarga.mlakarnataka.gov.in 9886240266/9449907777
- ರೂಪಕಲಾ ಎಂ., ಕೋಲಾರ್ ಗೋಲ್ಡ್ ಫೀಲ್ಡ್, (ಕಾಂಗ್ರೆಸ್)
  kolargoldfield.mlakarnataka.gov.in 9449999966
- ಡಾ. ಅಂಜಲಿ ಹೇಮಂತ್ ನಿಂಬಾಳ್ಕರ್, ಖಾನಾಪುರ, (ಕಾಂಗ್ರೆಸ್)
  khanapur.mlakarnataka.gov.in 7829722876
- ಸೌಮ್ಯ ರೆಡ್ಡಿ, ಜಯನಗರ ಬೆಂಗಳೂರು, (ಕಾಂಗ್ರೆಸ್)
  Jayanagar.mlakarnataka.gov.in 96860 18042
- ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ, ನಿಪ್ಪಾಣಿ, (ಬಿಜೆಪಿ)
  nippani.mlakarnataka.gov.in 99005559874/9900559835/ 08338– 276424
- ಅನಿತಾ ಕುಮಾರಸ್ವಾಮಿ, ರಾಮನಗರ (ಜೆಡಿಎಸ್)
  ramanagaram.mlakarnataka.gov.in 9980087725.

ಮಾನ್ಯರೇ,

**ವಿಷಯ:** ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಹಕ್ಕೊತ್ತಾಯವನ್ನು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಮುಂದಿಡುವ ಬಗ್ಗೆ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಕಳೆದ 6 ವರ್ಷಗಳಿಂದ ವಿವಿಧ ಪ್ರದೇಶ, ಕ್ಷೇತ್ರ, ಜಾತಿ, ವರ್ಗ, ಅಥವಾ ಧಾರ್ಮಿಕ ಹಿನ್ನೆಲೆಗಳಿಗೆ ಸೇರಿದ ಮಹಿಳೆಯರ ಸಮಸ್ಯೆಗಳ ವಿಚಾರದಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಮಹಿಳಾ ಸಂಘಟನೆಗಳೂ ಸೇರಿ ಸಮಾನ ವಿಚಾರಗಳಿಗಾಗಿ ರೂಪಿಸಿಕೊಂಡಿರುವ ಸ್ವಾಯತ್ತ ಒಕ್ಕೂಟವಾಗಿದೆ. ಪ್ರತಿ ವರ್ಷ ಅಂತರಾಷ್ಟೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯದ ಎಲ್ಲ ಭಾಗದ ಮಹಿಳೆಯರೂ ಜೊತೆಗೂಡುವ ಅರ್ಥಪೂರ್ಣ ಸಮಾವೇಶಗಳನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಘಟಿಸುವುದರ ಜೊತೆಗೆ ಮಹಿಳಾಪರ ವಿಚಾರಗಳ ಸುತ್ತ ಹಲವು ಬಗೆಯ ನಿರಂತರ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಈ ಚಟುವಟಿಕೆಗಳ ಭಾಗವಾಗಿ, ಚುನಾವಣಾ ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ಸಹಜವಾಗಿಯೇ ನಾವು ಗಂಭೀರವಾದ ಚಿಂತನೆಯಲ್ಲಿ ತೊಡಗಿದ್ದೇವೆ. ಈ ವರ್ಷದಲ್ಲಿ ರಾಜ್ಯದ ಸುಮಾರು 10 ಜಿಲ್ಲೆಗಳಲ್ಲಿ 'ಮಹಿಳೆ: ಚುಣಾವಣಾ ರಾಜಕಾರಣದ ಒಳ ಹೊರಗೆ' ಎಂಬ ವಿಚಾರವನ್ನಿಟ್ಟುಕೊಂಡು ಚಿಂತನ ಮಂಥನ, ವಿಚಾರಗೋಷ್ಠಿ, ಸಂವಾದ ಕಾರ್ಯಕ್ರಮಗಳ ಮೂಲಕ, ತಜ್ಞರು, ಮಹಿಳಾ ಜನಪ್ರತಿನಿಧಿಗಳು, ಜನಪರ ರಾಜಕಾರಣಿಗಳು, ಸಂಘಟನೆಗಳು, ವಿದ್ಯಾರ್ಥಿ-ಯುವಜನರನ್ನು ಸೇರಿಸಿ ಚರ್ಚೆ ನಡೆಸಿದ್ದೇವೆ. ಇಂದಿನ ನಮ್ಮ ಸಮಾಜದ ಸ್ಥಿತಿಗತಿಗಳನ್ನು ಮತ್ತು ಹೆಚ್ಚುತ್ತಿರುವ ಮಹಿಳೆಯರ ಸಮಸ್ಯೆಗಳ ಸಂಭಾವ್ಯ ಪರಿಹಾರೋಪಾಯಗಳನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ, ಚುನಾವಣಾ ರಾಜಕಾರಣದ ಮೇಲಿನ ಹಂತಗಳಲ್ಲಿ ಮಹಿಳೆಯರ ಸೂಕ್ತ ಪ್ರಾತಿನಿಧ್ಯದ ವಿಚಾರ ಅತ್ಯಂತ ಮಹತ್ವದ್ದು ಎಂಬುದು ನಮ್ಮ ಭಾವನೆ.

ಈಗಾಗಲೇ ಮಹಿಳಾ ಮೀಸಲಾತಿಯ ವಿಚಾರ ಹಲವು ಹಂತಗಳಲ್ಲಿ ಆಗಾಗ ಚರ್ಚೆಯಾಗಿ ನೆನೆಗುದಿಗೆ ಬಿದ್ದಿದೆ. ಆದ್ದರಿಂದ, ರಾಷ್ಟೀಯ ಮಟ್ಟದಲ್ಲಿ ಚುನಾವಣೆಗಳ ಸಂಗತಿ ಹೆಚ್ಚೆಚ್ಚು ಸದ್ದು ಮಾಡುತ್ತಿರುವ ಸಂದರ್ಭದಲ್ಲಿ ಅತ್ಯಂತ ನ್ಯಾಯಯುತವಾದ ಈ ಮಹಿಳೆಯರ ಪ್ರಾತಿನಿಧ್ಯದ ವಿಚಾರವನ್ನೂ ಮುನ್ನೆಲೆಗೆ ತರುವುದು ನಮ್ಮ ಕರ್ತವ್ಯ ಎಂಬುದು ಒಕ್ಕೂಟದ ಸಹಭಾಗಿಗಳ ಅನಿಸಿಕೆ.

ಆದ್ದರಿಂದ, ಕರ್ನಾಟಕದ ವಿಧಾನ ಮಂಡಳದ ಬೆಳಗಾವಿ ಅಧಿವೇಶನದ ಸಂಧರ್ಭದಲ್ಲಿ ಈ ಹಕ್ಕೊತ್ತಾಯದೊಂದಿಗೆ ನಾವು ಬೆಳಗಾವಿಗೆ ಬಂದಿಳಿಯುತ್ತಿದ್ದೇವೆ. ಕರ್ನಾಕಟದ ಖ್ಯಾತ ಚಿಂತಕಿಯರು, ಬರಹಗಾರ್ತಿಯರು, ಹೋರಾಟಗಾರ್ತಿಯರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮೊದಲಾದವರು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಇದರಲ್ಲಿ ನಿಮ್ಮ ಭಾಗೀದಾರಿಕೆ ನಮಗೆ ಈ ರೀತಿಗಳಲ್ಲಿ ಬೇಕಾಗಿದೆ. ನಮ್ಮ ನಿರೀಕ್ಷೆಗಳಿವು:

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ಕರ್ನಾಟಕದ ವಿಧಾನಮಂಡಳದಲ್ಲಿರುವ ಕೆಲವೇ ಮಹಿಳೆಯರಲ್ಲೊಬ್ಬರಾಗಿ ನೀವು ಈ ವಿಚಾರವನ್ನು ಅಧೀವೇಶದಲ್ಲಿ ಚರ್ಚೆಗೆ ತರಬೇಕು.
- ನೀವು ಭಾಗವಾಗಿರುವ ರಾಜಕೀಯ ಪಕ್ಷವು ರಾಷ್ಟ್ರೀಯ ಪಕ್ಷವಾಗಿರುವುದರಿಂದ ನಿಮ್ಮ ಪಕ್ಷದ ಆಂತರಿಕ ನೀತಿಗಳಲ್ಲಿ ಮಹಿಳಾ ಮೀಸಲಾತಿಯ ಅಜೆಂಡಾ ಕೂಡಾ ಸೇರಬೇಕೆಂಬ ಒತ್ತಾಯವನ್ನು ಪ್ರಬಲವಾಗಿ ಮುಂದಿಡಬೇಕು.
- ಡಿಸೆಂಬರ್ 19ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ಹತ್ತಿರದಲ್ಲಿ ನಾವು ಹಕ್ಕೊತ್ತಾಯ ಧರಣಿಯನ್ನು ಹಮ್ಮಿಕೊಳ್ಳುತ್ತಿದ್ದೇವೆ. ಅಂದು ಮಧ್ಯಾಹ್ನದ ನಂತರ ಅಲ್ಲಿಗೆ ತಾವು ಭೇಟಿ ನೀಡಿ ಸೇರಿರುವ ಮಹಿಳೆಯರೊಂದಿಗೆ ಮಾತುಕತೆ ನಡೆಸಬೇಕು ಹಾಗೂ ನಮ್ಮ ಹಕ್ಕೊತ್ತಾಯ ಪತ್ರವನ್ನು ತೆಗೆದುಕೊಂಡು ಸರ್ಕಾರಕ್ಕೆ ತಲುಪಿಸಬೇಕು.

ಈ ವಿಚಾರದ ಗಂಭೀರತೆಯನ್ನು ನಾವು ನಿಮಗೆ ವಿವರಿಸುವ ಅಗತ್ಯವಿಲ್ಲ. ಆದ್ದರಿಂದ ಪಕ್ಷಾತೀತವಾದ, ಮಹಿಳಾಪರವಾದ ಈ ಪ್ರಯತ್ನದಲ್ಲಿ ನಿಮ್ಮ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯುವುದೆಂದು ನಂಬಿದ್ದೇವೆ.

ನಿಮ್ಮ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿ

**ಮಹಿಳಾ ಒಕ್ಕೂಟದ ಬಳಗ**

*

ಈ ದೀರ್ಘ ಚುನಾವಣಾ ಸಂವಾದದ ಬಳಿಕ ಒಕ್ಕೂಟವು ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯುವಾಗ ಅದರ ಹೊರಗೆ ಮದ್ಯ ನಿಷೇಧ ಆಂದೋಲನದವರ ಜೊತೆಗೆ ಧರಣಿ ಕುಳಿತರು. ಹಾಡು, ಘೋಷಣೆ ಕೂಗುತ್ತ ಮಾಧ್ಯಮದವರ, ಜನ ಪ್ರತಿನಿಧಿಗಳ ಗಮನ ಸೆಳೆದರು. ವಿಜಯಪುರ, ಮೈಸೂರು, ಬೆಂಗಳೂರು, ಧಾರವಾಡಗಳಿಂದ ಬಂದಿದ್ದ ಒಕ್ಕೂಟದ ಸಂಗಾತಿಗಳೆಲ್ಲ ಒಟ್ಟಾಗಿ ಜನಪ್ರತಿನಿಧಿಗಳಿಗೆ ಕರಪತ್ರ ಹಂಚಿದರು. ಒಕ್ಕೂಟದ ಒಂದು ಸಮಿತಿ, ಮದ್ಯ ನಿಷೇಧ ಆಂದೋಲನದ ಸಂಗಾತಿಗಳೊಡನೆ ನಿಯೋಗವಾಗಿ ತೆರಳಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿತು. ಆದರೆ ಒಂದಿಡೀ ದಿವಸ ಮಹಿಳೆಯರು ಮಹಿಳಾ ಪ್ರಾತಿನಿಧ್ಯ ಹೆಚ್ಚಿಸಬೇಕೆಂದು ಕೋರಿ ನಡೆಸುತ್ತಿದ್ದ ಹಕ್ಕೊತ್ತಾಯ ಪ್ರಯತ್ನಕ್ಕೆ ಸ್ವತಃ ಮಹಿಳಾ ಜನಪ್ರತಿನಿಧಿಗಳೇ (ಒಬ್ಬರನ್ನು ಹೊರತುಪಡಿಸಿ) ಬೆಂಬಲಿಸುವ, ಗಮನ ಹರಿಸುವ ಯತ್ನ ಮಾಡಲಿಲ್ಲ ಎನ್ನುವುದು ಪ್ರಸ್ತುತ ರಾಜಕಾರಣದಲ್ಲಿ ಮಹಿಳಾ ಪ್ರತಿನಿಧಿಗಳಿಗಿರುವ ಸ್ಥಾನ ಮತ್ತು ಬೆಲೆ ಸೂಚಿಸುವಂತಿದ್ದವು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಬೆಳಗಾವಿ ವಿಧಾನಸಭಾ ಅಧಿವೇಶನದ ವೇಳೆ ಹಂಚಿದ ಕರಪತ್ರ

## ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

**ಸಮತೆಯೆಡೆಗೆ ನಮ್ಮ ನಡಿಗೆ**

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದೆ. 2012ನೇ ಇಸವಿಯಲ್ಲಿ ಮಂಗಳೂರಿನಲ್ಲಿ ಒಕ್ಕೂಟದ ರಚನೆಯಾಯಿತು. ಅಲ್ಲಿಂದ ಪ್ರತಿವರುಷ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಮಹಿಳಾ ಚಳುವಳಿ–ಸಾಹಿತ್ಯ–ಅಕ್ಯಾಡೆಮಿಕ್ ವಲಯ–ರಂಗಭೂಮಿಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆ–ಸಂಸ್ಥೆಗಳು ಒಕ್ಕೂಟದೊಂದಿಗಿದ್ದಾರೆ. ಜನಪರ ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಎಲ್ಲರೂ  ಒಕ್ಕೂಟದ ಸಹಭಾಗಿಯಾಗಿದ್ದಾರೆ.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದಲ್ಲಿ ರಾಜ್ಯ–ಕೇಂದ್ರ ಸರ್ಕಾರಗಳ ಮೇಲ್ಮನೆ, ಕೆಳಮನೆ, ಸ್ಥಳೀಯ ಸಂಸ್ಥೆಗಳು, ಸಂಘಸಂಸ್ಥೆಗಳು – ಹೀಗೆ ಒಂದಲ್ಲಾ ಒಂದು ಕಡೆ ಚುನಾವಣೆ ಸದಾ ನಡೆಯುತ್ತಲೇ ಇರುತ್ತದೆ. ಬರಬರುತ್ತ ಪ್ರಜಾಪ್ರಭುತ್ವದ ಏಕೈಕ ದ್ಯೋತಕ ಮತ್ತು ಸಂಕೇತ ಚುನಾವಣೆಯೇನೋ ಎನ್ನುವ ವಾತಾವರಣ ಉದ್ಭವವಾಗಿದೆ. ಜನಮತ ಪ್ರಜಾತಂತ್ರದ ಜೀವಾಳ.ಆದರೆ ಚುನಾವಣೆಗಳಷ್ಟೇ ಪ್ರಜಾಪ್ರಭುತ್ವ ಉಳಿಸುವ ಪ್ರಕ್ರಿಯೆಗಳಲ್ಲ. ದಿನದಿಂದ ದಿನಕ್ಕೆ ಚುನಾವಣಾ ರಾಜಕೀಯಪ್ರಜಾಪ್ರಭುತ್ವ ಆಶಯಗಳಿಂದ ದೂರ ಸಾಗುತ್ತಿದೆ. ಸಂವಿಧಾನ ಕರ್ತೃಗಳಆಶಯದಂತೆ ನಮ್ಮ ಸಮಾಜ, ಸರ್ಕಾರಗಳು ನಡೆಯದೆ ಇರುವುದರಿಂದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸದನದಲ್ಲಿ ಹಾಗೂ ಮಂತ್ರಿಮಂಡಲದಲ್ಲಿ ಮಹಿಳಾ ಪ್ರಾತಿನಿಧ್ಯ ಕ್ಷೀಣವಾಗಿದೆ.

ಭಾರತದ ಸಂವಿಧಾನವು ಮಹಿಳೆಯರೂ ಸೇರಿದಂತೆ ತನ್ನೆಲ್ಲಾ ಜನತೆಗೆ ಸ್ವಾತಂತ್ರ್ಯ, ಸಮಾನತೆ ಹಾಗೂ ಬಂಧುತ್ವದ ನಾಗರಿಕ ಹಕ್ಕುಗಳನ್ನು ನೀಡಿದೆ. ಮಹಿಳೆಯರ ಸ್ಥಾನವು ಒಂದು ದೇಶದ ಅಭಿವೃದ್ಧಿಯ ಸಂಕೇತವಾಗಿದೆ. ಆದರೆ ಇವತ್ತಿನ ದಿನಗಳಲ್ಲಿ ಮಹಿಳೆಯರ ಸ್ಥಿತಿಗತಿ, ಮಹಿಳಾ ಪ್ರಾತಿನಿಧ್ಯ ಹೇಗಿದೆ? ಮಹಿಳೆಯರು ಚುನಾವಣಾ ರಾಜಕೀಯದಲ್ಲಿ ಭಾಗವಹಿಸಲು ಏಕೆ ಹಿಂಜರಿಯುತ್ತಿದ್ದಾರೆ? ಹಾಗಾದರೆ ಮಹಿಳಾ ಪ್ರಾತಿನಿಧ್ಯವನ್ನು ಸಾಧ್ಯವಾಗಿಸಲು ಇರುವ ದಾರಿಗಳಾವುವು?

ಇಂತಹ ಹತ್ತುಹಲವು ವಿಷಯಗಳನ್ನು ಚರ್ಚಿಸಲು ಒಕ್ಕೂಟವು ಕರ್ನಾಟಕದ 10 ಜಿಲ್ಲೆಗಳಲ್ಲಿ 'ಚುನಾವಣೆ: ಒಳ ಹೊರಗೆ' ಎಂಬ ಸರಣಿ ಕಾರ್ಯಕ್ರಮಗಳನ್ನು ಒಕ್ಕೂಟ ನಡೆಸಿತು. ಪ್ರಜಾಪ್ರಭುತ್ವದ ಆತಂಕಗಳು–ಚುನಾವಣಾ ಸುಧಾರಣೆಗಳ ಕುರಿತು ಚಿಂತಕರಿಂದ ವಿಶ್ಲೇಷಣೆ, ಮಹಿಳಾ ಜನಪ್ರತಿನಿಧಿಗಳ ಅನುಭವ ಕಥನ ಹಂಚಿಕೊಳ್ಳುವಿಕೆ, ಸಂವಾದಗಳಿರುವ ಕಾರ್ಯಕ್ರಮಗಳು ಶಿವಮೊಗ್ಗ, ಕೊಪ್ಪಳ, ಧಾರವಾಡ, ಹೊಸಪೇಟೆ, ಮೈಸೂರು, ತುಮಕೂರು, ಮಂಗಳೂರು, ವಿಜಯಪುರ, ಬೆಂಗಳೂರು, ಬೆಳಗಾವಿಗಳಲ್ಲಿನಡೆದವು. ಇದುವರೆಗು ಸೂಕ್ತ ಮಹಿಳಾ ಪ್ರಾತಿನಿಧ್ಯ ಸಿಕ್ಕೇ ಇಲ್ಲ ಎನ್ನುವುದು ಎಲ್ಲೆಡೆಯೂ ಕೇಳಿಬಂದ ಮಾತು.

ಸ್ವಾತಂತ್ರ್ಯ ಚಳುವಳಿ, ಪರಿಸರ–ಸಮಾಜ ಸುಧಾರಣೆ–ಪ್ರಗತಿಪರ ಹೋರಾಟಗಳಲ್ಲಿ ನಾಡಿನ ಅಸಂಖ್ಯ ಹೆಣ್ಣುಮಕ್ಕಳು ಪಾಲ್ಗೊಳ್ಳುತ್ತಲೇ ಬಂದಿದ್ದಾರೆ. ತಮ್ಮ ನಿರಂತರ ದುಡಿಮೆ ಮತ್ತು ಸೇವೆಯ ಮೂಲಕ ಕುಟುಂಬ ಹಾಗೂ ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಲೇ ಬಂದಿದ್ದಾರೆ. ಇಂತಹ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಲೇ ಇಲ್ಲ ಎಂಬುದಕ್ಕೆ ಸ್ವಾತಂತ್ರ್ಯೋತ್ತರ **ಕರ್ನಾಟಕ ವಿಧಾಸಭೆಯ 224 ಸದಸ್ಯರಲ್ಲಿ** ಪ್ರತಿಬಾರಿ ಆಯ್ಕೆಯಾದ ಮಹಿಳೆಯರ ಸಂಖ್ಯೆಯೇ ಸಾಕ್ಷಿ.

1957 – 13 ಮಹಿಳೆಯರು
1962 – 18 ಮಹಿಳೆಯರು
1967 – 5 ಮಹಿಳೆಯರು
1972 – 0 – **ಒಬ್ಬರೂ ಇಲ್ಲ**
1978 – 8 ಮಹಿಳೆಯರು
1983 – 8 ಮಹಿಳೆಯರು
1989 – 10 ಮಹಿಳೆಯರು
1989 – 7 ಮಹಿಳೆಯರು
1999 – 6 ಮಹಿಳೆಯರು
2006 – 6 ಮಹಿಳೆಯರು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

2008 – 5 ಮಹಿಳೆಯರು
2013 – 6 ಮಹಿಳೆಯರು

**545 ಸದಸ್ಯ ಬಲದ ಲೋಕಸಭೆಯಲ್ಲಿ ಮಹಿಳಾ ಪ್ರತಿನಿಧಿಗಳ ಅಂಕಿಸಂಖ್ಯೆ ಹೀಗಿದೆ:**

1952 – 24 ಮಹಿಳೆಯರು
1957 – 24 ಮಹಿಳೆಯರು
1962 – 37 ಮಹಿಳೆಯರು
1967 – 33 ಮಹಿಳೆಯರು
1971 – 28 ಮಹಿಳೆಯರು
1977 – 21 ಮಹಿಳೆಯರು
1980 – 32 ಮಹಿಳೆಯರು
1984 – 45 ಮಹಿಳೆಯರು
1989 – 28 ಮಹಿಳೆಯರು
1991 – 42 ಮಹಿಳೆಯರು
1996 – 41 ಮಹಿಳೆಯರು
1998 – 44 ಮಹಿಳೆಯರು
1999 – 52 ಮಹಿಳೆಯರು
2004 – 52 ಮಹಿಳೆಯರು
2009 – 69 ಮಹಿಳೆಯರು
2014 – 66 ಮಹಿಳೆಯರು

ಈಗ ಸ್ಪರ್ಧಿಸಿದವರಲ್ಲಿ 5% ಮಹಿಳೆಯರಷ್ಟೆ ಗೆಲ್ಲುತ್ತಿದ್ದಾರೆ. ನಾಲ್ಕು ದಶಕಗಳಿಂದ ಮಹಿಳಾ ಪ್ರಾತಿನಿಧ್ಯ ಶೇ. ಹತ್ತಕ್ಕಿಂತ ಹೆಚ್ಚಾಗಲು ಸಾಧ್ಯವಾಗಿಲ್ಲ. ಯಾಕೆ? ಪ್ರಾತಿನಿಧ್ಯ ಈ ನಾಡಿನ ಸೋದರಿಯರ ಹಕ್ಕಲ್ಲವೆ? ಪ್ರಾತಿನಿಧ್ಯಕ್ಕೆ ಅವರು ಯೋಗ್ಯರೂ, ಸಮರ್ಥರೂ ಅಲ್ಲವೆ? ಹೀಗೆಂದು ಒಕ್ಕೊರಲಿನಿಂದ ಕೇಳುವ ಕಾಲ ಬಂದಿದೆ.

ಎಂದೇ ಎಲ್ಲ ರಾಜಕೀಯ ಪಕ್ಷಗಳಿಗೂ ನಮ್ಮ ಹಕ್ಕೊತ್ತಾಯಗಳು ಕೆಳಗಿನಂತಿವೆ: ದೇಶದ ಹೆಣ್ಣುಮಕ್ಕಳನ್ನು ಸಹಜೀವಿಗಳೆಂದು, ಈ ದೇಶದ ಪ್ರಜೆಗಳೆಂದು ಭಾವಿಸಿದ್ದಲ್ಲಿ ನಮ್ಮ ಈ ಹಕ್ಕೊತ್ತಾಯಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಿ.

- ಸಾಮಾಜಿಕ ನ್ಯಾಯಕ್ಕನುಗುಣವಾಗಿ ಎಲ್ಲ ಸ್ತರದ ಮಹಿಳೆಯರಿರುವಂತೆ ಮಹಿಳಾ ಮೀಸಲಾತಿ ಜಾರಿಯಾಗಬೇಕು ಹಾಗೂ ಮಹಿಳಾ ಮೀಸಲು ಕ್ಷೇತ್ರಗಳನ್ನು ಕಾಯ್ದಿರಿಸಬೇಕು. ಎಲ್ಲಾ ಸಾಂಸ್ಥಿಕ ರಚನೆಗಳಲ್ಲೂ ಕನಿಷ್ಠ 33% ಮಹಿಳಾ ಮೀಸಲಾತಿಯನ್ನು ಕಡ್ಡಾಯವಾಗಿ ಕೊಡಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರಕ್ಕಾಗಿ ಕಾಯದೆ ಪ್ರತಿ ಪಕ್ಷವೂ ಮಹಿಳಾ ಮೀಸಲಾತಿ ಕಲ್ಪಿಸಬೇಕು.ಆಯ್ಕೆ ಸಮಿತಿ, ಕಾರ್ಯಕಾರಿ ಸಮಿತಿ, ಸಂಸದೀಯ ಸಮಿತಿ ಮೊದಲಾಗಿ ಪಕ್ಷದ ಪ್ರತಿ ಹಂತದಲ್ಲೂ; ಆಡಳಿತಾರೂಢ ಪಕ್ಷದ ಮಂತ್ರಿಮಂಡಲದಲ್ಲೂ; ನಿಗಮ–ಮಂಡಳಿಗಳಲ್ಲೂ ಮಹಿಳೆಯರಿಗೆ 33% ಮೀಸಲಾತಿ ಕಲ್ಪಿಸಬೇಕು.
- ಪ್ರತಿವರ್ಷವೂ ಸರ್ಕಾರ ಕಡ್ಡಾಯವಾಗಿ ಮಹಿಳಾ ಬಜೆಟ್ ಮಂಡಿಸಬೇಕು.
- ಎಲ್ಲಾ ಪಕ್ಷಗಳೂ ಪ್ರತ್ಯೇಕವಾಗಿ ಮಹಿಳಾ ಪ್ರಣಾಳಿಕೆಬಿಡುಗಡೆ ಮಾಡಬೇಕು. ಪಕ್ಷ, ಸಂಘಟನೆಯ ಒಳಗೆ ಕಡ್ಡಾಯವಾಗಿ ಲೈಂಗಿಕ ದೌರ್ಜನ್ಯ ದೂರು ನಿರ್ವಹಣಾ ಸಮಿತಿ ರಚಿಸಬೇಕು. ಹೆಣ್ಣುಮಕ್ಕಳು ಮುಕ್ತವಾಗಿ ಪಾಲ್ಗೊಳ್ಳುವಂತಹ ವಾತಾವರಣವನ್ನು ಪಕ್ಷ, ರಾಜಕಾರಣದ ಎಲ್ಲಾ ಹಂತಗಳಲ್ಲಿ ಕಲ್ಪಿಸಬೇಕು. ಮಹಿಳಾ ನಾಯಕತ್ವ ಕಟ್ಟುವುದನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಿ ಸೂಕ್ತಕ್ರಮ ಕೈಗೊಳ್ಳಬೇಕು.
- ಕುಟುಂಬ ರಾಜಕಾರಣ ನಿಲ್ಲಿಸಿ, ಸಮರ್ಥರಾದ ಸಾಮಾನ್ಯ ಕಾರ್ಯಕರ್ತೆಯರಿಗೂ ಟಿಕೆಟ್ ಕೊಡಬೇಕು.
- ಸಾರ್ವಜನಿಕ ಹಣವನ್ನು ದುರುಪಯೋಗ ಮಾಡುವವರಿಗೆ, ಹೆಣ್ಣುಮಕ್ಕಳನ್ನು ಹೀನಾಯವಾಗಿ ಕಾಣುವವರಿಗೆ, ಕಿರುಕುಳ ನೀಡುವವರಿಗೆ, ಅತ್ಯಾಚಾರಿಗಳಿಗೆ, ಲಿಂಗಭೇದ ಆಚರಿಸುವವರಿಗೆ ಟಿಕೇಟು ಕೊಡಲೇಬಾರದು.
- ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳಿಗೆ ಬದ್ಧರಾಗಿ ಆ ಬಗ್ಗೆ ಕೈಗೊಂಡ ಕ್ರಮಗಳನ್ನು ಆರು ತಿಂಗಳಿಗೊಮ್ಮೆ ಸಾರ್ವಜನಿಕ ಸಭೆ ಕರೆದು ವರದಿ ಒಪ್ಪಿಸಬೇಕು.

**ಸಮಾನತೆ ನಮ್ಮ ಹಕ್ಕು, ಭಿಕ್ಷೆಯಲ್ಲ, ದಾನವಲ್ಲ.**
**ಪ್ರಾತಿನಿಧ್ಯ ನಮ್ಮ ಹಕ್ಕು, ಭಿಕ್ಷೆಯಲ್ಲ, ದಾನವಲ್ಲ.**

**ಭಾರತೀಯ ನಾರಿಯರು, ಬೆಂಕಿಕಿಡಿಗಳಲ್ಲ, ಬೆಳಕಿನ ಕಿರಣಗಳು.**

ಶಾರದಾ ಗೋಪಾಲ, ಧಾರವಾಡ – 9902840033; ಅಖಿಲಾ ವಿದ್ಯಾಸಂದ್ರ, ಬೆಂಗಳೂರು 9845250955; ಗೌರಿ, ಬೆಂಗಳೂರು – 8971232329; ಮಲ್ಲಮ್ಮ ಯಾಳವಾರ, ವಿಜಯಪುರ – 9448118204; ಸುಮನಾ, ಮೈಸೂರು – 9448177117; ಮರ್ಲಿನ್ ಮಾರ್ಟಿಸ್, ಮಂಗಳೂರು – 9448119827; ರೇಖಾಂಬಾ ಶಿವಮೊಗ್ಗ – 9480354479; ದಿಲೀಪ್ ಕಾಮತ್, ಬೆಳಗಾವಿ – 9448157588.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನಮ್ಮ ದೇಶದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರು ಆಟಕ್ಕುಂಟು, ಲೆಕ್ಕಕ್ಕಿಲ್ಲ

## ಶಾಸಕಿಯರು ಕಳೆದುಕೊಂಡ ಒಂದು ಅವಕಾಶ

**– ಶಾರದಾ ಗೋಪಾಲ**

ಇತ್ತೀಚೆಗೆ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆದಿದ್ದಾಗ ಸುವರ್ಣ ಸೌಧದ ಎದುರು ಟೆಂಟಿನೊಳಗೆ ಸಾವಿರಗಟ್ಟಲೆ ಮಹಿಳೆಯರು ಧರಣಿ ಕುಳಿತಿದ್ದರು. ಎರಡು ಮುಖ್ಯ ಸಂಘಟನೆಗಳ– ಹಳ್ಳಿಗಳಿಂದ ಬಂದಿದ್ದ ಅನಕ್ಷರಸ್ಥ ಮರಾಠಿ, ಕನ್ನಡ ಭಾಷಿಕ ಹೆಣ್ಣುಮಕ್ಕಳು ಮತ್ತು ರಾಜ್ಯಾದ್ಯಂತ ಅನೇಕ ಕಡೆಗಳಿಂದ ಬಂದಿದ್ದ ಸುಶಿಕ್ಷಿತ ಮಹಿಳೆಯರು ಎರಡು ಬೇಡಿಕೆಗಳನ್ನಿಟ್ಟುಕೊಂಡು ಒಟ್ಟಿಗೆ ಕುಳಿತಿದ್ದರು. ಸಮಾಜವನ್ನು ಕಾಡುತ್ತಿರುವ ಮದ್ಯಮಾರಾಟದ ನಿಷೇಧ ಆಗಬೇಕೆನ್ನುವುದು ಒಂದು ಬೇಡಿಕೆಯಾದರೆ, ರಾಜಕೀಯದಲ್ಲಿ ಎಲ್ಲ ಹಂತಗಳಲ್ಲೂ ಮಹಿಳೆಯರ ಒಳಗೊಳ್ಳುವಿಕೆ ಇರಬೇಕು, ಚುನಾವಣೆಗಳಲ್ಲಿ ಮಹಿಳೆಯರಿಗೆ ಸಮಪ್ರಮಾಣದ ಪ್ರಾತಿನಿಧ್ಯ ಬೇಕು ಎಂಬುದು ಎರಡನೆಯ ಬೇಡಿಕೆ. ಬೇಡಿಕೆಯಲ್ಲ, ರೈತ ಸಂಘದ ಅನಸೂಯಮ್ಮನವರ ಪ್ರಕಾರ ಹಕ್ಕೊತ್ತಾಯ.

ಹಾಗೆ ನೋಡಿದರೆ ಈ ಎರಡೂ ಬೇಡಿಕೆಗಳೂ ಒಂದಕ್ಕೊಂದು ಪೂರಕ, ಬಹುದಿನದ ಒತ್ತಾಯಗಳು. ಇಂದಿನ ರಾಜಕಾರಣ ಕೆಟ್ಟ ವಾಸನೆಯ, ಕೊಳೆತ ಕೆಸರುಗುಂಡಿ ಯಾಗಿರುವುದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅಧಿಕಾರ, ಹಣ, ಹೆಂಡ ಈ ಮೂರೇ ಇಡೀ ರಾಜಕಾರಣವನ್ನು ಆಳುತ್ತಿದ್ದು ಹುಡುಕಿದರೂ ಬೆರಳೆಣಿಕೆಯ ನಾಲ್ಕು ಜನ ಸಜ್ಜನರು, ಜನಪರರನ್ನು ಕಾಣುವುದು ಕಷ್ಟ ಸಾಧ್ಯ. ಎಲ್ಲರಿಗೂ ಮಂತ್ರಿಗಿರಿಯೇ ಬೇಕು, ಹೆಚ್ಚು ರೆವಿನ್ಯೂ ತರುವಂಥ– ಹಣದ ಓಡಾಟ ಜಾಸ್ತಿ ಇರುವಂಥ ಖಾತೆಯೇ ಬೇಕು. ಅಧಿಕಾರದ ಅಮಲು, ಹಣದ ದರ್ಪ, ಹೆಂಡದ ವಾಸನೆಗಳಿಂದಾಗಿ ಯಾರೂ ಇದರ ಹತ್ತಿರ ಸುಳಿಯಲು ಇಷ್ಟಪಡರು.

ಇದು ಬದಲಾಗಬೇಕೆಂಬುದು ಜನಮಾನಸದ ಆಶಯ. ಪ್ರಜೆಗಳ ಪ್ರಭುತ್ವ ಬರಬೇಕು, ಪ್ರಜೆಗಳೆಂದರೆ ಪ್ರಭುವೂ ಶಿರಬಾಗಿ ಆಲಿಸಬೇಕು. ಜನರಿದ್ದಲ್ಲಿ ಪ್ರಭುಗಳು ಬರಬೇಕೇ ಹೊರತು ಪ್ರಭುವಿದ್ದಲ್ಲಿಗೆ ಮನವಿ ಹಿಡಿದು ಜನರೋಡುವುದು ಪ್ರಜಾಪ್ರಭುತ್ವವಲ್ಲ. ಇಂದು ಅತ್ತ ಸುವರ್ಣ ಸೌಧದ ಹವಾನಿಯಂತ್ರಿತ ಕೊಠಡಿಗಳಲ್ಲಿ, ಕೂತರೆ ಹುಗಿದು ಹೋಗುವಂಥ ಸೋಫಾಗಳಲ್ಲಿ ಪ್ರಭುಗಳು. ಇತ್ತ ಕಿಲೋಮೀಟರ್ ದೂರದಲ್ಲಿ ಧರಣಿಗೆಂದೇ ಕಟ್ಟಿರುವ ಪೆಂಡಾಲುಗಳಲ್ಲಿ ಪ್ಲಾಸ್ಟಿಕ್ ಹಾಸಿನ ಮೇಲೆ ಗುಂಪಾಗಿ ಕುಳಿತು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕಿರುಚುವ ಪ್ರಜೆಗಳು. ದೇವರಿಗಾಗಿ ಕಾಯುವ ಭಕ್ತರಂತೆ ಭಜನೆ ಮಾಡುತ್ತಿರುವ ಜನಗಳು! ಪ್ರಜಾಪ್ರಭುತ್ವದ ಇದಕ್ಕಿಂತ ದೊಡ್ಡ ವ್ಯಂಗ್ಯ ಬೇಕೇ? ಆ ದೊರೆಗಳನ್ನು ಭೇಟಿ ಮಾಡಿಸಲು ಏಜೆಂಟರಂತೆ ನಮ್ಮನ್ನು ಕರೆದೊಯ್ಯುವ ಪೊಲೀಸರು, ಅಲ್ಲಿ ದಾರಿ ತಪ್ಪಿ ಬಂದಿರುವವರಂತೆ ಕಂಡ ಕಂಡವರಿಗೆ ಕೈಮುಗಿಯುತ್ತ, ನಮ್ಮ ಮನವಿಗಳನ್ನು ಒಪ್ಪಿಸುವ ತವಕ. ಗಣಿಧಣಿಯಾಗಿ ನಾಡಿನ ಸಂಪತ್ತನ್ನು ದೋಚುತ್ತಿರುವವ, ಸಕ್ಕರೆ ಕಾರ್ಖಾನೆಗಳ ಮಾಲಿಕನಾಗಿ ರೈತರನ್ನು ಕಬ್ಬನ್ನು ಹಿಂಡಿದಂತೆ ಹಿಂಡುತ್ತಿರುವವ, ದೊಡ್ಡ ದೊಡ್ಡ ಮೆಡಿಕಲ್ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿಕೊಂಡು ಶಿಕ್ಷಣವನ್ನೇ ವ್ಯಾಪಾರದ ಸರಕನ್ನಾಗಿ ಮಾಡಿಟ್ಟವ, ಅವರಿಗೇ ನಮ್ಮ ಮನವಿ ಕೊಡಬೇಕು. ಲೇಖಕಿ, ಹೋರಾಟಗಾರ್ತಿ ದು. ಸರಸ್ವತಿಯವರು ಹೇಳಿದಂತೆ, 'ತಲೆಯ ಮೇಲೆ ಬಂಗಾರದ ಕಿರೀಟವಿಲ್ಲ ಎನ್ನುವುದು ಬಿಟ್ಟರೆ ರಾಜರ ಅಧಿಪತ್ಯ ಇಲ್ಲಿ ಯಾವ ರೀತಿಯಲ್ಲೂ ಕೊನೆಗೊಂಡಿಲ್ಲ!'

ಕೊನೆಗೂ ನಾಡಪ್ರಭು ಭೇಟಿಯಾಗುತ್ತಾರೆ. 'ಮದ್ಯ ನಿಷೇಧ ಮಾಡಿದರೆ ನಮಗೆ ಓಟು ಹಾಕೋರ್ಯಾರು?' ಮನವಿಗೆ ಅವರ ಉತ್ತರ. ಕುಡಿದಾಗಲೆ ಇವರಿಗೆ ಓಟು ಬೀಳುತ್ತದೆಯೇ? ಕುಡಿಯುವವರು ಹಾಕಿದರೆ ಸಾಕೆಂಬ ಭಾವವೇ? ಮಹಿಳೆಯರ ಮತಗಳು ಲೆಕ್ಕಕ್ಕೇ ಇಲ್ಲವೇ? ಮಾನ್ಯರ ಈ ಮಾತು ಧರಣಿಗೆ ಕುಳಿತ ಮಹಿಳೆಯರೆಲ್ಲರಲ್ಲೂ ಪ್ರಶ್ನೆಯನ್ನು ಮೂಡಿಸಿತ್ತು. ಅಪಮಾನದಿಂದ ಮನ ನೊಂದಿತ್ತು. ಜನಸಂಖ್ಯೆಯ ಅರ್ಧದಷ್ಟಿರುವ ನಾವು ಮಹಿಳೆಯರು ಚುನಾವಣೆ ರಾಜಕೀಯದಲ್ಲಿ ಅರ್ಧ ಪಾಲು ಕೇಳಲು ಬಂದಿದ್ದು, ಇಲ್ಲಿ ನಮ್ಮ ಮತವನ್ನೂ ಕೂಡ ಗೌಣ ಮಾಡುವ ಮಾತಾಡಿದರಲ್ಲ!!

ಸುಸಂಸ್ಕೃತಿಯ ಈ ನಾಡಿನಲ್ಲಿ ಯಾವತ್ತೂ 'ಹಿರಿತನ' ಎಂದರೆ ಗಂಡಸರದ್ದು. ಹಿರಿಯರಲ್ಲಿ ಹೆಣ್ಣುಮಕ್ಕಳಿಲ್ಲ. ಮನೆಯ ಹೊರ ಜಗುಲಿ/ಪಡಸಾಲೆಯಲ್ಲಿ ಗಂಡಸರು ಊರ ಬಗ್ಗೆ, ಸಮಾಜದ ಬಗ್ಗೆ, ದೇಶದ ಬಗ್ಗೆ ಚರ್ಚೆ ಮಾಡುತ್ತಿರಬೇಕು, ಒಳಗೆ ಅಡಿಗೆ ಮನೆಯಲ್ಲಿ ಹೆಂಗಳೆಯರು ಹೊತ್ತು ಹೊತ್ತಿಗೆ ಚಹಾ ತಿಂಡಿ ಊಟದ ಸಿದ್ಧತೆಯಲ್ಲಿ ತೊಡಗಿರಬೇಕು. ಸಮಾನತೆಯ ಸಂವಿಧಾನವನ್ನು ಅಂಗೀಕರಿಸಿ ಮುಕ್ಕಾಲು ಶತಮಾನವೇ ಆಗುತ್ತ ಬಂದರೂ ಮನಸ್ಥಿತಿ ಇಂದಿಗೂ ಬದಲಾಗಿಲ್ಲವೆಂದರೆ? ಬರಿಯ ಗಂಡಸರು ಮಾಡುತ್ತಿರುವ ತೀರ್ಮಾನಗಳಿಂದ ಮದುವೆಗಳು ಮುರಿಯುತ್ತಿವೆ, ಅಭಿವೃದ್ಧಿ ವಿನಾಶದತ್ತ ಹೊರಟಿದೆ, ಆದರೂ ಎಚ್ಚೆತ್ತುಕೊಳ್ಳುವ ಲಕ್ಷಣ ಕಾಣುತ್ತಿಲ್ಲವೇ?!

ಗ್ರಾಮಪಂಚಾಯತಿಗಳಲ್ಲಿ, ತಾಲೂಕು, ಜಿಲ್ಲಾಪಂಚಾಯತಿಗಳಲ್ಲಿ ಪುರುಷ ಹಿರಿಯರ ಪ್ರಭುತ್ವವನ್ನು ಮುರಿದದ್ದು ಮಹಿಳಾ ಮೀಸಲಾತಿ ಕಾಯಿದೆ. ಆದರೆ ಆ ಕಾಯಿದೆಯನ್ನು ಪಂಚಾಯತಿಯಿಂದ ಮೇಲಕ್ಕೆ ಹೋಗಗೊಟ್ಟಿಲ್ಲ ಪುರುಷಪ್ರಧಾನ ಮನಸ್ಥಿತಿ. 'ಹೆಂಗಸರಿಗೇಕೆ ಊರ ಉಸಾಬರಿ' ಎಂಬ ಮನಸ್ಥಿತಿಯಲ್ಲೇ ಇರುವ ಜನರು ತಮ್ಮ ಮನಸ್ಥಿತಿಗೆ ಒಗ್ಗುವ, ಪುರುಷ ಪ್ರಧಾನ ಧೋರಣೆಗಳನ್ನು ತಲೆಬಾಗಿ ಸ್ವೀಕರಿಸುವ ಸೊಸೆ, ಮಗಳು,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೆಂಡತಿಯರನ್ನೇ ಚುನಾವಣೆಗೆ ನಿಲ್ಲಿಸುವ ಪರಿಪಾಠ ಬೆಳೆದುಬಂದಿದೆ. ಸ್ವಂತ ಬುದ್ಧಿಯಿಂದ ಮಾತಾಡುವ ತೇಜಸ್ವಿನಿ, ರಮ್ಯ, ಲಕ್ಷ್ಮಿ ಇಂಥವರನ್ನು ಬಾಯ್ಮುಚ್ಚಿಸಿ ಮಟ್ಟಹಾಕುವ ಪ್ರಯತ್ನ ನಡೆದಿರುವುದನ್ನು ಇಡೀ ರಾಜ್ಯವೇ ನೋಡುತ್ತಿದೆ. ಶಾಸನ ಸಭೆ, ಲೋಕಸಭೆಗಳಿಗೆ ಮಹಿಳೆಯರಿಗೆ 33%ನಷ್ಟಾದರೂ ಮೀಸಲಾತಿ ಕೊಡಬೇಕೆಂಬ ಮಸೂದೆಯು ಬಾಯಿ ತೆರೆಯದಂತೆ, ತಲೆ ಎತ್ತದಂತೆ ಪ್ರಯತ್ನ ನಡೆದಿರುವುದಕ್ಕೂ ನಾವು ನೀವೆಲ್ಲ ಮೂಕಪ್ರೇಕ್ಷಕರು. ಪಂಚಾಯತಿಗಳಲ್ಲಿ ಅವನ ಹೆಂಡತಿ, ಇವನ ಸೊಸೆಯನ್ನು ನಿಲ್ಲಿಸುವುದರ ಮಧ್ಯೆಯೂ ಬೆಳಗಾವಿಯ ಪಂಚಾಯತಿಗಳಲ್ಲಿ ಪ್ರಭಾವತಿ ಕಮ್ಮಾರ, ಭಾರತಿ ಬಾಂದುರ್ಗೆ, ಇಂಥ ಕೆಲವರು ಸ್ವತಂತ್ರ ಜನಪ್ರತಿನಿಧಿಗಳಾಗಿ ದಿಟ್ಟ ಆಡಳಿತ ಮಾಡಿ ತೋರಿಸಿದ ಉದಾಹರಣೆಗಳು ಆಶಾ ಕಿರಣಗಳು. ಅಂಥವರ ಸಂತತಿ ಬೆಳೆಯಬೇಕಲ್ಲವೇ?

ಕಟ್ಟಡ, ರಸ್ತೆಗಳು ಅಭಿವೃದ್ಧಿಯ ಸಂಕೇತ ಎನ್ನುತ್ತದೆ ಪುರುಷಪ್ರಧಾನ ರಾಜಕಾರಣ. ಮಹಿಳೆ, ಅಂಗವಿಕಲರನ್ನೂ ಜೊತೆಗೆ ಒಯ್ಯೋಣ ಎನ್ನುತ್ತದೆ ಸಮತೆಯ ರಾಜಕಾರಣ. ಆ ರಾಜಕಾರಣದಲ್ಲಿ ಪ್ರಭುಗಳು, ಮಹಿಳೆಯರ ಮತವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದವರು, ಹೆಂಡದ ದೊರೆಗಳು, ಶಿಕ್ಷಣವನ್ನು ವ್ಯಾಪಾರದ ಸರಕಾಗಿಟ್ಟವರು, ಅಂಗವಿಕಲರನ್ನು ಕಡೆಗಾಣಿಸುವವರು ಇದ್ದರೆ, ನಮ್ಮ ಕನಸಿನ ಸಮತೆಯ ರಾಜಕಾರಣದಲ್ಲಿ ಮಹಿಳೆಯರೂ ಸಮಸ್ಥಾನದಲ್ಲಿರುತ್ತಾರೆ. ಅವಳ ಮತಕ್ಕೂ, ಅವಳ ಮಾತಿಗೂ ಬೆಲೆಯಿದೆ, ಪ್ರಾತಿನಿಧ್ಯಕ್ಕೆ ಗೌರವವಿದೆ. ಅಲ್ಲಿ ಕುಟುಂಬಗಳನ್ನು ನಾಶ ಮಾಡುವ ಮದ್ಯಮಾರಾಟ ಇರುವುದಿಲ್ಲ. ಸಭೆಗಳು ಹೊರಜಗುಲಿಯಲ್ಲಿ ಆಗುವುದಿಲ್ಲ, ರಾತ್ರಿವೇಳೆ ಇಡಲಾಗುವುದಿಲ್ಲ. ಕುಡಿಯುವ ನೀರು, ರಸ್ತೆ ಬದಿಯ ಮರಗಳು, ಖಾತ್ರಿಯಾದ ಉದ್ಯೋಗ, ಪ್ರಾಥಮಿಕ ಶಿಕ್ಷಣ, ಅಂಗವಿಕಲರ ಪುನರ್ವಸತಿ ಇವು ಆದ್ಯತೆಯ ವಿಷಯಗಳಾಗುತ್ತವೆ.

ಈ ಧರಣಿ ನಡೆಯುತ್ತಿರುವಾಗ ಆಯ್ಕೆಯಾದ ಎಂಟು ಮಹಿಳಾಮಣಿಗಳು ಸುವರ್ಣ ಸೌಧದೊಳಗೆ ಇದ್ದರು. ಅವರಲ್ಲಿ ಒಬ್ಬರು ಮಾತ್ರ, ಸೌಮ್ಯರೆಡ್ಡಿ ಟೆಂಟಿನೊಳಗೆ ಬಂದು ಮನವಿ ಪಡೆದು ಹೋಗಿದ್ದು ಬಿಟ್ಟರೆ, 'ನಿಮ್ಮ ಮಾತಿಗೆ ಧ್ವನಿ ಕೊಡಲು ಬಂದಿದ್ದೇವೆ. ನಿಮ್ಮಂಥ ಹೆಚ್ಚು ಮಹಿಳೆಯರು ಸೌಧದೊಳಗೆ ಬಂದರೆ ನಿಮಗೆ ಬಲ ಸಿಗುತ್ತದೆ. ಬನ್ನಿ. ಮದ್ಯ ನಿಷೇಧ, ಮಹಿಳಾ ಪ್ರಾತಿನಿಧ್ಯ ಹಕ್ಕೊತ್ತಾಯಗಳಿಗೆ ಬೆಂಬಲ ಕೊಡಿ.' ಎಂದು ಮತ್ತೆ ಮತ್ತೆ ಹೇಳಿಕಳಿಸಿದರೂ ಶಾಸಕಿಯರಾಗಲೀ, ಮಂತ್ರಿ ಜಯಮಾಲಾ ಆಗಲೀ ಬರದೇ ಸಾವಿರಾರು ಮಹಿಳೆಯರ ಬೆಂಬಲ, ಹರಕೆಗಳು ಸಿಗುವಂಥ ಒಂದು ಅವಕಾಶವನ್ನು ಆ ಎಲ್ಲ ಶಾಸಕಿಯರೂ ಕಳೆದುಕೊಂಡರು. ಅಥವಾ ಬಾರದಂತೆ ಪುರುಷ ರಾಜಕಾರಣ, ಅವರೊಳಗಿರುವ ಪುರುಷಪ್ರಧಾನ ಮೌಲ್ಯ ಅವರನ್ನು ತಡೆಯಿತೇ? ತಮ್ಮನ್ನು ಮುಂದೆ ಬಾರದಂತೆ, ಮಾತಾಡದಂತೆ ತಡೆಯುತ್ತಿರುವುದು ಈ ಪುರುಷಪ್ರಧಾನ ಮೌಲ್ಯದ ರಾಜಕಾರಣವೇ ಎನ್ನುವುದು ಅವರಿಗರ್ಥವಾಗದೆ ಹೋಯಿತೇ?

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಧಾರವಾಡದ ಅಧ್ಯಯನ ಶಿಬಿರ

**– ಪವಿತ್ರ ಜ್ಯೋತಿಗುಡ್ಡೆ**

**ಕ.**ರಾ.ಮ.ದೌ.ವಿ. ಒಕ್ಕೂಟವು ಕಳೆದ ಎರಡು ವರುಷಗಳಿಂದ, ನಮ್ಮ ಒಳಗಿನ ಚಿಂತನೆಗಳನ್ನು ಹರಿತಗೊಳಿಸಲು, ಅನುಭವಗಳಿಗೆ ತಾತ್ವಿಕ ನಿಲುವುಗಳನ್ನು ಕಂಡುಕೊಳ್ಳಲು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಜೊತೆಗೂಡಿ ಕೆಲಸ ಮಾಡಲು, ಸಹೋದರಿತ್ವವನ್ನು ಗಟ್ಟಿಗೊಳಿಸಲು ಅಧ್ಯಯನ ಶಿಬಿರಗಳನ್ನು ನಡೆಸುತ್ತಾ ಬಂದಿದೆ. ಅಂತೆಯೇ ಮೂರನೇ ವರುಷದ ಶಿಬಿರ, ದಿನಾಂಕ ಆಗಸ್ಟ್ 31, ಸೆಪ್ಟೆಂಬರ್ 1 ಮತ್ತು 2 ರಂದು, ಧಾರವಾಡದ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ನಡೆಯಿತು. ಎಂದಿನಂತೆ ಗಲಗಲ ಸಂಭ್ರಮ!

ಮೊದಲ ದಿನ ಬೆಳಗ್ಗೆ ಎಲ್ಲರೂ ಸೇರಿ ಕಾರ್ಯಕ್ರಮಕ್ಕೆ ಮೊದಲು ಸ್ವಲ್ಪ ಸಮಯ ಸಿಕ್ಕಿದ್ದೇ ಹೀಗೇ ಮಾತುಕತೆ ಶುರುವಾಯಿತು. ಮಲ್ಲಿಗೆ 'ತೆರೆದ ಪುಸ್ತಕ ಪರೀಕ್ಷೆ' ಪರಿಕಲ್ಪನೆಯ ಸಾಧಕ ಬಾಧಕಗಳನ್ನು ಮುಂದಿಟ್ಟರು. ಈ ನಿಟ್ಟಿನಲ್ಲಿ ನಡೆಯುತ್ತಿರುವ ಹೋರಾಟದ ಸ್ವರೂಪವನ್ನು ವಿವರಿಸಿದರು. ಸಾಗರದಕೃತಿ,ಸರಕಾರೀ ಶಾಲೆಯಲ್ಲಿ ತಮ್ಮ ಮಕ್ಕಳನ್ನು ಓದಿಸುವ ಅನುಭವ, ಎಸ್.ಡಿ.ಎಮ್.ಸಿ ಸದಸ್ಯರಾಗಿ ಮಾಡಿದ ಕೆಲವು ಪ್ರಯತ್ನಗಳು, ಅವು ಎಷ್ಟು ಕಷ್ಟಸಾಧ್ಯ ಎಂದು ವಿವರಿಸಿದರು. ರಜನಿ ಗರುಡ ಶಿಕ್ಷಣಕ್ಕೆ ಸಂಬಂಧಿಸಿ ತಮ್ಮ ಮಗಳ ಸಂದರ್ಭದಲ್ಲಿ ಅನುಭವಿಸಿದ ಸವಾಲುಗಳನ್ನು ಹಂಚಿಕೊಂಡರು. ಮೈಸೂರಿನ ಸುಮನಾ, 9 ರಿಂದ 10ನೇ ತರಗತಿಗೆ ಹೋಗುವ ಮಕ್ಕಳು ಹೇಗೆ ರಜದಿಂದ ವಂಚಿತರಾಗುತ್ತಿದ್ದಾರೆ ಎಂದು ಕಳಕಳಿ ತೋರಿಸಿದರು.

ವಿಜಯಾ ದಬ್ಬೆಯವರ ನೆನಪು ಮಾಡಿಕೊಳ್ಳುತ್ತಾ, 'ತೂರಬೇಡಿ ಗಾಳಿಗೆ....',ವಿನಯಾ ಒಕ್ಕುಂದ ಅವರ ಮೆರವಣಿಗೆ ಹೊರಡುತ್ತೇವೆ ಹಾಡಿನೊಂದಿಗೆ ಮುಂದುವರಿದೆವು.

**ಸ್ತ್ರೀವಾದದ ಹೆಚ್ಚಿನ ಅರಿವು:**

ಹಂಪಿ ವಿಶ್ವವಿದ್ಯಾನಿಲಯದ ಗೆಳತಿ ಉಷಾ ಅವರು ಸ್ತ್ರೀವಾದದ ಬಗ್ಗೆ ಒಂದಷ್ಟು ವಿಚಾರಗಳನ್ನು ಮುಂದಿಟ್ಟರು. ಸ್ತ್ರೀವಾದ ತಮ್ಮ ಬದುಕಿನ ಒಂದು ಆಧಾರ ಸ್ಥಂಭ ಅಂತ ಹೇಳಿಕೊಂಡರು. ಸ್ಯಾನಿಟರಿ ನ್ಯಾಪ್‌ಕಿನ್ ಮೇಲೆ ಹಾಕಿದ ಜಿ.ಎಸ್.ಟಿ ತೆರಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ವಿರುದ್ಧ ಪ್ರತಿಭಟನೆ ಮಾಡಿದಾಗ ಅದು ಹೇಗೆ ಒಂದು ಎಲೈಟ್ ಚಳವಳಿ ಅನ್ನುವ ಟೀಕೆ ಬಂತು, ಜೊತೆಗೆ ಅದರ ಜೊತೆಗೆ ಇರುವ ಪರಿಸರದ ವಿಚಾರವನ್ನು ತಗಲಿಸಲಾಯಿತು, ಬಟ್ಟೆಗೆ ಮರಳಿ ಎಂಬ ಕರೆಯೂ ಬಂತು; 'ಇಂತಹ ಅನುಭವ ಒಂದು ಕ್ಷಣಕ್ಕೆ ನಮ್ಮನ್ನು ತಬ್ಬಿಬ್ಬು ಮಾಡುತ್ತದೆ, ಆದರೆ ಹೆದರಬೇಕಾಗಿಲ್ಲ ಅದರೊಳಗೇ ದಾರಿ ಸಿಗುತ್ತದೆ' ಅಂದರು.

ಕ್ರಿ.ಪೂ 3ನೇ ಶತಮಾನದಲ್ಲಿ ರೋಮ್ ನಗರದಲ್ಲಿ ನಡೆದ ಮೊದಲ ಪ್ರತಿಭಟನೆಯಿಂದ ಹಿಡಿದು, 16–17 ನೇ ಶತಮಾನದಲ್ಲಿ ಭಾರತದ ಸಂದರ್ಭವನ್ನು ವಿವರಿಸುತ್ತಾ, ಸ್ತ್ರೀವಾದ ನಮಗೆ ಪಶ್ಚಿಮದ ಕೊಡುಗೆ, ಸಾಮಗ್ರಿಗಳು ಅಲ್ಲಿಂದ ಇರಬಹುದು ಆದರೆ ನಮ್ಮದೆ ಅಡುಗೆ ಮಾಡಿದ್ದೇವೆ ಎಂದು ತಿಳಿಸಿದರು. ಸ್ವಾತಂತ್ರ್ಯ ಪೂರ್ವದಿಂದ ಹಾದುಬಂದ ಮುಖ್ಯ ಮೈಲಿಗಲ್ಲುಗಳನ್ನು ವಿವರಿಸಿದರು. ಎಲ್ಲಕ್ಕೂ ಮಿಗಿಲಾಗಿ ಎಲ್ಲಾ ಕವಲುಗಳ ಹೋರಾಟಗಳ ನಡುವೆಯೂ ನಮ್ಮನ್ನು ಒಂದಾಗಿ ಹಿಡಿಯಲು ಸಾಧ್ಯವಾಗುವುದು "ನಮ್ಮ ದೇಹ" ಎಂಬ ಒಂದು ಅಂಶದಿಂದ ಎಂದು ಸ್ಪಷ್ಟ ಪಡಿಸಿದರು.

ದು. ಸರಸ್ವತಿ ಸ್ತ್ರೀವಾದದ ಕುರಿತಂತೆ ಮತ್ತಷ್ಟು ಆಯಾಮಗಳನ್ನು, ಕೆಲವು ತಾತ್ವಿಕ ನೆಲೆಗಳನ್ನು ಅನುಭವಗಳ ಆಧಾರಗಳ ಮೇಲೆ ಮುಂದಿಟ್ಟರು. ದೇಹ ರಾಜಕಾರಣ, ಸಮುದಾಯ ರಾಜಕಾರಣ, ಸಾಮಾಜಿಕ ರಾಜಕಾರಣ, ಸಂಪನ್ಮೂಲಗಳ ಎಟುಕುವಿಕೆಗೆ ಸಂಬಂಧಿಸಿದ ರಾಜಕಾರಣಗಳ ಸಂದರ್ಭದಲ್ಲಿ ಸ್ತ್ರೀವಾದ ಎದುರಿಸಿದ ಸವಾಲುಗಳ, ಜೊತೆಜೊತೆಗೆ ಒಂದಷ್ಟು ಗೆಲುವುಗಳ ಚಿತ್ರಣ ಕೊಟ್ಟರು. ಸಿದ್ಧಾಂತಕ್ಕೂ ಚಳುವಳಿಗೂ ಸದಾ ಒಂದು ಕೊಂಡಿ ಇರಬೇಕು ಎಂದು ಖಚಿತವಾಗಿ ಹೇಳಿದರು. ಅತ್ಯಂತ ಮುಖ್ಯವಾಗಿರುವುದು, ಸಮಾನತೆಯ ಆಶಯ, ಮಹಿಳೆಯರ ಮಾನವ ಹಕ್ಕು ಘನತೆಗೆ ಗೌರವ ಸಿಗುವಂತಹುದು; ಇದು ಪುರುಷ ದ್ವೇಷ ಅಲ್ಲ, ಪುರುಷಾಧಿಪತ್ಯದ ವಿರುದ್ಧದ ದನಿ. ಅದಕ್ಕಾಗಿ ಪುರುಷರೂ ಸ್ತ್ರೀವಾದಿಗಳಾಗಬಹುದು. ಒಕ್ಕೂಟದಲ್ಲಿ ಇಂತಹ ಒಂದು ಪಯಣ ನಡೆದಿದೆ ಎಂದರು.

ಸೇರಿದ ಗೆಳತಿಯರು ಹಿರಿಯರೂ ಕಿರಿಯರೂ ಸ್ತ್ರೀವಾದದ ಕುರಿತಂತೆ ತಮ್ಮ ತಮ್ಮ ಅನುಭವಗಳನ್ನೂ ಚಿಂತನೆಗಳನ್ನೂ ಹಂಚಿಕೊಂಡರು. ಮಲ್ಲಿಗೆ ಈ ಎಲ್ಲಾ ಚಿಂತನೆಗಳನ್ನು ಕ್ರೋಢೀಕರಿಸಿ 'ಸ್ತ್ರೀವಾದೀ ಸಿದ್ಧಾಂತ ಮತ್ತು ಅನುಭವಗಳಿಗೆ' ಸಂಬಂಧಿಸಿ ಒಂದು ಆಳವಾದ ಚಿಂತನೆ ಆಗಬೇಕಿದೆ ಎಂದು ಹೇಳಿದರು. **'ರಾಷ್ಟ್ರಮಟ್ಟದ ವಿಚಾರ ಸಂಕಿರಣವೊಂದನ್ನು ಒಕ್ಕೂಟ ಆಯೋಜಿಸಬೇಕು'** ಅನ್ನುವ ಕನಸೊಂದು ಬೇರುಬಿಡಲು ಶುರುವಾಯಿತು.

ಜನಾರ್ಧನ ಕೆಸರಗದ್ದೆಯವರ 'ಪ್ರೀತಿಯ ಗಾಳಿ ಬೀಸುತಿದೆ...' ಹಾಡಿನೊಂದಿಗೆ ಈ ಚರ್ಚೆ ಕೊನೆಗೊಂಡಿತು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಪದಗಳೊಂದಿಗೆ ಹುಡುಕಾಟ:**

ಶಿಬಿರ ಆಯೋಜಿಸುವ ಹೊತ್ತಿನಲ್ಲೇ ಎಲ್ಲರಿಗೂಪ್ರೀತಿ, ಸೋದರಿತ್ವ, ಜಾತಿ, ದೇಶಭಕ್ತಿ, ಸ್ತ್ರೀವಾದ, ಖ್ಯಾತಿ, ಚೆಲುವು, ಮದುವೆ, ರಾಜಕಾರಣ, ತಾಯ್ತನ – ಈ ಹತ್ತು ಪದಗಳನ್ನು ಕೊಟ್ಟು ಅದರ ಬಗೆಗೆ ಚಿಂತಿಸಿಕೊಂಡು ಬರುವಂತೆ ಹೇಳಲಾಗಿತ್ತು. ಐದು ಪದಗಳ ಸುತ್ತ ವಿವಿಧ ನೆಲೆಯಿಂದ ಎಲ್ಲರೂ ಪ್ರತಿಕ್ರಿಯಿಸಿದರು. ಪ್ರೀತಿ ಅಂದರೆ ಏನು ಎಂಬ ನೇರ ಅನಿಸಿಕೆ ಹೇಳಿಕೊಂಡರು. ಚೆಲುವು – ಪದಕ್ಕೆ ಎರಡು ಸಾಲಿನ ಕವನ ಬರೆದರೆ, ರಾಜಕಾರಣವನ್ನು ಚಿಕ್ಕ ಅಭಿನಯದೊಂದಿಗೆ ತೋರಿಸಿದರು. ಖ್ಯಾತಿ ನನ್ನ ಮಟ್ಟಿಗೆ ಎಷ್ಟು ಅಗತ್ಯ ಎನ್ನುವ ನೆಲೆಯಿಂದ ಮಾತಾಡಿದರೆ, ಜಾತಿ ಕುರಿತು ಸ್ವಂತ ಅನುಭವ ಏನು (ಜಾತಿಯ ಹೆಸರಲ್ಲಿ ಮೇಲರಿಮೆ ಇರಬಹುದು ಅಥವಾ ಕೀಳರಿಮೆ ಇರಬಹುದು) ಹೇಳಿಕೊಂಡೆವು. ಬಹಳ ಬದಲಾವಣೆಗಳ ನಡುವೆಯೂ ತಾರತಮ್ಯದ ಕುರುಹುಗಳು ಎದ್ದೆದ್ದು ಗೋಚರಿಸುವುದರ ಮೂಲಕ ಜಾತಿ ತಾರತಮ್ಯದ ಇರುವಿಕೆಯ ವಿವಿಧ ಸ್ವರೂಪ ಇಲ್ಲಿ ಕಂಡು ಬಂತು.

**ಮಹಿಳಾ ಕಾವ್ಯ:**

ಸಬಿತಾ ಬನ್ನಾಡಿ ಮಹಿಳಾ ಕಾವ್ಯ ಬೆಳೆದು ಬಂದ ರೀತಿಯನ್ನು ಒಂದಷ್ಟು ಆಯ್ದ ಕವನಗಳನ್ನು ಓದುತ್ತಾ ಬಹಳ ಆಪ್ತವಾಗಿ ವಿವರಿಸಿದರು. ಎಲ್ಲಾ ಕ್ಷೇತ್ರಗಳಂತೆಯೇ ಕಾವ್ಯ ಕೂಡಾ ಪುರುಷರ ಹಿಡಿತದಲ್ಲೇ ಇದ್ದಿದ್ದು ಮಾತ್ರವಲ್ಲ ಒಂದು ಅಧಿಕಾರದ ರೀತಿಯಲ್ಲಿ ಕೆಲಸ ಮಾಡಿದ್ದು.

ಮೊದ ಮೊದಲಿಗೆ ಮಹಿಳೆಯರು ಕೂಡಾ ಈ ಅಧಿಕಾರ ತೆಗೆದುಕೊಳ್ಳುವ ನೆಲೆಯಲ್ಲಿ ಸ್ಪರ್ಧಿಸಿದರು. ಆದರೆ ಈಗ ಹಾಗಿಲ್ಲ, ತಮ್ಮದೇ ಅಸ್ಮಿತೆಯನ್ನು ಕಂಡುಕೊಳ್ಳುತ್ತಿದ್ದಾರೆ. ಮಾಡಬೇಡ ಅಂದದ್ದನ್ನು ಮಾಡುತ್ತೀವಿ ಅಂತ ಶುರುಮಾಡಿ ಮತ್ತೆ ನಾವಿರೋದೇ ಹಿಂಗೆ ಅನ್ನುವ ನಿಲುವಿಗೆ ಹೋದೆವು.

ಹೆಳವನ ಕಟ್ಟೆ ಗಿರಿಯಮ್ಮ, ಬೆಳಗೆರೆ ಜಾನಕಮ್ಮ, ಅಕ್ಕಮಹಾದೇವಿ, ಭಾಗ್ಯಲಕ್ಷ್ಮಿ, ಲಲಿತಾ ಸಿದ್ದಬಸವಯ್ಯ, ಅನಸೂಯ ಕಾಂಬಳೆ, ದು. ಸರಸ್ವತಿ ಮುಂತಾದವರ ಕವನಗಳನ್ನು ಕಾಲ ಕಾಲದ ಬೆಳವಣಿಗೆಯ ಧಾಟಿಯೊಂದಿಗೆ ಪ್ರಸ್ತುತ ಪಡಿಸಿದರು. ಹೆಣ್ಣು ಗುಂಗೊಂದು ತಲೆಯಲ್ಲಿ ಮೀಟಿದ ಅನುಭವವಾಗಿತ್ತು. ನಡುನಡುವೆ ಕೇಕೆ ಹಾಕಿ ನಗುವಂತಹ ಸಾಲುಗಳೂ ಕೇಳಿಬಂದವು.

ದೇಹ, ದೇಹದ ಮೇಲಿನ ಆಕ್ರಮಣ ಕಾವ್ಯಗಳಲ್ಲೂ ಮತ್ತೆ ಮತ್ತೆ ಕಾಡುವ ಬಗೆಯನ್ನು ತಿಳಿಸಿದರು. ಕೊನೆಯಲ್ಲಿ, “ನಾವು ಮತ್ತೆ ಮತ್ತೆ ನೀನು ನಾನು, ನಾನು ನೀನು ಅಂತ ಬರೆದು ಸುಸ್ತಾಗಿದ್ದೀವಿ, ಅದಲ್ಲದೆ ಸಹಜವಾಗಿ ಹೂವು ಅರಳುವ ಹಾಗೆ ನಮ್ಮ ಕವಿತೆಗಳೂ ಇದ್ದಿದ್ದರೆ ಚೆನ್ನಾಗಿತ್ತು. ಸುತ್ತುಮುತ್ತಲಿನ ಎಷ್ಟೋ ವಿಚಾರಗಳು ನಮ್ಮನ್ನು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನಿಯಂತ್ರಿಸುತ್ತವೆ" ಎಂದು ಹೇಳುತ್ತಾ ಸಮಾನ ನೆಲೆಯ ಹೆಣ್ಣು ಗಂಡು ಸಂಬಂಧ ಅಪೂರ್ವವಾದದ್ದು, ಅದು ಎಲ್ಲರಿಗೂ ನಿಲುಕುವಂತಾಗಬೇಕು ಎಂಬ ಆಶಯ ವ್ಯಕ್ತಪಡಿಸಿದರು. ಈ ಹೊತ್ತಿನಲ್ಲಿ ಮನಕ್ಕೆ ಒಂದು ಹೊಸ ಮುದ ಸಿಕ್ಕಿತ್ತು.

**ಮಾರ್ಕ್ಸ್‌ವಾದ:**

ಬೆಂಗಳೂರಿನ ಎ.ಎಲ್.ಎಫ್.ನ ಸ್ನೇಹಿತರಾದ ಅರವಿಂದ್ ಹಾಗೂ ಕಿಶೋರ್ ಮಾರ್ಕ್ಸ್‌ವಾದವನ್ನು ಸರಳವಾಗಿ ಪರಿಚಯಿಸಿದರು. ರತಿರಾವ್ ಹಾಗೂ ಮಲ್ಲಿಗೆಯವರು ಅನ್ವಯಿಕ ಮಾರ್ಕ್ಸ್‌ವಾದದ ಬಗ್ಗೆ ಮಾತಾಡಿದರು. ಚಳವಳಿಗಳಲ್ಲಿ ಮಾರ್ಕ್ಸ್‌ವಾದದ ಅರಿವು ಹೇಗೆ ಸಹಕಾರಿಯಾಯಿತು ಎಂಬುದನ್ನು ಇಬ್ಬರೂ ತಿಳಿಸಿ ಹೇಳಿದರು. ಈ ಹೊತ್ತಿನಲ್ಲಿ ಮಾರ್ಕ್ಸ್‌ವಾದ ಯಾಕೆ ಬೇಕಾಗಿದೆ, ಎಂಬುದನ್ನು ಸ್ಪಷ್ಟಪಡಿಸಿದರು. ಬಂಡವಾಳಶಾಹಿ ಏನು ಪರಿಣಾಮ ಬೀರುತ್ತೆ ಎಂಬುದನ್ನು ನೋಡಲಿಕ್ಕೆ, ಅಸಮಾನತೆಯನ್ನು, ಸಂಪನ್ಮೂಲಗಳ ಹಂಚಿಕೆಯಲ್ಲಿ ಇರುವ ಅಗಾಧವಾದ ಕಂದಕವನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ಮಾರ್ಕ್ಸ್‌ವಾದ ಬೇಕಾಗಿದೆ. ಎಲ್ಲಾ ತತ್ವಜ್ಞರು ಪ್ರಪಂಚವನ್ನು ವಿವರಿಸಿದರು, ನಮ್ಮ ಆಸಕ್ತಿ ಇರುವುದು ಪ್ರಪಂಚವನ್ನು ಬದಲಾವಣೆ ಮಾಡುವುದು ಎಂಬ ಮಾರ್ಕ್ಸ್ ಹೇಳಿಕೆಯನ್ನು ನೆನಪಿಸಿದರು.\.

ಮಾರ್ಕ್ಸ್‌ನ ಬದುಕಿನ ದಾರಿಯನ್ನು ವಿವರಿಸುತ್ತಾ, ಹೇಗೆ ಅವನ ಚಿಂತನೆಗಳು ನೇರ ಕಾರ್ಮಿಕರ ಬದುಕಿಗೆ ತಟ್ಟಿದವು, ಹೇಗೆ ಒಂದಷ್ಟು ಬದಲಾವಣೆಗಳು ಬಂದವು ಎಂಬುದರ ಚಿತ್ರಣ ಅಲ್ಲಿ ಸಿಕ್ಕಿತು. 'ಸರಕು' ಎಂಬುದು ಈ ಬಂಡವಾಳಶಾಹಿಯ ಮೂಲ ಸಾಧನವಾಗಿದ್ದು, ಹೇಗೆ ಎಲ್ಲವನ್ನೂ ಸರಕಾಗಿ ಪರಿವರ್ತಿಸುತ್ತದೆ ಮತ್ತು ಶೋಷಣೆಯ ಬಲೆಯನ್ನು ನೇಯುತ್ತದೆ, ಸರಕಿಗೆ ಮೌಲ್ಯ ಕೊಡುವುದು ಅದರ ಉತ್ಪಾದನೆಯ ಹಿಂದೆ ಇರುವ ಶ್ರಮ, ಆದರೆ ಅದರ ಲಾಭ ಶ್ರಮಿಕರಿಗೆ ಹೋಗದೆ, ಸೋಲಾದರೆ ಮಾತ್ರ ಮೊದಲು ನೇರವಾಗಿ ಶ್ರಮಿಕರಿಗೇ ಅದು ಹೆಚ್ಚು ತಟ್ಟುತ್ತದೆ, ಇದು ವಿಪರ್ಯಾಸ.

ಸ್ತ್ರೀವಾದಿಗಳಿಗೆ ಮಾರ್ಕ್ಸ್‌ವಾದ ಅದು ಶೋಷಣೆಯ ವಿರುದ್ಧ ದನಿ ಎತ್ತಿದ ಕಾರಣಕ್ಕೆ ಪ್ರಿಯವಾದದ್ದು, ಪ್ರಕೃತಿಯೇ ಅವಕಾಶ ಕೊಟ್ಟಿಲ್ಲ ಅಂತ ಮಹಿಳೆಯರಿಗೆ ಹೇಳಿದ ಕಾಲದಲ್ಲಿ ಬದಲಾವಣೆ ಸಾಧ್ಯ ಅಂದಿದ್ದೇ ದೊಡ್ಡ ವಿಷಯ. ಭಾರತದಲ್ಲಿ ಇದು ಜಾರಿಯಾಗುವಾಗ ಕೆಲವು ಸಾಂದರ್ಭಿಕ, ಸಾಮಾಜಿಕ ಸವಾಲುಗಳನ್ನು ನಿಭಾಯಿಸುವುದಕ್ಕೆ ಕಷ್ಟವಾದದ್ದು ಸತ್ಯ.

ಏನೇ ಇರಲಿ, ಮಾರ್ಕ್ಸ್ ಚಿಂತನೆಗಳು ನಮ್ಮ ಬದುಕನ್ನು ತಟ್ಟಿವೆ ಎಂದು ಸರಸ್ವತಿ, ಕೊನೆಯ ಮಾತುಗಳನ್ನು ಆಡಿದರು. ಮಾರ್ಕ್ಸ್‌ನ ವೈಯಕ್ತಿಕ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿದ ಅದೆಷ್ಟೋ ಹೆಣ್ಣುಮಕ್ಕಳ ಕುಲೀನ ಮನೆತನದಿಂದ ಬಂದ ಹೆಂಡತಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಜೆನ್ನಿ ವರ್ಗ ಮೀರಿ ಜೊತೆಗೆ ಬದುಕಿದಳು, ಕೆಲಸದವಳು ಹೆಲೆನ್ ಡಿಮೋತಿ, ಹೆಣ್ಣು ಮಕ್ಕಳು, ಸ್ನೇಹಿತ ಏಂಗಲ್ಸ್ ನಿರಂತರ ಮಾರ್ಕ್ಸ್‌ಗೆ ಹೆಗಲು ಕೊಟ್ಟ ರೀತಿಯಂತೂ ಮನಸ್ಸಿಗೆ ತಟ್ಟುತ್ತದೆ. ದುಡಿಯುವ ವರ್ಗಕ್ಕೆ ಆತ್ಮಾಭಿಮಾನ ಕೊಟ್ಟ, ದುಡಿಯುವವರ ಕಂಗಳಿಂದ ಇತಿಹಾಸ ನೋಡಿದ, ನೋಡಿಸಿದ ಧೀಮಂತ ಮಾರ್ಕ್ಸ್. ಅದಕ್ಕಾಗಿ ನಮಗೆ ಅವನು ಬೇಕು. ಮಾರ್ಕ್ಸ್, ಫುಲೆ, ಅಂಬೇಡ್ಕರ್, ಕೆಂಪು, ನೀಲಿ ಎಲ್ಲವನ್ನೂ ಜೊತೆಗಿರಿಸಿಕೊಂಡು ನಾವು ಮುಂದುವರಿಯಬೇಕು, ನಮ್ಮ ನಮ್ಮ ಅಸ್ಮಿತೆ ಜೊತೆಗೆ ಬೇರು ಬಿಟ್ಟುಕೊಂಡು, ಆಕಾಶದತ್ತ ವಿಶಾಲವಾಗಿ ಚಾಚಿಕೊಳ್ಳಬೇಕು ಎಂದು ಸರಸ್ವತಿ ಹೇಳಿದರು. ಅವರ ಜೊತೆಗೆ ನಮಗೆ ನಾವೇ ಹೇಳಿಕೊಂಡೆವು.

**ಮಹಿಳಾ ಸಂಬಂಧಿ ಕೋರ್ಟು ತೀರ್ಪುಗಳು: (01.09.2018)**

ಇತ್ತೀಚೆಗೆ ಕಾನೂನುಗಳಲ್ಲಿ ಆದ ಬದಲಾವಣೆಗಳ ಚಿತ್ರಣ ನೀಡಿದರು ಅಖಿಲಾ. ಕೋರ್ಟು ತೀರ್ಪುಗಳನ್ನು ಉಲ್ಲೇಖಿಸುತ್ತಾ, ಕೆಲವು ಅಂಶಗಳನ್ನು ಸ್ಪಷ್ಟ ಪಡಿಸಿದರು. ಪಿತ್ರಾರ್ಜಿತ ಆಸ್ತಿಯ ಹಕ್ಕು, ಜೀವನಾಂಶ, ದೇವಾಲಯ ಪ್ರವೇಶ, ಪಿ.ಸಿ.ಪಿ.ಎನ್.ಡಿ.ಟಿ., 498 ಎ, 498, ಹೆರಿಗೆ ಸೌಲಭ್ಯ, ಹೆರಿಗೆ ಸಮಯದಲ್ಲಿ ತಂದೆಗೆ ರಜ, ಪೋಕ್ಸೋ, ದತ್ತು ಪಡೆಯುವುದು ಈ ಎಲ್ಲಾ ವಿಚಾರಗಳ ಮೇಲೆ ಬೆಳಕು ಚೆಲ್ಲಿದರು. ಪೋಕ್ಸೋದಲ್ಲಿ 20% ಅಪರಾಧ ಮುನ್ನೆಲೆಗೆ ಬಂದಿದೆ, ಇದು ಗರಿಷ್ಟ ಮಟ್ಟದ್ದು, ಬೇರೆ ಯಾವುದೇ ಕಾಯ್ದೆಗೆ ಇಂತಹ ಪ್ರತಿಕ್ರಿಯೆ ಸಿಕ್ಕಿಲ್ಲ. ಎರಡು ಬೆರಳಿನ ಪರೀಕ್ಷೆಗೆ ಈಗ ತಡೆ ಬಂದಿದೆ. ಸುಶ್ಮಿತಾ ಸೆನ್ ಕೇಸ್‌ನಿಂದ ಒಂಟಿ ಮಹಿಳೆಯರು ದತ್ತು ತೆಗೆದುಕೊಳ್ಳುವ ಅವಕಾಶ ತೆರೆದಿದೆ. ಸಮಾಜದಲ್ಲಿ ಸಂಪನ್ಮೂಲ ಹಂಚಿಕೆಯಲ್ಲಿ ಇಂದಿಗೂ ಅದೆಷ್ಟು ಅಸಮಾನತೆ ಇದೆ ಎಂಬುದಕ್ಕೆ ಒಂದು ಚಿತ್ರಣ ನೀಡಿ ಮಾತು ಮುಗಿಸಿದರು. ಅವರಿಗೆ ಮೈಸೂರಿನ ಸುಮನಾ ಪೂರಕವಾದ ಮಾತು, ಮಾಹಿತಿ ಒದಗಿಸಿದರು.

**ನಮ್ಮ ಆರೋಗ್ಯ: (31.08.2018 ಮತ್ತು 01.09.2018)**

ಹಗಲೆಲ್ಲಾ ವಿಚಾರ ಮಂಥನಗಳಾದರೆ ರಾತ್ರಿ ಊಟದ ನಂತರ ಎಲ್ಲರೂ ತಮ್ಮ ಅನುಕೂಲಕರ ದಿರಿಸಿನಲ್ಲಿ, ಆರಾಮವಾಗುವ ರೀತಿಯಲ್ಲಿ ಆಸೀನರಾಗಿ, ಡಾಕ್ಟರ್ ಅನುಪಮಾರಿಂದ ಆರೋಗ್ಯದ ಬಗ್ಗೆ ಆಪ್ತವಾದ ತಿಳುವಳಿಕೆ ಪಡೆದುಕೊಂಡೆವು. ಮೊದಲ ದಿನ ಥೈರಾಯ್ಡ್ ಬಗ್ಗೆ ಎರಡನೆಯ ದಿನ ಡಯಾಬಿಟೀಸ್ ಬಗ್ಗೆ ಅದರ ವೈದ್ಯಕೀಯ ವಿವರಣೆಯೊಂದಿಗೆ, ಗಮನಿಸಬೇಕಾದ ಕೆಲವು ಅಂಶಗಳನ್ನು ಸೇರಿಸಿ ತಿಳಿಸಿಕೊಟ್ಟರು. ಪ್ರಶ್ನೆಗಳ ಸುರಿಮಳೆಯೇ ಇತ್ತು. ಕಣ್ಣೆವೆ ಎಳೆಯುತ್ತಿದ್ದರೂ ಬಿಡದೆ, ಆರೋಗ್ಯದ ಬಗೆಗಿನ ಕಾಳಜಿಗೆ ಗಮನಕೊಟ್ಟೆವು. ಆ ಹೊತ್ತಿನಲ್ಲೂ, ಯಾವುದೇ ಆಯಾಸವಿಲ್ಲದೆ, ತಣ್ಣಗಿನ ಇನಿದನಿಯಲ್ಲಿ ನಮ್ಮನ್ನು ಹಿಡಿದಿರಿಸಿಕೊಳ್ಳಬಲ್ಲ ಅನುಪಮಾ ಉತ್ಸಾಹಕ್ಕೆ ಎಣೆ ಇಲ್ಲ. ವೈದ್ಯಕೀಯ ಮಾಹಿತಿಯನ್ನು ಒಂದು ಕತೆ ಹೇಳುವ ಮಾದರಿಯಲ್ಲಿ ನಮ್ಮ ಎದುರು ಇಟ್ಟರು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ರಂಗ ಚಟುವಟಿಕೆ: (1 ಮತ್ತು 2. 09.2018)**

ವಿಚಾರಗಳು ಚಿಂತನ ಮಂಥನ ಸಮೃದ್ಧವಾಗಿ ನಡೆಯುವ ಹೊತ್ತಿನಲ್ಲೇ ಅವನ್ನು ಸರಿಯಾಗಿ ಅರಗಿಸಿಕೊಳ್ಳಬೇಕಾದರೆ ದೇಹಕ್ಕೂ ಒಂದಷ್ಟು ಕೆಲಸ ಬೇಕು. ದೇಹ ಮನಸ್ಸಿನ ರಿದಂ ಅನ್ನು ಅನುಭವಿಸಬೇಕು. ಮಾತಿಲ್ಲದೇ ಪರಸ್ಪರ ಅರಿಯಬೇಕು, ಹತ್ತಿರಾಗಬೇಕು ಅಂದರೆ ರಂಗ ಪ್ರಕ್ರಿಯೆಗಳು ಬೇಕು. ಸ್ನೇಹಿತರಾದ ದೀಪಕ್ ಈ ಪ್ರಕ್ರಿಯೆಯನ್ನು ಸೊಗಸಾಗಿ ನಡೆಸಿಕೊಟ್ಟರು. ಕೋತಿಗಳಾದೆವು, ಶಿಲ್ಪಗಳಾದೆವು, ಮಾತಿನ ಹೊರತಾದ ಶಬ್ದಗಳನ್ನು ಬಳಸಿ ರಿದಂ ಅನ್ನು ಜೊತೆಜೊತೆಯಾಗಿ ಅನುಭವಿಸಿದೆವು. ಸಣ್ಣ ಗುಂಪಿನಲ್ಲಿ ರಿದಂ ಸೃಷ್ಟಿಸುತ್ತಾ, ಕೇಳಿಸಿಕೊಳ್ಳುತ್ತಾ, ದೊಡ್ಡ ಗುಂಪಿನೊಂದಿಗೆ ರಿದಂ ಅನುಭವಿಸಿದೆವು. ಪ್ರಾಣಿಗಳಾದೆವು, ಒಂದೇ ಜಾತಿಯ ಪ್ರಾಣಿಗಳು ಒಂದಾಗಿ ಕುಣಿದೆವು. ಎಲ್ಲರ ಮನದೊಳಗೆ ಒಂದು ಅದ್ಭುತ ತನ್ಮಯತೆಯನ್ನು ನೀಡಿದ್ದು 'ಟ್ರಸ್ಟ್ ವಾಕ್'. ಕೊನೆಯ ದಿನ ಮುಂಜಾವಿನಲ್ಲಿ ನಮ್ಮ ಬಳಗದಿಂದ ಕಡಿಮೆ ಪರಿಚಿತರನ್ನು ಆಯ್ದುಕೊಂಡು 30 ನಿಮಿಷಗಳ ಕಾಲ ಮೌನವಾಗಿ ಕಳೆದೆವು. ಒಬ್ಬರು ಕಣ್ಣು ಮುಚ್ಚಿ ಮತ್ತೊಬ್ಬರು ಕೈಹಿಡಿದು ನಡೆಸುತ್ತಾ, ನಡುನಡುವೆ, ನಡೆಸುವವರು ಕೆಲವು ನೋಟಗಳನ್ನು ಕ್ಯಾಮರಾ ಕಣ್ಣಿನ ಮಾದರಿಯಲ್ಲಿ ಕ್ಷಣಕಾಲ ಬಿಡಿಸುವಂತೆ ಸೂಚಿಸಿ ತೋರಿಸುವುದು. ಒಂದು ಸುತ್ತು ನಡೆಸಿದವರು ಮತ್ತೆ ಕಣ್ಣುಮುಚ್ಚುವುದು, ಕಣ್ಣು ಮುಚ್ಚಿ ನಡೆದವರು ನಡೆಸುವುದು. ಆ ನೋಟಗಳ ಸುತ್ತ ಕತೆ, ಕಲ್ಪನೆ ಹರಿಸುವುದು, ಪರಸ್ಪರ ಹೇಳಿಕೊಳ್ಳುವುದು. ಈ ಅನುಭವವನ್ನು ಎಲ್ಲರೂ ಹಂಚಿಕೊಂಡಿದ್ದು ವಿಭಿನ್ನವಾಗಿತ್ತು. ಅದೆಷ್ಟೋ ಒಳನೋಟಗಳು ಸಿಕ್ಕವು. ತಮ್ಮನ್ನು ತಾವು ಕಂಡುಕೊಂಡರು, ಕೆಲವರು ವಿಶೇಷ ಆತ್ಮವಿಶ್ವಾಸ ಅನುಭವಿಸಿದರು. ಸಬಿತಾ ಬನ್ನಾಡಿಯವರು ಅಲ್ಲೇ ಒಂದು ಕವನ ಬರೆದುಬಿಟ್ಟರು.

**ಕೈ ಹೆಜ್ಜೆ**

ನಿನ್ನ ಕೈಯದು ನನಗೆ
ಕಾಲ ಹೆಜ್ಜೆಯು ಆಗಿ
ಗೆಜ್ಜೆ ದನಿಯದು
ಕಿವಿಗೆ, ಸ್ಪರ್ಶ ನವಿರು

ನೀನು ನಾನಾಗಿ
ನಾನು ನೀನಾಗಿ
ಸಾಗಿ ಪಥದಲಿ ಜೊತೆಗೆ
ಅಂಧಕಾರವ ಮೀರಿ

ಬಾಳ ಶರಧಿಯಲಿ
ನೀರಾಗಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನೀರಿನಲಿ ಮೀನಾಗಿ
ಮೀನ ಹೊಳಪಿಗೇ
ನೀರು ನಾಚಿ

ಮರವೇರಿದೆ
ಮನದ ಕೋತಿ
ನಿಶ್ಚಿಂತ ನೋಟದಲಿ
ಮೂತಿ ಪರಚಿ

ಹಳ್ಳ ದಿಣ್ಣೆಗಳೆಲ್ಲ
ಮಣ್ಣ ಮೆತ್ತನೆಯಾಗಿ
ನಿನ್ನ ಕೈಯದು ನನ್ನ
ಹೆಜ್ಜೆಯಾಗಿ
ಕುರುಡು ಲೋಕಕೇ
ನಾವು ಕುರುಡಾಗಿ

ಕಪ್ಪು ಮಣ್ಣಿನಲೂ
ಹಸಿರು ಪೈರು
ಮುಳ್ಳ ಗಿಡವೂ
ನಾಚಿ
ಹೂವ ತೋರಿ

ಬಾ ಬಾ ಗೆಳತಿ (ಗೆಳೆಯ)
ನೀನೆನಗೆ ಕಣ್ಣಾಗಿ
ನಾನಿನಗೆ ಉಸಿರಾಗಿ
ಎಲರ ಚುಂಬನದಿ
ಮನವು ಮಿಂದು

ಮೌನವೇ ಮಾತಾಯ್ತು
ಲೋಕ ಸಂತೆಯ ಒಳಗೆ
ಸಂತೆಯೂ ಪಥವಾಯ್ತು
ನೀನು ಜೊತೆಗಿರಲು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಇನ್ನೊಂದಷ್ಟು ವಿಚಾರಗಳು:** (ಇವು ದಾಖಲೆಗಾಗಿ ಮಾತ್ರವಲ್ಲ ಬರದೇ ಇರುವವರ ಹೊಟ್ಟೆ ಉರಿಸುವುದಕ್ಕಾಗಿ ಕೂಡಾ)

ಧಾರವಾಡದ ಹೊಸ ಗೆಳತಿ ಬಸಂತಿ ಹೋಳಿಗೆ ತಂದು ಹಂಚಿದ್ದರು. ಕೈಯಾರೆ ತಯಾರಿಸಿದ ಬಣ್ಣ ಬಣ್ಣದ ಗುಲಾಬಿ ಹೂವುಗಳನ್ನು ಎಲ್ಲರಿಗಾಗಿ ತಂದಿದ್ದರು. ಕೊನೆಯ ದಿನ ಈ ಹೂಗಳು ನಮ್ಮ ತಲೆಗಳಲ್ಲಿ ಸುಂದರವಾಗಿ ಮೆರೆಯುತ್ತಿದ್ದವು. ದೀಪಕ್ ಕಿವಿಮೇಲೆ ಪಿಂಕು ಗುಲಾಬಿ ನಗುತ್ತಿತ್ತು. ಶಾರದಾ ಗೋಪಾಲ ಹಾಗೂ ಗೋಪಾಲ ದಾಬಡೆಯವರು ತಮ್ಮ 'ಡಾಕ್ಟರ್ ಇಲ್ಲದೆಡೆ' ಪುಸ್ತಕವನ್ನು ಎಲ್ಲರಿಗೂ ಉಡುಗೊರೆಯಾಗಿ ನೀಡಿದರು. ಅನುಪಮಾ ತಮ್ಮ ಮಾತಿನಷ್ಟೇ ಸಿಹಿಯಾದ ಮೈಸೂರು ಪಾಕು ಮತ್ತು ಅವಲಕ್ಕಿ ತಂದು ಧಾರಾಳವಾಗಿ ಹಂಚಿದರು. ಡೇಸಿ ಅವಾರು ಅಭಿನಯಿಸುತ್ತ ಹಾಡಿದ 'ಒಂದು ದಿನ . . ಒಂದು ಬೆರಳು . .' ಹಾಡು ಎಲ್ಲರನ್ನೂ ಹುಚ್ಚೆಗೆಬ್ಬಿಸಿತು. ಎಲ್ಲರೂ ಮತ್ತೆ ಮತ್ತೆ ಅದೇ ಹಾಡು ಹಾಡುತ್ತ ಕುಣಿದದ್ದು, ಮುಂದೆ ನಾವೆಲ್ಲಿ ಹೋದರೂ ಈ ಹಾಡನ್ನು ಹೇಳುವುದು, ಎಲ್ಲರನ್ನೂ ಕುಣಿಸುವುದು ಶಿಬಿರಗಳ ಭಾಗವಾಗಿ ಹೋಗಿದೆ ಈಗ. ರಾತ್ರಿ ಹೊತ್ತಲ್ಲಿ ಸಾಗರದ ಕೃತಿಯಿಂದ ಯಕ್ಷಗಾನ ಭಾಗವತಿಕೆ ಕೇಳಿಸಿಕೊಂಡೆವು. ಶೂರ್ಪನಖಿಯ ಶೃಂಗಾರ, ಗೋಳು ಅದರೊಳಗೆ ಮಾಡಿದ ಪ್ರಯೋಗಗಳೊಂದಿಗೆ ಕೃತಿ ಮಂಡಿಸಿದರು.

ಸ್ನಾನ ಮಾಡದೇ ಇರಲು, ಬಟ್ಟೆ ಬದಲಾಯಿಸದೇ ದಿನ ಕಳೆಯಲು, ಮಿಡಿ, ಮಿನಿ ಯಾವುದನ್ನಾದರೂ ತೊಟ್ಟುಕೊಳ್ಳಲು, ಗೋಷ್ಠಿಗಳು ನಡೆವಾಗಲೂ ಮೂಲೆಯಲ್ಲಿ ಕುಳಿತು ನಿದ್ದೆ ತೂಗಲು, ಬಾಯಿ ತುಂಬಾ ಮಾತಾಡಲು, ಮಾತಾಡದೇ ಇರಲು, ಪ್ರೀತಿ ಮಾಡಲು, ಮಾಡಿಸಿಕೊಳ್ಳಲು ಇಲ್ಲಿ ಅವಕಾಶವಿತ್ತು. ಊಟ ಸಖತ್ತಾಗಿತ್ತು. ಮಾಡಿದ ಅಡುಗೆಯನ್ನು ತಂದು, ಒಯ್ದು, ಚಹಾ ಮಾಡಿ ತಂದುಕೊಟ್ಟು ಬಸೂ ಮತ್ತು ರಾಮನಗೌಡ ಸೋದರಿಯರ ಪ್ರೀತಿಗೆ ಪಾತ್ರರಾದರು. ಹೇಳಲೇಬೇಕೆಂದರೆ ಸ್ವಲ್ಪ ಮಾತು ಮಾತು ಹೆಚ್ಚು ಆಯಿತೇನೋ, ವಿಷಯಗಳು ಜಾಸ್ತಿ ಆಯಿತೇನೋ, ಪೂರ್ವಸಿದ್ಧತೆ ಇನ್ನಷ್ಟು ಬೇಕಾಗಿತ್ತೇನೋ ಅಂತ ನಡುನಡುವೆ ಅನಿಸುತ್ತಿತ್ತು.

**ಕೊನೆಯ ಮಾತು:** ಒಟ್ಟಿನಲ್ಲಿ ಚಿಂತನೆಗಳನ್ನು ಹರಿತಗೊಳಿಸಲು, ಮಾಹಿತಿಗಳನ್ನು ಒಟ್ಟು ಹಾಕಲು, ಬದುಕಿನ ಔಪಚಾರಿಕ ಪಾತ್ರಗಳಿಂದ ಆಚೆ ಬಂದು ನಿರಾಳವಾಗಿರಲು, ಜೊತೆ ಜೊತೆಗೆ ಹೆಜ್ಜೆ ಹಾಕುವ ಬಾಂಧವ್ಯ ಬೆಳೆಸಲು, ಹಾಡಲು ಕುಣಿಯಲು ಖುಶಿ ಪಡಲು ಈ ಅಧ್ಯಯನ ಶಿಬಿರ ನೆರವಾಯಿತು. ಒಕ್ಕೂಟದ ದಾರಿಯಲ್ಲಿ ಜೊತೆಗೂಡಿ ಮುನ್ನಡೆಯಲು ಇನ್ನಷ್ಟು ಮನಸುಗಳು, ಕೈಗಳು ಹತ್ತಿರವಾದಂತೆ ಅನಿಸಿತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ವಾರ್ಧಾ: ಅಧ್ಯಯನ ಪ್ರವಾಸ

**– ವಾಣಿ ಪೆರಿಯೋಡಿ**

**ಒ**ಕ್ಕೂಟದ ಸಂಗಾತಿಗಳು ಹೆಚ್ಚಿನ ಅರಿವನ್ನು ಜೊತೆಯಾಗಿ ಪಡೆಯುವ ಉತ್ಸಾಹದಿಂದ ಹೊರಟಿದ್ದು ವರ್ಧಾಗೆ; ಗಾಂಧೀಜಿ ಆಶ್ರಮ. ಒಕ್ಕೂಟದ ಆಶಯಗಳಿಗೆ ಗಾಂಧೀಜಿ, ಅಂಬೇಡ್ಕರ್ ಚಿಂತನೆಗಳು ಸದಾ ಪ್ರೇರಣೆ. ಹೊತ್ತು ಹೊತ್ತಿಗೆ ಇವರಿಬ್ಬರನ್ನು ನೆನಪಿಸಿಕೊಳ್ಳುತ್ತಾ, ಎದೆಗಿಳಿಸಿಕೊಳ್ಳುತ್ತಾ ಹೆಜ್ಜೆ ಹಾಕುವ ಕಿರು ಪ್ರಯತ್ನ ನಮ್ಮದು. ಸುಮಾರು 50 ಜನ ಬೆಂಗಳೂರು, ಮಂಗಳೂರು, ಮೈಸೂರು, ಬಿಜಾಪುರ, ಶಿವಮೊಗ್ಗ, ಧಾರವಾಡದಿಂದ ಪಯಣದ ಜೊತೆ ಸೇರಿದರು. ಡಿಸೆಂಬರ್ 12, 2018ರಂದು ನಾವು ಸೇವಾಗ್ರಾಮ ತಲುಪಿದೆವು. ಊರೂರಿಂದ ಬಂದವರು ಪರಸ್ಪರ ಪರಿಚಯ ಮಾಡಿಕೊಂಡೆವು.

**ಗಾಂಧೀ ಆಶ್ರಮದಲ್ಲಿ:** ಮರುದಿನ, ಗಾಂಧೀಜಿ ಆಶ್ರಮದಲ್ಲಿ ನಡೆದಾಡಿದೆವು. ಗಾಂಧೀಜಿ, ಕಸ್ತೂರ್ ಬಾ ನೆಟ್ಟ ಮರದಡಿಯಲ್ಲಿ ತಂಪು ಅನುಭವಿಸಿದೆವು. ಆಶ್ರಮದ ಆವರಣದಲ್ಲಿ ಓಡಾಡಿ ಅವರ ಬದುಕನ್ನು ನೆನಪಿಸಿಕೊಂಡೆವು. ಸಂಜೆಯ ಪ್ರಾರ್ಥನೆಯಲ್ಲಿ ನಾವೂ ಭಾಗವಹಿಸಿದೆವು. ಕುವೆಂಪು ಅವರ 'ಓ ನನ್ನ ಚೇತನಾ' ಹಾಗೂ ಮೂಡ್ನಾಕೂಡು ಅವರ 'ನಮ್ಮ ಎಲುಬಿನ ಹಂದರ' ಹಾಡುಗಳನ್ನು ಅಲ್ಲಿ ಹಾಡಿ ಸಂಭ್ರಮಿಸಿದೆವು.

**ನಯೀ ತಾಲೀಂ ಶಾಲೆ ಭೇಟಿ:** ಅದೇ ಆವರಣದಲ್ಲಿ ನಡೆಯುತ್ತಿರುವ, ಗಾಂಧೀಜಿಯವರ ನಯೀ ತಾಲೀಂನ ಚಿಂತನೆಯೊಂದಿಗೆ ನಡೆಯುತ್ತಿರುವ ಶಾಲೆಯ ಭೇಟಿ ಖಂಡಿತವಾಗಿ ನಮ್ಮೆಲ್ಲರಿಗೆ ಒಂದು ಅನನ್ಯ ಅನುಭವ ನೀಡಿತು. ಒಂದನೇ ತರಗತಿಯಿಂದ ಹಿಡಿದು ಹತ್ತನೆಯ ತರಗತಿಯವರೆಗೆ ನಡೆವ ಈ ಶಾಲೆಯಲ್ಲಿ ಗಾಂಧೀಜಿಯವರು ಹೇಳುವ ಶಿಕ್ಷಣದಲ್ಲಿ 'ಹೆಡ್ ಹಾರ್ಟ್ ಹ್ಯಾಂಡ್' (ಮೂರು ಎಚ್‌ಗಳು)ನ ಪಾತ್ರ ಸ್ಪಷ್ಟವಾಗಿ ಬಿಂಬಿತವಾಗುತ್ತದೆ. ಮಕ್ಕಳು ತರಕಾರಿ ಬೆಳೆಯುತ್ತಾರೆ, ಅಡುಗೆ ಮಾಡುತ್ತಾರೆ, ತಮ್ಮ ಬಟ್ಟೆ ತಾವೇ ಹೊಲಿದುಕೊಳ್ಳಲು ಕಲಿಯುತ್ತಾರೆ. ಹೆಣ್ಣು ಗಂಡು ಅನ್ನದೆ ಈ ಕಲಿಕೆಗಳು ನಡೆಯುತ್ತವೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಶ್ರಮದಾನ:** ಒಂದು ಬೆಳಿಗ್ಗೆ ಬಾಪು ಕುಟೀರ ಮತ್ತು ನಾವು ಉಳಿದುಕೊಂಡ ಯಾತ್ರಿ ನಿವಾಸದ ಒಳಗೆ ಶ್ರಮದಾನ ಚಟುವಟಿಕೆಯನ್ನು ಉತ್ಸಾಹದಿಂದ ಮಾಡಿದೆವು. ಪ್ಲಾಸ್ಟಿಕ್ ಕಸವನ್ನು ಸಂಗ್ರಹಿಸುವ ಮೂಲಕ ಸ್ವಚ್ಛತೆಯ ಕಾರ್ಯವನ್ನು ಮಾಡಲಾಯಿತು. ಬಾಪು ಕುಟೀರದಲ್ಲಿ ನಮಗೆ ಕಸ ಹೆಕ್ಕಲು ಕಷ್ಟವೇ ಆಯಿತು, ಯಾಕೆಂದರೆ ಅಲ್ಲಿ ಕಸ ಸಿಗಲೇ ಇಲ್ಲ.

**ಪುಸ್ತಕಗಳ ಓದು ಚರ್ಚೆ:** ಈ ಪಯಣಕ್ಕೆ ನಾವೆಲ್ಲರೂ ಮನೆಕೆಲಸ ಮಾಡಿಕೊಂಡು ಹೋಗಬೇಕಾಗಿತ್ತು. ಗಾಂಧೀಜಿಯವರ ಹಿಂದ್ ಸ್ವರಾಜ್ ಮತ್ತು ಅಂಬೇಡ್ಕರ್ ಅವರ ಅನಿಹಿಲೇಶನ್ ಆಫ್ ಕಾಸ್ಟ್ ಎಲ್ಲರೂ ಓದಿಕೊಂಡು ಟಿಪ್ಪಣಿ ಮಾಡಿಕೊಂಡು ಹೋಗಬೇಕಾಗಿತ್ತು. ಎರಡು ದಿನಗಳಲ್ಲಿ ಒಂದಷ್ಟು ಕಾಲ ನಾವು ಓದಿಕೊಂಡು ಬಂದ ವಿಚಾರಗಳ ಮಂಥನಗಳಿಗಾಗಿ ಕಳೆದೆವು. ಹಿಂದ್ ಸ್ವರಾಜ್ ಪುಸ್ತಕದ ಕುರಿತು ಸಣ್ಣ ಗುಂಪಿನಲ್ಲಿ ಚರ್ಚೆ ಮಾಡಿ ಎಲ್ಲರೂ ಹಂಚಿಕೊಂಡೆವು. ಸ್ವರಾಜ್ಯ ಅಂದರೆ ಏನು, ಈಗಲೂ ಪ್ರಸ್ತುತವಾದ ಅಂಶಗಳು ಏನು, ಇಷ್ಟ ಆಗದಿರುವ ಅಂಶಗಳು ಏನು ಎಂಬ ಆಯಾಮದಲ್ಲಿ ಮಾತುಕತೆಗಳು ನಡೆದವು. ಆಯಾಯ ಗುಂಪಿನ ಹಿರಿಯರೊಬ್ಬರು ಕಿರಿಯರೊಬ್ಬರು ಇಡೀ ಸಭೆಯ ಮುಂದೆ ತಮ್ಮ ಚರ್ಚೆಗಳ ಸಾರವನ್ನು ಮಂಡಿಸಿದರು. ಇದೇ ರೀತಿಯಲ್ಲಿ ಈ ಮುಂದಿನ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅಂಬೇಡ್ಕರ್ ಅವರ ಜಾತಿವಿನಾಶ ಪುಸ್ತಕದ ಬಗ್ಗೆ ಸಣ್ಣ ಗುಂಪು ಚರ್ಚೆ ನಡೆಯಿತು. ಜಾತಿ ಎಂದರೆ ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವನೆ ಏನು? ತಾರತಮ್ಯದ ಅನುಭವ ಆಗಿದೆಯೇ? ನನಗೆ ನನ್ನ ಜಾತಿ ಕೊಟ್ಟ ಅಧಿಕಾರ ಮತ್ತು ಸ್ಥಾನಮಾನವೇನು? ನನ್ನ ಪ್ರಕಾರ ಜಾತಿ ವಿನಾಶ ಎಂದರೇನು? ಒಂದಷ್ಟು ತಕರಾರುಗಳು, ಒಂದಷ್ಟು ಒಮ್ಮತಗಳು.. ಆಗಿ ನಮ್ಮ ನಮ್ಮ ನೆಲೆಯಲ್ಲಿ ಪುಸ್ತಕದ ಸಾರವನ್ನು ಕಂಡುಕೊಂಡೆವು.

**ಚೀಲ ಹೊಲಿಗೆ:** ಸೇವಾಗ್ರಾಮದಿಂದಲೇ ಖಾದಿ ಬಟ್ಟೆ ಕೊಂಡುಕೊಂಡು, ಒಂದು ಅಳತೆಗೆ ಕತ್ತರಿಸಿ, ಎಲ್ಲಾ ಸಂಗಾತಿಗಳಿಗೂ ಹಂಚಲಾಯಿತು. ಪ್ರತಿಯೊಬ್ಬರೂ ಒಂದು ಪುಟ್ಟ ಚೀಲ ಹೊಲಿದರು. ಇದು ಒಂದು ಆಪ್ತವಾದ ಕೆಲಸವಾಯಿತು. ಕುಂತಲ್ಲಿ ನಿಂತಲ್ಲಿ ಮಹಿಳೆಯರು ಪುರುಷರು ಎನ್ನದೆ ಸೂಜಿಗೆ ದಾರ ಪೋಣಿಸಿ ಹೊಲಿಗೆ ಮಾಡುವ ದೃಶ್ಯ ವಿಶೇಷವಾಗಿತ್ತು. ಕೊನೆಯ ದಿನದಂದು ಎಲ್ಲಾ ಚೀಲಗಳನ್ನು ರಾಶಿ ಹಾಕಿ, ಪ್ರತಿಯೊಬ್ಬರೂ ಒಂದೊಂದು ಚೀಲವನ್ನು ನೆನಪಿನ ಕಾಣಿಕೆಯಾಗಿ ಪಡೆದುಕೊಂಡೆವು.

**ನಮಗೆ ಪ್ರೇರಣೆ ನೀಡಿದ ಮಹಿಳೆಯರ ನೆನಪು:** ಪ್ರತಿಯೊಬ್ಬರೂ ಒಬ್ಬ ಇಂತಹ ಮಹಿಳೆಯ ಕುರಿತು ಒಂದೆರಡು ನಿಮಿಷ ಯಾವುದೇ ಪ್ರಕಾರದಲ್ಲಿ ಮಂಡಿಸಬಹುದು ಎಂಬುದು ಮೊದಲೇ ಸೂಚಿಸಲಾಗಿತ್ತು. ಅಂತೆಯೇ ತೃಪ್ತಿ ಪೆರ್ಲಾಪು, ಗೌರಿ ಲಂಕೇಶ್‌ನ ಕಿರು ಚಿತ್ರಣ ನೀಡಿದರು. ಚೈತ್ರಾ, ಬದುಕಿನುದ್ದಕ್ಕೂ ಗಂಡು ವೇಶದಲ್ಲಿ ಬದುಕಬೇಕಾಗಿ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಬಂದ ಡಾಕ್ಟರ್ ಜೇಮ್ಸ್ ಬ್ಯಾರಿ ವಿಚಾರ ಮಂಡಿಸಿದರು, ಅಖಿಲಾ, ಸ್ತನಕರಗಳನ್ನು ಪ್ರತಿಭಟಿಸಿದ ನಂಗೇಲಿಯ ಕುರಿತು ಏಕವ್ಯಕ್ತಿ ಪ್ರದರ್ಶನ ಮಾಡಿದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಹಾಡು ಕುಣಿತಗಳು ಜೊತೆಜೊತೆಯಾಗಿ ಸಾಗಿದ್ದವು. ಸಂಗಾತಿಗಳಾದ ಕೃತಿ, ಶುಭಾ ಮರವಂತೆ, ಮಾಧವಿ ಭಂಡಾರಿಯವರ, ಗಾಂಧಿ ಕಸ್ತೂರ್‌ಬಾ ಸಂಭಾಷಣೆಯನ್ನು ಇಟ್ಟುಕೊಂಡು ಆ ಸ್ಥಳದಲ್ಲೇ ರಚಿಸಿದ ಕಿರು ತಾಳಮದ್ದಳೆ ಎಲ್ಲರ ಮನದಲ್ಲಿ ಉಳಿದುಬಿಟ್ಟಿತ್ತು. ಕೆಲವರು ಕವನ ಓದಿದರು, ಹಾಡು ಹೇಳಿದರು.

**ಮಾತುಗಳನ್ನು ಬದುಕುವ ನಿಟ್ಟಿನಲ್ಲಿ:**

ಬಾಪೂ, ಬಾಬಾ ಒಡನಾಟದ ಜೊತೆಗೆ ನಮ್ಮ ನಮ್ಮ ನಡುವಿನ ಮಾತುಕತೆಗಳು ಎಲ್ಲವೂ ಮತ್ತೆ ಮತ್ತೆ ಮಾತಾಡಿದರೆ ಸಾಲದು ಅವನ್ನು ಒಂದಿಷ್ಟಾದರೂ ಬದುಕಲು ಕಲಿಯಬೇಕು ಎಂಬ ಕಡೆಗೆ ನಮ್ಮನ್ನು ಒತ್ತಾಯಿಸುತ್ತಿತ್ತು.. ಅಂತೆಯೇ ಸೇವಾಗ್ರಾಮ ಬಿಡುವುದಕ್ಕೆ ಮೊದಲು ನಮ್ಮ ನಮ್ಮ ಆಂತರಿಕ ನಿರ್ಣಯಗಳನ್ನು ಎಲ್ಲರೆದುರು ಹೇಳಿಕೊಂಡೆವು.

- ಇನ್ನಷ್ಟು ಸರಳತೆ ಪಾಲಿಸುತ್ತೇನೆ, ಮಾತು, ಉಡುಪು, ಆಹಾರ ಇನ್ನೂ ಕಡಿಮೆ ಮಾಡುತ್ತೇನೆ.
- ಬಾಟಲಿ ನೀರು ಕುಡಿಯುವುದಿಲ್ಲ; ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವೆ; ಸಾವಯವ ವಸ್ತುಗಳಿಗೆ ಬೆಂಬಲ, ಒಕ್ಕೂಟ ಆದರ್ಶ ಸಾಮುದಾಯಿಕವಾಗಿ ಇರುವಂತೆ ನೋಡಿಕೊಳ್ಳುತ್ತೇನೆ; ನನ್ನ ಬಗ್ಗೆ ಎಚ್ಚರಿಕೆಯಲ್ಲಿ ಇರುತ್ತೇನೆ.
- ಆಹಾರ ಸೇವನೆಯಲ್ಲಿ ಸಮಯಪಾಲನೆ ಮಾಡುತ್ತೇನೆ; ಜಾತಿ ವಿನಾಶ ಕಡೆಗೆ ಇನ್ನೂ ಹೆಚ್ಚಿನ ಗಮನ ಕೊಡುತ್ತೇನೆ; ಮಂತ್ರ ಮಾಂಗಲ್ಯಕ್ಕೆ ಹೆಚ್ಚಿನ ಪ್ರೇರಣೆ ಕೊಡುತ್ತೇನೆ.
- ಜಾತೀಯತೆ ಗೇಟಿನೊಳಗೆ ಬರಗೊಡುವುದಿಲ್ಲ; ಸಾವಯವ ಆಹಾರ ಸೇವಿಸುತ್ತೇನೆ; ಸಮಯ ಪಾಲನೆ ಮಾಡುತ್ತೇನೆ.
- ಆಹಾರದಲ್ಲಿ ಬೇಯಿಸಿದ್ದನ್ನು ಕಡಿಮೆ ಮಾಡುತ್ತೇನೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುತ್ತೇನೆ.
- ಪ್ಲಾಸ್ಟಿಕ್ ಬಹಳ ಇಷ್ಟಪಡುತ್ತಿದ್ದೆ; ಸ್ಟೋರ್ ಮಾಡಿ ಇಟ್ಟಿದ್ದೇನೆ; ಇನ್ನು ಕಡಿಮೆ ಮಾಡುತ್ತೇನೆ.
- ಆಭರಣ ಬಳಕೆ ಕಡಿಮೆ ಮಾಡುತ್ತೇನೆ; ಸಮಯ ಪಾಲನೆ ಮಾಡುತ್ತೇನೆ.
- ದಿನಾ ಧ್ಯಾನ ಮಾಡುತ್ತೇನೆ; ಅನಗತ್ಯ ಸಂಪ್ರದಾಯ ಬಿಡಲು ಪ್ರಯತ್ನ ಮಾಡುತ್ತೇನೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ಫಾರಿನ್ ವಸ್ತು ಬಳಸುವುದಿಲ್ಲ; ಎಳನೀರು ಕುಡಿಯುತ್ತೇನೆ; ಸಮಯಪಾಲನೆ ಮಾಡುತ್ತೇನೆ.
- ಅನಾವಶ್ಯಕ ಮಾತಾಡುವುದು ಬಿಡುತ್ತೇನೆ.
- ಹೆಚ್ಚಿನ ಸರಳತೆಯತ್ತ ಸಾಗುತ್ತೇನೆ (ಅನೇಕರು ಹೇಳಿದ್ದಾರೆ).
- ದಿನದಲ್ಲಿ ಅರ್ಧ ಗಂಟೆ ಮೌನ; ಅರ್ಧ ಗಂಟೆ ಶ್ರಮಕ್ಕೆ ಸಮಯ ಇಡುತ್ತೇನೆ.
- ಕ್ಷಮಿಸುವುದನ್ನು ಕಲಿಯುತ್ತೇನೆ; ಸರಳವಾಗಿರುತ್ತೇನೆ.
- ಸಿಟ್ಟು ಕಡಿಮೆ ಮಾಡುತ್ತೇನೆ; ಓದು ಹೆಚ್ಚಿಸಿಕೊಳ್ಳುತ್ತೇನೆ.
- ಏಕಾಗ್ರತೆ ಬೆಳೆಸಿಕೊಳ್ಳುತ್ತೇನೆ; ಸೀರೆ ವ್ಯಾಮೋಹ ಕಡಿಮೆ ಮಾಡಿಕೊಳ್ಳುತ್ತೇನೆ.
- ಟೈಮ್ ಟೇಬಲ್ ಹಾಕಿ ಕೆಲಸ ಮಾಡುತ್ತೇನೆ.
- ನನ್ನ ಜೀವನದಲ್ಲಿ ಸ್ಪಿರಿಚುವಲ್ ಸಮಯವನ್ನು ಏಕಾಂತವಾಗಿ ಕಳೆಯುತ್ತಿದ್ದೆ; ಅದನ್ನು ಜನರೊಂದಿಗೆ ಒಡಗೂಡಿ ಕೂಡ ಮಾಡುತ್ತೇನೆ.
- ಸರಳವಾಗಿರುತ್ತೇನೆ; ಜಾಸ್ತಿ ಓದು ಮಾಡುತ್ತೇನೆ.
- ಮಣ್ಣಿಗೆ ವಾಪಾಸು ಹೋಗುತ್ತೇನೆ; ಇನ್ನೂ ಸರಳತೆ ರೂಢಿಸಿಕೊಳ್ಳುತ್ತೇನೆ; ಸಿಟ್ಟು ಕಡಿಮೆ ಮಾಡಿಕೊಳ್ಳುತ್ತೇನೆ.
- ಸರಳತೆ ಇನ್ನೂ ರೂಢಿಸಿಕೊಳ್ಳುತ್ತೇನೆ; ವರದಕ್ಷಿಣೆ ತೆಗೆದುಕೊಳ್ಳುವ ಮದುವೆಗಳಿಗೆ ಹೋಗುವುದಿಲ್ಲ.
- ರಾತ್ರಿ ಉಪವಾಸ ಮಾಡುತ್ತೇನೆ; ಕೊನೆ ಉಸಿರಿನವರೆಗೂ ಅರಿವಿನ ಪಯಣ ಮಾಡುತ್ತಿರುತ್ತೇನೆ.
- ಜಾತಿ ಹೇಳುವುದಿಲ್ಲ; ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುತ್ತೇನೆ; ಬಟ್ಟೆ ಚೀಲ ಬಳಸುತ್ತೇನೆ.
- ಇನ್ನೊಬ್ಬರ ತಪ್ಪು ನೋಡುವುದಿಲ್ಲ.
- ಅತಿ ಶಿಸ್ತು ಬಿಡುತ್ತೇನೆ; ಸಂಯಮ ಕಲಿಯುತ್ತೇನೆ.
- ನೀರು ಮಿತ ಬಳಕೆ ಮಾಡುತ್ತೇನೆ.
- ಮಾತಿನ ತೀಕ್ಷ್ಣತೆ ಕಡಿಮೆ ಮಾಡಿಕೊಳ್ಳುತ್ತೇನೆ.
- ಪ್ಲಾಸಿಕ್ ಬಾಟಲಿ ಬಿಟ್ಟು ಸ್ಟೀಲ್ ಬಾಟಲಿ ಬಳಸುತ್ತೇನೆ.
- ನಮ್ಮ ಮನೆಯಲ್ಲಿ ಬೇರೆಯವರಿಗಾಗಿ ಜಾತಿ ಭೇದ ನಡೆಯುತ್ತಿತ್ತು, ಇನ್ನು ಮುಂದೆ ಮಡಿ ಮೈಲಿಗೆ ಬಿಡುತ್ತೇನೆ.
- ಕಂಪಾಶನೇಟ್ ಆಗಲು ಪ್ರಯತ್ನಿಸುತ್ತೇನೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ಮಣ್ಣಿನೊಂದಿಗೆ ಹೆಚ್ಚಿನ ಸಂಬಂಧ ಬೆಳೆಸುತ್ತೇನೆ; ಕ್ಷಮಿಸುವುದರ ಬಗ್ಗೆ ಹೆಚ್ಚು ಅರ್ಥ ಮಾಡಿಕೊಳ್ಳುತ್ತೇನೆ; ಒಕ್ಕೂಟದಲ್ಲಿ ಅಧಿಕಾರ ವಿಕೇಂದ್ರೀಕರಣ ಆಗುವ ಹಾಗೆ, ಹೆಚ್ಚು ಒಳಗೊಳ್ಳಿಸುವಿಕೆ ಸಾಧ್ಯ ಆಗುವ ಹಾಗೆ ಪ್ರಯತ್ನ ಮಾಡುತ್ತಿರುತ್ತೇನೆ.

ಕೊನೆಯಲ್ಲಿ ನಾಗಪುರಕ್ಕೆ ಭೇಟಿ ನೀಡಿ ಅಂಬೇಡ್ಕರ್ ಅವರ ದೀಕ್ಷಾಭೂಮಿಯಲ್ಲಿ ಕಾಲಕಳೆದು ರಾಶಿ ಸಂಭ್ರಮದ ಜೊತೆಗೆ ಗಾಂಧಿ ಅಂಬೇಡ್ಕರ್ ಅವರ ಒಂದಷ್ಟು ಚಿಂತನೆಗಳನ್ನು ಇನ್ನೂ ಹತ್ತಿರವಾಗಿಸಿಕೊಳ್ಳುತ್ತಾ, ನಮ್ಮ ನಮ್ಮ ಒಡನಾಟದ ಸೊಗಸನ್ನು ನೆನಪಿನ ಖಜಾನೆಗೆ ಸೇರಿಸಿಕೊಳ್ಳುತ್ತಾ (ಪುಷ್ಪಾ ಮಾಡಿಕೊಡುತ್ತಿದ್ದ ಬಿಸಿ ಬಿಸಿ ಕಾಫಿ, ನಳಿನಾ ಅವರ ಕುಣಿತ, ಗೆಳತಿಯರು ತಂದ ವಿವಿಧ ತಿನಿಸುಗಳು, ಮಂಜುಳಾನ ಗಾಂಧಿ ಟೊಪ್ಪಿ) ವಾಪಸು ಹಿಂತಿರುಗಿದೆವು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕೌದಿಯಂತಾ ಮಹಿಳಾ ಚಳುವಳಿ

**– ಡಾ. ಸಬಿತಾ ಬನ್ನಾಡಿ**

(ಸೂಜಿ ಇದೆ, ನೂಲೂ ಇದೆ. ಹರಿದ ಚಿಂದಿಗಳಿಲ್ಲಿ ಚಿತ್ತಾರವಾಗುತ್ತವೆ)

ಶಿವಮೊಗ್ಗೆಯ ಸಮಾರಂಭವೊಂದರಲ್ಲಿ ಚಿಂತಕಿ, ಹೋರಾಟಗಾರ್ತಿ ಮನೀಷಾ ಗುಪ್ತೆ ಒಂದು ಮಾತು ಹೇಳಿದರು. ಮಹಿಳೆಯರಿಗೆ ಇಪ್ಪತ್ತನಾಲ್ಕು ಗಂಟೆ ಸಾಕಾಗುವುದಿಲ್ಲ, ಅದನ್ನು ನಲವತ್ತೆಂಟು, ಅರವತ್ನಾಲ್ಕು, ಹೀಗೆ ವಿಸ್ತರಿಸುತ್ತಾ ಹೋಗಬೇಕು. ಅದನ್ನು ಸಾಧಿಸುವುದು ಹೇಗೆಂದರೆ, ಒಬ್ಬಳು ಈರ್ವಳಾಗುತ್ತಾ, ಮೂರ್ವಳಾಗುತ್ತಾ ಸಾಗುವುದು. ಅಂದರೆ, ಕೈಗೆ ಕೈ ಜೋಡಿಸುವುದು. ಒಬ್ಬರನ್ನು ಒಬ್ಬರು ಆತುಕೊಂಡು ಕೆಲಸ, ಹವ್ಯಾಸ, ಹೋರಾಟ, ಅಧಿಕಾರ ಹಂಚಿಕೆಗಳನ್ನು ಮಾಡಿಕೊಳ್ಳುವ ಈ ಪರಿಕಲ್ಪನೆಯೇ ಮೂಲತಃ ಚಳುವಳಿಯ ಆಶಯ ಕೂಡಾ ಆಗಿರುತ್ತದೆ. ಮತ್ತಿದು ಅದರ ಫಲವೂ ಆಗಬೇಕಿದೆ.

ಇದು ಚಳುವಳಿಗಳಿಲ್ಲದ ಕಾಲ ಎನ್ನಲಾಗುತ್ತದೆ. ಆದರೆ ಇದು ಭಿನ್ನ ಸ್ವರೂಪದ ಚಳುವಳಿಗಳ ಕಾಲ. ಹೆಂಗಸರ ಚಳುವಳಿಗಳು ಇತರ ಚಳುವಳಿಗಳಂತಲ್ಲ. ಹೆಂಗಸರು ಬರೀ ಪ್ರಶ್ನೆ ಕೇಳುವುದಿಲ್ಲ. ಅವರು ಉತ್ತರದಿಂದಲೇ ಆರಂಭಿಸಿರುತ್ತಾರೆ. ಅದನ್ನು ಕೇಳಿಸಿಕೊಳ್ಳಿ ಎನ್ನುತ್ತಿರುತ್ತಾರೆ. ಒಮ್ಮೆ ನನ್ನ ಪರಿಚಯದ ಹುಡುಗ ಹೇಳುತ್ತಿದ್ದ. ನಾನು ಹದಿಹರೆಯದಲ್ಲಿ ತುಂಬಾ ಕೆಟ್ಟು ಹೋಗಿದ್ದೆ. ಅದು ನನ್ನ ಅಮ್ಮನಿಗೆ ತಿಳಿಯಿತು. ಅವಳು ನನ್ನನ್ನು ಮನೆಬಿಟ್ಟು ಹೋಗು ಎನ್ನುತ್ತಾಳೆ ಅಂದುಕೊಂಡಿದ್ದೆ. ಆದರವಳು ನನ್ನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು 'ಮಗೂ ಇದು ಬದುಕಿನ ದಾರಿಯಲ್ಲ, ಸರಿ ಮಾಡಿಕೊಳ್ಳಲು ಇನ್ನೂ ಸಾಧ್ಯ ಇದೆ' ಎಂದಳು. ನಾನು ಗಿಲ್ಟ್‌ನಲ್ಲಿ ಮುಳುಗಿ ಹೋದೆ. ಅದು ನನ್ನ ಜೀವನದ ಬದಲಾವಣೆಯ ತಿರುವಾಯಿತು. ಹೆಂಗಸರು ಯಾವಾಗಲೂ ದಾರಿ ತೋರುವ ಮಾತಾಡುತ್ತಾರೆ. ಅವರು ಕೊಡುವ ಶಿಕ್ಷೆ ಎಂದರೆ ದೂರ ತಳ್ಳುವುದಲ್ಲ, ಅಪ್ಪಿ ಸಂತೈಸುವುದು. ಈ ಜಗತ್ತಿನಲ್ಲಿ ಬದಲಾವಣೆಯಾಗ ಬೇಕೆಂದರೆ ಈ ದಾರಿಯಿಂದ ಮಾತ್ರ ಸಾಧ್ಯ ಅಂದ. ಅರೆರೆ! ಅಂತ ನನಗನ್ನಿಸಿತು. ಮನೆಯ ಈ ದಾರಿ ಜಗದ ದಾರಿಯಾಗಿಲ್ಲ ಎಂಬುದೇ ಸಮಸ್ಯೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆ ಹುಡುಗ ಹೇಳಿದ್ದು ನಿಜವೆನ್ನಿಸಿತು. ಪಾಶ್ಚಾತ್ಯ ಮೂಲದ್ದು ಎಂದೆಲ್ಲಾ ಟೀಕೆಗೆ ಒಳಗಾದ 'ಮೀ ಟೂ'ವನ್ನೇ ಗಮನಿಸಿ. ಆ ಹೆಣ್ಣುಮಕ್ಕಳು ಇದನ್ನು ಆರಂಭಿಸಿದಾಗ ತಮ್ಮೊಡನೆ ಅವಮಾನಕರವಾಗಿ ನಡೆದುಕೊಂಡ ಗಂಡಸರಿಗೆ ಶಿಕ್ಷೆಯಾಗಲಿ ಎನ್ನಲಿಲ್ಲ. ಬದಲಿಗೆ ಈಗಾದರೂ ಗಿಲ್ಟ್‌ಫೀಲ್ ಮಾಡಿಕೊಳ್ಳಿ ಎಂದರು. ಇಷ್ಟಕ್ಕೇ ತಡೆದು ಕೊಳ್ಳಲಾಗಲಿಲ್ಲ. ಅಭದ್ರತೆಯ ಭಯದಲ್ಲಿ ನರಳಿದ ಗಂಡಸರು ಮತ್ತು ಅವರಂತೆಯೇ ಯೋಚಿಸುವ ಹೆಂಗಸರು 'ಓಹೋ, ಇವರೇನು ಪತಿವ್ರತೆಯರಾ' ಎಂದು ಅರಚಾಡ ತೊಡಗಿದರು. ಆದರೆ ಒಂದಂತೂ ಸತ್ಯ, ಇದು ಒಳಗೊಳಗೇ ಒಂದು ಎಚ್ಚರಿಕೆಯನ್ನು ರವಾನಿಸಿದೆ. ಶಿವಮೊಗ್ಗದಲ್ಲಿ ಕಳೆದ ವರ್ಷ 'ಅರಿವಿನ ಪಯಣ'ವೆಂಬ ಹೆಸರಿನಲ್ಲಿ ಮಹಿಳಾ ಒಕ್ಕೂಟವು ಹುಡುಗರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಹೆಣ್ಣುಮಕ್ಕಳನ್ನು ಕುರಿತು ತಿಳಿಹೇಳುವುದನ್ನು ಮಾಡಿದಾಗ ಆ ಹುಡುಗರು ಅದು ತಮ್ಮ ಅವಶ್ಯಕತೆ ಎಂದು ಹೇಳಿದರು. ಇಂತಹ ಸಣ್ಣದೇ ಆದರೂ ಬದಲಾವಣೆಯ ಹಾದಿಯನ್ನು ಹೆಂಗಸರು ತೋರುತ್ತಿದ್ದಾರೆ. ಅದು ಫ್ರೆಂಚ್ ಕ್ರಾಂತಿಯಂತಲ್ಲ ಎಂದವರಿಗೆ ತಿಳಿದಿದೆ. ಈ ಹತ್ತು ವರ್ಷಗಳಲ್ಲಿ ಇಂತಹ ಹಲವಾರು ನಡೆಗಳು ಆಗಿವೆ. ನಿರ್ಭಯಾ ಪ್ರಕರಣದ ಸಂದರ್ಭದಲ್ಲಿ ದೆಹಲಿಯ ವಿದ್ಯಾರ್ಥಿನಿಯರು ಮುಂದೆ ನಿಂತರು. ಹಲವು ದಿನಗಳ ಮೇಲಾದರೂ ಸರ್ಕಾರ ಅದನ್ನು ಕೇಳಿಸಿಕೊಳ್ಳಲೇ ಬೇಕಾಯಿತು. ಆದರೆ ಅದಕ್ಕೆ ಗೊತ್ತಿರುವ ಪರಿಹಾರ ಇನ್ನೂ ಪೌರುಷದ ಮಾದರಿಯಿಂದ ಹೊರಬಂದಿಲ್ಲ. ಅದು ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಿತು. ಆದರೆ ಅತ್ಯಾಚಾರಿಗಳೇ ಹೇಳಿದ, 'ಮದ್ಯಪಾನದ ಅಮಲು ಮತ್ತು ಹೆಣ್ಣೆಂದರೆ ಗಂಡಸರು ಹೇಗೆ ಬೇಕಾದರೂ ಬಳಸಿಕೊಳ್ಳಬಹುದಾದವಳು' ಎಂಬ ಮಾತನ್ನು ಕೇಳಿಸಿಕೊಂಡೇ ಇಲ್ಲ. ಯಾಕೆಂದರೆ ಮದ್ಯ ಮಾರಾಟ ಮತ್ತು ಸೆಕ್ಸ್ ವಿಡಿಯೋಗಳು ಇವರಿಗೆ ಆದಾಯ ತಂದು ಕೊಡುವ ಸರಕುಗಳು. ಈ ಹಿನ್ನೆಲೆಯಿಂದ ಮದ್ಯಪಾನ ವಿರೋಧಿ ಆಂದೋಲನವನ್ನು ನೋಡಬೇಕು. ಹೆಣ್ಣು ಮಕ್ಕಳು ಎತ್ತುತ್ತಿರುವುದು ಸಾಮಾಜಿಕ ಸ್ವಾಸ್ಥ್ಯದ ಪ್ರಶ್ನೆಯನ್ನು. ನಿಮಗಿದು ಆದಾಯ ಮಾತ್ರವಾಗಿ ಕಾಣುತ್ತಿದೆಯೇ? ಮನೆಯನ್ನು ರಣರಂಗವಾಗಿಸಿ, ಮನೆಯ ಹೊರಗನ್ನು ಸ್ಮಶಾನವಾಗಿಸುವ ಈ ಅನಿಯಂತ್ರಿತ ದಂದೆಯ ಪರಿಣಾಮ ತಿಳಿದಿದೆಯೇ? ಬೆಳ್ಳಂಬೆಳಗೆಯೇ ಮದ್ಯದಂಗಡಿಯಲ್ಲಿ ಕ್ಯೂ ಬೆಳೆದಿರುತ್ತದೆ. ಚಿಗುರು ಮೀಸೆಯ ಹುಡುಗರು ಎಗ್ಗಿಲ್ಲದೇ ಕುಡಿಯುತ್ತಿದ್ದಾರೆ. ಓಟಿಗಾಗಿ ಜನ ಈ ವ್ಯಸನದಲ್ಲಿ ಮುಳುಗೇಳುವುದು ಆಳುವವರಿಗೂ ಬೇಕಾಗಿದೆ. ಆಳುವವರೇ ಇವರು? ಇಡೀ ದೇಶವು 'ಹಿರಿಯರಿಲ್ಲದ ನೆರವಿ'ಯಾಗುತ್ತಿದೆ. ಹೆಂಗಸರಿಗೇ ಕುಡಿತದ ಚಟ ಅಂಟಿಸಿ ಬಚಾವಾಗಬಹುದು ಎಂದು ಇವರು ತಿಳಿದಿದ್ದಾರೆ.

ಓಟಿನ ಹಕ್ಕೊಂದು ಇಲ್ಲದೇ ಹೋಗಿದ್ದರೆ ಹೆಣ್ಣುಮಕ್ಕಳ ಚಳುವಳಿಯನ್ನು ಸಲೀಸಾಗಿ ನಿಯಂತ್ರಿಸಿಬಿಡುತ್ತಿದ್ದರು. ಈಗಲೂ ಅವರು ಹೇಳುವುದರ ನಿಜದ ನೆಲೆ ಇಂದಿನ ಲೋಕಕ್ಕೆ ಅರಿವಾಗಿಲ್ಲ. ಗಾರ್ಮೆಂಟ್ ಹೆಂಗಸರು ಒಮ್ಮೆಗೇ ಲಕ್ಷಾಂತರ ಸಂಖ್ಯೆಯಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಬೀದಿಗಿಳಿದು ಕೇಳಿದ್ದೇನು? 'ನನ್ನ ದುಡಿಮೆಯ ಹಣವೇ ಬೇಕೇ ನಿಮಗೆ? ನನ್ನ ಮಕ್ಕಳ ಮದುವೆಗೋ, ಮನೆ ಕಟ್ಟಲೋ, ಮಕ್ಕಳ ಉದ್ಯೋಗಕ್ಕೋ ಉಪಯೋಗಿಸಲು ಆ ಹಣ ಬೇಕೆಂದು ನಿಮಗೆ ತಿಳಿದಿಲ್ಲವೇ?' ಎಂಬ ಅವರ ಪ್ರಶ್ನೆಯಲ್ಲೇ ಲೋಕ ನಡೆಯಬೇಕದ ರೀತಿ ಯಾವುದೆಂಬ ಉತ್ತರವಿದೆ. ಅಂಗನವಾಡಿ ಹೆಣ್ಣುಮಕ್ಕಳು ಹಗಲೂ ರಾತ್ರಿ ರಸ್ತೆಯಲ್ಲೇ ಬೀಡುಬಿಟ್ಟು ಮೌನ ಪ್ರತಿಭಟನೆ ಮಾಡಿದಾಗಲೂ ಸರ್ಕಾರಗಳಿಗೆ 'ಗಂಟಲೊಳಗೆ ಕಡುಬು ತುರುಕಿದ' ಅನುಭವ. 'ದುಡಿವವರಿಗೆ ಸರಿಯಾಗಿ ಸಂಬಳ ಕೊಡಿ ಎನ್ನುವುದನ್ನೂ ತಿವಿದು ಕೇಳಬೇಕಾ? ನಿಮ್ಮ ಮೊಖಕ್ಕೆ' ಅಂತ ಖಂಡಿತ ಹಳ್ಳಿ ಹೆಣ್ಣುಮಗಳು ಕೇಳದೇ ಬಿಡುತ್ತಿರಲಿಲ್ಲ.

ತಾರತಮ್ಯವನ್ನು ಪ್ರಶ್ನಿಸುವುದೆಂದರೆ, ನೀವು ಇದುವರೆಗೂ ಕಟ್ಟಿದ, ನೋಡಿದ ಕ್ರಮದಲ್ಲಿ ಸಮಸ್ಯೆ ಇದೆ ಎಂದು ಹೇಳುವುದು. ಏನು ಸಮಸ್ಯೆ ಇದೆ ಎಂದು ಕೇಳುವುದೇ ಸಮಸ್ಯೆಯಾದರೆ ಕಷ್ಟ. ಝುಂಕಿಸಿ, ಹುಬ್ಬು ಗಂಟಿಕ್ಕಿ, ದುರ್ಬಲರನ್ನು ಹಿಂಸಿಸಿ ಮನುಷ್ಯರನ್ನೂ, ಭೂಮಿಯನ್ನೂ ಬಟ್ಟೆಯ ತುಂಡುಗಳಂತೆ ಕತ್ತರಿಸಿ ಗಡಿಯುದ್ಧ ಮುಳ್ಳುಬೇಲಿ ಏರಿಸುವ ಹುಸಿ ಪೌರುಷದ ದಾರಿಗಿಂತ ಹೆಣ್ಣುದಾರಿ ಭಿನ್ನ. ಇದು ಹರಿದ ತುಂಡುಗಳ ನಡುವಿನ ಬೇಲಿ ಕಿತ್ತು, ಪ್ರತಿ ತುಂಡಿನ ಅನನ್ಯತೆಯನ್ನೂ ಹಾಗೇ ಉಳಿಸಿ, ಅವುಗಳನ್ನು ಸೇರಿಸಿ ಹೊಲಿಯಬಯಸುತ್ತದೆ. ಇದು ಆಕರ್ಷಕವಾಗಿರಲಾರದು. ಯಾಕೆಂದರೆ ಪೌರುಷದ, ಅಟ್ಟಹಾಸದ ಮೋಜು ಇದಕ್ಕಿರಲಿಕ್ಕಿಲ್ಲ. ಈ ಪೌರುಷದ ಮಾದರಿಯನ್ನೇ ಅನುಕರಣೆ ಮಾಡುವ ಮೋಹಿಸುವ, ಹುಟ್ಟಿನಿಂದ ಹೆಣ್ಣಾಗಿದ್ದರೂ, ಇದೇ ಸರಿ ಎನ್ನುವ ದಂಡೂ ನಮ್ಮ ನಡುವೆ ಇದೆ. ಇವರು 'ಹೆಂಗಸರಿಗೇಕೆ ಸ್ವಾತಂತ್ರ್ಯ, ಸಮಾನತೆ?' ಎಂದುಲಿದು ಗಂಡಸರನ್ನು ಮೆಚ್ಚಿಸುವ, 'ಎಡದವರಂತಲ್ಲ ಬಲದವರು, ಅವರೂ ನಿಮ್ಮಂತೆ ಪ್ರತಿಭಟನೆ ಶುರುಮಾಡುತ್ತಾರೆ' ಎಂದು ಭೂ ಬಿಡುವ, 'ಪಾಠ ಮಾಡುವ ನೀನು ಸೀರೆಯನ್ನೇ ಉಡಬೇಕು, ಇಲ್ಲದಿದ್ರೆ ನಿನ್ನನ್ನು ನೋಡಿಕೊಳ್ತೇನೆ' ಎಂದು ಬೆದರಿಸುವ ಅಧಿಕಾರದ ಗಮ್ಮತ್ತಿನಲ್ಲಿ ಮುಳುಗಿದ್ದಾರೆ. ಇರಲಿ ಬಿಡಿ, ಪಾಪ. ಅವರನ್ನು ನೋಡಿ 'ಹೆಂಗಸರೆಲ್ಲಾ ಹೀಗೇ' ಎನ್ನಬೇಕಾಗಿಲ್ಲ. ಯಾಕೆಂದರೆ 'ಗಂಡಸರೆಲ್ಲಾ ಹಾಗೇ' ಎಂದು ನಾವೆಂದೂ ನಿರ್ಣಯಿಸಿ ದೂರ ಮಾಡಿರಲಿಲ್ಲ ಅಲ್ಲವೇ? ಅವರಿಗೆ ಹೇಳೋಣ. ಅಕ್ಕಗಳಿರಾ, ಅದು ನಮ್ಮ ದಾರಿಯಲ್ಲ. ಅದು ಯಾರ ದಾರಿಯೂ ಆಗಬಾರದು. ಅಲ್ಲದೇ, ಹೋರಾಟದ ಹಾದಿಯಿಂದಾಗಿಯೇ ಲಕ್ಷಾಂತರ ಹೆಣ್ಣುಮಕ್ಕಳು ಅಕ್ಷರ, ಉದ್ಯೋಗ ಪಡೆದಿದ್ದಾರೆ. ಕೌಟುಂಬಿಕ ದೌರ್ಜನ್ಯದ ಉರುಳಿನಿಂದ ಹೊರಬಂದಿದ್ದಾರೆ, ಘನತೆಯ ಬದುಕನ್ನು ತಮ್ಮದಾಗಿಸಿಕೊಂಡಿದ್ದಾರೆ. ಅದು ಸಾಮಾನ್ಯ ಸಂಗತಿ ಅಲ್ಲವೇ ಅಲ್ಲ. ಹಾಗೆಯೇ ಪೌರುಷದ ಮಾದರಿಯೆಂಬ ವಿನಾಶದ ಜಾರುಬಂಡಿ ಏರಿ ಕುಳಿತ ಎಲ್ಲಾ ಸ್ತ್ರೀ ಪುರುಷರೂ ಬಚಾವಾಗಬೇಕೆಂದರೆ ಈ ಮಹಾ ಇಳೆಯ ಮಾದರಿಯೆಡೆಗೆ ಮರಳಲೇಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅಕ್ಕ ಕೇಳೇ..

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನ ಪಯಣ - ಇದು ನಿರಂತರ ಪಯಣ

**– ಸವಿತಾ ಮತ್ತು ಭಾರತಿ**

ದೀಕ್ಷಾ ಸಂಸ್ಥೆಯ ನಿರ್ದೇಶಕರಾದ ಸಿಸ್ಟರ್ ಲಿನೆಟ್ ಅವರೊಂದಿಗೆ ಸೇರಿಕೊಂಡು ನಾವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಜೀವನದ ಮೌಲ್ಯಗಳ ಕುರಿತು ಅರಿವು ಮೂಡಿಸುವಂತಹ ವಿಶಿಷ್ಟ ಬಗೆಯ ಕಾರ್ಯಕ್ರಮವನ್ನು ನಿರಂತರ ಮಾಡುತ್ತಿರುತ್ತೇವೆ. ಹಾಗಿರುವಾಗ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು' ಒಂದು ಬೃಹತ್ ಮಹಿಳಾ ಸಮಾವೇಶವನ್ನು ನಮ್ಮ ಧಾರವಾಡದಲ್ಲಿ ನಡೆಸುವುದರ ಪೂರ್ವಭಾವಿಯಾಗಿ ಮೂರ್‍ನಾಲ್ಕು ತಿಂಗಳ ಹಿಂದಿನಿಂದಲೇ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಸಿಸ್ಟರ್ ಲಿನೆಟ್ ತಾವೂ ಅದರಲ್ಲಿ ಒಬ್ಬ ಮುಖ್ಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರಲ್ಲದೇ ನಮ್ಮನ್ನೂ ಅವರೊಂದಿಗೆ ತೊಡಗಿಕೊಳ್ಳಲು ಹುರಿದುಂಬಿಸಿದರು. ಆ ಸಂದರ್ಭದಲ್ಲಿ ಒಕ್ಕೂಟದ ಮುಖ್ಯ ಸಭೆಗಳು ಹಾಗೂ ಬೇರೆ ಬೇರೆ ರೀತಿಯ ಕಾರ್ಯಕಲಾಪಗಳು ಬೇರೆ ಬೇರೆ ಸ್ಥಳಗಳಲ್ಲಿ ನಿರಂತರ ನಡೆಯುತ್ತಿದ್ದುದರಿಂದ ಅವುಗಳಲ್ಲಿ ಕೆಲವು ನಮ್ಮ ದೀಕ್ಷಾ ಸಂಸ್ಥೆಯ ಆಫೀಸಿನಲ್ಲಿಯೂ ನಡೆಯುತ್ತಿದ್ದವು. ಆಗೆಲ್ಲ ಒಕ್ಕೂಟದ ಹಿರಿಯ ಸಂಗಾತಿಗಳು ಬೇರೆ ಬೇರೆ ಊರಿನಿಂದ ಆಗಮಿಸಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಇವರೆಲ್ಲರ ಸಾಂಗತ್ಯ ನಮಗೆ ಹೊಸ ಬಗೆಯ ಅನುಭವಗಳನ್ನು ತಂದುಕೊಟ್ಟಿತು. ನಾವು ಕೂಡ ಆ ಒಕ್ಕೂಟದಲ್ಲಿ ಒಬ್ಬರಾಗಿ ಸೇರಿಕೊಂಡು ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ನಮಗೂ ತುಂಬಾ ಸಂತೋಷ ತಂದಿತ್ತು, ಯಾಕೆಂದರೆ ಒಕ್ಕೂಟದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಮತ್ತು ಅತ್ಯಾಚಾರಗಳ ಕುರಿತು ಎಲ್ಲ ವಿಧದಿಂದಲೂ ದನಿಯೆತ್ತುವ ಕಾರ್ಯಕ್ರಮಗಳು ಬಿರುಸಿನಿಂದ ನಡೆಯುತ್ತಿದ್ದವು. ಅವುಗಳಲ್ಲಿ ನಮಗೆ ತುಂಬಾ ಇಷ್ಟವಾದ ಕಾರ್ಯಕ್ರಮವೆಂದರೆ 'ಅರಿವಿನ ಪಯಣ' ಕಾರ್ಯಕ್ರಮವಾಗಿತ್ತು.

ಅದು ನಮಗೆ ಯಾಕೆ ಇಷ್ಟವಾಗಿತ್ತೆಂದರೆ, ಅದರಲ್ಲಿ ಚಿಕ್ಕ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಲಿಂಗ ಅಸಮಾನತೆ, ಜಾತಿ ತಾರತಮ್ಯ, ವರ್ಣಭೇದ, ಬಡವ–ಬಲ್ಲಿದ, ಜಾಣ–ದಡ್ಡ, ಕೆಲಸದಲ್ಲಿ ಮೇಲು ಕೀಳೆಂಬ ತಾರತಮ್ಯ ಮುಂತಾದ ವಿಷಯಗಳ ಕುರಿತಾಗಿ ಜಾಗೃತಿ ಮೂಡಿಸುವ ಅನೇಕ ಹಾಡು, ಕತೆ ನಾಟಕಗಳಿದ್ದವು. ಮುಖ್ಯವಾಗಿ ಪೋಕ್ಸೋ ಕಾಯ್ದೆಯ ಕುರಿತು ವಿದ್ಯಾರ್ಥಿನಿಯರಲ್ಲಿ ತಿಳಿವಳಿಕೆ ಮೂಡಿಸುವ ಸನ್ನಿವೇಶಗಳೂ ಇದ್ದವು. ಕಪ್ಪು ಬಲೂನು ನಾಟಕ, ಬೆವರಿನ ಕತೆ, ಯಾವುದು ನಿಜವಾದ ಮೆರಿಟ್, ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ ಹಾಡು, ಕುಲ ಕುಲವೆಂದು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹೀಗಳೆಯುವುದು, ನೀಲಿ ರಿಬ್ಬನ್ ಮುಂತಾದ ನಾಟಕಗಳನ್ನೂ ಒಳಗೊಂಡಿತ್ತು. ಈ ಹಾಡು, ನಾಟಕ, ಕತೆಗಳನ್ನಿಟ್ಟುಕೊಂಡು ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾಡಲಾಯಿತು. ಪೋಕ್ಸೋ ಕಾಯಿದೆಯ ಕುರಿತು ಮಕ್ಕಳಿಗೆ ಹೆಚ್ಚು ಗೊತ್ತಿರಲಿಲ್ಲ. ಅದನ್ನು ಕೇಳಿದ ಮೇಲೆ ಮಕ್ಕಳು ನಮಗೂ ಒಂದು ಕಾನೂನು ಇದೆ ಎಂದು ತಿಳಿದುಕೊಂಡರು. ಮುಟ್ಟಿನ ಕುರಿತು ಹೆಮ್ಮೆ ಪಡಬೇಕು ಹೊರತು ಮುಜುಗರ ಪಡುವುದಲ್ಲ ಎಂದು ಅವರಿಗೆ ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ ಎಂಬ ಹಾಡಿನ ಮೂಲಕ ತಿಳಿಸಿಕೊಡಲಾಯಿತು. ಜೊತೆಗೆ ಜಾತಿ ತಾರತಮ್ಯ, ಲಿಂಗ ಅಸಮಾನತೆ ಕುರಿತಾಗಿ ನಾಟಕದ ಮುಖಾಂತರವೇ ಪ್ರಸ್ತುತ ಪಡಿಸುತ್ತಿದ್ವಿ. ನಾಟಕ ಕತೆ ಹಾಡಿನ ಮೂಲಕ ಹೇಳಿದ್ದು ಮಕ್ಕಳಿಗೆ ಹೆಚ್ಚೆಚ್ಚು ಇಷ್ಟವಾದದ್ದು ಕಂಡುಬಂತು.

ಆ ವೇಳೆಯಲ್ಲಿ ನಾವು ಸಿಸ್ಟರ್ ಲಿನೆಟ್ ಹಾಗೂ ಉಳಿದ ಕೆಲ ಸಂಗಾತಿಗಳ ಜೊತೆಗೆ ಗುಂಪು ಗುಂಪಾಗಿ ಹೋಗಿ, ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೂ ನಾವು ಇದೇ ರೀತಿಯ 'ಅರಿವಿನ ಪಯಣ' ಕಾರ್ಯಕ್ರಮ ಮಾಡಿದೆವು. ಸಮಾಜ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಾಗಿದ್ದು, ಅವರೇ ಮುಂದಿನ ದಿನಗಳಲ್ಲಿ ಮಕ್ಕಳ ಜೊತೆಯಲ್ಲಿ ಕೆಲಸ ಮಾಡುವ ಸಂದರ್ಭ ಬರುವುದರಿಂದ ಅವರಿಗೆ ಪೋಕ್ಸೋ ಕಾಯ್ದೆಯ ಕುರಿತು ಸಂಪೂರ್ಣವಾಗಿ ತಿಳಿಸಿ ಹೇಳಲಾಯಿತು. ಕುಸುಮಳ ಕತೆ ಮತ್ತು ಕಪ್ಪು ಬಲೂನು ಕತೆಗಳನ್ನು ಕೇಳಿ ಅವರು ಆಶ್ಚರ್ಯಗೊಂಡರು ಮತ್ತು ದಿನನಿತ್ಯದ ಜೀವನದಲ್ಲಿ ಈ ರೀತಿಯ ಘಟನೆಗಳು ನಡೆಯುತ್ತವೆ ಎಂದು ಹಂಚಿಕೊಂಡರು. ನಾವು ಅರಿವಿನ ಪಯಣ ಮಾಡಿದ ಕಡೆಗೆಲ್ಲ ನೀಲಿ ರಿಬ್ಬನ್ ನಾಟಕವನ್ನು ತುಂಬಾ ತನ್ಮಯತೆಯಿಂದ ಮಕ್ಕಳು ವೀಕ್ಷಿಸುತ್ತಿದ್ದರು. ಇಲ್ಲಿ ಆ ನಾಟಕವನ್ನು ಮಾಡುವ ಜವಾಬ್ದಾರಿ ನನಗೆ ಕೊಟ್ಟಿದ್ದರು. ಅದಕ್ಕೂ ಮೊದಲು ನಾವು ಸಿಸ್ಟರ್ ಲಿನೆಟ್ ಮನೆಯಲ್ಲಿ ತುಂಬಾ ಅಭ್ಯಾಸ ನಡೆಸಿದ್ದೆವು. ನಾನು ಈ ಮೊದಲು ಎಲ್ಲಿಯೂ ಹಾಗೆ ನಾಟಕವನ್ನು ಮಾಡಿರಲಿಲ್ಲ. ಹೇಗೆ ಮಾಡುವುದು, ಎಲ್ಲಿ ತಪ್ಪುತ್ತೋ, ಏನಾಗುತ್ತೋ ಎಂಬ ಗೊಂದಲದಲ್ಲೇ ಮೊದಲ ಬಾರಿ ನಾಟಕದ ಡೈಲಾಗ್ ಹೇಳಿದ್ದೆ. ಆದರೂ ನನಗೆ ಶಾರದಾ ಮೇಡಂ ಮತ್ತು ಲಿನೆಟ್ ಮೇಡಂ ಅವರು ತುಂಬ ಧೈರ್ಯ ತುಂಬಿದರು. ನಾನು ಮೊದಲ ಸಾರಿ ವೇದಿಕೆಯ ಮೇಲೆ ನಾಟಕವನ್ನು ಮಾಡಿದ್ದು ನನಗೆ ಗೊತ್ತಿಲ್ಲದೇ ನನ್ನಲ್ಲಿ ಒಂದು ಬಗೆಯ ಆತ್ಮವಿಶ್ವಾಸವನ್ನು ತುಂಬಿತ್ತು. ಅಲ್ಲಿಯ ಇಬ್ಬರು ವಿದ್ಯಾರ್ಥಿಗಳು ಕಾರ್ಯಕ್ರಮ ಮುಗಿದ ಮೇಲೆ ನನ್ನ ಬಳಿ ಬಂದು 'ನಾಟಕ ಚೆನ್ನಾಗಿ ಮಾಡಿದಿರಿ' ಅಂತ ಖುಷಿ ಹಂಚಿಕೊಂಡರು. ಅದಕ್ಕೆ ನಾನು ಸಂಕೋಚದಿಂದಲೇ 'ಮೊದಲನೇ ಸಾರಿ ಮಾಡಿದ್ದು' ಅಂದಿದ್ದೆ. 'ಆದರೂ ಪರವಾಗಿಲ್ಲ ಚೆನ್ನಾಗೇ ಮಾಡಿದಿರಿ' ಅಂತ ಮೆಚ್ಚಿಗೆ ವ್ಯಕ್ತಪಡಿಸಿದರು. ಹೀಗೆ ನಾವು ಬೇರೆ ಬೇರೆ ಕಡೆಗಳಲ್ಲಿ ಅರಿವಿನ ಪಯಣ ಮಾಡಿದ್ದರೂ, ನಮಗೆ ಈ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ವಿದ್ಯಾರ್ಥಿನಿಯರು ತುಂಬಾ ಹಚ್ಚಿಕೊಂಡು 'ನಾವೂ ನಿಮ್ಮ ಜೊತೆಗೆ ಕೈಜೋಡಿಸುತ್ತೇವೆ' ಎಂದು ಹೇಳಿದರು. ಹಾಗಾಗಿ ಮುಂದೆ ಮಾರ್ಚ್ ಸಮಾವೇಶದ ಕೆಲ ದಿನಗಳ ಮುಂಚೆ ನಾವು ವಿಶ್ವವಿದ್ಯಾಲಯ ಆವರಣದಲ್ಲಿಯೇ ಸಾಯಂಕಾಲದ ಹೊತ್ತಿಗೆ 'ವಿಮೆನ್ ಇನ್ ಬ್ಲ್ಯಾಕ್' ಎಂಬ ಕಾರ್ಯಕ್ರಮ ಮಾಡಿದೆವು. ನಮ್ಮ ಅರಿವಿನ ಪಯಣ ಕಾರ್ಯಕ್ರಮದಲ್ಲಿ ಖುಷಿ ಹಂಚಿಕೊಂಡ ವಿದ್ಯಾರ್ಥಿನಿಯರೆಲ್ಲರೂ ವಿಮೆನ್ ಇನ್ ಬ್ಲ್ಯಾಕ್‌ನಲ್ಲಿ ಭಾಗವಹಿಸಿದ್ದು ನಮಗೆ ಸಂತೋಷವಾಯಿತು. ನಾವು ಮಾಡಿದ ಅರಿವಿನ ಪಯಣ ಇವರ ಮಟ್ಟಿಗೆ ಉಪಯುಕ್ತವಾಯಿತು ಅಂತ ನಮಗೂ ಸಮಾಧಾನವಾಯಿತು.

ಆ ನಂತರ ನಮ್ಮ ಗುಂಪು ಸಮಾಜ ಕಲ್ಯಾಣ ಇಲಾಖೆಯ ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಯರ ವಸತಿನಿಲಯದ ಬಿಸಿಎಂ ಹಾಸ್ಟೇಲಿನಲ್ಲಿಯೂ ಇನ್ನೊಂದು ದಿನ ಇದೇ ರೀತಿಯ ಅರಿವಿನ ಪಯಣ ಕಾರ್ಯಕ್ರಮ ನಡೆಸಿತ್ತು. ಅದರಲ್ಲಿಯೂ ವಿದ್ಯಾರ್ಥಿಗಳಿಗೆ ಲಿಂಗ ತಾರತಮ್ಯ, ಜಾತಿ ತಾರತಮ್ಯ, ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಮುಟ್ಟಿನ ಕುರಿತು, ನೀಲಿ ರಿಬ್ಬನ್ ಹೀಗೆ ಅಲ್ಲಿಯ ವಿದ್ಯಾರ್ಥಿಗಳಿಗೆ ಹಾಡು ಮತ್ತು ನಾಟಕದ ಮೂಲಕ ಅರಿವನ್ನು ಮೂಡಿಸಲು ಯತ್ನಿಸಿದೆವು. ಅಲ್ಲಿಯ ಇಬ್ಬರು ವಿದ್ಯಾರ್ಥಿನಿಯರು ನೀಲಿ ರಿಬ್ಬನ್ ನಾಟಕವನ್ನು ನೋಡಿ ಕಣ್ಣೀರು ತಂದುಕೊಂಡಿದ್ದರು. 'ಹೌದು ಈ ರೀತಿಯ ದೌರ್ಜನ್ಯ ನಮ್ಮ ಸುತ್ತಲೇ ಮಹಿಳೆಯರ ಮೇಲೆ ಸಾಕಷ್ಟು ಆಗುತ್ತಿವೆ, ನಮ್ಮ ಮೇಲೆಯೇ ದೌರ್ಜನ್ಯ ಆಗುತ್ತಿದ್ದರೂ ನಾವು ಬಾಯಿ ಮುಚ್ಚಿ ಕುಳಿತುಕೊಳ್ಳುವ ಪರಿಸ್ಥಿತಿಯೇ ಹೆಚ್ಚಾಗಿದೆ, ನಮಗೆ ನೀವೆಲ್ಲ ಹೇಳಿದ್ದನ್ನು ಕೇಳಿದಾಗ ಸ್ವಲ್ಪ ಧೈರ್ಯ ಬಂದಂತಾಯಿತು' ಎಂದು ತಿಳಿಸಿದರು.ನಮಗೆ ಅಲ್ಲಿಯ ಹಾಸ್ಟೇಲಿನ ವಾರ್ಡನ್, ಶಿಲ್ಪಾ ಪಾಟೀಲ ಅವರು ತುಂಬಾ ಸಹಕಾರ ನೀಡಿದರು ಮತ್ತು ದಯವಿಟ್ಟು ತಮ್ಮ ಹಾಸ್ಟೇಲಿನ ಇನ್ನೂ ಬೇರೆ ಕಡೆಗಳಲ್ಲಿ ಈ ಕಾರ್ಯಕ್ರಮ ಮಾಡಿ ಎಂದು ಕೇಳಿಕೊಂಡರು. ಅಲ್ಲಿ ನಾವು ಅಲ್ಲಿಯ ವಿದ್ಯಾರ್ಥಿನಿಯರಿಗೆ 'ಒಂದಲ್ಲಾ ಒಂದು ದಿನ ಈ ನೆಲದ ಹೆಣ್ಣುಗಳು ಮೆರವಣಿಗೆ ಹೊರಡುತ್ತಾರೆ. . .' ಎಂಬ ಹಾಡನ್ನು ಕಲಿಸಿಕೊಟ್ಟೆವು. ಇದರ ಅರ್ಥ ಒಂದಲ್ಲ ಒಂದು ರೀತಿಯ ತೊಂದರೆಗಳನ್ನು ನಮಗರಿವಿಲ್ಲದೇ ಅನುಭವಿಸುತ್ತಿರುವ ನಾವು ಮಹಿಳೆಯರು, ಇದರಿಂದ ಹೊರಬಂದು ಸಮಾನತೆಯ ರಾಜ್ಯವನ್ನು ಕಟ್ಟಲು ಜೊತೆಯಾಗುತ್ತೇವೆ ಎಂದು ಹೇಳಿದೆವು. ಇಲ್ಲಿ ಸುಮಾರು 90 ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಬೇರೆ ಕಡೆಗಳಲ್ಲಿ ಹೋಲಿಸಿದಾಗ ಇಲ್ಲಿಯ ವಿದ್ಯಾರ್ಥಿಗಳ ಸಹಕಾರ ಮತ್ತು ಆಸಕ್ತಿಯನ್ನು ನೋಡಿ ನಮಗೂ ತುಂಬಾ ಸಂತೋಷವಾಯಿತು. ಹೀಗೆಯೇ ಅನೇಕ ಕಡೆಗಳಲ್ಲಿ ನಮ್ಮ ಅರಿವಿನ ಪಯಣ ನಡೆಯಿತು. ಒಟ್ಟಾರೆಯಾಗಿ ಧಾರವಾಡದ 80 ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇದರ ಲಾಭ ಪಡೆದುಕೊಂಡರು.

ನಮ್ಮ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಅನಿಸಿಕೆ ನಮಗೆ ತುಂಬಾ ಮುಖ್ಯವೆನಿಸಿತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅಷ್ಟರವರೆಗೆ ನಮ್ಮ ವಿದ್ಯಾರ್ಥಿನಿಯರಿಗೆ ಪೋಕ್ಸೋ ಕಾಯ್ದೆಯ ಕುರಿತು ತಿಳಿದಿರಲಿಲ್ಲ, ಅವರಿಗಾಗಿಯೇ ಹೀಗೊಂದು ಪ್ರಮುಖವಾದ ಕಾನೂನು ರಚಿತವಾಗಿದೆಯೆಂದೇ ಅವರಿಗೆ ಗೊತ್ತಿರಲಿಲ್ಲ. 'ನಮ್ಮ ಮೇಲೆ ಅಲ್ಲಿ ಇಲ್ಲಿ ದೌರ್ಜನ್ಯಗಳು ನಡೆಯುತ್ತಿದ್ದರೂ ನಾವು ಬಾಯಿಮುಚ್ಚಿಕೊಂಡು ಇರಬೇಕಾದಂತಹ ಪರಿಸ್ಥಿತಿಯಿತ್ತು, ಮುಂದೆ ನಾವು ಅದನ್ನು ಹೇಳಿಕೊಳ್ಳುವ ಧೈರ್ಯ ತೋರುತ್ತೇವೆ' ಎಂದು ಕೆಲ ವಿದ್ಯಾರ್ಥಿನಿಯರು ಹೇಳಿಕೊಂಡರು. ನೀಲಿ ರಿಬ್ಬನ್ ನಾಟಕವು ಮನೆ ಮನೆಗಳಲ್ಲಿ ಗಂಡು ಹೆಣ್ಣಿನ ಮಧ್ಯೆ ತೋರುವ ಭೇದಭಾವ ಮತ್ತು ವಿಶೇಷವಾಗಿ ಹುಡುಗಿಯರ ಮೇಲೆ ಗುಟ್ಟಾಗಿ ನಡೆಯುವ ದೌರ್ಜನ್ಯಗಳನ್ನು ತೋರಿಸುತ್ತದೆ. ಅದನ್ನು ವೀಕ್ಷಿಸಿದ ಕೆಲ ವಿದ್ಯಾರ್ಥಿನಿಯರು 'ಇನ್ನು ಮೇಲೆ ನಾವು ನಮ್ಮ ಮೇಲಾಗಲೀ ಅಥವಾ ನಮ್ಮ ನೆರೆ ಹೊರೆಯ ಗೆಳತಿಯರ ಮೇಲೆ ಯಾವುದೇ ರೀತಿಯ ದೌರ್ಜನ್ಯಕ್ಕೆ ಒಳಗಾಗುವಂತಹ ಸುಳಿವು ಸಿಕ್ಕರೂ ಅದರ ವಿರುದ್ಧ ದನಿ ಎತ್ತಬೇಕು ಎಂದು ಈ ನೀಲಿ ರಿಬ್ಬನ್ ನಾಟಕದಿಂದ ತಿಳಿಯಿತು' ಎಂಬುದನ್ನು ನಮ್ಮ ಬಳಿ ಹೇಳಿಕೊಂಡರು.

ಒಂದು ಗಂಟೆಯ ಅವಧಿಯ ಅರಿವಿನ ಪಯಣ ಕಾರ್ಯಕ್ರಮದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ, ಮನೆ ಶಾಲೆ ರಸ್ತೆ ಕಾಲೇಜು ಹಾಗೂ ಉದ್ಯೋಗ ಮಾಡುವ ಸ್ಥಳಗಳಲ್ಲೆಲ್ಲ ಯಾವ ರೀತಿಯ ದೈಹಿಕ ಹಾಗೂ ಮಾನಸಿಕ ದೌರ್ಜನ್ಯಗಳು ನಡೆಯುತ್ತವೆ ಎಂಬುದನ್ನು ಅವರಿಗೆ ಉದಾಹರಣೆಗಳ ಮೂಲಕ ನೆನಪಿಸಲಾಯಿತು. ನಾವು ಮಾಡಿದ ಇಂಥ ಕಾರ್ಯಕ್ರಮಗಳು ಶಾಲೆ ಮತ್ತು ಕಾಲೇಜುಗಳಲ್ಲಿ ಅತ್ಯವಶ್ಯಕವಾಗಿವೆ. ವರ್ಣ ತಾರತಮ್ಯದ ಬಗ್ಗೆಯಂತೂ ತುಂಬಾ ಕೀಳರಿಮೆ ಇದ್ದದ್ದು ಕಂಡು ಬಂತು. ನಮ್ಮ ಕಾರ್ಯಕ್ರಮದಲ್ಲಿ ಬರುವ ಕಪ್ಪು ಬಲೂನು ಕತೆಯನ್ನು ಕೇಳಿದಾಗ ಆ ಕುರಿತು ತಮಗಾದ ಅವಮಾನಗಳನ್ನು ಕೆಲವು ವಿದ್ಯಾರ್ಥಿಗಳು ನಮ್ಮ ಬಳಿ ಹಂಚಿಕೊಂಡರು. 'ಇದೀಗ ನಾವೆಲ್ಲ ಈ ಬೇಸರದಿಂದ ಹೊರಬಂದಿದ್ದೇವೆ, ಬಣ್ಣ ಮುಖ್ಯವಲ್ಲ, ನಮ್ಮಲ್ಲಿರುವ ಸಾಮರ್ಥ್ಯ ಮುಖ್ಯ ಎಂದು ಅರಿತಿದ್ದೇವೆ' ಎಂದು ವಿದ್ಯಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡದ್ದು ನಮಗೆ ಒಂದು ರೀತಿಯ ಸಾರ್ಥಕದ ಮನೋಭಾವ ತಂದಿದೆ.

ಮಕ್ಕಳಿಗೆ ಮತ್ತು ಮಹಿಳೆಯರಿಗೆ ನೆಮ್ಮದಿಯಾಗಿ ಬದುಕುವದಕ್ಕೆ ದಾರಿದೀಪವಾಗುವ ಅರಿವು ಮೂಡಿಸುವ ಇಂತಹ ಕಾರ್ಯಕ್ರಮಕ್ಕೆ ನಾವು ಸೇರಿದ್ದು ತುಂಬ ಸಂತೋಷವೆನಿಸಿದೆ. ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟಕ್ಕೆ ನಮ್ಮ ಅನಂತ ನಮಸ್ಕಾರಗಳು. ಈ ಅರಿವನ್ನು ಮೂಡಿಸುವ ಅರಿವಿನ ಪಯಣ ಹೀಗೇ ಸಾಗುತ್ತ ಇರಲಿ, ಮಹಿಳೆ ಮೇಲೆ ಆಗುತ್ತಿರುವ ದೌರ್ಜನ್ಯ ತಡೆಗಟ್ಟುವಲ್ಲಿ ನಾವೆಲ್ಲ ಕೈ ಜೋಡಿಸೋಣ.

*(ದೀಕ್ಷಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸವಿತಾ ಮತ್ತು ವಿದ್ಯಾರ್ಥಿನಿಯಾಗಿ ಲಿನೆಟ್ ಅವರ ಜೊತೆ ಇರುವ ಭಾರತಿ ಇಬ್ಬರೂ ಅರಿವಿನ ಪಯಣದಲ್ಲಿ ಅರಳಿದ ಹೂಗಳು.)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ತಾರತಮ್ಯದಿಂದ ದೂರ ದೂರ

**– ಅಕ್ಕಮ್ಮ ಅರಗಂಜಿ**

ಜನಿಸಿದ ಪ್ರತಿಯೊಂದು ಮನುಷ್ಯನೂ ಒಂದಿಲ್ಲೊಂದು ತಾರತಮ್ಯವನ್ನು ಅನುಭವಿಸಿರುತ್ತಾನೆ/ಳೆ. ತಾರತಮ್ಯದ ಕಿರುಕುಳಗಳು ಹೊರನೋಟಕ್ಕೆ ಕಾಣುವುದಕ್ಕಿಂತ ಹೆಚ್ಚಿಗೆ ಕಾಣಲಾಗದಂತೆ ಒಳಗೊಳಗೇ ನಡೆಯುತ್ತಿರುತ್ತವೆ. ಅದರಲ್ಲೂ ಹೆಣ್ಣೆಂದರೆ ಮುಗಿಯಿತು. ಅವಳಿಗೆ ಎಲ್ಲಿಲ್ಲದ ಕಟ್ಟಳೆಗಳು, ನೀತಿ ನಿಯಮಗಳು, 'ನೀನು ಹೀಗೆ ಇರಬೇಕು, ಹಾಗೆ ಮಾಡಬಾರದು' ಎಂದು.

ಮಗಳು ಬೆಳೆಯುತ್ತಿದ್ದಂತೆ ತಾರತಮ್ಯ, ಹಿಂಸೆ, ಅದರ ಹಿಂದೆ ದೌರ್ಜನ್ಯ, ಅದರ ಹಿಂದೆ ಅತ್ಯಾಚಾರ ಅವಮಾನಗಳು ಕಟ್ಟಿಟ್ಟ ಬುತ್ತಿ. ಈ ಪ್ರಾಂತ್ಯ, ಆ ಪ್ರಾಂತ್ಯ, ಎನ್ನದೆ, ಎಲ್ಲ ಜಾತಿ ಎಲ್ಲ ವರ್ಗಗಳಲ್ಲೂ ಶ್ರೀಮಂತ ಬಡವರಲ್ಲೂ ಶತಶತಮಾನಗಳಿಂದ ಬಂದಿರುವಂಥಾದ್ದು ಒಮ್ಮೆಗೆ ಹೋಗುವುದೂ ಇಲ್ಲ. ಆದರೆ ನಮ್ಮ ಮನೆಗಳಿಂದಲೇ, ನಮ್ಮ ಮಕ್ಕಳಿಂದಲೇ ಬದಲಾವಣೆಯನ್ನು ತರಲು ಪ್ರಾರಂಭಿಸಿದಾಗ ಮಾತ್ರ ನಿಧಾನವಾಗಿ ಬದಲಾವಣೆ ನಮ್ಮ ಮನೆಯನ್ನು ಪ್ರವೇಶಿಸುತ್ತದೆ.

2013ರಲ್ಲಿ 'ಇನ್ನು ಸಾಕು' ಘೋಷಣೆಯೊಂದಿಗೆ ಮಂಗಳೂರಿನಲ್ಲಿ ಮಹಿಳಾ ಸಮಾವೇಶವನ್ನು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಸಂಘಟಿಸಿತು. ಈ ವರ್ಷ ನಮ್ಮ ಧಾರವಾಡದಲ್ಲಿ ಸಮಾವೇಶ ಆಗುವುದೆಂದು ತೀರ್ಮಾನವಾಗಿದ್ದು ಕಳೆದ ವರ್ಷ ಶಿವಮೊಗ್ಗದ ಸಮಾವೇಶದಲ್ಲಿ. ಸಮಾವೇಶಕ್ಕೆ ಪೂರಕವಾಗಿ ಎಲ್ಲಾ ತಾಲೂಕುಗಳಲ್ಲಿಯೂ 'ಅರಿವಿನ ಪಯಣ' ಮಾಡುವುದೆಂದು ನಿರ್ಧಾರವಾಗಿ ಧಾರವಾಡದ ಗುಂಪು ನಾಲ್ಕಾರು ತಂಡಗಳಾಗಿ ಹೊರಟಾಗ ಒಂದು ತಂಡದಲ್ಲಿ ನಾನೂ ಕೂಡ ಸೇರಿಕೊಂಡೆ. ಹಾಡು, ಏಕಪಾತ್ರಾಭಿನಯದ ಸಣ್ಣ ತರಬೇತಿಯೂ ಆಯಿತು.

ಮಕ್ಕಳಿಗೆ ಪೋಕ್ಸೋ ಕಾಯಿದೆಯ ಬಗ್ಗೆ ಹೇಳುವ ಮುನ್ನ ಒಂದು ಪುಟ್ಟ ಕತೆಯನ್ನು ಹೇಳಲಾಗುತ್ತದೆ. ಒಬ್ಬ ಪುಟ್ಟ ಹುಡುಗಿ ಮನೆ ಪಾಠ ಹೇಳಿಸಿಕೊಳ್ಳಲು ಪರಿಚಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇರುವ ಅಂಕಲ್ ಬಳಿಗೆ ಹೋಗುತ್ತಿದ್ದಾಗ ಆಕೆಯ ಮೇಲೆ ಆ ಅಂಕಲ್ ಪ್ರಯತ್ನಿಸುವ ಲೈಂಗಿಕ ದೌರ್ಜನ್ಯ. ಆ ಹುಡುಗಿ ತನ್ನ ತಾಯಿಯ ಎದುರು ಹೇಳಲು ಸೋತು ಮಂಕಾದಾಗ ಗೆಳತಿಯರು ಸಹಾಯಕ್ಕೆ ಬರುವುದು, ತಾವೆಲ್ಲರೂ ಸೇರಿ ಆಕೆಯ ಜೊತೆ ಟ್ಯೂಷನ್ನಿಗೆ ಹೋಗಿ ಕುಳಿತುಕೊಳ್ಳುವುದರ ಮೂಲಕ ಆಕೆಯನ್ನು ದೌರ್ಜನ್ಯದಿಂದ ಬಚಾವು ಮಾಡುವುದು... ಕತೆಯ ಸಾರಾಂಶ. ದೌರ್ಜನ್ಯ ನಡೆದಾಗ ಯಾರ ಮುಂದಾದರೂ ಹೇಳಬೇಕು, ಹೇಳಿದಾಗ ದೌರ್ಜನ್ಯ ಮಾಡಿದವನ ಮರ್ಯಾದೆ ಹೋಗುವುದೇ ಹೊರತು ಅನುಭವಿಸಿದವಳದಲ್ಲ ಎಂದು ವಿದ್ಯಾರ್ಥಿಗಳಿಗೆ ಕತೆಯ ಮೂಲಕ ಮನದಟ್ಟು ಮಾಡಿಸುವ ಪ್ರಯತ್ನ.

ಇಂಥ ಚೆಂದದ ಕತೆ, ಹಾಡುಗಳೊಂದಿಗೆ ನಡೆಯುವ ನಮ್ಮ ಸಂವಾದ ಕಾರ್ಯಕ್ರಮವನ್ನು ಶಾಲಾ ಕಾಲೇಜು ವಿದ್ಯಾರ್ಥಿಗಳು ತೆರೆದ ಹೃದಯದಿಂದ ಸ್ವಾಗತಿಸಿದರು. ಕೆಲವರು ತಮ್ಮ ಜೀವನದಲ್ಲಿ ನಡೆದ ಘಟನೆಗಳನ್ನು ಹಂಚಿಕೊಂಡರು. ತಮ್ಮ ದುಗುಡವನ್ನು ತೆರೆದಿಟ್ಟರು. ತಮ್ಮ ಪುಟ್ಟ ಹೃದಯಗಳಲ್ಲಿ ಅಡಗಿದ್ದ ನೋವನ್ನು ತೋಡಿಕೊಂಡ ಸನ್ನಿವೇಶಗಳಿವೆ. ಒಂದು ಗಂಟೆ ಎಂದು ಕೇಳಿಕೊಂಡು ಹೋದ ಕಾರ್ಯಕ್ರಮ ಎರಡು ಮೂರು ತಾಸುಗಳವರೆಗೂ ಸಾಗಿದ್ದುಂಟು. ಎದುರಿಗಿರುವವರಿಗೆ ಅರಿವನ್ನು ಕೊಡುತ್ತ ಕೊಡುತ್ತ ನಾನು ಸ್ವತಃ ಅನೇಕ ವಿಷಯಗಳನ್ನು ಕಲಿತೆ. ಹಿರಿಯರು ಹಾಕಿದ ಕಟ್ಟಳೆಗಳಿಂದ ಹೊರಬರಲು ನನಗೆ ಇನ್ನೂ ಕಷ್ಟವಾಗುತ್ತಿದ್ದರೂ ತಾರತಮ್ಯವನ್ನು ಪ್ರಶ್ನಿಸುವುದನ್ನು ರೂಢಿಸಿಕೊಳ್ಳುತ್ತಿದ್ದೇನೆ. ಈ ಅರಿವಿನ ಪಯಣದಲ್ಲಿ ನಾನು ಸ್ವತಃ ತಾರತಮ್ಯದಿಂದ ದೂರ ದೂರ ಸಾಗುತ್ತಿದ್ದೇನೆ. ಬನ್ನಿ, ನೀವೂ ನನ್ನೊಂದಿಗೆ ಹೆಜ್ಜೆ ಹಾಕಿ.

*(ಎರಡು ಮಕ್ಕಳ ತಾಯಿಯಾಗಿರುವ ಅಕ್ಕಮ್ಮ ಬಲು ಉತ್ಸಾಹದಿಂದ ಅರಿವಿನ ಪಯಣ ತಂಡದಲ್ಲಿ ಸೇರಿಕೊಂಡರು. ಹಾಡು, ನಾಟಕ, ಕತೆ ಹೇಳುವುದು ಯಾವುದಕ್ಕೂ ಸೈ. ಮಾಡುತ್ತ ಮಾಡುತ್ತ ಸಂಘಟನೆಯ ಕಾರ್ಯದಲ್ಲೂ ತೊಡಗಿಕೊಂಡರು.)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನೆಡೆಗೆ ನನ್ನ ಪಯಣ

– ದಿಲಶಾದ ಸುತಾರ

ಅನಾದಿಕಾಲದಿಂದಲೂ ಮಹಿಳೆಯರ ಮೇಲೆ ಹಿಂಸೆ, ದೌರ್ಜನ್ಯಗಳು ನಡೆಯುತ್ತಲೇ ಬಂದಿವೆ. ಇದರೊಂದಿಗೆ ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿ ನೋಡುವ ಈ ದೇಶದಲ್ಲಿ ಅವಳ ಸ್ಥಾನಮಾನದ ಬಗ್ಗೆ ಬಿಡಿಸಿ ಹೇಳಬೇಕಾಗಿಲ್ಲ. ಹೆಣ್ಣು ಗಂಡಿನ ನಡುವೆ ಬೇಧಬಾವದ ಸಮಸ್ಯೆಗಳಂತೆಯೇ ಸಮಾಜದಲ್ಲಿ ವರ್ಗ ತಾರತಮ್ಯ, ಜಾತಿ ತಾರತಮ್ಯ, ಮೇಲು ಕೀಳು ಇವೆಲ್ಲವೂ ಸೇರಿ ಸಮಾಜವನ್ನು ಹೆಚ್ಚೆಚ್ಚು ಅಧೋಗತಿಗೆ ಎಳೆದೊಯ್ಯುತ್ತಿವೆ.

ಇಂಥ ಎಲ್ಲ ತಾರತಮ್ಯದ ವಿರುದ್ಧ ಮಹಿಳೆಯರು ಧ್ವನಿ ಎತ್ತಬೇಕು ಎನ್ನುವುದಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಹುಟ್ಟಿಕೊಂಡಿತು. ಅದರ ಪಯಣ ಸಾಗುತ್ತ ಸಾಗುತ್ತ ಈ ವರ್ಷ ಧಾರವಾಡಕ್ಕೆ ಬಂದು ತಲುಪಿದೆ. ಒಕ್ಕೂಟದ ಪಯಣದ ಒಂದು ಭಾಗವಾಗಿ 'ಅರಿವಿನ ಪಯಣ' ನನಗೆ ಸಿಕ್ಕಿದ್ದು ಒಂದು ಒಳ್ಳೆಯ ಅವಕಾಶ.

ಹೆಣ್ಣು ಗಂಡು ಮಕ್ಕಳನ್ನು ಬೆಳೆಸುವ ರೀತಿಯಲ್ಲೇ ತಾರತಮ್ಯ ಅಡಗಿದೆ ಎನ್ನುವ 'ಆಕೆಗೊಂದು ಥರ ಅವನಿಗೊಂದು ಥರ ಯಾಕೆ ಮಾಡಿದರೊ ಕಾಣೆ' ಹಾಡು ಹೇಳಿದಾಗ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಮುಸಿ ಮುಸಿ ನಗು. ಅದನ್ನೇ ಮಹಿಳೆಯರ ಮುಂದೆ ಹಾಡಿದಾಗ 'ಹೌದು ನಾವೆಲ್ಲ ಹೀಗೇ ಬೆಳೆದದ್ದು, ನಮ್ಮ ಮಕ್ಕಳಿಗೂ ಹೀಗೇ ಹೇಳುತ್ತೇವೆ, ಆದರೂ ಇಂದು ಬೇಧ ಭಾವ ಸಾಕಷ್ಟು ಕಡಿಮೆ ಆಗಿದೆ' ಎನ್ನುವರು.

ಅದರಲ್ಲಿ ನನ್ನದು 'ನೀಲಿ ರಿಬ್ಬನ್' ನಾಟಕದ ಏಕ ಪಾತ್ರಾಭಿನಯ ಮಾಡುವುದು. ಒಬ್ಬ ಹುಡುಗಿ ಬೆಳೆದು ದೊಡ್ಡವಳಾಗುವವರೆಗೆ ಅನುಭವಿಸಬಹುದಾದ ಅನೇಕ ಲೈಂಗಿಕ ದೌರ್ಜನ್ಯ ಮತ್ತು ಲಿಂಗ ತಾರತಮ್ಯಗಳನ್ನು ನಾನು ಮಾಡಿ ತೋರಿಸಬೇಕು. ಇಂಥ ಅನುಭವಗಳು ನಿಮಗೆ ಆಗಿಯೇ ಇಲ್ಲ ಎಂದು ಎದೆತಟ್ಟಿ ಹೇಳುವವರು ಯಾರಿದ್ದಾರೆ? ಎಂದು ಪ್ರೇಕ್ಷಕರಿಗೆ ನಾನು ಸವಾಲು ಹಾಕಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇಂಥದು ನಿಜವಾಗಿಯೂ ನಮ್ಮ ಮನೆಗಳಲ್ಲಿ, ನಮ್ಮ ಜೀವನದಲ್ಲಿ ನಡೆಯುತ್ತಿದೆ. ನಾವು ಬೆಳೆದದ್ದು ಇಂಥ ಕಟ್ಟುಪಾಡುಗಳ ಮಧ್ಯವೇ ಎಂದು ಹಲವಾರು ಮಹಿಳೆಯರು ಹಂಚಿಕೊಂಡರು. ಸುಂದರ ಬದುಕಿನ ಕನಸನ್ನು ಕಾಣುವ ಕಾಲೇಜು ವಿದ್ಯಾರ್ಥಿಗಳು ಸರಿ ಸಮಾನತೆ ಬೇಕು ಎಂದು ಹೇಳಿದ್ದಾರೆ. ಆದರೆ ಅಂಥ ಸಮಾನತೆ ಬರಬೇಕೆಂದರೆ ತಮ್ಮಲ್ಲೂ ಬದಲಾವಣೆ ಆಗಬೇಕು ಎಂದು ವಿವರಿಸಿದಾಗ ಅದು ಅವರಿಗೆ ಹೊಸ ವಿಚಾರ. ನನಗೂ ಕೂಡ. ಮೌನ ಮುರಿಯಬೇಕು. ನಮ್ಮ ಮೇಲೆ ದೌರ್ಜನ್ಯ ಪ್ರಯತ್ನಗಳು ನಡೆದಾಗ ಮಾತಾಡಬೇಕು ಎಂಬ ಸಂದೇಶವನ್ನು ನೀಡಿದಾಗ ಹಲವಾರು ವಿದ್ಯಾರ್ಥಿಗಳು, ಮಹಿಳೆಯರು ತಮ್ಮ ಮನಸ್ಸಿನ ವಿಚಾರಗಳನ್ನು ಹಂಚಿಕೊಳ್ಳಲು ಒಳ್ಳೆಯ ವೇದಿಕೆಯನ್ನು ಕೊಟ್ಟಿರಿ ಎಂದು ಹೇಳಿದ್ದಾರೆ. ಮನಸ್ಸಿನಲ್ಲಿ ಕೊರೆಯುತ್ತಿರುವ ಅನೇಕ ಪ್ರಶ್ನೆಗಳಿಗೆ ಇಂದು ಉತ್ತರ ಸಿಕ್ಕಿತು ಅಂದವರೂ ಇದ್ದಾರೆ.

*(ದಿಲಶಾದ ಸುತಾರ ಸಮಾಜ ಕಾರ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಒಬ್ಬ ಹಳ್ಳಿಯ ಯುವತಿ. 'ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಅರಿವಿನ ಪಯಣ ಕಾರ್ಯಕ್ರಮ ಶುರುವಾದಾಗ ವಾಲಂಟಿಯರ್ ಆಗಿ ಕೆಲಸ ಮಾಡಲು ಬಂದವಳು. ತನ್ನ ಅನುಭವವನ್ನಿಲ್ಲಿ ಹಂಚಿಕೊಂಡಿದ್ದಾಳೆ.)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅರಿವಿನತ್ತ ನನ್ನ ಪಯಣ

**– ರಾಜೇಶ್ವರಿ ಜೋಶಿ**

**ಕ**ಳೆದ ನವೆಂಬರ್ ತಿಂಗಳಿನಿಂದ ಧಾರವಾಡದಲ್ಲಿ ನಮಗೆಲ್ಲ ಸಂಭ್ರಮದ ವಾತಾವರಣ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಧಾರವಾಡದ ಸದಸ್ಯೆಯರೆಲ್ಲ 'ಅರಿವಿನ ಪಯಣ' ಎಂಬ ಲಿಂಗ ಸಂವೇದನೆಯ ಜಾಗೃತಿಗಾಗಿ ನಡೆಸುವ ಅಭಿಯಾನದಲ್ಲಿ ಪಾಲ್ಗೊಂಡಿದ್ದೆವು. ಅದು ಶಾಲೆ, ಕಾಲೇಜು, ಕೇರಿಗಳಿಗೆ ಹೋಗಿ ಮಾಡುವ ಒಂದು ತಾಸಿನ ಕಾರ್ಯಕ್ರಮ. ಅದರಲ್ಲಿ ಮನರಂಜನೆಯೂ ಇದೆ, ಚಿಂತನೆಯೂ ಇದೆ. ಅದರ ಸಲುವಾಗಿ ಜಾಗೃತಿ ಹಾಡುಗಳು, 'ನೀಲಿ ರಿಬ್ಬನ್' ನಾಟಕ ಪ್ರಾಕ್ಟೀಸ್ ಮಾಡಲು ನಾವೆಲ್ಲ ಶುರು ಹಚ್ಚಿಕೊಂಡೆವು. ಪ್ರತಿ ದಿನ ಎಲ್ಲರೂ ಭೇಟಿಯಾಗುವುದೇ ಮನಸ್ಸಿನಲ್ಲಿ ತಾಜಾತನವನ್ನು ಮೂಡಿಸುತ್ತಿತ್ತು. ಅರಿವಿನ ಪಯಣ ಕಾರ್ಯಕ್ರಮದ ಉದ್ಘಾಟನೆ ಆದದ್ದು ಧಾರವಾಡದ ಅಂಜುಮನ್ ಕಾಲೇಜಿನಲ್ಲಿ. ಅದೇ ದಿನ ಸಂಜೆ ಕರ್ನಾಟಕ ವಿಶ್ವ ವಿದ್ಯಾಲಯದ ಬಿ.ಎಮ್.ಸಿ ಹಾಸ್ಟೆಲ್‌ನಲ್ಲಿ ನಾನು 'ನೀಲಿ ರಿಬ್ಬನ್' ಏಕ ಪಾತ್ರಾಭಿನಯವನ್ನು ಮಾಡಿದೆ. ಒಂದಾದರೂ ನಾಟಕದಲ್ಲಿ ಅಭಿನಯಿಸಬೇಕೆಂಬ ನನ್ನ ಕನಸು ಆ ದಿನ ಕೈಗೂಡಿತ್ತು. ಕಾರ್ಯಕ್ರಮದಲ್ಲಿ ಹಾಜರಿದ್ದ ವಾಣಿ ಪೆರಿಯೋಡಿಯವರು ಅಭಿನಯ ಸಖತ್ ಆಗಿತ್ತು ಎಂದಾಗ, ಮಾರನೇ ದಿನ ದು. ಸರಸ್ವತಿಯವರು ಫೋನ್ ಕರೆ ಮಾಡಿ'ತುಂಬ ಚಂದ ಆಯ್ತಂತೆ, ನೀಲಿ ರಿಬ್ಬನ್ನು' ಎಂದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ.

ಅಳ್ನಾವರ ತಾಲೂಕಿನ ಹಳ್ಳಿಗಳಲ್ಲಿ ಅರಿವಿನ ಪಯಣ ಮಾಡುವಾಗ ಪೋಕ್ಸೋ ಕಾನೂನು ಕುರಿತು ಹೇಳುವುದು ಸಾಮಾನ್ಯವಾಗಿ ನನ್ನ ಜವಾಬ್ದಾರಿಯಾಗಿತ್ತು. ಕಾನೂನಿನ ಕುರಿತು ಹೇಳುವಾಗ ಲೈಂಗಿಕ ದೌರ್ಜನ್ಯ ಅಂದರೇನು, ಯಾವ ಯಾವ ತರಹದ ಲೈಂಗಿಕ ದೌರ್ಜನ್ಯಗಳು ಮಕ್ಕಳ ಮೇಲಾಗುತ್ತವೆ ಎಂದು ಮಕ್ಕಳೆದುರು ಹೇಳುವುದು ಮೊದಮೊದಲು ಸವಾಲಿನ ವಿಷಯವಾಗಿತ್ತು. ಎಲ್ಲಿ ಮಕ್ಕಳು ಗುಸು ಗುಸು ಶುರು ಹಚ್ಚಿಕೊಂಡು ನಾನು ಹೇಳಬೇಕಾದ್ದನ್ನು ತಿಳಿದುಕೊಳ್ಳದೇ ಹೋಗುವರೋ ಎಂಬ ಅನುಮಾನವಿತ್ತು. ಆದರೆ ಹಾಗೆ ಮಾಡದೇ ಎಲ್ಲ ಶಾಲೆಗಳ ಮಕ್ಕಳು ಈ ವಿಷಯವನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಗಮನವಿಟ್ಟು ಕೇಳಿದಾಗ ಇಂಥ ವಿಷಯಗಳನ್ನು ಮಕ್ಕಳೊಂದಿಗೆ ಮಾತನಾಡುವ ಅಗತ್ಯತೆಯ ಅರಿವು ನನಗಾಗಿತ್ತು.

ಸಮುದಾಯದ ಮಹಿಳೆಯರೊಂದಿಗಿನ ಅರಿವಿನ ಪಯಣ ಕಾರ್ಯಕ್ರಮದಲ್ಲಿ ನಾರಾಯಣಪುರದ ಗೃಹ ಕಾರ್ಮಿಕ ಮಹಿಳೆಯರೊಂದಿಗಿನ ಸಂವಾದ, ಗಣೇಶ ನಗರದ ಗೌಳಿ ಮಹಿಳೆಯರೊಂದಿಗಿನ ಚರ್ಚೆಯನ್ನು ನಾನೆಂದೂ ಮರೆಯಲಾರೆ. ನಾರಾಯಣಪುರದ ಸಂವಾದದಲ್ಲಿ ಇದ್ದವರು ಆರೇ ಜನ. ಆದರೆ ಒಬ್ಬೊಬ್ಬರ ಜೀವನವೂ ಅನುಭವದಿಂದ ತುಂಬಿದ ಬಿಂದಿಗೆಗಳು. ಬಾಲ್ಯವಿವಾಹದ ಕುರಿತು ಚರ್ಚಿಸುವಾಗ 'ಸಣ್ಣವರಿದ್ದಾಗ ಮದ್ವಿ ಮಾಡಿದ್ರ ಹುಡುಗೇರ ನಡ ಬಲತಿರಾಂಗಿಲ್ರಿ, ಆಗ ಹೊಟ್ಟೀಲೇ ಇದ್ರ ತ್ರಾಸ ಆಕ್ಕೈತಿ' ಎಂಬ ನೀಲವ್ವಕ್ಕನ ಮಾತು ನನ್ನ ಮನಸ್ಸಿನಲ್ಲಿ ಅಚ್ಚು ಒತ್ತಿದಂತೆ ಗಟ್ಟಿಯಾಗಿ ಕೂತಿದೆ. ಬಾಲ್ಯ ವಿವಾಹಕ್ಕೆ ತಿಳಿದವರು, ದೊಡ್ಡವರೆನಿಸಿಕೊಂಡವರೂ ಹೇಗೆ ಕಾರಣರಾಗುತ್ತಾರೆ ಎಂಬುದು ಅರಿವಿಗೆ ಬಂತು. ದುರ್ಗಾ ನಾಟಕ ನೋಡಿ ಪ್ರತಿಕ್ರಿಯಿಸಿದ ಗಣೇಶ ನಗರದ ಜುಬೇದಾಬೀ ಅಮ್ಮನಂತೂ ಯಾವ ಸ್ತ್ರೀವಾದಿಗೂ ಕಡಿಮೆಯಿಲ್ಲ ಅನ್ನಿಸಿತು. "ಹೆಂಡ್ತಿಗೆ ಹೊಡೀಬಾರದರಿ. ಹೊಡದರ ಹೆಣಮಕ್ಕಳ ತಲಿ ಆಫ್ ಆಕ್ಕೈತಿ. ದುರ್ಗಾ ಗಂಡನ ಹೊಡ್ತ ತಿಂದು ಸಾಕಾಗಿ ಗಂಡಗ ಒಂದ ಪೆಟ್ಟ ಕೊಟ್ಟಾಳ. ಆಕಿ ಗಂಡನ ಕಾಲಗ ಬೀಳೂ ಅವಶ್ಯಕತಿ ಇಲ್ಲ. ಜಮಾತದವ್ರು (ದೈವದವರು) ಅವರಿಬ್ರ ಜೋಡೀ ಮಾತಾಡಿ ಅವರು ಚಂದಂಗೆ ಸಂಸಾರ ಮಾಡುವಂಗ ಆಗಬೇಕರಿ" ಎಂದು ಫರ್ಮಾನು ಹೊರಡಿಸಿದರು. ಆ ಹಿರಿಯ ಜೀವ ಜುಬೇದಾ ಅಮ್ಮನಿಗೆ ಶರಣು.

*(ಪ್ರಜಾವಾಣಿ ಮೆಟ್ರೋದಲ್ಲಿ ಪ್ರಕಟಗೊಂಡ ಬರೆಹ ಇದು. ರಾಜೇಶ್ವರಿ ಜೋಶಿ ಈಗಾಗಲೇ ಸಾಮಾಜಿಕ ಕಾರ್ಯಕರ್ತರಾಗಿ ತಮ್ಮನ್ನು ಗುರುತಿಸಿಕೊಂಡವರು. ಮುಂಬಯಿಯಲ್ಲಿ ಕಾಲೇಜು ಲೆಕ್ಚರರ್ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹಳ್ಳಿಗಳಲ್ಲಿ ಕೆಲಸ ಮಾಡಲು ಬಂದವರು. ಒಳ್ಳೆಯ ಅಭಿನೇತ್ರಿ, ಮಾತುಗಾರ್ತಿ, ಹಾಡುಗಾರ್ತಿ. ಬರಹ, ಭಾಷಾಂತರಗಳಲ್ಲೂ ಕೈಯಾಡಿಸುತ್ತಿದ್ದಾರೆ.)*

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಧಾರವಾಡ ಜಿಲ್ಲೆಯಾದ್ಯಂತ ಯಶಸ್ವೀ 'ಅರಿವಿನ ಪಯಣ'

**– ಸುನಂದಾ ಕಡಮೆ**

**ಕ**ರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2019, ಮಾರ್ಚ್ 8 ಮತ್ತು 9 ರಂದು ಧಾರವಾಡದಲ್ಲಿ ನಡೆಸುವ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಪೂರ್ವಭಾವಿಯಾಗಿ 2018ರ ನವೆಂಬರ್ ತಿಂಗಳಿಂದ 2019ರ ಫೆಬ್ರುವರಿ ಅಂತ್ಯದವರೆಗೆ ನಿರಂತರವಾಗಿ ಜಿಲ್ಲೆಯಾದ್ಯಂತ ಶಾಲಾ ಕಾಲೇಜುಗಳಲ್ಲಿ 'ಅರಿವಿನ ಪಯಣ' ಎಂಬ ಜಾಗೃತಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು. ಈ ಪಯಣದ ಅನುಭವಗಳು ಒಬ್ಬೊಬ್ಬರದೂ ಒಂದೊಂದು ರೀತಿಯಲ್ಲಿ ಅನನ್ಯವಾಗಿವೆ. ಇಡೀ ಧಾರವಾಡ ಜಿಲ್ಲೆಯ ಎಂಟೂ ತಾಲೂಕುಗಳ ಹೈಸ್ಕೂಲು ಹಾಗೂ ಜ್ಯೂನಿಯರ್ ಕಾಲೇಜುಗಳಲ್ಲಿ ಒಕ್ಕೂಟದ ಸುಮಾರು ಇಪ್ಪತ್ತು ಸಂಗಾತಿಗಳು ಐದು ಗುಂಪುಗಳನ್ನು ರಚಿಸಿಕೊಂಡು ಒಂದು ತಪಸ್ಸೆಂಬಂತೆ ನಿರಂತರವಾಗಿ ಈ 'ಅರಿವಿನ ಪಯಣ' ಜಾಗೃತಿ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದು, ಸುಮಾರು ಇಪ್ಪತ್ತೈದು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ತಲುಪಿ ಅವರಲ್ಲಿ ಹೊಸ ಯೋಚನಾ ಶಕ್ತಿ ಜಾಗೃತಗೊಂಡಿದ್ದನ್ನು ಕಂಡು ಬೆರಗಾಗಿದ್ದೇವೆ.

ಒಂದು ಸಣ್ಣ ಉದಾಹರಣೆ ಕೊಡಬೇಕೆಂದರೆ, ರಾಜ್ಯಾದ್ಯಂತ ಪ್ರತಿ ವರ್ಷ ಹತ್ತನೇ ತರಗತಿ ಹಾಗೂ ಪಿಯೂಸಿ ವರ್ಷದ ಫಲಿತಾಂಶ ಪ್ರಕಟವಾಗುವ ನಿರ್ದಿಷ್ಟ ದಿನಗಳಂದು ಪಟ್ಟಣದ ಎಲ್ಲ ಕೆರೆ ಬಾವಿಗಳಿಗೆ ಪೊಲೀಸ್ ಕಾವಲು ಹಾಕಲಾಗುತ್ತದೆ, ಯಾಕೆ ಅಂತ ಅದೇ ಹತ್ತನೇ ತರಗತಿ ಹಾಗೂ ಪಿಯೂಸಿ ವಿದ್ಯಾರ್ಥಿಗಳನ್ನು ಕೇಳಿನೋಡಿ. ಸಭಾ ಕಂಪನವಾದಂತೆ 'ಹೋಯ್' ಎಂಬ ಸದ್ದು ಮೆಲ್ಲಗೆ ಮೊಳಗುತ್ತದೆ ಮತ್ತು ಅದೊಂದು ತಮಾಷೆಯೆಂಬಂತೆ ವಿದ್ಯಾರ್ಥಿಗಳ ಮುಖದಲ್ಲಿ ವಿನೋದ ತಾಂಡವವಾಡುತ್ತದೆ. ಅದೇ ನಗೆಯಲ್ಲೇ ಅವರು ಹೇಳಬೇಕೋ ಬೇಡವೋ ಎನ್ನುವ ಅನುಮಾನದಲ್ಲೇ 'ಸುಸೈಡ್ಮಾಡ್ಕೋತಾರೆ ಅಂತ' ಎಂಬ ಉತ್ತರವನ್ನು ಪಿಸುನುಡಿದಂತೆ ಮೆಲ್ಲಗೆ ಉಸುರುತ್ತಾರೆ. 'ಅರೆ, ನಗುತ್ತಿದ್ದೀರಲ್ಲ, ಇದು ತಮಾಷೆಯ ವಿಷಯವೇ?' ಅಂತ ನಾವು ಗಂಭೀರವಾಗಿ ಕೇಳಿದಾಕ್ಷಣ ಅವರೆಲ್ಲರ ಮುಖದಲ್ಲಿ ಒಂದು ಆತಂಕ ಮಡುಗಟ್ಟುತ್ತದೆ. ಏನಾಗಿದೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಮ್ಮ ಸಮಾಜಕ್ಕೆ? ಮಕ್ಕಳ ರಿಸಲ್ಟ್ ದಿನ ಯಾಕೆ ಬಾವಿ ಕೆರೆ ಕಾಲುವೆಗಳಿಗೆ ಪೊಲೀಸ್ ಕಾವಲು ಹಾಕುವಂಥ ಸ್ಥಿತಿಯನ್ನು ನಾವು ತಂದುಕೊಂಡಿದ್ದೇವೆ? ಇದಕ್ಕೆ ಕಾರಣಗಳೇನು? ನಮ್ಮ ಮನಸ್ಥಿತಿ ಯಾಕಷ್ಟು ಹಳ್ಳ ಹಿಡಿದಿದೆ? ಇದು ಪಾಲಕರ ತಪ್ಪೇ? ಶಿಕ್ಷಕರ ತಪ್ಪೇ? ಅಥವಾ ಈ ಸಮಾಜ ಅಂಥದೊಂದು ಅಸಹಜ ನೋಟವನ್ನು ನಮ್ಮಲ್ಲಿ ತುಂಬಿದೆಯೇ? ಅಂತ ಕೇಳಿದರೆ ಎಲ್ಲ ಪ್ರಶ್ನೆಗಳಿಗೂ ಮ್ಲಾನವದನರಾದ ಆ ವಿದ್ಯಾರ್ಥಿಗಳ ಕಣ್ಣಲ್ಲೇ ನಮಗೆ ಉತ್ತರ ಸಿಗುತ್ತದೆ. ಈ ಹೊಸ ತಲೆಮಾರಿಗೆ ಬದುಕುವ ಹಕ್ಕು ಹಾಗೂ ಜೀವನ ಪ್ರೀತಿಯನ್ನು ತುಂಬಿಸುವುದು ಹೇಗೆ? ಮಕ್ಕಳ ಮನಸ್ಸಿನಲ್ಲಿ ಬೇರೂರಿರುವ ಅನರ್ಥಕಾರಕ ಕೀಳರಿಮೆಯನ್ನು, ಮೂಢನಂಬಿಕೆಗಳನ್ನು ತೆಗೆದು ಹಾಕುವುದು ಹೇಗೆ? ಇದು ನಮ್ಮ ಮುಂದಿರುವ ಪ್ರಶ್ನೆ.


ಪೊಲೀಸ್ ಕಾವಲು ನಮಗೆ ಬೇಡ ಎಂಬಂತಹ ಸಮಾಜ ನಿರ್ಮಾಣವಾಗಬೇಕಾದರೆ ನಾವು ಏನು ಮಾಡಬೇಕು? ಇದೇ ನಾವು ಹೈಸ್ಕೂಲು ಶಾಲಾ ಮಕ್ಕಳಿಗೆ ಹಾಗೂ ಪಿಯೂ ಕಾಲೇಜು ಮಕ್ಕಳಿಗೆ ನಡೆಸುವ ಅರಿವಿನ ಪಯಣ. ಈ ಯೋಜನೆಯಲ್ಲಿ ಸಮಾಜದ ಮನಸ್ಥಿತಿಗಳ ಪುನರ್‌ರಚನೆಯ ಕುರಿತಾದ ಹಲವು ಪುಟ್ಟಪುಟ್ಟ ಕತೆಗಳು, ಹಾಡುಗಳು, ಪ್ರಹಸನಗಳು, ನಾಟಕಗಳಿವೆ. ನಮ್ಮ ಕಾರ್ಯಕ್ರಮದ ಕೊನೆಯಲ್ಲಿ ಹಲವು ವಿದ್ಯಾರ್ಥಿನಿಯರು ತಮ್ಮ ಕರುಣಾಜನಕವಾದ ಅನುಭವಗಳನ್ನು ಹೇಳಿಕೊಂಡು ಹಗುರಾಗಿದ್ದಾರೆ. ತಮ್ಮ ಹಲವಾರು ಆತಂಕಗಳಿಗೆ ಒಕ್ಕೂಟದ ಸಂಗಾತಿಗಳಿಂದ ಸಲಹೆ ಸೂಚನೆಗಳನ್ನೂ ಪಡೆದವರಿದ್ದಾರೆ. ಸುಮಾರು ಮೂವತ್ತು ಶಾಲಾ ಕಾಲೇಜುಗಳ 'ಅರಿವಿನ ಪಯಣ' ಕಾರ್ಯಕ್ರಮದಲ್ಲಿ ಪಾಲ್ಗೊಂಡ ನನ್ನ ಅನುಭವ ವರ್ಣನಾತೀತ. ಸಾಹಿತ್ಯದ ಓದು ಬರಹಕ್ಕಿಂತ ನನಗೆ ಈ ಅರಿವಿನ ಪಯಣ ಒಂದು ಗುಂಜಿ ಹೆಚ್ಚೇ ಸಂತೃಪ್ತಿ ನೀಡಿದೆ ಅಂತಲೇ ಹೇಳಬಹುದು. ಇದನ್ನು ನಿರಂತರ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಗುಂಪಿನ ಇಚ್ಛೆ ಕೂಡ ಆಗಿದೆ. ಇಂಥವು ಬದುಕಿನ ಪಯಣಕ್ಕೆ ಅರ್ಥ ಹೆಚ್ಚಿಸುವಂತಹ ಕರ್ತವ್ಯಗಳಲ್ಲೊಂದಾಗಿದೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ‘ಬೆಳಗೋಣ ಸಾಲು ದೀಪ’

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಧಾರವಾಡ



**ಸಮತೆಯೆಡೆಗೆ ನಮ್ಮ ನಡಿಗೆ**

## ಕಪ್ಪು ಉಡುಪಿನಲ್ಲಿ ಮಹಿಳೆಯರು

### 'ಬೆಳಗೋಣ ಸಾಲು ದೀಪ'

ನಾವು 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ದ ಮಹಿಳೆಯರು. ಒಕ್ಕೂಟವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಆರೇಳು ವರ್ಷಗಳಿಂದ ಕರ್ನಾಟಕದ ನಾನಾ ಕಡೆ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪರ ಹೋರಾಟಗಳಲ್ಲಿ ಸಕ್ರಿಯುವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ–ಪೌರಕಾರ್ಮಿಕರು–ಬಿಸಿಯೂಟ ನೌಕರರು–ಆಶಾ ಕಾರ್ಯಕರ್ತೆಯರು–ಗಾರ್ಮೆಂಟ್ ಮತ್ತು ಪೌರಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕ್ಯಾಡೆಮಿಕ್ ವಲಯದ ಸಮಾನಮನಸ್ಕರೇ ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದ ಭಾಗಿಯಾಗಿವೆ. ಜನಪರ, ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2019ರ ಮಾರ್ಚ್ 8, 9ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಧಾರವಾಡದಲ್ಲಿ ಆಚರಿಸಲಿದೆ. ಅದಕ್ಕೆ ಪೂರಕವಾಗಿ ಫೆಬ್ರುವರಿ 1ರಿಂದ ಜಿಲ್ಲೆಯ ಸಮಾನ ಮನಸ್ಕ ವ್ಯಕ್ತಿಗಳು, ಸಂಘಟನೆಗಳ ನೆರವಿನೊಂದಿಗೆ 'ಕಪ್ಪು ಉಡುಪಿನಲ್ಲಿ ಮಹಿಳೆಯರು'

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಂಘಟಿಸಲಾಗಿದೆ. ನಿರಂತರವಾಗಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ನಡೆಸುವ ಮೌನ ಪ್ರತಿಭಟನೆಯೇ 'ಕಪ್ಪು ಉಡುಪಿನ ಮಹಿಳೆಯರು'. ಅದು ಜಗತ್ತಿನಾದ್ಯಂತ ಹಲವಾರು ಮಹಿಳಾ ಗುಂಪುಗಳನ್ನು ಪ್ರೇರೇಪಿಸಿರುವ ಪ್ರತಿರೋಧದ ಒಂದು ವಿಧ. ನಗರ, ಪಟ್ಟಣಗಳಲ್ಲಿನ ಪೇಟೆ, ಬಜಾರು ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಪ್ಪು ಉಡುಪು ತೊಟ್ಟು ಒಂದು ಗಂಟೆ ಮೌನವಾಗಿ ಪ್ಲಕಾರ್ಡ್ ಹಿಡಿದು ನಿಂತು ನಡೆಸುವ ಮೌನ ಪ್ರತಿಭಟನೆ ಇದು. ಎಲ್ಲ ಸಮುದಾಯ, ಸಂಸ್ಕೃತಿಗಳ ನಿತ್ಯ ಬದುಕಿನ ಭಾಗವೇ ಆಗಿರುವ ಹಿಂಸೆಯನ್ನುವಿರೋಧಿಸುವುದು ಅದರ ಧ್ಯೇಯವಾಗಿದೆ.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಪ್ರಾರಂಭವಾದುದು ತೆಲ್ ಆವಿವ್, ಹೈಫಾ, ಜೆರುಸಲೇಮಿನಲ್ಲಿ. ತಮ್ಮ ಬದುಕುಗಳನ್ನು ದ್ವೇಷದ ರಾಜಕಾರಣ ನಾಶ ಮಾಡುತ್ತಿರುವುದನ್ನು ವಿರೋಧಿಸುತ್ತ ಪ್ಯಾಲೆಸ್ತೇನ್ ಹಾಗೂ ಇಸ್ರೇಲ್ ಮಹಿಳೆಯರು ಇದನ್ನು ಆರಂಭಿಸಿದರು. ಅವರಿಗೆ ಸ್ಫೂರ್ತಿ ನೀಡಿದ್ದು 50ರ ದಶಕದ ದಕ್ಷಿಣ ಆಫ್ರಿಕಾದ ಬ್ಲ್ಯಾಕ್ ಸ್ಯಾಶ್ ಚಳುವಳಿ. ಅಲ್ಲಿನ ಕಪ್ಪು ಮತ್ತು ಬಿಳಿಯ ಮಹಿಳೆಯರಿಬ್ಬರೂ ವರ್ಣದ್ವೇಷದ ವಿರುದ್ಧ ಕಪ್ಪು ಸ್ಕಾರ್ಫ್ ತೊಟ್ಟು ಪ್ರತಿರೋಧಿಸಿದ್ದರು. ಅರ್ಜೆಂಟೀನಾದ ತಾಯಂದಿರು, ಅಜ್ಜಿಯರು ತಲೆಗೆ ಬಿಳಿಯ ಸ್ಕಾರ್ಫ್ ಕಟ್ಟಿಕೊಂಡು 70ರ ದಶಕದ ಮಿಲಿಟರಿ ನಿರಂಕುಶಾಧಿಪತ್ಯಕ್ಕೆ ಬಲಿಯಾದ ಮಕ್ಕಳ ಭಾವಚಿತ್ರಗಳನ್ನು ಹಿಡಿದುಬ್ಯೂನಸ್ ಅಯರಿಸ್‌ನಗರದ 'ಪ್ಲಾಜಾ ಡಿ ಮೆಯೋ' ಚೌಕದಲ್ಲಿ ಮೌನ ಮೆರವಣಿಗೆ ನಡೆಸಿದ್ದರು. ನಂತರ ಕಪ್ಪುಉಡುಪಿನ ಮಹಿಳೆಯರ ಪ್ರತಿರೋಧ ಇತರ ದೇಶಗಳಿಗೂ ಹಬ್ಬಿತು. ಯುಗೋಸ್ಲಾವಿಯಾದ ಬಾಲ್ಕನೀಕರಣ ಸಂದರ್ಭದಲ್ಲಿ ಹೊಸದಾಗಿ ರಚಿಸಲಾದ ಗಡಿಗಳೆಲ್ಲೆಡೆಯಿಂದ ಬಂದ ಮಹಿಳೆಯರು ಒಂದಾಗಿ ಬೋಸ್ನಿಯಾದಲ್ಲಿ ಯುದ್ಧ ಮತ್ತು ಜನಾಂಗೀಯ ಶುದ್ಧತೆಗಾಗಿ ಅತ್ಯಾಚಾರವನ್ನು ಅಸ್ತ್ರದಂತೆ ಬಳಸುತ್ತಿದ್ದುದರ ವಿರುದ್ಧ ಪ್ರತಿಭಟಿಸಿದರು. ಹೀಗೆ ಹಲವಾರು ದೇಶ ಹಾಗೂ ಸಂಸ್ಕೃತಿಗಳಲ್ಲಿನ ವಿಭಿನ್ನ ವಿಷಯಗಳನ್ನು ಇಟ್ಟುಕೊಂಡು; ಮಹಿಳೆಯರ ಮೇಲಿನ ದೌರ್ಜನ್ಯವೂ ಸೇರಿದಂತೆ ಎಲ್ಲ ಯುದ್ಧ, ಘರ್ಷಣೆಗಳು ಹುಟ್ಟುಹಾಕಿದ ಹಿಂಸೆಯನ್ನು ಮೌನಜಾಗೃತಿಯ ಮೂಲಕಮಹಿಳೆಯರು ವಿರೋಧಿಸಿದರು.

ಇದರಿಂದ ಸ್ಫೂರ್ತಿಗೊಂಡ ಬೆಂಗಳೂರಿನ 'ವಿಮೋಚನಾ ಮಹಿಳಾ ವೇದಿಕೆ' ಅಂತಹುದೇ ಪ್ರತಿಭಟನೆಯನ್ನು ಮಾರ್ಚ್ 1993ರಲ್ಲಿ ಆರಂಭಿಸಿತು. ಶಾಂತಿಯುತ ಸಹಬಾಳ್ವೆಯ ಸಂಸ್ಕೃತಿ ನಾಶವಾಗಿ, ಇಡೀ ದೇಶವೇ ಕೋಮುವಾದ, ಮೂಲಭೂತವಾದ, ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಹರಿದು ಛಿದ್ರವಾದಾಗ ಅದನ್ನು ಪ್ರತಿಭಟಿಸುವ ಸಾಮೂಹಿಕ ಪ್ರಯತ್ನವಾಗಿ ಇದು ಶುರುವಾಯಿತು. ತದನಂತರ ದೇಶದ ಹಲವು ಪಟ್ಟಣಗಳಿಗೆ ಹಬ್ಬಿ, ಮಹಿಳಾ ಶೋಷಣೆಯನ್ನು ಮುಖ್ಯ ವಿಷಯವಾಗಿಟ್ಟುಕೊಂಡಿತು. ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ, ಹೆಣ್ಣುಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅತ್ಯಾಚಾರದಂತಹ ಮಹಿಳೆಯರ ಮೇಲಿನ ಹಿಂಸೆಯನ್ನು ಮೌನವಾಗಿ ವಿರೋಧಿಸಲಾಯಿತು.

2018–19 ಹಿಂಸೆ ರಾರಾಜಿಸಿದ ವರ್ಷ. ಅದೇರೀತಿ ಪ್ರತಿಭಟನೆಗಳು ವ್ಯಾಪಕವಾಗಿ ನಡೆದ, ಸಾರ್ವಜನಿಕ ಬೀದಿಗಳನ್ನು ಪ್ರತಿರೋಧ, ಪ್ರತಿಭಟನೆಯ ನೆಲೆಯಾಗಿ ಮರುಸ್ಥಾಪಿಸಿಕೊಳ್ಳಲು ಹೋರಾಡಿದ ವರ್ಷವೂ ಹೌದು. ಜೊತೆಗೆ ಮಹಿಳೆಯರು, ದಲಿತದಮನಿತರು, ಆದಿವಾಸಿಗಳು, ಅಲ್ಪಸಂಖ್ಯಾತ ಸಮುದಾಯಗಳು, ಯುವ ಜನತೆ, ಮಕ್ಕಳು, ಬಡವರು, ನಿಸ್ಸಹಾಯಕರು, ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಮಾನವ ಹಕ್ಕುಗಳು ಮತ್ತು ಘನತೆಗಾಗಿ ಹೋರಾಡಿದ ವರ್ಷವೂ ಹೌದು. ಅವರೆಲ್ಲರ ಸಾಂಘಿಕ ಪ್ರತಿರೋಧದೊಂದಿಗೆ ಸಹಮತ ತೋರುತ್ತ ಧಾರವಾಡ ಜಿಲ್ಲೆಯಲ್ಲಿ ಕಪ್ಪು ಉಡುಪಿನ ಮಹಿಳೆಯರ ಮೌನ ಪ್ರತಿಭಟನೆ ನಡೆಯಲಿದೆ. ಮಹಿಳೆಯರ ದೇಹಗಳ ಮೇಲೆ ಹೂಡಿರುವ ಅಪಮಾನಕರ ಕದನವನ್ನು ವಿರೋಧಿಸಿ ನಮ್ಮ ಘನತೆಯನ್ನು ಮರುಸ್ಥಾಪಿಸಿಕೊಳ್ಳಲು ನಾವೆಲ್ಲರೂ ಒಗ್ಗೂಡಿ ಮೌನವಾಗಿ ನಿಲ್ಲುತ್ತೇವೆ. ಧಾರವಾಡ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಫೆಬ್ರುವರಿ 1ನೇ ತಾರೀಖಿನಿಂದ ಪ್ರತೀ ಶುಕ್ರವಾರ 5.30 ರಿಂದ 7 ಗಂಟೆಯವರೆಗೆ ತಾಲೂಕು ಕೇಂದ್ರಗಳ ಮುಖ್ಯಚೌಕಗಳಲ್ಲಿ ಮೌನಜಾಗೃತಿ ನಡೆಸಲಾಗುತ್ತಿದೆ.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಕಾರ್ಯಕ್ರಮದಲ್ಲಿ ನಮ್ಮೊಂದಿಗಿರಲು ಬನ್ನಿ. ನಿಮ್ಮ ಪ್ರತಿರೋಧವನ್ನು ಅಭಿವ್ಯಕ್ತಿಸಲು ಕಪ್ಪು ಉಡುಪು ಧರಿಸಿ ಬನ್ನಿ. ಸೂರ್ಯ ಮುಳುಗುವಾಗ ಒಟ್ಟಾಗಿ ದೀಪ ಹಚ್ಚೋಣ. ಹಿಂಸೆ ಮತ್ತು ದ್ವೇಷದ ರಾಜಕಾರಣದಲ್ಲಿ ಮನೆ ಮಾಡಿರುವ ಕಗ್ಗತ್ತಲೆಯನ್ನು ಮಣಿಸಿ ಘನತೆ, ಶಾಂತಿ ಮತ್ತು ಪ್ರೀತಿಯ ರಾಜಕಾರಣದ ದೀಪ ಬೆಳಗಿಸೋಣ.

ಕೊನೆಯಿರದ ವಿಶಾಲ ಬಯಲಿನಲಿ
ಚದುರಿದ ಚುಕ್ಕಿಗಳ ಒಟ್ಟು ಮಾಡಿ
ಕಗ್ಗತ್ತಲಾಳದ ಎದೆಗಳಲಿ ಸುರಿಯೋಣ ಬನ್ನಿ,
ಕೊನೆಯಿರದ ಕತ್ತಲಳಿಸಿ ಬೆಳಗಾಗಿಸಲು
ಕೋಟಿಕೋಟಿ ಸಾಲುದೀಪ ಹಚ್ಚಿ ನಿಲ್ಲೋಣ ಬನ್ನಿ,
ಪ್ರೀತಿ ಒರತೆ ಒಣಗದಂತಿರಿಸೋಣ ಬನ್ನಿ,
ಜೀವಪ್ರೀತಿಯ ಸಂಗಾತಿಗಳೆಲ್ಲ ಬನ್ನಿ..

ಸುನಂದಾ ಕಡಮೆ, ಶಾರದಾ ಗೋಪಾಲ, ಲಿನೆಟ್ ಡಿಸಿಲ್ವ, ಶಾರದಾ ಪಾಟೀಲ, ರಜನಿ ಗರುಡ, ಬಸಂತಿ ಹಪ್ಪಳದ, ಅಕ್ಕಮಹಾದೇವಿ ಅರಗುಂಜಿ, ಹೇಮಾ ಪಟ್ಟಣಶೆಟ್ಟಿ, ರಾಜೇಶ್ವರಿ ಜೋಶಿ, ಭಾರತಿ ಮತ್ತು ಒಕ್ಕೂಟದ ಬಳಗ.

ಸಂಪರ್ಕ: 9902840033, 9901469338, 9449207919, 8277026286.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಬೆಳಗೋಣ ಸಾಲು ದೀಪದ ಮೌನ ಜಾಗೃತಿ

**– ರಜನಿ ಗರುಡ**

ಗ್ರೀಕ್ ನಾಟಕಕಾರರಲ್ಲಿ ಅರಿಸ್ಟೋಫೆನಿಸ್ (ಕ್ರಿ. ಪೂ.411) ಕಾಮಿಡಿ ನಾಟಕಗಳಿಗೇ ಪ್ರಸಿದ್ಧನಾದವನು. ಆ ಕಾಲದಲ್ಲಿ ಬಹಳ ಜನಪ್ರಿಯವಾಗಿದ್ದ ಆತನ ಎರಡು ನಾಟಕಗಳಾದ 'ಲೈಸಿಸ್ಟ್ರಾಟಾ' ಮತ್ತು 'ವುಮೆನ್ ಎಟ್ ದ ಥೆಸ್ಮೋಫೋರಿಯಾ' (ದ ಪೊಯೆಟ್ ಎಂಡ್ ದ ವುಮೆನ್) ಪ್ರಸ್ತುತ ಮಹಿಳಾ ಚಳುವಳಿಗಳ ಆಶಯಗಳನ್ನು ಎತ್ತಿ ಹಿಡಿಯುವಂಥಹದ್ದು. ಇವೆರಡೂ ನಾಟಕಗಳು ಒಂದೇ ವರ್ಷ ರಂಗದ ಮೇಲೆ ಬಂದವು. ಎರಡೂ ನಾಟಕಗಳ ವಸ್ತು ಸ್ತ್ರೀ ಕೇಂದ್ರಿತವಾದವುಗಳು.

ಲೈಸಿಸ್ಟ್ರಾಟಾ ಯುದ್ಧ ವಿರೋಧಿಸಿ, ಅದನ್ನು ಪ್ರತಿಭಟಿಸುವ ಹೆಂಗಸರ ಕಥೆಯಾದರೆ, ವುಮೆನ್ ಎಟ್ ದ ಥೆಸ್ಮೋಫೋರಿಯಾ ಲಂಪಟ ಗಂಡಸರ ಆಡಳಿತಕ್ಕೆ ಬೇಸತ್ತ ಹೆಂಗಸರು ಪಾರ್ಲಿಮೆಂಟನ್ನು ಪ್ರವೇಶಿಸಿ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಯತ್ನಿಸುವ ಹೆಂಗಸರ ಕಥನ. ಇವೆರಡೂ ನಾಟಕಗಳಲ್ಲಿ ಹೆಂಗಸರ ಪ್ರತಿಭಟನೆ ಅಹಿಂಸಾತ್ಮಕವಾದದ್ದು. ಲೈಸಿಸ್ಟ್ರಾಟಾ ತನ್ನ ಗಂಡನಿಗೆ ಯುದ್ಧ ನಿಲ್ಲಿಸಿ ತನ್ನ ಜೊತೆ ಬಂದು ಸಂಸಾರ ಮಾಡುವಂತೆ ಹೇಳುತ್ತಾಳೆ. ಆತ ಕೇಳದಿದ್ದಾಗ ಗ್ರೀಸಿನ ಹೆಣ್ಣುಮಕ್ಕಳೆಲ್ಲರನ್ನೂ ಸಂಘಟಿಸುತ್ತಾಳೆ. ಕೇವಲ ಲೈಂಗಿಕ ಸುಖಕ್ಕಾಗಿ ಮಾತ್ರ ಯುದ್ಧಭೂಮಿಯಿಂದ ತಮ್ಮ ಹೆಂಡತಿಯರನ್ನು ಅರಸಿ ಬರುವ ಗಂಡಂದಿರನ್ನು ಸೇರಬೇಡಿರೆಂದು ಅವರೆಲ್ಲರಿಂದ ಪ್ರಮಾಣ ಮಾಡಿಸಿಕೊಳ್ಳುತ್ತಾಳೆ. ಗಂಡಂದಿರ ಲೈಂಗಿಕ ಆಸೆಯನ್ನು ಪೂರೈಸದೆ, ಅವರನ್ನು ತಿರಸ್ಕರಿಸುವ ಮೂಲಕ ಯುದ್ಧವನ್ನು ಪ್ರತಿರೋಧಿಸುವ ಹೊಸ ಅಸ್ತ್ರವನ್ನು ಕಂಡುಕೊಳ್ಳುತ್ತಾರೆ. ಕೊನೆಯಲ್ಲಿ ಗಂಡಸರಿಗೂ, ಹೆಂಗಸರಿಗೂ ಒಪ್ಪಂದವಾಗುವುದರೊಂದಿಗೆ ನಾಟಕ ಮುಗಿಯುತ್ತದೆ.

ಇನ್ನು ವುಮೆನ್ ಎಟ್ ದ ಥೆಸ್ಮೋಫೋರಿಯಾ ನಾಟಕದಲ್ಲಿ ಪಾರ್ಲಿಮೆಂಟ್‌ಗೆ ಹೋಗದೆ ಕುಡಿಯುತ್ತ ಕಾಲಹರಣ ಮಾಡುವ ಗಂಡಂದಿರಿಂದ ಬೇಸತ್ತ ಹೆಂಗಸರು ಪಾರ್ಲಿಮೆಂಟೊಳಗೆ ತಾವೇ ಪ್ರವೇಶಿಸಲು ಉಪಾಯಗಳನ್ನು ಮಾಡುತ್ತಾರೆ. ಪಾರ್ಲಿಮೆಂಟೊಳಗೆ ಪ್ರವೇಶಿಸಿದ ಮಾತ್ರಕ್ಕೆ ರಾಜ್ಯದ ಆಡಳಿತವೆಲ್ಲ ತಮ್ಮ ಕೈಯೊಳಗೆ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಬಂದೇಬಿಡುತ್ತದೆ ಎಂದು ನಂಬುವ ಆ ಮುಗ್ಧ ಹೆಂಗಸರು ಗಂಡಸರಂತೆ ಉಡುಪು ತೊಡುತ್ತಾರೆ. ಆದರೆ ಪಾರ್ಲಿಮೆಂಟ್ ಪ್ರವೇಶ ಅವರಿಂದ ಸಾಧ್ಯವಾಗುವುದಿಲ್ಲ. ಮ್ಯಾಜಿಸ್ಟ್ರೇಟ್‌ರು ಮಧ್ಯೆ ಪ್ರವೇಶಿಸಿ ಗಂಡಸರಿಗೂ, ಹೆಂಗಸರಿಗೂ ಒಪ್ಪಂದವಾಗುತ್ತದೆ. ಇವೆರಡೂ ನಾಟಕದಲ್ಲಿಯ ಸ್ತ್ರೀಯರು ಪ್ರತಿಭಟಿಸುವ ಮಾರ್ಗ ಅನನ್ಯವಾದದ್ದು. ತಮಗಿರುವ ಸಾಧ್ಯತೆಯಲ್ಲಿಯೆ ಹೆಚ್ಚು ತೀವ್ರವಾಗಿ ಅನ್ಯಾಯವನ್ನು, ಅರಾಜಕತೆಯನ್ನು, ಯುದ್ಧವನ್ನು ಪ್ರತಿಭಟಿಸಿ ತಮ್ಮ ನೆಲ, ಸಂಸಾರ, ಮಕ್ಕಳು ಎಲ್ಲವನ್ನೂ ಕಾಪಿಟ್ಟುಕೊಳ್ಳುವಂತವರು.

ಕಳೆದ ಶತಮಾನದ ಕೊನೆಯಲ್ಲಿ ತೆಲ್ ಆವಿವ್, ಹೈಫಾ, ಜೆರುಸಲೇಮಿನಲ್ಲಿ ಪ್ರಾರಂಭವಾದ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ರಕ್ತರಹಿತವಾದ, ಮೌನ ಪ್ರತಿಭಟನೆ. ತಮ್ಮ ಬದುಕುಗಳನ್ನು ದ್ವೇಷದ ರಾಜಕಾರಣ ನಾಶ ಮಾಡುತ್ತಿರುವುದನ್ನು ವಿರೋಧಿಸುತ್ತ ಪ್ಯಾಲೆಸ್ತೇನ್ ಹಾಗೂ ಇಸ್ರೇಲ್ ಮಹಿಳೆಯರು ಇದನ್ನು ಆರಂಭಿಸಿದರು. ಅವರಿಗೆ ಸ್ಫೂರ್ತಿ ನೀಡಿದ್ದು 50ರ ದಶಕದ ದಕ್ಷಿಣ ಆಫ್ರಿಕಾದ ಬ್ಲ್ಯಾಕ್ ಸ್ಯಾಶ್ ಚಳುವಳಿ. ಅಲ್ಲಿನ ಕಪ್ಪು ಮತ್ತು ಬಿಳಿಯ ಮಹಿಳೆಯರಿಬ್ಬರೂ ವರ್ಣದ್ವೇಷದ ವಿರುದ್ಧ ಕಪ್ಪು ಸ್ಕಾರ್ಫ್ ತೊಟ್ಟು ಪ್ರತಿರೋಧಿಸಿದ್ದರು. ಅರ್ಜೆಂಟೀನಾದ ತಾಯಂದಿರು, ಅಜ್ಜಿಯರು ತಲೆಗೆ ಬಿಳಿಯ ಸ್ಕಾರ್ಫ್ ಕಟ್ಟಿಕೊಂಡು 70ರ ದಶಕದ ಮಿಲಿಟರಿ ನಿರಂಕುಶಾಧಿಪತ್ಯಕ್ಕೆ ಬಲಿಯಾದ ಮಕ್ಕಳ ಭಾವಚಿತ್ರಗಳನ್ನು ಹಿಡಿದು ಬ್ಯೂನಸ್ ಅಯರಿಸ್ ನಗರದ 'ಪ್ಲಾಜಾ ಡಿ ಮೆಯೋ' ಚೌಕದಲ್ಲಿ ಮೌನ ಮೆರವಣಿಗೆ ನಡೆಸಿದ್ದರು. ನಂತರ ಕಪ್ಪು ಉಡುಪಿನ ಮಹಿಳೆಯರ ಪ್ರತಿರೋಧ ಇತರ ದೇಶಗಳಿಗೂ ಹಬ್ಬಿತು. ಯುಗೋಸ್ಲಾವಿಯಾದ ಬಾಲ್ಕನೀಕರಣ ಸಂದರ್ಭದಲ್ಲಿ ಹೊಸದಾಗಿ ರಚಿಸಲಾದ ಗಡಿಗಳೆಲ್ಲೆಡೆಯಿಂದ ಬಂದ ಮಹಿಳೆಯರು ಒಂದಾಗಿ ಬೋಸ್ನಿಯಾದಲ್ಲಿ ಯುದ್ಧ ಮತ್ತು ಜನಾಂಗೀಯ ಶುದ್ಧತೆಗಾಗಿ ಅತ್ಯಾಚಾರವನ್ನು ಅಸ್ತ್ರದಂತೆ ಬಳಸುತ್ತಿದ್ದುದರ ವಿರುದ್ಧ ಪ್ರತಿಭಟಿಸಿದರು. ಹೀಗೆ ಹಲವಾರು ದೇಶ ಹಾಗೂ ಸಂಸ್ಕೃತಿಗಳಲ್ಲಿನ ವಿಭಿನ್ನ ವಿಷಯಗಳನ್ನು ಇಟ್ಟುಕೊಂಡು; ಮಹಿಳೆಯರ ಮೇಲಿನ ದೌರ್ಜನ್ಯವೂ ಸೇರಿದಂತೆ ಎಲ್ಲ ಯುದ್ಧ, ಘರ್ಷಣೆಗಳು ಹುಟ್ಟುಹಾಕಿದ ಹಿಂಸೆಯನ್ನು ಮೌನಜಾಗೃತಿಯ ಮೂಲಕ ಮಹಿಳೆಯರು ವಿರೋಧಿಸಿದರು.

ಇದರಿಂದ ಸ್ಫೂರ್ತಿಗೊಂಡ ಬೆಂಗಳೂರಿನ 'ವಿಮೋಚನಾ ಮಹಿಳಾ ವೇದಿಕೆ' ಅಂತಹುದೇ ಪ್ರತಿಭಟನೆಯನ್ನು ಮಾರ್ಚ್ 1993ರಲ್ಲಿ ಆರಂಭಿಸಿತು. ಶಾಂತಿಯುತ ಸಹಬಾಳ್ವೆಯ ಸಂಸ್ಕೃತಿ ನಾಶವಾಗಿ, ಇಡೀ ದೇಶವೇ ಕೋಮುವಾದ, ಮೂಲಭೂತವಾದ, ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಹರಿದು ಛಿದ್ರವಾದಾಗ ಅದನ್ನು ಪ್ರತಿಭಟಿಸುವ ಸಾಮೂಹಿಕ ಪ್ರಯತ್ನವಾಗಿ ಇದು ಶುರುವಾಯಿತು. ತದನಂತರ ದೇಶದ ಹಲವು ಪಟ್ಟಣಗಳಿಗೆ ಹಬ್ಬಿ, ಮಹಿಳಾ ಶೋಷಣೆಯನ್ನು ಮುಖ್ಯ ವಿಷಯವಾಗಿಟ್ಟುಕೊಂಡಿತು.

'ಕಪ್ಪು ಉಡುಪಿನಲ್ಲಿ ಮಹಿಳೆ' ಅಹಿಂಸೆಯ ಪ್ರತಿಭಟನೆಯನ್ನು ಕರ್ನಾಟಕ ರಾಜ್ಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ತನ್ನ ಹಲವಾರು ಕಾರ್ಯಕ್ರಮಗಳಲ್ಲಿ ಮುಖ್ಯ ಕಾರ್ಯಕ್ರಮವಾಗಿ ತೆಗೆದುಕೊಂಡಿದೆ. ಕಳೆದ ಆರು ವರ್ಷಗಳಿಂದ ಒಕ್ಕೂಟ ಬೇರೆ ಬೇರೆ ಜಿಲ್ಲೆಗಳಲ್ಲಿ ಬೃಹತ್ ಸಮಾವೇಶ ಮಾಡುತ್ತ ಬಂದಿದೆ. ನಿರ್ಭಯಾ ಪ್ರಕರಣವೇ ಇದರ ಹುಟ್ಟಿಗೆ ಕಾರಣವಾದರೂ ಎಲ್ಲ ರೀತಿಯ ದಮನಿತರ, ಶೋಷಿತರಿಗೆ ಧ್ವನಿಯಾಗುತ್ತ ಶಾಲೆ–ಕಾಲೇಜು, ಸಮುದಾಯಗಳು, ಸಂಘ–ಸಂಸ್ಥೆಗಳಲ್ಲಿ ಜಾಗೃತಿಯ ಕಾರ್ಯಕ್ರಮ ಮಾಡುತ್ತದೆ. ಕರ್ನಾಟಕದ 180ಕ್ಕೂ ಸಂಘ–ಸಂಸ್ಥೆಗಳನ್ನು ಜೋಡಿಸುವ ಮಹಾಜಾಲವಾಗಿದೆ. ಈ ವರ್ಷದ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಾವೇಶ ಇದೇ 8 ಮತ್ತು 9ರಂದು ಧಾರವಾಡದಲ್ಲಿ ನಡೆಯಲಿದೆ. ಈಗಾಗಲೇ ಇದರ ಪೂರ್ವಭಾವಿಯಾಗಿ ಈ ಜಿಲ್ಲೆಯ ಎಲ್ಲ ತಾಲೂಕು ಕೇಂದ್ರದ ಪ್ರಮುಖ ವೃತ್ತದಲಿ, ಒಕ್ಕೂಟದವರು ಸಂಜೆ ಕತ್ತಲೆಯಲ್ಲಿ ಕಪ್ಪು ಉಡುಪುಧರಿಸಿ, ಮೊಂಬತ್ತಿ ಬೆಳಗುತ್ತ ಮೌನವಾಗಿ ತಾಸು ಹೊತ್ತು ನಿಂತಿದ್ದಾರೆ. 8 ನೇ ತಾರೀಕಿನ ಸಂಜೆ ಕೂಡ ಧಾರವಾಡದ ಪ್ರಮುಖ ವೃತ್ತವಾದ ಜ್ಯುಬಿಲಿ ಸರ್ಕಲ್‌ನಲ್ಲಿ ನೂರಾರು ಹೆಣ್ಣುಮಕ್ಕಳು ನಿಲ್ಲಲಿದ್ದಾರೆ. ತಮ್ಮ ಮೇಲೆ ಶತಶತಮಾನಗಳಿಂದಲೂ ನಡೆಯುತ್ತ ಬಂದ ಹಲ್ಲೆಯನ್ನು, ದೌರ್ಜನ್ಯವನ್ನು, ತಾರತಮ್ಯವನ್ನು, ತಿರಸ್ಕಾರದ ನೋವನ್ನು ಅಹಿಂಸೆಯೆನ್ನುವ ಅಸ್ತ್ರದ ಮೂಲಕ ಎದುರಿಸುತ್ತ, ಮೊಂಬತ್ತಿಯಂತೆ ತಾವೇ ಕರಗುವ ಹೆಣ್ಣುಗಳು ಸಾಲು ದೀಪ ಬೆಳಗುತ್ತ, ಮೌನ ಜಾಗೃತಿ ಮೂಡಿಸಲಿದ್ದಾರೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಯುದ್ಧ ಸಲ್ಲದು! ಶಾಂತಿ ಬೇಕು!

**– ಶಾರದಾ ಗೋಪಾಲ**

ಧಾರವಾಡ ಜಿಲ್ಲೆಯಲ್ಲಿ ಅಲ್ಲಲ್ಲಿ ಒಂದು ವಿಶೇಷ ಅಭಿಯಾನ ನಡೆಯುತ್ತಿದೆ. ಅವರು ಕಪ್ಪು ಉಡುಗೆ ತೊಟ್ಟಿದ್ದಾರೆ. ಕೈಯಲ್ಲಿ ದೀಪ ಹಿದಿದಿದ್ದಾರೆ. ಕಪ್ಪು ಉಡುಗೆಯೋ ಪ್ರತಿಭಟನೆಯ ಸಂಕೇತ. ದೀಪವೋ ಜಾಗೃತಿಯ ಸಂಕೇತ. ನಿಂತಿದ್ದೋ ಸಂಜೆಯ ಹೊತ್ತು. ಎಲ್ಲಿ? ಯಾವುದೇ ಸರಕಾರಿ ಕಚೇರಿಯ ಮುಂದಲ್ಲ, ಸಾರ್ವಜನಿಕ ಸ್ಥಳದಲ್ಲಿ. ಏನಾದರೂ ಹೇಳುತ್ತಾರೋ? ಇಲ್ಲ. ಏನನ್ನೂ ಹೇಳದೆ ಮೌನವಾಗಿ ನಿಂತಿದ್ದಾರೆ. ನೋಡಿದ ಬಹುತೇಕ ಜನಕ್ಕೆ ಇದು ಏನಪ್ಪ, ಹೊಸತು? ಅನಿಸಿರಲಿಕ್ಕೆ ಸಾಕು.

ಇದು ಒಂದು ವಿನೂತನವಾದ ಪ್ರತಿಭಟನೆಯೆನಿಸಿದರೂ ಕೂಡ ಈ ರೀತಿಯ ಪ್ರತಿಭಟನೆಗೆ ಆಗಲೇ 25 ವರ್ಷ ಆಯಿತು. 25 ವರ್ಷಗಳ ಹಿಂದೆ ಮಧ್ಯ ಪ್ರಾಚ್ಯದಲ್ಲಿ ಯುದ್ಧಗಳು ನಡೆಯುತ್ತಿದ್ದಾಗ ಯುದ್ಧದಲ್ಲಿ ಮಕ್ಕಳನ್ನು ಕಳೆದುಕೊಂಡ ತಾಯಂದಿರು ನಿತ್ಯ ಲಾಟೀನು ಹಿಡಿದು ತಮ್ಮ ಮಕ್ಕಳನ್ನು ಹುಡುಕುತ್ತ ಹೋಗುತ್ತಿದ್ದುದೇ ಒಂದು ಪ್ರತಿಭಟನೆಯ ರೂಪು ಪಡೆಯಿತು. ಯುದ್ಧಗಳು ಪ್ರಚೋದಿಸುವುದೇ ಹಿಂಸೆ, ಸಾವು ಮತ್ತು ನೋವನ್ನು. ಯಾರಿಗೇ ಜಯವಿರಲಿ, ಯಾರಿಗೇ ಸೋಲಿರಲಿ, ಸೈನಿಕರ ಮನೆಯಲ್ಲಿ ಮಾತ್ರ ಸದಾ ಆತಂಕ, ಸಾವಿನ ಭಯ. ಎರಡೂ ಕಡೆ ಸಾವು ನೋವು. ಎರಡೂ ಕಡೆಯ ತಾಯಂದಿರಿಗೆ ಮಕ್ಕಳನ್ನು ಕಳೆದುಕೊಂಡ ನೋವಿನ ಹೊರತು ಇನ್ನೇನೂ ಇಲ್ಲ. ಇದಕ್ಕೆ ಕೊನೆಯಿಲ್ಲವೇ? ಕೈಯಲ್ಲಿ ಲಾಟೀನು ಹಿಡಿದ ತಾಯಂದಿರು ರಾತ್ರಿ ಹೊತ್ತು ಮೌನವಾಗಿ ಒಬ್ಬರ ಕೈ ಹಿಡಿದು ಒಬ್ಬರು ನಿಂತರು. 'ಇನ್ನು ಸಾಕು ಈ ಹಿಂಸೆ. ಇನ್ನು ಸಾಕು ಈ ಯುದ್ಧ.' ಈ ತಾಯಂದಿರು ಜಪಿಸಿದ ಶಾಂತಿ ಸಂದೇಶ ಮಾತ್ರ ಗಡಿಗಡಿಗಳ ಮೀರಿ ಜಗತ್ತಿನೆಲ್ಲೆಡೆ ಮಾರ್ದನಿಸಿತು. ಹೌದು, ಕಪ್ಪು ಉಡುಗೆಯ ದೀಪಧಾರಿ ಸ್ತ್ರೀಯರ ಮೌನ ಪ್ರತಿಭಟನೆ ಆರಂಭವಾದದ್ದೇ ಯುದ್ಧದಿಂದಾಗುವ ಹಿಂಸೆ, ಸಾವುಗಳನ್ನು ಪ್ರತಿರೋಧಿಸಲು.

ದಶಕಗಳೆರಡಾಯ್ತು. ಪ್ಯಾಲಿಸ್ತೀನ್–ಇಸ್ರೇಲಿನ ಮಧ್ಯೆ ಯುದ್ಧ ಜೋರಾಗಿತ್ತು. ತುಂಡೇ ತುಂಡು ಭೂಮಿಗಾಗಿ ಜನವಾಸದ ಕಟ್ಟಡಗಳನ್ನೆಲ್ಲ ಕೆಡವಿ ಯುದ್ಧ ಭೂಮಿಯನ್ನಾಗಿಸಿತ್ತು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇಸ್ರೇಲ್. ಪ್ಯಾಲಿಸ್ತೀನಿಯರಿಂದ ಗೆರಿಲ್ಲಾ ಯುದ್ಧ. ಎರಡೂ ಕಡೆ ಸಾವು ನೋವು. ಮಕ್ಕಳನ್ನು ಕಳೆದುಕೊಂಡ ಎರಡೂ ದೇಶಗಳ ತಾಯಂದಿರು ಒಂದಾಗಿ ನಿಂತರು. ಕಪ್ಪು ಉಡುಗೆಯುಟ್ಟು ದೀಪ ಹಿಡಿದು ಮೌನವಾಗಿ ಒಬ್ಬರ ಪಕ್ಕ ಒಬ್ಬರು. . ಒಬ್ಬರ ಕೈ ಹಿಡಿದು ಒಬ್ಬರು ನಿಂತರು. 'ಸಾಕು ನಿಮ್ಮ ಹಿಂಸಾಚಾರ. ಸಾಕು ನಿಮ್ಮ ಯುದ್ಧ. ಸಾಕು ಮಾಡಿ ಭೂಮಿದಾಹ.' ಈ ತಾಯಂದಿರು ಜಪಿಸಿದ ಶಾಂತಿ ಸಂದೇಶ ಮಾತ್ರ ಗಡಿಗಡಿಗಳ ಮೀರಿ ಜಗತ್ತಿನೆಲ್ಲೆಡೆ ವ್ಯಾಪಿಸಿತು. ತಕ್ಷಣವೇ 150 ದೇಶಗಳಿಂದ 10,000 ಮಹಿಳೆಯರಿಂದ ಪ್ರತಿಕ್ರಿಯೆ ಬಂತು. ಆಫ್ರಿಕಾದ ದಕ್ಷಿಣ ಭಾಗದಲ್ಲಿ, ದಕ್ಷಿಣ ಅಮೆರಿಕಾದಲ್ಲಿ ಯುದ್ಧದ ಗದ್ದಲವೆದ್ದಾಗೆಲ್ಲ ಈ ರೀತಿಯಲ್ಲಿ ಮಹಿಳೆಯರು ದೀಪ ಹಿಡಿದು ಮೌನವಾಗಿ ನಿಂತು ಯುದ್ಧಕ್ಕೆ, ಹಿಂಸೆಗೆ ತಮ್ಮ ಪ್ರತಿರೋಧವನ್ನು ತೋರಿಸುತ್ತಲೇ ಹೋದರು. ಈ ಲೇಖನ ಬರೆಯುವ ಹೊತ್ತಿಗೆ ಯುರೋಪಿನ ದೇಶಗಳ ಪ್ರಮುಖ ಬೀದಿಗಳಲ್ಲಿ ವೃತ್ತಗಳಲ್ಲಿ 'ಕಪ್ಪು ಉಡುಗೆಯಲ್ಲಿ ಮಹಿಳೆಯರು' ಕಾರ್ಯಕ್ರಮದ ಬೆಳ್ಳಿಹಬ್ಬದಾಚರಣೆ ನಡೆದಿದೆ. 25 ವರ್ಷಗಳ ಹಿಂದೆ ಮಾರ್ಚ್ 2ಕ್ಕೆ ಅದು ಆರಂಭವಾದದ್ದು.

'ಕಪ್ಪು ಉಡುಗೆಯಲ್ಲಿ ಮಹಿಳೆಯರು' ಕಾರ್ಯಕ್ರಮದ ಅಂತಾರಾಷ್ಟ್ರೀಯ ಸಮಾವೇಶಗಳಾಗಿವೆ. ವಿಶ್ವ ಸಂಸ್ಥೆಯ ಅಭಿವೃದ್ಧಿ ನಿಧಿಯಿಂದ ಶಾಂತಿ ಪುರಸ್ಕಾರವೂ, 'ಅಲ್ಟರ್ನೇಟ್ ಲೈವ್ಲಿಹುಡ್' ಪುರಸ್ಕಾರವೂ ದೊರೆತಿದೆ. ಕರ್ನಾಟಕದಲ್ಲಿ ಬೆಂಗಳೂರಿನ ವಿಮೋಚನಾ ಸಂಸ್ಥೆಯ ಕೊರೀನ್ ಎಂಬ ಹೋರಾಟಗಾರ್ತಿ 'ಕಪ್ಪು ಉಡುಗೆಯಲ್ಲಿ ಮಹಿಳೆಯರು' ಪ್ರತಿರೋಧಾಚರಣೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದರು. 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಪ್ರತಿ ವರ್ಷವೂ ತನ್ನ ಸಮಾವೇಶದಲ್ಲಿ ಈ ಕಾರ್ಯಕ್ರಮವೊಂದನ್ನಿಟ್ಟುಕೊಳ್ಳುತ್ತದೆ. ಈ ವರ್ಷ ಧಾರವಾಡದಲ್ಲಿ ಸಮಾವೇಶದ ತಯಾರಿ ನಡೆದಾಗ ಇಲ್ಲಿನ ಮಹಿಳೆಯರು ಮಾರ್ಚ್ 8ಕ್ಕೆ ಮಾತ್ರವೇಕೆ ಅದರ ಹಿಂದಿನ ಐದು ವಾರವೂ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಕಪ್ಪು ಉಡುಗೆಯಲ್ಲಿ ಮಹಿಳೆಯರು ಕಾರ್ಯಕ್ರಮ ಮಾಡೋಣವೆಂದು ಮುಂದಾಯಿತು. ಮೊದಲಿಗೆ ಹುಬ್ಬಳ್ಳಿಯ ಕೆ.ಎಂ.ಸಿ ವೃತ್ತದಲ್ಲಿ, ಗ್ರಾಮೀಣ ಮಹಿಳೆಯರನ್ನೂ ಜೊತೆ ಮಾಡಿಕೊಂಡು ಕಲಘಟಗಿಯಲ್ಲಿ, ಅಳ್ನಾವರದಲ್ಲಿ, ನವಲಗುಂದದಲ್ಲಿ ಸ್ಥಳೀಯ ಮಹಿಳೆಯರು, ಕಪ್ಪು ಉಡುಗೆಯಲ್ಲಿ ಸಂಜೆ ಹೊತ್ತು ಕೈಯಲ್ಲಿ ದೀಪ ಹಿಡಿದು ಒಂದು ತಾಸು ಮೌನವಾಗಿ ನಿಂತಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ವತಃ ರಿಜಿಸ್ಟ್ರಾರ್ ಕೂಡ ಮಹಿಳೆಯರೊಂದಿಗೆ ಮೌನವಾಗಿ ನಿಂತು ತಮ್ಮ ಸಹಮತವನ್ನು ತೋರಿದರು. ಅಳ್ನಾವರದಲ್ಲಿ ಈ ಕಾರ್ಯಕ್ರಮ ಆಯೋಜಿಸುವ ಹೊತ್ತಿಗೆ ಅತ್ತ ಕಾಶ್ಮೀರದಲ್ಲಿ ಸೈನಿಕರ ಹತ್ಯೆಯಾಗಿ ಆತಂಕದ ಸ್ಥಿತಿ ಉಂಟಾಗಿತ್ತು. ಬೇಡವೆಂದು ಕೆಲವರು. ಕಾದು ನೋಡಿ ಎಂದು ಕೆಲವರು. ಯಾವುದೇ ರೀತಿಯ ಹಿಂಸೆಯನ್ನು ಪ್ರತಿರೋಧಿಸುವ ಕಾರ್ಯಕ್ರಮ ಇದಾದ್ದರಿಂದ ಮಾಡಿದರೆ ತಪ್ಪೇನಿಲ್ಲ ಎಂದು ಸಂಘಟಕರು ಅಲ್ಲಿಯೂ ದೀಪ ಹಿಡಿದರು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮೌನವಾಗಿ ನಿಂತರು. ಸ್ಥಳೀಯ ಕಾಲೇಜು, ಶಾಲೆಯ ಮಕ್ಕಳು ಬಂದು ತಾವೂ ನಿಂತರು ಮೌನವಾಗಿ.

ನವಲಗುಂದದಲ್ಲಿ ಯುವಕರೂ ಜೊತೆಗೂಡಿದರು. ಎಲ್ಲರೂ ದೀಪ ಹಿಡಿದು ಮೌನವಾಗಿ ನಿಂತಿದ್ದನ್ನು ನೋಡಿ ಬುಟ್ಟಿಯಲ್ಲಿ ರೊಟ್ಟಿ ಹಿಡಿದು ಹೊರಟಿದ್ದ ಒಬ್ಬ ಪುಟ್ಟ ಬಾಲೆ ಕುತೂಹಲದಿಂದ ಆ ಬುಟ್ಟಿಯನ್ನು ಅಲ್ಲೇ ಇಟ್ಟು ತಾನೂ ಒಂದು ದೀಪ ಹಿಡಿದು ಕೆಲಕಾಲ ನಿಂತಿದ್ದು ನೆರೆದವರಿಗೆಲ್ಲ ಬೆರಗು ಮೂಡಿಸಿತ್ತು. ಒಟ್ಟಾರೆಯಾಗಿ ಸುಮಾರು 400ರಷ್ಟು ಜನರು ಮೌನವಾಗಿ ದೀಪ ಹಿಡಿದು ನಿಲ್ಲುವ ಅಪೂರ್ವ ಅನುಭವ ಪಡೆದಿದ್ದಾರೆ.

ಮತ್ತೆ ಈಗ ದೇಶದ ಉತ್ತರ ಭಾಗದಲ್ಲಿ ಯುದ್ಧದ ಕಾರ್ಮೋಡ. ಗಡಿಗಾಗಿ ಯುದ್ಧ. ಒಬ್ಬರು ಕೊಂದರೆಂದು ಇನ್ನೊಬ್ಬರು ಕೊಲ್ಲುತ್ತ ಹೋಗುವ ಯುದ್ಧ. ಅತ್ತ ಕಾಶ್ಮೀರದ ಗಡಿಯಲ್ಲಿ ಯುದ್ಧ ಇನ್ನೇನು ಶುರುವಾಗೇಬಿಡುತ್ತದೇನೋ ಎಂಬ ಭೀತಿ ಹುಟ್ಟಿದೆ. ದೇಶದ ಗಡಿಯಲ್ಲಿ ಪರಸ್ಪರರ ಮೇಲೆ ಬಾಂಬ್ ಹಾಕುವ ಯುದ್ಧವಾದರೆ, ಇಲ್ಲಿ ಸಮಾಜದಲ್ಲಿ ಹೆಣ್ಣಿನ ಮೇಲೆ ಅಧಿಪತ್ಯ ಸಾರಲು, ಅಧಿಕಾರ ಮೆರೆಯಲು, ಕುಟುಂಬಗಳಲ್ಲಿ ಪುರುಷಾಧಿಕಾರವನ್ನು ಸಾಬೀತುಮಾಡಲು ಸದಾ ಶಾಂತಿಯ ಕಾಲದಲ್ಲಿಯೂ ಹಿಂಸೆ ನಡೆದೇ ಇದೆ. ಮಹಿಳೆಯರನ್ನು ನಿಯಂತ್ರಿಸುವುದಕ್ಕಾಗಿ ಎಲ್ಲಾ ಕಾಲದಲ್ಲೂ ಹಿಂಸೆ ವಿಜೃಂಭಿಸಿದೆ. ಸೈನ್ಯಕ್ಕೆ ಹೋದ ಪುರುಷರಿಗೆ ಯುದ್ಧಾನುಭವ ಇರಬಹುದು, ಇಲ್ಲದಿರಬಹುದು. ಮನೆಯಲ್ಲಿ ಉಳಿದ ಮಹಿಳೆಗಂತೂ ಯುದ್ಧಾನುಭವ ಹೇರಳವಾಗಿದೆ. ಯುದ್ಧ ನಡೆವಲ್ಲಿ ಬಲಾತ್ಕಾರ, ಅತ್ಯಾಚಾರಗಳ ಭಯದಿಂದ ಅವರು ನಡುಗುತ್ತಿರುತ್ತಾರೆ. ಶಾಂತಿಯ ದಿನಗಳಲ್ಲಿ ದೌರ್ಜನ್ಯದ ನೆರಳಿನಲ್ಲೇ ಅವರು ಬದುಕುತ್ತಿದ್ದಾರೆ. ಈ ಕಾರಣಕ್ಕಾಗಿ ಮಹಿಳೆಯರ 'ಯುದ್ಧ ಬೇಡ, ಶಾಂತಿ ಬೇಕು' ಎಂಬ ಸಂದೇಶಕ್ಕೆ ಹೆಚ್ಚಿನ ಅರ್ಥವಿದೆ, ಹೆಚ್ಚಿನ ಮೌಲ್ಯವಿದೆ. ದೇಶಾದ್ಯಂತ ಯುದ್ಧದ ಪರ ವಿರೋಧದ ಚರ್ಚೆ ಜೋರಾಗಿರುವಾಗ ಇತ್ತ ಧಾರವಾಡದಲ್ಲಿ ಮಹಿಳೆಯರು ಕಪ್ಪು ಉಡುಗೆಯಲ್ಲಿ ದೀಪಧಾರಿಗಳಾಗಿ ಒಂದು ತಾಸು ಮೌನವಾಗಿ ನಿಂತು 'ಬೆಳಗೋಣ ಸಾಲು ದೀಪ. ನಮಗೆ ಯುದ್ಧ ಬೇಡ, ಶಾಂತಿ ಬೇಕು' ಎಂದು ತಮ್ಮ ಮೌನದ ಮೂಲಕ ದೇಶಕ್ಕೆ ಕರೆ ಕೊಡುತ್ತಿದ್ದಾರೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಾಹಿತ್ಯ ಸಮ್ಮೇಳನದಲ್ಲಿ ಒಕ್ಕೂಟ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಮನುವಾದ ಎತ್ತಿಹಿಡಿದ ಕನ್ನಡ ಸಾಹಿತ್ಯ ಸಮ್ಮೇಳನ

**– ಸುನಂದಾ ಕಡಮೆ**

**2019**ರ ಜನೆವರಿ 5, 6 ಮತ್ತು 7 ರಂದು ನಮ್ಮ ಧಾರವಾಡದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಸಮ್ಮೇಳನಾಧ್ಯಕ್ಷರ ಸ್ವಾಗತದಲ್ಲಿ ಸಾವಿರದೊಂದು ಸುಮಂಗಲಿಯರಿಂದ ಪೂರ್ಣಕುಂಭ ಮೆರವಣಿಗೆಯನ್ನು ಆಯೋಜಿಸಿದ್ದೇವೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆ ಹೊರಡಿಸಿದಾಗಲೇ ನಮ್ಮೆಲ್ಲರ ಹುಬ್ಬು ಮೇಲಕ್ಕೇರಿತು. ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರನ್ನು ಬಳಸಿಕೊಂಡು ಸಾವಿರದೊಂದು ಅಮಾಯಕ ಮಹಿಳೆಯರಿಗೆ ಒಂದು ಸೀರೆ ಹಾಗೂ ಒಂದು ಚಿತ್ರಾಲಂಕಾರದ ಮಡಿಕೆಗಳ ಆಮಿಷ ತೋರಿಸಿ, ಶಾಸ್ತ್ರ ಸಂಪ್ರದಾಯ ಸಂಸ್ಕೃತಿಯ ಕಾರಣ ಕೊಟ್ಟು, ಅದೂ ಬರಿಗಾಲಲ್ಲಿ ಧಾರವಾಡದ ಮಧ್ಯ ಭಾಗದಿಂದ ಸಮ್ಮೇಳನ ನಡೆವ ಕೃಷಿ ವಿಶ್ವ ವಿದ್ಯಾಲಯದ ಸುಮಾರು ಐದು ಕಿ.ಮೀ ರಸ್ತೆಯನ್ನು ಸರ್ವಾಧ್ಯಕ್ಷರ ಮೆರವಣಿಗೆಯ ನೆಪದಲ್ಲಿ ನಡೆಯಿಸುವ ಹುಚ್ಚು ವಿಚಾರ ರೂಪಗೊಂಡಿದ್ದು ವಿಶೇಷವಾಗಿ ನಮ್ಮ ತಳಮಳಕ್ಕೆ ಕಾರಣವಾಯಿತು. ನಮ್ಮ ಒಕ್ಕೂಟದಲ್ಲಿ ಈ ಕುರಿತು ಚರ್ಚೆ ನಡೆದು, ಎಲ್ಲರ ಅಭಿಮತದ ಮೂಲಕ ಒಂದು ಮಂಡನೆಯನ್ನು ಕೈಗೊಂಡೆವು.

ಫೇಸ್‌ಬುಕ್ ವಾಟ್ಸಆಪ್ ಮುಂತಾದ ಸಾಮಾಜಿಕ ಜಾಲತಾಣಗಳ ಮೂಲಕ ಮತ್ತು ಪತ್ರಿಕೆ ಹಾಗೂ ಟೀವಿ ಮಾಧ್ಯಮಗಳಲ್ಲಿ ನಮ್ಮ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಸುಮಂಗಲಿಯರ ಕುಂಭ ಮೆರವಣಿಗೆಯನ್ನು ವಿರೋಧಿಸಿ 'ಸುಮಂಗಲಿಯರು ಪದವನ್ನು ನೀವು ಯಾವ ಅರ್ಥದಲ್ಲಿ ಬಳಸುತ್ತಿದ್ದೀರಿ? ಸಮಾನತೆಯ ಸಮಾಜ ಕಟ್ಟಲು ಕೈ ಜೋಡಿಸಬೇಕಾದ ಕನ್ನಡ ಸಾಹಿತ್ಯ ಪರಿಷತ್ತು ಹೀಗೆ ಸುಮಂಗಲಿಯರು ಅಮಂಗಲಿಯರು ಎಂಬ ತಾರತಮ್ಯ ಎಣಿಸುವುದು ಖೇದದ ಸಂಗತಿಯಲ್ಲವೇ? ಮಠಮಾನ್ಯಗಳಲ್ಲಿ ಒಂದು ಧಾರ್ಮಿಕ ಸಂಪ್ರದಾಯವಾಗಿ ರೂಢಿಯಲ್ಲಿರುವ ಈ ಕುಂಭಮೇಳ ಪದ್ಧತಿ ಹಲವಾರು ಮತಧರ್ಮದವರು ಸಮಾನತೆಯ ಭಾವದಿಂದ ಭಾಗವಹಿಸುವ ಸಾರ್ವಜನಿಕ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಪೂರ್ಣಕುಂಭ ಮೆರವಣಿಗೆಯಂತಹ ಆಚರಣೆಗಳು ಬೇಕೆ? ಈ ಸಾಮಾಜಿಕ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಿ, ಇಲ್ಲದಿದ್ದರೆ ಒಕ್ಕೂಟದಿಂದ ನಾವು ಪ್ರತಿರೋಧದ ಹೋರಾಟವನ್ನು ಕೈಗೊಳ್ಳುತ್ತೇವೆ' ಎಂಬ ಎಚ್ಚರಿಕೆಯನ್ನು ನಾಡಿನಾದ್ಯಂತ ಪಸರಿಸಿದವು. ಆ ನಂತರ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

'ಸುಮಂಗಲಿಯರು' ಎಂಬ ಪದವನ್ನು ತೆಗೆದು ಹಾಕಿದ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು, ಈ ಪೂರ್ಣ ಕುಂಭ ಮೆರವಣಿಗೆಯಲ್ಲಿ ವಿಧವೆಯರೂ ಮತ್ತು ತೃತೀಯ ಲಿಂಗಿಗಳೂ ಭಾಗವಹಿಸಬಹುದು ಎಂಬ ಹೇಳಿಕೆಯನ್ನು ನೀಡಿದ್ದರು. ಆ ಮೆರವಣಿಗೆಯನ್ನೇ ನಿಲ್ಲಿಸುವ ಕುರಿತು ಕಿಂಚಿತ್ತೂ ಪರಿಷತ್ತು ಯೋಚಿಸಲಿಲ್ಲವಲ್ಲ ಎಂಬ ದುಗುಡ ನಮ್ಮೆಲ್ಲರನ್ನೂ ಆವರಿಸಿತು. ನಮ್ಮ ಪ್ರತಿರೋಧ ಕೇವಲ ಸುಮಂಗಲಿಯರು ಎಂಬ ಪದವನ್ನು ತೆಗೆದು ಹಾಕುವಷ್ಟಕ್ಕೇ ಪ್ರತಿಫಲಿತಗೊಂಡಿದ್ದು, ಅಷ್ಟಕ್ಕೇ ನಾವು ಸಮಾಧಾನ ಪಟ್ಟುಕೊಳ್ಳುವಂತಾಯಿತು.

ಆದರೆ ಒಕ್ಕೂಟದ ವಿರೋಧ ಮಾತ್ರ ಅಲ್ಲಿಗೇ ನಿಲ್ಲಲಿಲ್ಲ. ಅದು ಇನ್ನೂ ಸುಸಜ್ಜಿತವಾಗಿ ನಡೆದು, ರಾಜ್ಯ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ವಹಿಸುತ್ತಿದ್ದ ಮಂತ್ರಿ ಜಯಮಾಲಾ ಅವರಿಗೂ ಹಾಗೂ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನವನ್ನು ಅಲಂಕರಿಸಲಿರುವ ಹಿರಿಯ ಸಾಹಿತಿ ಚಂದ್ರಶೇಖರ ಕಂಬಾರರಿಗೂ ಮೇಲ್ ಮೂಲಕ ಪತ್ರಗಳನ್ನು ಕಳುಹಿಸಿ, ಈ ಪೂರ್ಣಕುಂಭ ಮೇಳವನ್ನು ನಿಲ್ಲಿಸದೇ ಇದ್ದರೆ, ಸಮ್ಮೇಳನದ ಅಂಗಳದಲ್ಲೇ ಅಗತ್ಯ ಹೋರಾಟ ಕೈಗೊಳ್ಳುವುದಾಗಿ ತಿಳಿಸಿದೆವು. ಯಾರಿಂದಲೂ ಸರಿಯಾಗಿ ಜವಾಬು ಬಾರದ ಕಾರಣ, ನಾವು ಸಮ್ಮೇಳನದ ಪುಸ್ತಕ ಮಳಿಗೆಗಳ ಸಾಲಿನಲ್ಲಿ ಒಂದನ್ನು ಬಾಡಿಗೆಗೆ ಪಡೆದು, ಅಲ್ಲಿ ಸಮ್ಮೇಳನದ ಮೊದಲ ದಿನವೇ ಆಗಮಿಸಿದ ಜನರಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಕುರಿತು ಹಾಗೂ ಮಾರ್ಚ್ ಎಂಟಕ್ಕೆ ನಡೆವ ಮಹಿಳಾ ಸಮಾವೇಶದ ಕುರಿತು ಕರಪತ್ರ ಹಂಚಿ ಮಾಹಿತಿಯನ್ನು ನೀಡಲು ನಿರ್ಧರಿಸಿದೆವು.

ಹಟಕ್ಕೆ ಬಿದ್ದಂತೆ ಪೂರ್ಣಕುಂಭ ಮೆರವಣಿಗೆಯನ್ನು ನಡೆಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು ನಾಚಿಕೆಗೇಡಿತನ ಮೆರೆದರು. ಸಮ್ಮೇಳನದ ದಿನ ಬೆಳಿಗ್ಗೆ ಏಳು ಘಂಟೆಗೆ ಜಿಲ್ಲಾಡಳಿತ ನೀಡಿದ ಸೀರೆಯನ್ನು ಉಟ್ಟು ತಲೆಯಲ್ಲಿ ನೀರು ಹಾಗೂ ಮೇಲೊಂದು ತೆಂಗಿನಕಾಯನ್ನು ಇರಿಸಿಕೊಂಡ ಗಡಿಗೆಗಳನ್ನು ಹೊತ್ತ ಸಾವಿರಾರು ಮಹಿಳೆಯರು, ನಿರ್ಧರಿತ ಸ್ಥಳದಿಂದ ಮೆರವಣಿಗೆ ಹೊರಡಲೇ ತಡವಾಗಿ ಮಧ್ಯಾಹ್ನ ಹನ್ನೊಂದು ಹನ್ನೆರಡರ ಬಿರುಬಿಸಿಲಿನ ಹೊತ್ತಿಗೆ ಸಾಲಾಗಿ ಕೃಷಿ ವಿಶ್ವವಿದ್ಯಾಲಯದತ್ತ ನಡೆದಿದ್ದು ಕರುಣಾಜನಕವಾಗಿ ಕಾಣುತ್ತಿತ್ತು. ನಡೆನಡೆದು ಹೈರಾಣಾದ ಹೆಣ್ಣುಮಕ್ಕಳು ಮೆರವಣಿಗೆ ಹೋಗುವ ರಸ್ತೆಯಲ್ಲಿ ಅಲ್ಲಲ್ಲಿ ಸುಸ್ತು ಹೋಗಲಾಡಿಸಲು ಕೂತು ನೀರು ಕುಡಿಯುತ್ತಿರುವುದು ಸಾಮಾನ್ಯವಾಗಿ ಕಾಣಬಹುದಿತ್ತು. ಎಷ್ಟೋ ಹೆಣ್ಣುಮಕ್ಕಳ ಪಾದಗಳಿಗೆ ಬಿಸಿಲಲ್ಲಿ ಕಾದ ರಸ್ತೆಯ ಝಳದಿಂದ ಬೊಕ್ಕೆಗಳೆದ್ದವು. ಕೆಲವರು ನಡೆಯಲಾಗದೇ ಅರ್ಧ ದಾರಿಯಲ್ಲೇ ಮನೆಗೆ ತೆರಳಿದ್ದರು. ಕೆಲವರನ್ನು ಅವರ ಪರಿಚಿತರು ಆಟೋ ಹತ್ತಿಸಿ ಕಳಿಸಿದ್ದರು.

ಆಗಲೇ ಕೆಲ ಅಧಿಕಾರಿಗಳಿಂದ 'ನೀವು ಪ್ರತಿಭಟಿಸುವುದು ಸರಿ, ಆದರೆ ಸ್ವಲ್ಪ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ತಡವಾಯಿತು. ಮೆರವಣಿಗೆಯ ಮಹಿಳೆಯರಿಗಾಗಿ ಈಗಾಗಲೇ ಸಾವಿರಾರು ಸೀರೆಗಳು ಹಾಗೂ ಅಲಂಕಾರದ ಮಡಿಕೆಗಳಿಗೆ ಆರ್ಡರ್ ಕೊಟ್ಟಿದ್ದು, ಅವೆಲ್ಲ ಬಂದು ದಾಸ್ತಾನಾಗಿದ್ದವು. ಹಾಗಾಗಿ ನಡೆಸಬೇಕಾಯಿತು' ಎಂಬಂತಹ ಬೇಜವಾಬ್ದಾರಿ ಹೇಳಿಕೆಗಳು ಕೇಳಿ ಬಂದವು. ಅದಕ್ಕೆ ವಿರುದ್ಧವಾಗಿ ಪ್ರತಿಭಟನೆಯನ್ನು ಹಮ್ಮಿಕೊಂಡ ನಮ್ಮ ಒಕ್ಕೂಟದ ಸಂಗಾತಿಗಳು ಸಾಂಕೇತಿಕವಾಗಿ ಸಮ್ಮೇಳನಕ್ಕೆ ಬಂದ ಗಣ್ಯರನ್ನು ನಮ್ಮ ಒಕ್ಕೂಟದ ಮಳಿಗೆಯೊಳಗೆ ಆಹ್ವಾನಿಸಿ, ಅವರ ರಟ್ಟೆಗಳಿಗೆ ಕಪ್ಪು ಪಟ್ಟಿಯನ್ನು ಕಟ್ಟಿದೆವು. ಅಷ್ಟೇ ಅಲ್ಲದೇ ದೊಡ್ಡ ಬಿಳಿಯ ಹಾಳೆಗಳಲ್ಲಿ 'ಪೂರ್ಣಕುಂಭ ಮೆರವಣಿಗೆಗೆ ವಿರೋಧ ಇದ್ದವರು ಇಲ್ಲಿ ಸಹಿ ಅಥವಾ ಇಂಕಿನ ನೀಲಿಯ ಹಸ್ತ ಒತ್ತಿ' ಎಂದು ಬರೆದು, ಹಲವಾರು ಸಹೃದಯರಲ್ಲಿ ಪೂರ್ಣಕುಂಭ ಮೆರವಣಿಗೆಯ ಅನರ್ಥದ ಕುರಿತು ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾದೆವು. ಹಾಗೆ ಹಸ್ತ ಮೂಡಿಸಿ ಸಹಿ ಹಾಕಿದವರಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದದ್ದು ಸಾರ್ಥಕ್ಯದ ಭಾವ ಮೂಡಿಸಿತ್ತು.

ಈ ವಿಷಯ ಎಲ್ಲೆಡೆ ಸುದ್ದಿಯಾಗಿ, ಸಮ್ಮೇಳನದ ಸುರಕ್ಷಿತತೆಗೆ ನಿಂತ ಒಂದು ಪೊಲೀಸರ ತಂಡ ನಮ್ಮ ಮಳಿಗೆಗೆ ಆಗಮಿಸಿ, ಮೊದಲಿಗೆ ವಿನಯದಿಂದಲೇ ಕಪ್ಪು ಪಟ್ಟಿಕಟ್ಟುವುದನ್ನು ನಿಲ್ಲಿಸಬೇಕಾಗಿ ಕೇಳಿಕೊಂಡಿತು. ನಾವದಕ್ಕೆ ಬಗ್ಗದೇ ಅವರೆದುರೇ ಅನೇಕರ ಕೈಗಳಿಗೆ ಅಂದು ಕಪ್ಪು ರಿಬ್ಬನ್ ಕಟ್ಟಿದ್ದೆವು. ಆಗ ಕುಪಿತಗೊಂಡ ಪೊಲೀಸರು ನಮ್ಮ ಮಳಿಗೆಯೊಳಕ್ಕೆ ನುಗ್ಗಿ ದೊಡ್ಡ ಬಾಯಲ್ಲಿ ದನಿ ಎತ್ತರಿಸಿ ಮಾತನಾಡುತ್ತ, ನಮ್ಮಲ್ಲಿ ಇನ್ನೂ ಉಳಿದಿರುವ, ಕಪ್ಪು ಪಟ್ಟಿಗಳನ್ನು ಕಸಿದುಕೊಂಡು ಹೋದದ್ದಲ್ಲದೇ ಮೂರೂ ದಿನದುದ್ದಕ್ಕೂ ಪಕ್ಕದ ಮಳಿಗೆಯ ಕುರ್ಚಿಯಲ್ಲಿ ಕೂತು ಕಾವಲು ಕಾದರು. ಮಾರನೇ ದಿನದ ಪತ್ರಿಕೆಯ ಪ್ರಮುಖ ಸುದ್ದಿಯಾಗಿ ನಮ್ಮ 'ಕಪ್ಪು ಪಟ್ಟಿ ಪ್ರದರ್ಶನ' ವಿಷಯ ಪ್ರಕಟಗೊಂಡು ನಾಡಿನಾದ್ಯಂತ ಜಾಗೃತಿಯನ್ನು ಮೂಡಿಸಲು ಸಹಕಾರಿಯಾಗಿತ್ತು. ಈ ವಿಷಯವನ್ನು ಕೆದಕಿ ಪ್ರಶ್ನಿಸಿದ ಪತ್ರಿಕಾ ವರದಿಗಾರರಿಗೆ ಹಿರಿಯರಾದ ಚಂದ್ರಶೇಖರ ಕಂಬಾರರು ಬೇಜವಾಬ್ದಾರಿಯ ಉತ್ತರ ನೀಡಿ, 'ಇವೆಲ್ಲ ಇರುವುದೇ, ಅದಕ್ಕೆ ನೀವೇನೂ ತಲೆಕೆಡಿಸಿಕೊಳ್ಳಬೇಡಿ, ಯಾರಿಗೂ ಈ ಪೂರ್ಣ ಕುಂಭ ಮೆರವಣಿಗೆಯಿಂದ ತೊಂದರೆಯಾಗಿಲ್ಲ' ಎಂದಾಗ ನಮಗೆಲ್ಲ ದೊಡ್ಡ ಆಘಾತ. ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಅವರೇ 'ಈ ಕುಂಭಮೇಳದ ಸ್ವಾಗತ ತನಗೆ ಬೇಡ' ಎಂದು ಒಂದೇ ಮಾತು ಹೇಳಿ ತಿರಸ್ಕರಿಸಿದ್ದರೂ ಅಂದಿನ ಆ ಹೆಣ್ಣುಮಕ್ಕಳ ಅಂಥ ಅಸಹಜ ಮೆರವಣಿಗೆಯ ಹುಚ್ಚಾಟ ನಿಲ್ಲುತ್ತಿತ್ತು. ಎಲ್ಲರ ದೃಷ್ಟಿಯಲ್ಲಿ ಕಂಬಾರರು ಗೌರವ ಸಂಪಾದಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕಂಬಾರರು ಇಬ್ಬರೂ ಜಂಟಿಯಾಗಿ ನಿಂತು ಕೊನೆಗೂ ಮನುವಾದವನ್ನೇ ಪ್ರತಿಪಾದಿಸುತ್ತ ಹೆಣ್ಣುಮಕ್ಕಳ ಶೋಷಣೆಗೆ ಕೈಜೋಡಿಸಿದ್ದು ಎಂದಿಗೂ ಕ್ಷಮಾರ್ಹವಲ್ಲ ಎನ್ನಬಹುದು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಪುರುಷ ಜಂಭವ ಹೊತ್ತು

– ದಾಕ್ಷಾಯಿಣಿ ಹುಡೇದ

**ಕುಂ**ಬಾರ ಮಾಡಿದ ಪೂರ್ಣ ಕುಂಭವ
ಹೊತ್ತು ನಡೆದೆ ನಾನು ಸಖಿ
ಸಿಂಗಾರ ಮಾಡಿದ ಪುರುಷ ಜಂಭವ
ಹೊತ್ತು ನಡೆದೆ ನಾನು ಸಖಿ

ಹೊರುವುದಕೂ ಹೆರುವುದಕೂ
ನಾನೇ ಬೇಕು ಲೋಕಕೆ
ಗಂಗೆಯೇ ಇಲ್ಲದ ಅಕ್ಕಿಮಂಡಾಳದ
ಕುಂಭವ ಹೊತ್ತು ನಡೆದೆ ನಾನು ಸಖಿ

ಅಕ್ಷರವ ಹಂಚುವ ಕಸುಬುದಾರರು
ಪುಸ್ತಕ ಹಿಡಿದು ಮಾರಿದರು
ಅಕ್ಕ ಹಿಡಿದ ಹಾದಿಯ ದಿಕ್ಕು ತಪ್ಪಿಸುವ
ಕುಂಭವ ಹಿಡಿದು ನಡೆದೆ ನಾನು ಸಖಿ

ಮನುವಾದ ಮುಗಿದಿಲ್ಲ
ಇನ್ನೂ ನಡೆದಿದೆ ಮೆರವಣಿಗೆ
ನನ್ನತನವೇ ಇಲ್ಲದ ಆಡಂಬರದ
ಕುಂಭವ ಹೊತ್ತು ನಡೆದೆ ನಾನು ಸಖಿ

ಅರಿವುಳ್ಳ ದಾಚಿಯ ಧಿಕ್ಕಾರವಿದೆ
ನಿಮಗೆ ದೊರೆಗಳೆ
ಹೊಟ್ಟೆ ತುಂಬಿಸುವ ರಟ್ಟೆಗೆ ಕಸುವಾಗದ
ನಿಮ್ಮ ಕುಂಭವ ಹೊತ್ತು ನಡೆದೆ ನಾನು ಸಖಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅ-ಸ್ಪರ್ಶ

– ಸಬಿತಾ ಬನ್ನಾಡಿ

**ಮು**ಟ್ಟು ಮುಟ್ಟು ಮುಟ್ಟು
ಭೀತ ಚೇತನೆಯರ ಮನವ ಮುಟ್ಟು
ಒಂಟಿ ಬದುಕಿನ ಬೇಸರದ ಬೀಸರವ
ಒಡಲುಬ್ಬಸದ ಕಡಲ ಮೀಟಿ ಮುಟ್ಟು

ಶರಣು ಶರಣೆಂಬ ಘೋಷವ ದಾಟಿ
ನಿನ್ನಳಲು ಬಾನುಲಿಯೇ ಆಗಿ
ಜಡ್ಡುಗಟ್ಟಿದ ನೇತಿ ಮೋಡವ ಬಡಿದು
ಪ್ರೀತಿ ಮಳೆಯಿಳೆಗೆ ಸುರಿವಂತೆ ಮುಟ್ಟು

ಮುಟ್ಟು ಮುಟ್ಟು ಮುಟ್ಟು
ಕಣ್ಣನೋಟಕೂ ನಿನ್ನ ವಂಚಿಸುವರ
ಎದೆಯ ಮುಟ್ಟು
ಕಣ್ಣನೋಟದಲೇ ಹೆಣ್ಣ ಇರಿವವರ ನಿಜವ ಮುಟ್ಟು

ಮುಟ್ಟು ಮಮತೆಯ ಪಾದ
ಮುಟ್ಟು ಮಿದುಮಗಳ ಕದಪು
ಮುಟ್ಟು ಹೆಜ್ಜೆಗೆ ಹೆಜ್ಜೆ ಬೆಸೆವ
ಸಂಗಾತಿಯ ಮಿಡಿತ ಮುಟ್ಟು

ಮುಟ್ಟು ಮುಟ್ಟು ಮುಟ್ಟು
ಮುಟ್ಟಿಲ್ಲದೇ ಹುಟ್ಟಿದವನೇ?!
ಮುಟ್ಟು ನಿಂತವಳ ಬಸಿರ
ಬಿಸುಪ ಮುಟ್ಟು.
ಮುಟ್ಟು ಮುಟ್ಟು ಮುಟ್ಟು ಮುಟ್ಟು ...

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೇಳಬೇಕಿತ್ತು ಅಂದೇ

– ಡಾ. ಎಚ್. ಎಸ್. ಅನುಪಮಾ

ಇಂದೇಕೆ? ಅಂದೇ ಹೇಳಬೇಕಿತ್ತು ಎಂದೆಯಾ ತಂದೆ
ಕುಂಭ ಹಿಡಿದು ಮುಕಾಂಬೆಯಾಗಿ ಇರು ಎಂದಿರಿ
ಬಿರುಬಿಸಿಲಲೂ ಬರಿಗಾಲಲಿ ನಡೆ ಎಂದು ರಥವೇರಿದಿರಿ
ಹೇಳುವುದಾದರೂ ಹೇಗೆ? ಭೋಪರಾಕಿನ ಹೊರತು ಏನೂ ಕೇಳುವುದಿಲ್ಲ ನಿಮಗೆ

ಇಂದೇಕೆ, ಅಂದೇ ಹೇಳಬೇಕಿತ್ತು ಎಂದೆಯಾ ತಂದೆ
ಹುಶಾರ್, ಬಂದೀರಿ, ಪಟ್ಟಗತ್ತಿಗಳು ಕಾದಿವೆ ಎಂದಿರಿ
ಮೊಲೆಯೋನಿಗಳು ಸ್ರವಿಸುತಿವೆ ಗಿರಿಯನೇರಬೇಡ ಎಂದಿರಿ
ಕಠುವಾದ ದೇವತೆ ಕಣ್ಮುಚ್ಚಿ ಕಲ್ಲಾಗಿರುವಾಗ
ಇಗರ್ಜಿಯ ಗೋಡೆ ಕಲ್ಲುಗಳೂ ನನ್ನ ಹೊರಲು ಶಿಲುಬೆಯಾಗಿರುವಾಗ
ಅರಗಿನರಮನೆಯೇ ಸಿಂಗಾರೆವ್ವನ ಸುಟ್ಟು ಬೂದಿ ಮಾಡಿರುವಾಗ
ಹೇಳುವುದಾದರೂ ಹೇಗೆ? ಬೆಂಕಿ ಬೆಳಕು ಫರಕು ತಿಳಿಯಲಿಲ್ಲ ನಮಗೆ
ಕೈದೀಪ ಕಿಚ್ಚಾಗಿ ಸುಡುವುದೆಂದರಿವಾಗಲಿಲ್ಲ ನಮಗೆ

ಕೆಂಪು ನಿಮ್ಮದು ಹಳದಿ ನಿಮ್ಮದು
ಕೆಂಪು ಹಳದಿ ಬಣ್ಣ ಬಾವುಟಗಳೆಲ್ಲ ನಿಮದು
ಕೆಂಪು ನಿಮ್ಮದು ಹಳದಿ ನಿಮ್ಮದು
ಕೆಂಪು ಹಳದಿ ಪೇಟ, ಶಾಲು, ತುರಾಯಿಗಳೆಲ್ಲ ನಿಮದು
ನೆಲ ನಮ್ಮದಲ್ಲ ನಾವು ನೆಲದವರು
ಗಡಿ ನಮಗಿಲ್ಲ ನಾವು ನುಡಿಯವರು
ತೇರು ನಮದಲ್ಲ ನಾವು ಕನ್ನಡಮ್ಮನ ಒಕ್ಕಲು
ಕಿತ್ತೂರಿನ ಕತ್ತಿ ಕಿತ್ತಿರಿ ದುರ್ಗದ ಒನಕೆ ಒಗೆದಿರಿ
ಬೆಳವಡಿಯ ಪತಾಕೆ ಸುಟ್ಟಿರಿ
ಇಂದೇಕೆ? ಅಂದೇ ಹೇಳಬೇಕಿತ್ತು ಎಂದರೆ
ಹೇಳುವುದಾದರೂ ಹೇಗೆ? ಎದೆ ನೆಲದ ಭಾಷೆ ತಿಳಿಯುವುದೇ ಇಲ್ಲ ನಿಮಗೆ
ಅದೆಷ್ಟು ಹೆಣ್ಣುಗಳ ನೆತ್ತರ ಕುಡಿದಿದೆಯೋ ಈ ನೆಲ
ದಾಸವಾಳ ಇನ್ನೆಲ್ಲೂ ಇಲ್ಲದಷ್ಟು ಕೆಂಪಾಗಿ ಅರಳಿದೆ..

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇಂದೇಕೆ? ಅಂದೆ ಕೊಡಿಸಬಹುದಿತ್ತು ನ್ಯಾಯ ಎಂದೆಯಾ ತಂದೆ
ನ್ಯಾಯವೆಂದರೆ ಎದುರಿರುವವರ ಶಿಕ್ಷಿಸುವುದೆ?
ಮಾಗಿ ಋತು ಕರುಣದ ಕೊನೆ ಹನಿಗಳನುದುರಿಸಿದೆ
ಮೆಟ್ಟುವವರೆದುರೇ ತಲೆಯೆತ್ತಿ ಬೆಳೆಯುವೆವು ಗರುಕೆಯಂತೆ

ಬಾಬಾ ಇದ್ದಾರೆ ನಮಗೆ ಬಾಪು ಇದ್ದಾರೆ ನಮಗೆ
ಸಾವಿತ್ರಿ ಇದ್ದಾಳೆ ನಮಗೆ ಕರುಣದ ಗುರು ಇದ್ದಾನೆ ನಮಗೆ
ಮಾತು ಕಸಿದೀರಿ ಮೌನ ಕಸಿಯಬಹುದೆ
ಹಾಡು ನಿಲಿಸೀರಿ ಎದೆಗವಿತೆ ಅಳಿಸಬಹುದೆ
ದೀಪ ಕಸಿದೀರಿ ಬೆಳಕು ತಡೆಯಬಹುದೆ
ಬರೆಯಲಿದ್ದೇವೆ ಪ್ರೀತಿ ಚಿತ್ತಾರವ ಖಾಲಿ ಕುಂಭಗಳ ಮೇಲೆ
ತುಂಬಲಿದ್ದೇವೆ ಕುಂಭ ಹೊತ್ತ ಅಕ್ಕಂದಿರೆದೆಗಳಲಿ ದಿಟದ ದಿಟ್ಟ ಕವಿತೆ

ಯಾರೆಂದವರು ಮರ ಅಚಲವೆಂದು?
ಅದು ನಿಂತಲ್ಲೆ ಪ್ರತಿಕ್ಷಣ ನಡೆಯುವುದು..
ಕೈಗೆಕ್ಕೆ ಜೋಡಿಸಿ ಮೆರವಣಿಗೆ ಹೊರಡಲಿದ್ದೇವೆ ತಂದೆ
ಬಣ್ಣ ಬಾವುಟ ಪೇಟ ಹಾರ ತುರಾಯಿಗಳೆಲ್ಲ ಇರಲಿ ನಿಮಗೆ

ನಾವು, ಈ ನೆಲದ ಹೆಣ್ಣುಗಳು, ಅದೋ ನೋಡಿ,
ಕೈಗೆಕ್ಕೆ ಜೋಡಿಸಿ ಮೆರವಣಿಗೆ ಹೊರಟಿದ್ದೇವೆ
ಧನ್ಯವಾದ ನಿಮಗೆ ಕೊಟ್ಟಿರುವ ಎಳ್ಳುಕಾಳಿಗೆ, ಕಸಿದುಕೊಂಡ ಕುಂಬಳಕ್ಕೆ
ಧನ್ಯವಾದ ನಿಮಗೆ, ನಮ್ಮ ದಾರಿ ನಮಗೆ ತೋರಿಸಿದ್ದಕ್ಕೆ..
ಧನ್ಯವಾದ ನಿಮಗೆ, ನಮ್ಮ ದಾರಿಯೇನೆಂದು ನಮಗೆ ನೆನಪಿಸಿದ್ದಕ್ಕೆ..

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನಮ್ಮ ಸೀಟು ನಮ್ಮದು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಮತ್ತೆ ಬರಬಾರದೇ ಧಾರವಾಡದಲ್ಲಿ ಮಹಿಳಾ ಸಮ್ಮೇಳನ!

**– ವಿಜಯಲಕ್ಷ್ಮಿ ಗದಗಿನ**

ಲಿನೆಟ್ ಸಿಸ್ಟರ್ ಜೊತೆಗೆ ದೀಕ್ಷಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನಾವೆಲ್ಲ ಬಹಳ ದಿನಗಳಿಂದಲೂ ಧಾರವಾಡದ ಸುತ್ತಮುತ್ತಲಿನ ಸರಕಾರಿ ಶಾಲೆಗಳಲ್ಲಿ ಮಕ್ಕಳೊಂದಿಗೆ ಬೇಎ ಬೇರೆ ಸಾಮಾಜಿಕ ವಿಷಯಗಳ ಕುರಿತು ಚರ್ಚಿಸುತ್ತಿರುತ್ತೇವೆ. ಈ ವರ್ಷ ಧಾರವಾಡದಲ್ಲಿ ಮಹಿಳಾ ಸಮ್ಮೇಳನವಂತೆ, ಅದರ ತಯಾರಿಯಾಗಿ ಶಾಲೆಗಳಿಗೆ ಹೋಗಿ ಅರಿವಿನ ಪಯಣ ಎಂಬ ಕಾರ್ಯಕ್ರಮವನ್ನು ಮಾಡುವುದಂತೆ ಎಂದಾಗ ನಮಗೇನೋ ಸಂತಸ. ಹೊಸ ಹೊಸ ಜನರ ಭೇಟಿ, ಹೊಸ ಹೊಸ ವಿಚಾರಗಳು, ಹೊಸ ಹೊಸ ಕಾರ್ಯಕ್ರಮಗಳನ್ನು ನಮ್ಮ ಶಾಲಾ ಮಕ್ಕಳಿಗೆ ಕೊಂಡೊಯ್ಯುವುದೆಂದು ಉತ್ಸಾಹ. ನೋಡ ನೋಡುತ್ತಿರುವಂತೆಯೇ ಮಾರ್ಚ್ 8 ಸಮೀಪಿಸಿಯೇ ಬಿಡುತ್ತಿದೆ. ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡಬೇಕು, ಬಸ್ಸುಗಳಲ್ಲಿ ಮಹಿಳೆಯರ ಮೀಸಲು ಸೀಟುಗಳನ್ನು ಅವರಿಗೇ ಬಿಟ್ಟುಕೊಡಿ ಅಂತ ಅಭಿಯಾನ ಮಾಡುವುದು, ಕಾರ್ಯಕ್ರಮದ ಸಲುವಾಗಿ ನಾವೇ ಹಣ ಸಂಗ್ರಹಣೆಯನ್ನೂ ಮಾಡುವುದು! ಕಾರ್ಯಕರ್ತರ ಗುಂಪಿಗೋ ಉತ್ಸಾಹವೇ ಉತ್ಸಾಹ!

ಬಸ್ ಅಭಿಯಾನ ಮತ್ತು ಸಂತೆಗಳಲ್ಲಿ ಜನಸಾಮಾನ್ಯರಿಂದ ಹಣ ಸಂಗ್ರಹಣೆಗಳಲ್ಲಿ ನಾನು ಹೆಚ್ಚಾಗಿ ಪಾಲುದಾರಳಾಗಿ ಕೆಲಸ ತೆಗೆದುಕೊಂಡೆ. ಮೊದಲಿಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಯುವ್ಯ ಘಟಕದ ಕಾರ್ಯನಿರ್ವಾಹಕ ಅಧಿಕಾರಿ ಚೋಳನ್ ಅವರಲ್ಲಿ ಕೇಳಿಕೊಂಡಾಗ ಅವರು ಬಂದು ಕಾರ್ಯಕ್ರಮ ಉದ್ಘಾಟಿಸಿದರು. ಕೆ.ಎಸ್.ಆರ್.ಟಿ.ಸಿ. ಯೂನಿಯನ್‌ನವರು ನಮ್ಮ ಅಭಿಯಾನಕ್ಕೆ ಬಹುವಾಗಿ ಜೊತೆಗೂಡಿ ನಿಂತರು. ಕಂಡಕ್ಟರ್ ಮತ್ತು ಚಾಲಕರು ಕೂಡ ನಮಗೆ ಬಹುವಾಗಿ ಪ್ರೋತ್ಸಾಹಿಸಿ ನಾವು ಮಾಡಬೇಕಾದ ಕಾರ್ಯವನ್ನು ನೀವು ಮಾಡುತ್ತಿದ್ದೀರಿ ಎಂದು ಶ್ಲಾಘಿಸಿದರು. ಹುಬ್ಬಳ್ಳಿಯಿಂದ ಧಾರವಾಡಕ್ಕೆ ಹೋಗುವ ಬಸ್ ಹತ್ತಿ ಟಿಕೆಟ್ ಪಡೆಯುತ್ತಿದ್ದೆವು. ಒಬ್ಬರು ಚಿಕ್ಕದಾಗಿ ನಮ್ಮ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಬಗೆಗೂ, ಒಬ್ಬರು ಬಸ್ ಅಭಿಯಾನದ ಬಗೆಗೂ ಹೇಳಿ ಹೆಣ್ಣುಮಕ್ಕಳಿಗೆ ಬಸ್ಸಿನಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮೀಸಲಿಟ್ಟಿರುವ ಸೀಟುಗಳನ್ನು ಅವರಿಗೇ ಬಿಟ್ಟುಕೊಡಬೇಕಾದ ಮಹತ್ವವನ್ನು ವಿವರಿಸುತ್ತಿದ್ದೆವು. ಸಾವಕಾಶವಾಗಿ ಗಂಡಸರ ಬಳಿ ಹೋಗಿ 'ಈ ಸೀಟು ನಿಮ್ಮದಲ್ಲ ಅಣ್ಣಾರೀ, ಹೆಣ್ ಮಕ್ಕಳಿಗೆ ಬಿಟ್ಟುಕೊಡ್ರಿ' ಎಂದು ಕೇಳುವುದು. ಸಾಕಷ್ಟು ಗಂಡಸರು ಸೀಟು ಬಿಟ್ಟುಕೊಡಲು ತಕರಾರು ಮಾಡುವರು. ನಾವು ಬಿಡಬೇಕಲ್ಲ. ಪಟ್ಟು ಹಿಡಿದು, ಆದರೆ ವಿನಯದಿಂದಲೇ ತಿಳಿಹೇಳಿ ಅವರನ್ನು ಎಬ್ಬಿಸಿ ನಿಂತುಕೊಂಡಿರುವ ಮಹಿಳೆಯರನ್ನು ಕೂಡಿಸುವ ಕೆಲಸ ಮಾಡಿದೆವು.

ಎಲ್ಲರನ್ನೂ ಅವರವರ ಸ್ಥಾನದಲ್ಲಿ ಕೂಡ್ರಿಸಿಯಾದ ಮೇಲೆ ಮತ್ತೆ ಹಾಡು. 'ತೂರಬೇಡಿ ಗಾಳಿಗೆ... .' ಒಂದಿಬ್ಬರು ತಾವು ಹೊದೆದಿರುವ ದುಪ್ಪಟ್ಟಾವನ್ನೇ ಮುಂದೆ ಮಾಡಿ 8,9 ರಂದು ನಡೆಯುವ ದೊಡ್ಡ ಮಟ್ಟದ ಸಮಾವೇಶಕ್ಕೆ ಸಾರ್ವಜನಿಕರಿಂದಲೇ ಹಣ ಸಂಗ್ರಹಣೆ ಆಗಬೇಕು. ನಮ್ಮ ಧಾರವಾಡಕ್ಕೆ ದೂರ ದೂರದಿಂದ ಜನ ಬರುತ್ತಿದ್ದಾರೆ. ಆತಿಥ್ಯಕ್ಕಾಗಿ ಹಣ ಕೊಡಿ. ಉದಾರವಾಗಿ ದಾನ ಮಾಡಿ ಎಂದು ಭಾಷಣ ಬಿಗಿದು ಸೆರಗೊಡ್ಡುವುದು. ಹತ್ತು ರೂಪಾಯಿ ಒಬ್ಬರ ಕೈಯಿಂದ ಬೀಳುತ್ತಲೆ ಪಕ್ಕದಲ್ಲಿ ಕುಳಿತವರು ಸುಮ್ಮನಿರುವುದು ಹೆಗೆ? ಅವರಿಂದಲೂ ಹತ್ತು ರೂಪಾಯಿ. . ಹೀಗೆ ಅರ್ಧ ದಾರಿ ಕ್ರಮಿಸಿದ ಮೇಲೆ ಬಸ್ಸಿನಿಂದ ಇಳಿಯುವುದು. ರಸ್ತೆ ದಾಟಿ ಮತ್ತೆ ಹುಬ್ಬಳ್ಳಿಯ ಬಸ್ ಏರುವುದು. ಮಧ್ಯಾಹ್ನದ ಹೊತ್ತಿಗೆ ಎಲ್ಲರ ಮಡಿಲು ಚಿಲ್ಲರೆ ಹಣದಿಂದ ಭರ್ತಿಯಾಗಿರೋದು.

ಒಂದೆರಡು ದಿನಗಳಲ್ಲಿ ಕೊಪ್ಪಳದಿಂದ ಹೆಚ್ಚು ಮಿತ್ರರು ನಮ್ಮ ಜೊತೆಗೆ ಸೇರಿಕೊಂಡರು. ನಾಲ್ಕು ಗುಂಪುಗಳನ್ನಾಗಿ ವಿಭಜಿಸಿಕೊಂಡೆವು. ಒಂದು ಗುಂಪು ಹುಬ್ಬಳ್ಳಿ ಕಡೆಗೆ, ಒಂದು ಗುಂಪು, ಯುನಿವರ್ಸಿಟಿ ಕಡೆಗೆ, ಇನ್ನೊಂದು ಮದಿಹಾಳ ಕಡೆಗೆ ಮತ್ತೊಂದು ಯಾವುದಾದರೊಂದು ಹಳ್ಳಿ ಕಡೆಗೆ, ನಾಲ್ಕು ಗುಂಪುಗಳು ಒಂದೊಂದು ದಿಕ್ಕಿನಲ್ಲಿ ಹೊರಟೆವು. ನಮ್ಮ ಉತ್ಸಾಹದಲ್ಲಿಯೇ ಹಾಡೊಂದು ಕೂಡ ಹುಟ್ಟಿಕೊಂಡಿತು. ನಾಲ್ಕಾರು ಕಂಜರಾಗಳು ಜೊತೆಯಾದವು. ಹಾಡುಗಾರರೂ ಸೇರಿಕೊಂಡಾಗ ಇಮ್ಮಡಿ ಉತ್ಸಾಹ.

ಮಾತನಾಡಕ್ಕಯ್ಯ ಮಾತನಾಡು!
ನಿನ್ನ ಹಕ್ಕಿಗಾಗಿ ದನಿಯೆತ್ತಿ ಮಾತನಾಡು!!

ಹಾಲುಮಾರೋ ಹನುಮವ್ವ ಮಾತನಾಡು!
ಮಾಲೆಕಟ್ಟೋ ಮಂಗಳವ್ವ ಮಾತನಾಡು!!
ಕಾಯಿಪಲ್ಲೆ ಕಸ್ತೂರೆವ್ವ ಮಾತನಾಡು!
ನಮ್ಮ ಬಸ್ಸು ನಮ್ಮದೆಂದು ಮಾತನಾಡು!!

ಕುಂತೋರನ್ನ ಎಬ್ಬಿಸೋಕೆ ಮಾತನಾಡು!
ನಿಂತ ತಾಯಿನ್ ಕೂಡಿಸೋಕೆ ಮಾತನಾಡು!

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇದು ನಮ್ಮ ಬಸ್ಸೆಂದು ಮಾತನಾಡು!

ನಮ್ಮ ಸೀಟು ನಮ್ಮದೆಂದು ಮಾತನಾಡು!!

ನಾಲ್ಕು ದಿನಗಳ ಕಾಲ ಸತತವಾಗಿ ಬಸ್ ಅಭಿಯಾನ ನಾಲ್ಕಾರು ದಿಕ್ಕುಗಳಲ್ಲಿ ನಡೆಯಿತು. ಜನರು ನಮ್ಮ ಹಾಡುಗಳನ್ನು, ಮಾತುಗಳನ್ನು ಆಲಿಸಿದರು. ಪ್ರತಿಕ್ರಿಯಿಸಿದರು. ನಾವು ಕೊಟ್ಟ ಕರಪತ್ರಗಳನ್ನು ಓದಿದರು. ಮಡಚಿ ಕಿಸೆಯಲ್ಲಿಟ್ಟುಕೊಂಡರು. ಉದಾರವಾಗಿ ಧನಸಹಾಯ ಮಾಡಿದರು. ಪ್ರತಿದಿನವೂ ಬಸ್ ಅಭಿಯಾನ ಮುಗಿಯುತ್ತಲೇ ವಾಪಸ್ ಬಂದು ಹಣ ಎಣಿಸುವುದು, ವಾಣಿ ಅಕ್ಕನಿಗೆ ಕೊಟ್ಟು ಲೆಕ್ಕ ಒಪ್ಪಿಸುವುದು.

ಪ್ರತಿದಿನ ಬೆಳಿಗ್ಗೆ ಸಂತೆಯಲ್ಲೊಂದು ಸುತ್ತು. ಅಲ್ಲಲ್ಲಿ ನಿಂತು ಎಲ್ಲರೂ ಸೇರಿ ದೊಡ್ಡ ಧ್ವನಿಯಲ್ಲಿ ಹಾಡು ಹೇಳಿ ಜನರ ಗಮನ ಸೆಳೆಯುವುದು, ಮಹಿಳಾ ಸಮಾವೇಶದ ಬಗ್ಗೆ ಮಾತನಾಡುವುದು, ಕಾರ್ಯಕ್ರಮಕ್ಕೆ ಉದಾರವಾಗಿ ದೇಣಿಗೆ ನೀಡಿ ಎಂದು ಕೈಯೊಡ್ಡುವುದು. ಕಂಜರಾ ಒಂದು ಗಳಿಗೆ ಹಾಡಿಗೆ ಸಾಥಿಯಾದರೆ, ಇನ್ನೊಂದು ಗಳಿಗೆಯಲ್ಲಿ ದೇಣಿಗೆ ಸಂಗ್ರಹಣೆ ಬುಟ್ಟಿ. ಹೂಮಾರುವವರು, ತರಕಾರಿ ಅಜ್ಜಿ, ಹಣ್ಣು ಮಾರುವ ಅಕ್ಕ ಎಲ್ಲರೂ ಎರಡನೇ ಮಾತಾಡದೇ ತಮ್ಮ ಸಂಚಿ ತೆಗೆದು ಕೈಗೆ ಸಿಕ್ಕಷ್ಟು ಹಣ ಹಾಕುವರು. ಕಡ್ಲೆ ಮಾರುವ ಅಜ್ಜಿಯೂ, ಬೂಟಂಗಡಿಯವರೂ ಒಂದೇ ಮೊತ್ತದ ದೇಣಿಗೆ ಕೊಟ್ಟಾಗ ನಾವು ಪರಸ್ಪರ ಮುಖ ನೋಡಿಕೊಳ್ಳುತ್ತಿದ್ದೆವು. ಕಿರಾಣಿ ಅಂಗಡಿಯವರು ಕೊಡಲು ಹಿಂದೆ ಮುಂದೆ ನೋಡಿದಾಗ ಕೈಮುಗಿದು ಹೊರಬರುತ್ತಿದ್ದೆವು. ನನಗೆ ಈಗಲೂ ಅನಿಸುತ್ತದೆ, ನಮ್ಮ ಸಮಾವೇಶ ನಡೆದದ್ದೇ ಬಡವರ ದೇಣಿಗೆಯಿಂದ ಎಂದು. ಎಲ್ಲವನ್ನೂ ಲೆಕ್ಕ ಮಾಡಿ ಶಾರದಾ ಪಾಟೀಲರ ಕೈಗೆ ಕೊಟ್ಟು ಲೆಕ್ಕ ಒಪ್ಪಿಸಿಬಿಟ್ಟರೆ ನಮ್ಮ ಕೆಲಸ ಮುಗಿಯಿತು. ಮುಂದೆ ಅವರು ಅದನ್ನು ನೀಟಾಗಿ ಪೈಸಾ ಪೈಸಾ ಲೆಕ್ಕ ಬರೆದಿಡೋರು.

ಈ ಅಭಿಯಾನ ನಡೆಸುತ್ತಿದ್ದಾಗ ನಾವು ಪ್ರತಿ ದಿನವೂ ನಮ್ಮ ಬುತ್ತಿಯನ್ನು ಕಟ್ಟಿಕೊಂಡು ಹೋಗುತ್ತಿದ್ದೆವು. ಒಂದು ಗುಂಪಿನವರು ಕೆಲಸ ಮುಗಿಸಿ ಬಂದರೂ ಇನ್ನುಳಿದ ಗುಂಪುಗಳಿಗಾಗಿ ಕಾಯುತ್ತಿದ್ದರು. ಅತ್ತ ಇನ್ನೂ ಕೆಲವು ಕಾಲೇಜುಗಳಲ್ಲಿ ಅರಿವಿನ ಪಯಣ ನಡೆದೇ ಇತ್ತು. ಎಲ್ಲರೂ ಬಂದಮೇಲೆಯೇ ಊಟ. ಅದೇನು ಊಟ ಅಂತೀರಿ! ಎಷ್ಟು ತರದ ಪಲ್ಲೆಗಳು, ಅದೆಷ್ಟು ತರದ ಚಟ್ನಿಗಳು, ಎಷ್ಟು ವಿಧದ ರೊಟ್ಟಿ, ಅನ್ನವೈವಿಧ್ಯ! ವಕೀಲರಾದ ಸುಶೀಲಾ ಪಾಟೀಲ ಅವರಿಗಂತೂ ಎಷ್ಟು ಕಟ್ಟಿಕೊಂಡು ಬಂದರೂ ತೃಪ್ತಿಯಿಲ್ಲ. ಎಷ್ಟು ನೀಡಿದರೂ ಸಾಕಾಗದು. 'ಎಲ್ಲರ ಊಟವನ್ನೂ ನಾನೊಬ್ಬೇ ತರ್ತೀನಿ. ನೀವೆಲ್ಲಾ ತರಾಕ್ ಹೋಗ್ಬ್ಯಾಡ್ರೀ' ಅನ್ನೋರು. ಆದರೂ ಎಲ್ಲರಿಗೂ ಏನಾದರೂ ಒಂದು ತಂದು ತಿನ್ನಿಸುವ ಆಸೆ. ಗಲಗಲಗಲ ಗದ್ದಲದ ನಡುವೆ ಊಟ, ಊಟದ ನಡುವೆಯೇ ಅನುಭವ ಹಂಚಿಕೆ, ಮುಂದಿನ ಪ್ಲಾನಿಂಗ್. ಯಾರ್ಯಾರು ಎಲ್ಲೆಲ್ಲಿ ಹೋಗಬೇಕು, ಯಾವ ಜವಾಬ್ದಾರಿ ತಗೋಬೇಕು ನಿರ್ಧಾರಗಳು. ಇನ್ನೂ ಬ್ಯಾನರ್

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆಗಬೇಕು, ಇನ್ನೂ ಜಾಥಾಕ್ಕೆ ಪೋಸ್ಟರ್ ಆಗಬೇಕು.

ಪೋಸ್ಟರ್ ಎನ್ನುತ್ತಲೇ 'ಅದಕ್ಕೇಕೆ ಖರ್ಚು ಮಾಡುವುದು, ಸೀರೆ ಅಂಗಡಿಗಳಿಂದ ಕಾರ್ಡ್ ಬೋರ್ಡುಗಳನ್ನು ತರೋಣ, ನಾವೇ ಕೈಯಲ್ಲಿ ಬರೆಯೋಣ' ಸಲಹೆ ಬಂದಾಗ ಎಲ್ಲರೂ ಒಕ್ಕೊರಲಿನಿಂದ ಸೈ ಎಂದರು. 'ಸರಿ ನಡಿ ನಾನು ಸೀರೆ ಅಂಗಡಿಗೆ ಹೊರಟೆ' ಅಕ್ಕಮ್ಮಕ್ಕ ಹೊರಟೇ ಬಿಟ್ಟರು. ಅವರ ಜೊತೆ ಬಸಂತಿ ಅಕ್ಕ. ರಾಶಿ ರಾಶಿ ಕಾರ್ಡ್ ಶೀಟುಗಳನ್ನು ತಂದು ಸುರಿದರು. ರಾಜೇಶ್ವರಿ ಮೇಡಂ ಹೋಗಿ ಸ್ಕೆಚ್ ಪೆನ್ನುಗಳನ್ನು ತಂದರು. ಸರಿ ಖಾಲಿ ಇದ್ದವರೆಲ್ಲ ಕುಳಿತೆವು ಪೋಸ್ಟರ್‌ಗಳನ್ನು ಬರೆಯಲಿಕ್ಕೆ. 'ನಾ ಬರೆದದ್ದು ಚೆಂದಾಯಿತಾ? ನಾ ಬರೆದದ್ದು ಹೇಗಿದೆ?' ಪರಸ್ಪರ ಬೆನ್ನು ಚಪ್ಪರಿಸುತ್ತ, ಒಬ್ಬರನ್ನೊಬ್ಬರು ಚುಡಾಯಿಸುತ್ತ ಪ್ಲಕಾರ್ಡುಗಳ ರಾಶಿಯನ್ನೇ ಬರೆದು ಪೇರಿಸಿದೆವು. ಸಮ್ಮೇಳನದ ಹೊತ್ತಿಗೆ ಒಟ್ಟಿಗೆ ಹಾಡುವುದು, ಕುಳಿತು ಬರೆಯುವುದು, ಹೋಗಿ ಹಂಚುವುದು, ಕಲೆತು ಉಣ್ಣುವುದು ಎಂದು ನಾವೆಲ್ಲ ಅದೆಷ್ಟು ಹತ್ತಿರ ಬಂದಿದ್ದೆವೆಂದರೆ ಒಂದೇ ಮನೆಯವರಂತಾಗಿ ಬಿಟ್ಟಿದ್ದೆವು. ಸಮ್ಮೇಳನ ಮುಗಿದ ನಂತರ ಒಬ್ಬರನ್ನೊಬ್ಬರು ಬೀಳ್ಕೊಡುವಾಗ, 'ಮತ್ತೊಮ್ಮೆ ಬರಬಾರದೆ ಧಾರವಾಡಕ್ಕೆ ಸಮ್ಮೇಳನದ ಸರತಿ' ಎನಿಸಿಕೊಂಡು ಕಣ್ಣು ಹನಿಯಾಗಿಸಿಕೊಂಡಿದ್ದೆ.

*(ಸ್ವತಃ ಕಲಾವಿದೆಯಾಗಿರುವ ವಿಜಯಲಕ್ಷ್ಮಿ ಪ್ಲಕಾರ್ಡ್ ಬರೆಯುವುದರಲ್ಲಿಯೂ, ಸಮ್ಮೇಳನದಲ್ಲಿ ಚೆಂದದ ರಂಗೋಲಿ ಹಾಕುವುದರಲ್ಲಿಯೂ ಎಲ್ಲರ ಗಮನ ಸೆಳೆದವರು. ಮುಂದೆ ಕೌದಿ ತಯಾರಿಕೆಯಲ್ಲೂ ಅವರ ಕೈ ಎಲ್ಲರಿಗಿಂತ ಮುಂದೆ)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಪಯಣದಲೊಂದು ವಿಶ್ವಾಸದ ನಡೆ

**– ನಿರ್ಮಲಾ ಶೆಟ್ಟರ್**

**ಅ**ದೊಂದು ದಿನ ನಾನು ಮತ್ತು ನನ್ನ ಸ್ನೇಹಿತೆ ಚಿಗರಿ ಬಸ್ ಹತ್ತಿದೆವು. ಒಂದು ಲೇಡಿಸ್ ಸೀಟ್‌ನಲ್ಲಿ ಪುರುಷ ಮಹಾಶಯ ಪವಡಿಸಿಯಾಗಿತ್ತು. ನಾನು ನನ್ನ ಗೆಳತಿಗೆ ಹೇಳಿದೆ, 'ನೀ ಅವರನ್ನು ಎಬ್ಬಿಸು'.

ಅವಳೆಂದಳು, 'ಹೋಗ್ಲಿ ಬಿಡ, ಯಾರ ಗುದ್ದಾಡಬೇಕು ಅವರ ಜೊತೆ.' ಅವಳ ಮಾತಿಂದ ನಂಗ್ಯಾಕೊ ಸಮಾಧಾನವಾಗಲಿಲ್ಲ. ಎಲ್ಲರೂ ಹಿಂಗ ಮಾಡಿದ್ರ ಹೆಂಗ? ಎಂದುಕೊಂಡೆ. ತಡೆದುಕೊಳ್ಳಲಾರದೇ ತಕ್ಷಣ ಹೇಳಿಯೇ ಬಿಟ್ಟೆ. 'ಇದು ಲೇಡಿಸ್ ಸೀಟು. ಏಳ್ರಿ ನೀವು'. ಆ ಮಹಾಶಯ 'ಯಾಕ ಏಳಬೇಕ್ರಿ? ಏಳದಿಲ್ಲಾ ನೋಡ್ರಿ......' ಹೀಗೆ ಏನೇನೋ ಮಾತನಾಡುತ್ತಲೇ ಇದ್ದ. ನಂಗೂ ಸಿಟ್ಟು ಬಂತು. ಮೀಸಲು ಸೀಟ್‌ಗಳಿಗೆ ಈ ಹಣೆಬರಹ ಇನ್ನು ನಮ್ಮದಲ್ಲದ ವಿಚಾರಕ್ಕೆ ಏನೋ ಹೆಂಗೊ ಎಂದುಕೊಂಡು, 'ಏಳದಿದ್ರ ಬಿಡ್ರಿ, ಅಲ್ಲೆ ಮುಂದ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದವರು ಕಾಯಾಕತ್ತಾರ ಅನುಭವಿಸುವಂತ್ರಿ' ಎಂದದ್ದೇ ತಡ ನನ್ನ ಕಿವಿಗೆ ಕೇಳಿಸಿಯೂ ಕೇಳಿಸದಂತೆ, ಗೊಣಗುತ್ತ ಎದ್ದು ಹಿಂದೆ ಹೋಗಿ ನಿಂತದ್ದು ನನಗೆ ಆಗಾಗ ನೆನಪಾಗುತ್ತ ಇರುತ್ತದೆ.

ಇಲ್ಲಿ ಯಾಕೆ ಈ ಮಾತನ್ನು ಹೇಳಿದೆನೆಂದರೆ, ನಾನು ಅದಾಗಲೇ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗಿತ್ತು. ಮಹಿಳಾ ದಿನಾಚರಣೆಯು ಈ ಬಾರಿ ಧಾರವಾಡದಲ್ಲಿ ಆಗಿದ್ದು ನಂಗೆ ಖುಶಿ ಹಾಗೂ ಒಂದಿಷ್ಟು ಹೊಸದನ್ನು ತಿಳಿದುಕೊಳ್ಳುವಲ್ಲಿ ಸಹಾಯವಾಯಿತು. ಈ ಬಾರಿ ಕಲಘಟಗಿ ತಾಲೂಕಿನ ಕಾರ್ಯಚಟುವಟಿಕೆಯಲ್ಲಿ ನಾನು ನನ್ನನ್ನು ತೊಡಗಿಸಿಕೊಂಡಿದ್ದು ಯಾವ ರೀತಿ ಉಪಯೋಗವಾಯಿತೆಂದರೆ, ತಾಲೂಕಿನ ಬಹಳಷ್ಟು ಮಹಿಳೆಯರಿಗೆ ಇಂಥದ್ದೊಂದು ಸಂಘಟನೆ ಇರುವ ವಿಚಾರ ತಿಳಿಯಿತು. ಅಲ್ಲದೇ ತಮ್ಮ ಸಮಸ್ಯೆಗಳಿಗೊಂದು ವೇದಿಕೆ ಇರುವುದರೊಂದಿಗೆ ಅದು ತಮಗೊಂದು ದನಿಯಾಗಿ ನಿಲ್ಲುತ್ತದೆ ಎನ್ನುವ ಆತ್ಮವಿಶ್ವಾಸವನ್ನು ನೀಡಿತು. ಈ ಬಾರಿಯ ಕರ್ಚಿಫ್‌ಗಳಂತೂ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಇಷ್ಟವಾದವು. ಅಲ್ಲದೇ ಕಾರ್ಯಕ್ರಮಕ್ಕೆಂದು 'ಅರಿವಿನ ಪಯಣ' ಪುಸ್ತಕವನ್ನು ಹಾಗೂ ಕರ್ಚೀಫ್‌ಗಳನ್ನು ಮಾರಾಟ ಮಾಡುವದು ಒಂದು ಹೊಸ ಅನುಭವ ನೀಡಿತು. ದೌರ್ಜನ್ಯಕ್ಕೆ ಒಳಗಾದ ನಮ್ಮ ಸಹೋದರಿಯರಿಗೆ ಈ ಮೂಲಕ ಒಂದಿಷ್ಟು ಅರಿವನ್ನು ಮೂಡಿಸುವಲ್ಲಿ ಕಲಘಟಗಿ ತಾಲೂಕಿನ ಕಾರ್ಯಕ್ರಮವನ್ನು ನಮ್ಮ ದೇವಿಕೊಪ್ಪ ಶಾಲೆಯಿಂದಲೇ ಶುರು ಮಾಡಿದೆವು. ನಮ್ಮ ಶಾಲಾ ಮಕ್ಕಳಿಗೂ ಇದರಿಂದ ಬಹಳಷ್ಟು ತಿಳಿವು ಮೂಡಿತು.

2019 ರ ಫೆಬ್ರವರಿ ಎರಡನೇ ಶುಕ್ರವಾರದ ಸಂಜೆ **'ಕಪ್ಪುಡುಗೆಯಲ್ಲಿ ಮಹಿಳೆ'** ಎನ್ನುವ ವಿನೂತನ ಕಾರ್ಯಕ್ರಮವನ್ನು ಕಲಘಟಗಿಯ ಬಸ್‌ನಿಲ್ದಾಣದ ಎದುರಿನ ಸರ್ಕಲ್‌ನಲ್ಲಿ ಒಂದು ತಾಸು ಮೌನವಾಗಿ ನಿಂತು ಆಚರಿಸುವ ಮೂಲಕ ಕೈಗೊಳ್ಳಲಾಯಿತು. ಆ ಮೂಲಕ ಬಹಳಷ್ಟು ಜನರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಯಿತು. ಅದರೊಂದಿಗೆ ಮಾತಿಗಿಂತಲೂ ಮೌನದ ಅನುಭವ ದೊಡ್ಡದು ಎಂಬುದನ್ನು ಜನರಲ್ಲಿ ಸಾರಲಾಯಿತು. ಈ ರೀತಿ ನನ್ನ ಅರಿವಿನ ಪಯಣ ಸಾಗಿದೆ. ಸಾಗುತ್ತಲಿದೆ...

*(ನಿರ್ಮಲ ಶೆಟ್ಟರ್, ಕಲಘಟಗಿಯಲ್ಲಿ ಶಾಲಾ ಶಿಕ್ಷಕಿ, ಸಾಹಿತಿ. ನಿತ್ಯ ಹುಬ್ಬಳ್ಳಿಯಿಂದ ಕಲಘಟಗಿಗೆ ಪ್ರಯಾಣಿಸುತ್ತಾರೆ. ಇತ್ತೀಚೆಗೆ ಇವರ 'ಅಲಂಕಾರಕ್ಕೂ ಸೈ, ಆಪದ್ಬಾಂಧವಳಿಗೆ ಜೈ' ಪ್ರಬಂಧಕ್ಕೆ ಪ್ರಜಾವಾಣಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ.)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಪ್ರತಿ ರಾಜ್ಯ, ಜಿಲ್ಲೆಯಲ್ಲೂ ನಡೆಯಬೇಕು

**– ಗೌರಮ್ಮ ದೊಡಮನಿ**

**ಧಾ**ರವಾಡದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನನಗೆ ಬಹಳ ಖುಷಿ ಕೊಟ್ಟಿತು. ಸಮಾವೇಶದ ಭಾಗವಾಗಿಜನರನ್ನು ಸಂಘಟಿಸುವಾಗ ಸ್ಲಂಗಳಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಿದ್ದು, ಬಸ್ ಅಭಿಯಾನದಲ್ಲಿ ಮಹಿಳೆಯರ ಸೀಟ್ ಅನ್ನು ಮಹಿಳೆಯರಿಗೇ ಬಿಟ್ಟುಕೊಡಿ, ಬಸ್ ಅನ್ನು ಗಲೀಜು ಮಾಡಬೇಡಿ, ಡ್ರೈವರ್ ಕಂಡಕ್ಟರ್ ಅವರುಗಳನ್ನು ಗೌರವಿಸಿ ಎಂದು ಹಾಡು ಮತ್ತು ಮಾತಿನ ಮೂಲಕ ಜನರಲ್ಲಿಜಾಗೃತಿ ಮೂಡಿಸಿದ್ದು, ಬೀದಿ ಬೀದಿಗಳಲ್ಲಿ ಮಾರ್ಕೆಟ್‌ಗಳಲ್ಲಿ ಸಮಾವೇಶದ ಖರ್ಚಿಗಾಗಿ ಹಣ ಸಂಗ್ರಹಿಸಿದ್ದು, ನನಗೆ ಬಹಳ ಇಷ್ಟವಾದ ವಿಷಯಗಳು. ಈ ಕೆಲಸ ಮಾಡುವಾಗ ಮನೆಯಿಂದ ತಂದ ಬುತ್ತಿಯನ್ನು ಹಂಚಿ ಉಂಡದ್ದು ತುಂಬ ಆಪ್ತವೆನಿಸಿತು. ವಿಚಾರ ಸಂಕಿರಣದಲ್ಲಿ ಮಣಿಮಾಲಾ ಅವರು ಮಾತನಾಡಿದ್ದು, ಸಮಾವೇಶದಲ್ಲಿ ಮೀನಾಕ್ಷಿ ಬಾಳಿಯವರು ಮಾತನಾಡಿದ್ದು ನನಗೆ ಮೆಚ್ಚುಗೆಯಾಯಿತು. ಇಂತಹ ಸಮಾವೇಶ ಎಲ್ಲ ಜಿಲ್ಲೆಗಳಲ್ಲಿಯೂ ಆಗಬೇಕು, ಇನ್ನೂ ಹೆಚ್ಚು ಹೆಚ್ಚು ಕೆಳಜಾತಿ ವರ್ಗದ ಮಹಿಳೆಯರಿಗೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಮುಂದಿನ ಸಮಾವೇಶಗಳಲ್ಲಿ ಇನ್ನೂ ಹೆಚ್ಚಿನ ಮಹಿಳೆಯರನ್ನು ಸೇರಿಸಬೇಕು. ಮಹಿಳೆಯರ ಮೇಲಿನ ದೌರ್ಜನ್ಯ ತಡೆಯುವುದಕ್ಕೆ ಮಹಿಳೆಯರನ್ನು ಜಾಗೃತಗೊಳಿಸುವ ಈ ಪ್ರಯತ್ನ, ಇಂತಹ ಸಮಾವೇಶ ಪ್ರತಿ ಜಿಲ್ಲೆಯಷ್ಟೇ ಅಲ್ಲದೆ, ಪ್ರತಿ ರಾಜ್ಯದಲ್ಲೂ ನಡೆಯಬೇಕು.

*(ಟ್ರಾಫಿಕ್ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಗೌರಮ್ಮ ದೊಡಮನಿ ಸದಾ ಹಸನ್ಮುಖಿ, ತುಂಬು ಪ್ರೀತಿಯ ಜೀವ. ಸಮವಸ್ತ್ರದಲ್ಲೇ ಸಭೆ, ಸಿದ್ಧತೆಗಳಿಗೆ ಬಂದು ಬೆಂಬಲಿಸಿದಾಕೆ. ಕ.ರಾ.ದ.ಸಂ.ಸ.ದ ದಲಿತ ಮಹಿಳಾ ಒಕ್ಕೂಟದ ನಾನಾ ಜವಾಬ್ದಾರಿ ನಿಭಾಯಿಸಿದ ಹಿರಿಯ ಹೋರಾಟಗಾರ್ತಿ.)*

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಬನ್ನಿ, ಕೈಗೆ ಕೈ ಜೋಡಿಸೋಣ

**– ರಾಜೇಶ್ವರಿ ಜೋಶಿ**

ಅರಿವಿನ ಪಯಣ ಮಾಡುವ ಸಂದರ್ಭದಲ್ಲಿಧಾರವಾಡ ಜಿಲ್ಲೆಯ ಸೋದರಿಯರು ಜಿಲ್ಲೆಯ ಸಮಸ್ಯೆಗಳ ಕುರಿತು ಮಾತನಾಡುವಾಗ 'ಗದ್ದಲದ ಟೈಮದಾಗ ಹಳ್ಳೀಕಡೆ ಹೋಗೂ ಬಸ್ಸಿನ್ಯಾಗ ಪ್ರವಾಸ ಮಾಡೂದನ ಕಠಿಣ ಆಗ್ಯೆತ್ರಿ. ಹೆಂಗಸರ ಸೀಟ ಮ್ಯಾಲನೂ ಗಂಡಮಕ್ಕಳನ ಕುಂದರತಾರ, ನಮಗ ಜಾಗಾ ಬಿಡ್ರಿ ಅಂದ್ರ ಹಳ್ಳೀ ಬಸ್‌ನ್ಯಾಗ ಲೇಡೀಜ್ ಸೀಟ್ ಅಂತೇನ ಇರಾಂಗಿಲ್ರಿ, ಅಂತ ಹೇಳಿ ನಮ್ಮ ಬಾಯಿ ಮುಚ್ಚಸ್ತಾರ' ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದರು. ಹಳ್ಳಿಗಳಿಂದ ಕಾಯಿಪಲ್ಲೆ ಮಾರಲು ಬರುವ, ಕೆಲಸಕ್ಕೆಂದು ಪಟ್ಟಣದತ್ತ ಬರುವ, ವೈಯಕ್ತಿಕ ಕೆಲಸಗಳನ್ನಿಟ್ಟುಕೊಂಡು ಬರುವ ಅನೇಕ ಮಹಿಳೆಯರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮನೆಗೆಲಸಗಳನ್ನೆಲ್ಲ ಮಾಡಿ ಮುಗಿಸಿ ಬದುಕಿನ ಬಂಡಿಯನ್ನು ಮುನ್ನಡೆಸುವುದಕ್ಕಾಗಿ ದುಡಿಯಲು ಬರುವ ಈ ಜೀವಗಳಿಗೆ ಕುಳಿತುಕೊಳ್ಳಲು ಚೂರು ಜಾಗ ಸಿಕ್ಕರೆ, ಅದೇ ಆ ದಿನದ ವಿಶ್ರಾಂತಿ. ಆದರೆ ಈ ಅಲ್ಪ ವಿಶ್ರಾಂತಿಯಿಂದಲೂ ವಂಚಿತರಾಗುತ್ತಿದ್ದಾರೆ ಮಹಿಳೆಯರು. ತಮಗೆ ಕುಳಿತುಕೊಳ್ಳಲು ಜಾಗ ಸಿಗದೇ ಹೋದಾಗ ಯಾರೋ ಒಬ್ಬ ಮಹಿಳೆ ದನಿ ಎತ್ತಿದರೆ ಬಸ್‌ನಲ್ಲಿರುವ ಮಹಿಳೆಯರೆಲ್ಲ ಅವರೊಂದಿಗೆ ದನಿಗೂಡಿಸುವಂತಾಗಬೇಕು. ಮಹಿಳೆಯರ ಹಕ್ಕುಗಳನ್ನು ಗೌರವಿಸುವ ಎಲ್ಲರೂ ಜೊತೆಗೂಡಿದರೆ ಮಾತ್ರ ಮಹಿಳೆಯರ ಸೀಟುಗಳು ಮಹಿಳೆಯರಿಗೆ ಸಿಗಲು ಸಾಧ್ಯ.

"ಮಾತನಾಡಕ್ಕಯ್ಯ ಮಾತನಾಡು, ನನ್ನ ಸೀಟು ನನ್ನದೆಂದು ಮಾತನಾಡು, ಮಾತನಾಡಣ್ಣಯ್ಯ ಮಾತನಾಡು ಮಹಿಳೆ ಸೀಟು ಮಹಿಳೆಗೆಂದು ಮಾತನಾಡು" ಎಂದು ಹಾಡುತ್ತ ನಾವು 'ನಮ್ಮ ಸೀಟು ನಮ್ಮದು' ಎಂಬ ಬಸ್ ಸೀಟು ಹಕ್ಕು ಪ್ರತಿಪಾದನೆ ಅಭಿಯಾನ ನಡೆಸಿದೆವು. ಮಹಿಳೆಯರಿಗಾಗಿಯೇ ಮೀಸಲಿಟ್ಟಿರುವ ಸೀಟುಗಳಲ್ಲಿ ಕುಳಿತುಕೊಳ್ಳುವುದು ಮಹಿಳೆಯರ ಹಕ್ಕಲ್ಲವೆ? ಅವರಿಗೆ ಜಾಗ ಬಿಟ್ಟುಕೊಡಿ ಎಂದು ವಿನಂತಿಸಿಕೊಳ್ಳುವಾಗ ಅನೇಕ ಪುರುಷರು, 'ನಾವು ಕುಳಿತುಕೊಳ್ಳುವ ಸೀಟುಗಳಲ್ಲಿ ಮಹಿಳೆಯರು ಕುಳಿತುಕೊಳ್ಳುತ್ತಾರಲ್ಲ' ಎಂದು ಪ್ರಶ್ನಿಸುತ್ತಿದ್ದರು. ಮಹಿಳೆಯರು, ಹಿರಿಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಾಗರಿಕರು, ಅಂಗವಿಕಲರಿಗಾಗಿ ಇರುವ ಸೀಟುಗಳನ್ನು ಬಿಟ್ಟರೆ ಉಳಿದ ಸೀಟುಗಳಲ್ಲಿ ಯಾರೂ ಕುಳಿತುಕೊಳ್ಳಬಹುದು ಎಂದು ಅಭಿಯಾನದಲ್ಲಿ ಪಾಲ್ಗೊಂಡ ಒಕ್ಕೂಟದ ಯುವ ಸದಸ್ಯರು ಪ್ರಶ್ನೆ ಕೇಳುವವರಿಗೆ ಪಾಠ ಮಾಡಿದ್ದಾರೆ. ಬಸ್ ಚಾಲಕರು ಮತ್ತು ನಿರ್ವಾಹಕರು ಇಡೀ ದಿನ ಸಾವಿರಾರು ಪ್ರಯಾಣಿಕರನ್ನು ನಿಭಾಯಿಸ ಬೇಕಾಗುತ್ತದೆ, ಅವರೊಂದಿಗೆ ನಾವು ಸಹನೆಯಿಂದ ವರ್ತಿಸಬೇಕು ಎಂದು ವಿನಂತಿಸಿಕೊಳ್ಳುವುದಲ್ಲದೇ ನಮ್ಮ ಅನುಕೂಲಕ್ಕಾಗಿ ಇರುವ ಈ ಬಸ್‌ಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳೋಣ, ಹೆಚ್ಚು ಹೆಚ್ಚು ಬಸ್ಸುಗಳಲ್ಲೇ ಪ್ರಯಾಣಿಸಿ ಪರಿಸರವನ್ನು ಉಳಿಸೋಣ ಎಂಬ ಸಂದೇಶವನ್ನೂ ಅಭಿಯಾನ, ಪ್ರಯಾಣಿಕರಿಗೆ ನೀಡಿದೆ.

ನಮ್ಮ ಈ ಅಭಿಯಾನವನ್ನು ಮೆಚ್ಚಿದ ಸಂತೋಷ ಎಂಬ ನಿರ್ವಾಹಕರು "ನಿಮ್ಮ ಅಭಿಯಾನ, ಜೊತೆಗೆ ನೀವು ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಯಶಸ್ವಿಯಾಗಲಿ" ಎಂದು ಹಾರೈಸಿದರು. ಹಣ್ಣು ಮಾರಲು ಹೊರಟ ಸಹೋದರಿಯೊಬ್ಬರು ಅಭಿಯಾನದಲ್ಲಿ ಪಾಲ್ಗೊಂಡ ಒಕ್ಕೂಟದ ಎಲ್ಲ ಸದಸ್ಯರಿಗೂ ಪ್ರೀತಿಯಿಂದ ಒಂದೊಂದು ಬಾಳೆಹಣ್ಣು ಕೊಟ್ಟು ಅಭಿಯಾನಕ್ಕೆ ತಮ್ಮ ಬೆಂಬಲ ಸೂಚಿಸಿದರು. ಅನೇಕ ನಿರ್ವಾಹಕರು, ಚಾಲಕರು, ಮಹಿಳಾ ಮತ್ತು ಪುರುಷ ಪ್ರಯಾಣಿಕರು ಮಹಿಳಾ ದಿನಾಚರಣೆಗೆ ತಮ್ಮಿಂದ ಸಾಧ್ಯವಾದಷ್ಟು ಧನ ಸಹಾಯ ಮಾಡಿ ಬಸ್ ಅಭಿಯಾನ ಮತ್ತು ಮಹಿಳಾ ದಿನಾಚರಣೆ ತಮ್ಮ ಕಾರ್ಯಕ್ರಮಗಳು ಎಂಬ ಭಾವನೆಯೊಂದಿಗೆ ಒಕ್ಕೂಟದ ಕೈಗೆ ಕೈ ಜೋಡಿಸಿದ್ದಾರೆ. ಹೀಗಾದಾಗಲೇ ಅಲ್ಲವೆ ಹೊಸ ಜಗತ್ತು ಕಟ್ಟಲು ಸಾಧ್ಯವಾಗುವುದು?


Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಮೆರವಣಿಗೆ ಹೊರಟೆವು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಧಾರವಾಡ

**ಸಮತೆಯೆಡೆಗೆ ನಮ್ಮ ನಡಿಗೆ**



## ನನ್ನ ಮತ ನನ್ನ ಆಯ್ಕೆ, ಇರಲಿ ಹೆಣ್ಣೋಟಕೆ ಹೆಗ್ಗಳಿಕೆ

## ಮಾರ್ಚ್ 8, 9: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಧಾರವಾಡ

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಆರೇಳು ವರ್ಷಗಳಿಂದ ಕರ್ನಾಟಕದ ನಾನಾ ಕಡೆ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ–ಪೌರಕಾರ್ಮಿಕರು–ಬಿಸಿಯೂಟ ನೌಕರರು–ಆಶಾ ಕಾರ್ಯಕರ್ತೆಯರು–ಗಾರ್ಮೆಂಟ್ ಮತ್ತು ಪೌರಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕ್ಯಾಡೆಮಿಕ್ ವಲಯದ ಸಮಾನಮನಸ್ಕರೇ ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದಾಗಿದೆ.

2012ನೇ ಇಸವಿಯಲ್ಲಿ ದೆಹಲಿಯ ನಿರ್ಭಯ ಅತ್ಯಾಚಾರ ಪ್ರಕರಣ ಸಂಭವಿಸಿ ದೇಶಾದ್ಯಂತ ಪ್ರತಿಭಟನೆ ಭುಗಿಲೆದ್ದ ವೇಳೆಯಲ್ಲಿ ಕ.ರಾ.ಮ.ದೌ.ವಿ. ಒಕ್ಕೂಟದ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ, ಲಿಂಗ ತಾರತಮ್ಯ, ಅಸಮಾನತೆಗಳನ್ನು 'ಇನ್ನು ಸಾಕು' ಎಂದು ಪ್ರತಿರೋಧಿಸುತ್ತ ಮಂಗಳೂರಿನಲ್ಲಿ 2013ರಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮೊದಲ ಸಮಾವೇಶ ನಡೆಯಿತು. ಅಲ್ಲಿಂದ ಪ್ರತಿವರುಷ ಒಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತ, ಮಹಿಳಾ ಜಾಗೃತಿ, ಸಮಾವೇಶ ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗಗಳಲ್ಲಿ ಆರು ಸಮಾವೇಶ ನಡೆಸಿದೆ. 2019ನೇ ವರ್ಷದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳನ್ನು ಇದೇ ಮಾರ್ಚ್ 8, 9ರಂದು ಧಾರವಾಡ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

**ನಮ್ಮ ನಡಿಗೆ ಸಮತೆಯೆಡೆಗೆ**

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕೀಯ–ಧರ್ಮ–ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆ ಧರ್ಮ/ಕೋಮು/ಜಾತಿ ವೈಷಮ್ಯದ ದಾಳವಾಗಿ ಬಳಕೆಯಾಗುತ್ತಿದ್ದಾಳೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳಿಗೆ ಕಾರಣವಾಗಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಮಹಿಳಾ ವಿಷಯಕ್ಕೆ ಮಾತಿನಲ್ಲಷ್ಟೇ ಮನ್ನಣೆ ನೀಡಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಧಾನತೆ, ಮತಾಂಧತೆ ಮತ್ತು ಇದಕ್ಕೆಲ್ಲ ಪೂರಕವಾಗಿ ಅಧಿಕಾರ ರಾಜಕಾರಣ ರೂಪಿಸುತ್ತಿರುವ ದ್ವೇಷ ರಾಜಕಾರಣವು ಹಿಂಸೆಹುಟ್ಟುಹಾಕುತ್ತಿದೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಎದುರಿಸಲು ಮಹಿಳೆಯರು ಮತ್ತು ಸಮಸಮಾಜಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಎಂದೇ **'ಸಮತೆಯೆಡೆಗೆನಮ್ಮ ನಡಿಗೆ'** ನಮ್ಮ ಧ್ಯೇಯವಾಕ್ಯವಾಗಿದೆ.

ಇಂಥ ಆಶಯಗಳ ಹೊತ್ತು ಒಕ್ಕೂಟವು ಈ ಬಾರಿ ಮಧ್ಯ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಪ್ರತಿ ತಾಲೂಕುಗಳಲ್ಲೂ 'ಅರಿವಿನ ಪಯಣ' ಎಂಬ ಲಿಂಗಸೂಕ್ಷ್ಮತೆ ಬೆಳೆಸುವ ಕಾರ್ಯಾಗಾರ, ವಿಮೆನ್ ಇನ್ ಬ್ಲ್ಯಾಕ್, ಬಸ್ಸಿನಲ್ಲಿ ಮಹಿಳಾ ಸೀಟು ಮೀಸಲಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹಕ್ಕೊತ್ತಾಯವೇ ಮೊದಲಾದ ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕೊಂಡಿದೆ. ಇದರಲ್ಲಿ ಜಿಲ್ಲೆಯ ಮೂವತ್ತಕ್ಕಿಂತ ಹೆಚ್ಚು ಸಂಘಟನೆಗಳು ಹಾಗೂ ಸಮಾನ ಮನಸ್ಕ ಸೋದರಿ–ಸೋದರರು ಜೊತೆಗೂಡಿದ್ದಾರೆ.

ಧಾರವಾಡ ಜಿಲ್ಲೆಗೆ ತನ್ನದೇ ಆದ ವಿಶೇಷತೆಯಿದೆ. ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಸಂಘಟನೆ, ಕುಶಲಕಲೆ, ವಾಣಿಜ್ಯ, ಪತ್ರಿಕಾ ವ್ಯವಸಾಯ– ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಧಾರವಾಡಕ್ಕೊಂದು ಹಿರಿಮೆಯಿದೆ. ಏಳು ಗುಡ್ಡಗಳ ನಡುವೆ, ಒಡಲಲ್ಲಿ ಗುಪ್ತಗಾಮಿನಿ ಶಾಲ್ಮಲೆಯನ್ನು ಇರಿಸಿಕೊಂಡ, ಬೆಳವಲದ ಹತ್ತಿ, ಗೋಧಿ, ಜೋಳ, ಹಾಗೂ ಮಲೆನಾಡಿನ ಭತ್ತ, ಕಬ್ಬುಗಳನ್ನೂ ಬೆಳೆಯಬಲ್ಲ ವಿಶಿಷ್ಟ ಸತ್ವದ ಮಣ್ಣಿನ, ಹಸಿರು ನಳನಳಿಸುವ ನೆಲ ಧಾರವಾಡ. ಕರ್ನಾಟಕ ಏಕೀಕರಣ ಹೋರಾಟ, ಗೋಕಾಕ ಚಳವಳಿ, ಕಳಸಾ–ಬಂಡೂರಿ ಹೋರಾಟ, ನವಲಗುಂದ–ನರಗುಂದ ರೈತ ಹೋರಾಟ ಹೀಗೆ ಹಲವು ಹೋರಾಟಗಳಿಗೆ ಸಾಕ್ಷಿಯಾದ ಊರಿದು. ಸಾಹಿತ್ಯ, ಸಂಗೀತ, ಕಲಾ ಕ್ಷೇತ್ರದ ದಿಗ್ಗಜರು ಗಡಿಮೀರಿ ಜಗದ್ವಿಖ್ಯಾತರಾಗಿದ್ದಾರೆ. ಹಾಗೆಯೇ ಪೇಡಾ, ಪೇರಲ, ಮಾವು, ಚಿಕ್ಕು ಹಣ್ಣುಗಳ ಸವಿರುಚಿಯೂ ಜನಪ್ರಿಯವಾಗಿವೆ. ಈ ನೆಲದ ಮಹಿಳೆಯರು ನಾಡಿನ ಇತಿಹಾಸದಲ್ಲಿ ದಿಟ್ಟ ಹೆಜ್ಜೆ ಮೂಡಿಸಿದ್ದಾರೆ.ಆಧುನಿಕ ಕನ್ನಡದ ಮೊದಲ ಕಾದಂಬರಿ ಬರೆದ, ಧಾರವಾಡದ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಕಿಯಾಗಿದ್ದ ಸಂತೂಬಾಯಿ ನೀಲಗಾರ; 1926ರಲ್ಲಿ 'ಸುಭಾಷಿತಗಳು' ಪುಸ್ತಕವನ್ನು ರಚಿಸಿದ, ಸಾರ್ವಜನಿಕ ಕಾರ್ಯಗಳಲ್ಲಿಯೂ ತೊಡಗಿಕೊಂಡಿದ್ದ ಗಿರಿಜಾದೇವಿ ಇಚ್ಚಂಗಿಮಠ; ಸ್ತ್ರೀ ಲೋಕದ ಹಲವು ಆಯಾಮಗಳನ್ನು ತಮ್ಮ ಕಥೆಗಳಲ್ಲಿ ತೆರೆದಿಟ್ಟ, ಜಯ ಕರ್ನಾಟಕ ಪತ್ರಿಕೆಯ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದ್ದ, ರಾಷ್ಟ್ರ ಮಟ್ಟದ ಮಹಿಳಾ ಸಂಘಟನೆಯಲ್ಲಿ ಕೆಲಸ ಮಾಡಿದ ಶ್ಯಾಮಲಾದೇವಿ ಬೆಳಗಾಂವಕರ್; ನಂತರ ಬಂದ ಸರಸ್ವತಿ ದೇವಿ ಗೌಡರ್, ಶಾಂತಾದೇವಿ ಮಾಳವಾಡ, ಗೀತಾ ಕುಲಕರ್ಣಿ ಮುಂತಾದ ಲೇಖಕಿಯರು; ಶೋಷಿತ, ತಿರಸ್ಕೃತ, ನಿರ್ಗತಿಕ ಹೆಣ್ಣುಮಕ್ಕಳಿಗೆ ತಾಯಿಯಾಗಿ ಸಾಂತ್ವನ ನೀಡಿ 1928ರಲ್ಲಿ ವನಿತಾ ಸೇವಾ ಸಮಾಜ ಸ್ಥಾಪಿಸಿದ, ಸ್ವತಃ ಬಾಲವಿಧವೆಯಾಗಿದ್ದ ಭಾಗೀರತಿಬಾಯಿ ಪುರಾಣಿಕ; ಧಾರವಾಡದಿಂದ ಲೋಕಸಭೆಗೆ ಆಯ್ಕೆಯಾದ ಮೊದಲ ಮಹಿಳೆಸರೋಜಿನಿ ಮಹಿಷಿ; ಅಂದಿನ ರಾಜಕೀಯದಲ್ಲಿ ಕ್ರಿಯಾಶೀಲವಾಗಿದ್ದ ಸುಮತಿ ಮಡಿಮನ್; ಅಂತಾರಾಷ್ಟ್ರೀಯ ಖ್ಯಾತಿಯ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ್ತಿ ಗಂಗೂಬಾಯಿ ಹಾನಗಲ್ಲ ಹಾಗೂ ಕೃಷ್ಣಾ, ಶಾರದಾ ಹಾನಗಲ್ಲ; ಚಿತ್ರ, ಪೇಂಟಿಂಗ್ ಮೂಲಕ ಜನಮನ್ನಣೆ ಪಡೆದ ತಾರಾಬಾಯಿ; ಕಲಾರಂಗದಲ್ಲಿ ಅವಿಸ್ಮರಣೀಯರಾದ ಜುಬೇದಾಬಾಯಿ ಸವಣೂರು, ಜಾನಪದ ಕಲಾವಿದೆ ಫಕೀರವ್ವಾ ಗುಡಿಸಾಗರ ಮೊದಲಾದ ಪ್ರಬುದ್ಧ, ಧೀಮಂತ ಮಹಿಳೆಯರ ತವರೂರಿದು. ಆದರೆ ಗುಜ್ಜರ ಮದುವೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ವರದಕ್ಷಿಣೆ, ಸಮಾನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹಕ್ಕು ನಿರಾಕರಣೆಯೇ ಮೊದಲಾದ ಲಿಂಗಸಂಬಂಧಿ ಸಮಸ್ಯೆಗಳೂ ಇಲ್ಲಿನ ಮಹಿಳೆಯರನ್ನು ಬಾಧಿಸುತ್ತಿವೆ. ಇಂಥಲ್ಲಿ 2019ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯುತ್ತಿರುವುದು ಮಹಿಳಾ ಚೈತನ್ಯ ಪರಂಪರೆಯ ಮುಂದುವರಿಕೆಯೂ, ಸಮಾನ ಹಕ್ಕಿನ ಪ್ರತಿಪಾದನೆಯೂ ಆಗಿದೆ.

ಧಾರವಾಡದಲ್ಲಿ ಒಕ್ಕೂಟವು ಈ ಬಾರಿ **'ನನ್ನ ಮತ ನನ್ನ ಆಯ್ಕೆ/ ಇರಲಿ ಹೆಣ್ಣೋಟಕೆ ಹೆಗ್ಗಳಿಕೆ'** ಎಂಬ ಘೋಷವಾಕ್ಯ ಇಟ್ಟುಕೊಂಡು ಮಾರ್ಚ್ 8 ಮತ್ತು 9ರಂದು ಎರಡು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

**ಕಾರ್ಯಕ್ರಮ ವಿವರ:**

2019, ಮಾರ್ಚ 8ರಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ 'ಮಹಿಳೆ ಮತ್ತು ರಾಜಕೀಯ ಪ್ರಜ್ಞೆ' ಕುರಿತು ವಿಚಾರ ಸಂಕಿರಣವಿದೆ. ಭಾರತದ ಸಂವಿಧಾನವು ಮಹಿಳೆಯರೂ ಸೇರಿದಂತೆ ತನ್ನೆಲ್ಲಾ ಜನತೆಗೆ ಸ್ವಾತಂತ್ರ್ಯ, ಸಮಾನತೆ ಹಾಗೂ ಬಂಧುತ್ವದ ನಾಗರಿಕ ಹಕ್ಕುಗಳನ್ನು ನೀಡಿದ್ದರೂ ಬರಬರುತ್ತ ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ಮಹಿಳಾ ಪ್ರಾತಿನಿಧ್ಯ ತುಂಬ ಕ್ಷೀಣಿಸುತ್ತಿದೆ. ಮಹಿಳೆಯರು ಚುನಾವಣಾ ರಾಜಕೀಯದಲ್ಲಿ ಭಾಗವಹಿಸಲು ಹಿಂಜರಿಯುವ ವಾತಾವರಣವಿದೆ. ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಸಿಗುತ್ತಲೇ ಇಲ್ಲ. ಮಹಿಳಾ ಮತದಾರರು ನಗಣ್ಯವೆನಿಸಿಕೊಂಡಿದ್ದಾರೆ. ಹೀಗಿರುವಾಗ ಮಹಿಳಾ ಪ್ರಾತಿನಿಧ್ಯವನ್ನು ಅರ್ಥಪೂರ್ಣಗೊಳಿಸುವುದು ಹೇಗೆ? ಹೆಂಡ, ಹಣದ ಆಮಿಷದಿಂದ ಮತಗಳು ಮಾರಾಟವಾಗುವುದು ತಪ್ಪಿಸುವುದು ಹೇಗೆ? ಸಾಮೂಹಿಕ ಮಹಿಳಾ ನಾಯಕತ್ವದತ್ತ ಚಲಿಸಲು ಇರುವ ದಾರಿಗಳಾವುವು? ದಮನಿತ ನೆಲೆಯಿಂದ ಮಹಿಳಾ ಪ್ರಾತಿನಿಧ್ಯವನ್ನು ಹೇಗೆ ನೋಡಬಹುದು? ಇವೇ ಮೊದಲಾದ ವಿಷಯಗಳನ್ನು ಚರ್ಚಿಸಲಾಗುತ್ತದೆ.

ಜೊತೆಗೆ ವಿಚಾರ ಸಂಕಿರಣದಲ್ಲಿ 'ಅರಿವಿನೊಂದಿಗೆ ನಮ್ಮ ಪಯಣ' ಪುಸ್ತಕ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮ ನಡೆಯಲಿದೆ. ದೆಹಲಿಯ ಪತ್ರಕರ್ತೆ, ಸ್ತ್ರೀವಾದಿ ಲೇಖಕಿ, ಹೋರಾಟಗಾರ್ತಿ ಮಣಿಮಾಲಾ ಅವರೊಡನೆ ಧಾರವಾಡದ ಹುಸೇನಬಿ ಬೀಳಗಿ, ಉಷಾ ಮೂರ್ತಿ ಇರಲಿದ್ದಾರೆ. ಜೊತೆಗೆ ಶಾಂತಲಾ ದಾಮ್ಲೆ, ಸಿರಿ ಗೌರಿ ಬೆಂಗಳೂರು, ಕಾವೇರಿ ಎಚ್. ಎಂ. ಕೊಡಗು, ಸ್ವರ್ಣಾ ಭಟ್, ಡಾ. ಎನ್. ಗಾಯತ್ರಿ ಮೊದಲಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುತ್ತಾರೆ. ಅದೇ ಸ್ಥಳದಲ್ಲಿ ರಾತ್ರಿ 7 ಗಂಟೆಯಿಂದ 'ಹೆಜ್ಜೆ ಮಾತಾಡು' ಸಾಂಸ್ಕೃತಿಕ ಹಬ್ಬ ನಡೆಯಲಿದೆ.

ಅಂದು ಸಂಜೆ6.00ರಿಂದ ಜ್ಯುಬಿಲಿ ಸರ್ಕಲಿನಲ್ಲಿ ಹಿಂಸೆಯನ್ನುವಿರೋಧಿಸುತ್ತ, ಒಳಗೊಳ್ಳುವ ಸಂಸ್ಕೃತಿಯನ್ನು ಕಟ್ಟುತ್ತಾ ಒಂದು ತಾಸಿನ 'ಬೆಳಗೋಣ ಸಾಲು ದೀಪ' ಮೌನ ಜಾಗೃತಿ ಕಾರ್ಯಕ್ರಮ 'ವಿಮೆನ್ ಇನ್ ಬ್ಲ್ಯಾಕ್' ಸಂಘಟಿಸಲಾಗಿದೆ. ಧಾರವಾಡದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಾನವಹಕ್ಕು ಹೋರಾಟಗಾರ್ತಿ ಸುರೇಖಾ ದೇವಿ ಅದನ್ನು ಉದ್ಘಾಟಿಸಲಿದ್ದಾರೆ.

ಮಾರ್ಚ್ 9, ಬೆಳಿಗ್ಗೆ 9.30ಕ್ಕೆ ಕಡಪಾ ಮೈದಾನದಲ್ಲಿ ಮಹಾರಾಷ್ಟ್ರದ ಸ್ತ್ರೀವಾದಿ ಚಿಂತಕಿ ಮತ್ತು ಹೋರಾಟಗಾರ್ತಿ ಲತಾ ಪ್ರತಿಭಾ ಮಧುಕರ್ ಮತ್ತು ಮಹಿಳಾ ಹೋರಾಟಗಾರರು, ಚಿಂತಕಿಯರು, ಕಲಾವಿದೆಯರಿಂದ ಜಾಥಾ ಉದ್ಘಾಟನೆ ನಡೆಯಲಿದೆ. ನಗರದ ಮುಖ್ಯಭಾಗಗಳಲ್ಲಿ ಸಂಚರಿಸಿದ ನಂತರ ಸಮಾವೇಶ ನೆರೆದು ಕಾರ್ಮಿಕ ನಾಯಕಿ, ಎಐಟಿಯುಸಿ ಮಹಾಕಾರ್ಯದರ್ಶಿ, ಹೋರಾಟಗಾರ್ತಿ ದೆಹಲಿಯ ಅಮರಜಿತ್ ಕೌರ್ ಅವರಲ್ಲದೆ ಕರ್ನಾಟಕದ ಎಲ್ಲ ಭಾಗಗಳಿಂದ ಹಾಗೂ ಹೊರ ರಾಜ್ಯಗಳಿಂದ ಬಂದ ಸಂಗಾತಿಗಳು ಮಾತನಾಡಲಿದ್ದಾರೆ.

**ನಮ್ಮ ಹಕ್ಕೊತ್ತಾಯಗಳು:**

- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
- ಸರ್ಕಾರ ರಚನೆಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮಹಿಳಾ ಮೀಸಲಾತಿಕಡ್ಡಾಯವಾಗಿ ಜಾರಿಯಾಗಬೇಕು. ಅರ್ಥಪೂರ್ಣ ಮಹಿಳಾ ನಾಯಕತ್ವಬೆಳೆಸಲು ಅವಕಾಶ ಮಾಡಿಕೊಡಬೇಕು.
- ಹೆಣ್ಣು ಭ್ರೂಣಹತ್ಯೆ, ಆಸಿಡ್ ದಾಳಿ, ಅತ್ಯಾಚಾರ, ಬಾಲ್ಯವಿವಾಹ, ಗುಜ್ಜರ್ ಮದುವೆಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು. ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು. ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ, ಗೌರವಯುತವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ತಾಯ್ತನ ಮರಣ, ಶಿಶು ಮರಣವನ್ನು ತಡೆಯಲು ಸೂಕ್ತ ಕ್ರಮಕೈಗೊಳ್ಳಬೇಕು.
- ಲಿಂಗಸೂಕ್ಷ್ಮತೆ ಬೆಳೆಸುವಂತಹ ಪಠ್ಯಕ್ರಮ, ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿಯಾಗಬೇಕು. 12–18ರವರೆಗಿನ ಹೆಣ್ಣುಮಕ್ಕಳ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಶಾಲಾಕಾಲೇಜುಗಳಿಗೆ ಉತ್ತಮ ಗುಣಮಟ್ಟದ, ಪರಿಸರಸ್ನೇಹಿ ಉಚಿತ ನ್ಯಾಪ್ಕಿನ್‌ಗಳನ್ನು ಸರ್ಕಾರ ಪೂರೈಸಬೇಕು ಮತ್ತದರ ವಿಲೇವಾರಿಗೆ ವ್ಯವಸ್ಥೆ ಕೈಗೊಳ್ಳಬೇಕು.
- ದೇವದಾಸಿ ಪದ್ಧತಿ ಕೊನೆಗೊಳ್ಳಬೇಕು. ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡಬೇಕು. ಮಹಿಳೆ ಮತ್ತು ಮಕ್ಕಳ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.

- ಮಹಿಳೆಯರಿಗೆ ಉಚಿತ ಸಾರ್ವಜನಿಕ ಶೌಚಾಲಯ ತೆರೆಯಬೇಕು. ಮುಟ್ಟಿನ ಹೆಸರಿನಲ್ಲಿ ಮಹಿಳೆಯರ ಹೊರಗಿಡುವ, ಶೋಷಿಸುವಂತಹ ಮೌಢ್ಯಾಚರಣೆಗಳು ನಿಲ್ಲಬೇಕು.
- 1984ರಲ್ಲಿ ಆದೇಶವಾಗಿರುವ ಶೇ.33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು.
- ಗಾರ್ಮೆಂಟ್ಸ್ ನೌಕರರು, ಅಂಗನವಾಡಿ-ಬಿಸಿಯೂಟ-ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಿಗೆ ಬದುಕುವ ವೇತನ, ಲೈಂಗಿಕ ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು.ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ಯಾವುದೇ ಸ್ವರೂಪದಲ್ಲಿ ಅಸ್ಪೃಶ್ಯತೆ ಕೊನೆಗೊಳ್ಳಬೇಕು.ಅಸ್ಪೃಶ್ಯತೆಯನ್ನು ತಡೆಯಲು ಪರಿಣಾಮಕಾರಿ, ಪರಿವರ್ತನಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
- ಮದ್ಯವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
- ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದು ದಿಕ್ಕೇಡಿಗಳನ್ನಾಗಿಸುವಂತಹ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು. ಸಮಾನ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಶಿಕ್ಷಣ ಪದ್ಧತಿ ಜಾರಿಯಾಗಬೇಕು. ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ವಗಳ ಸ್ವಾಮ್ಯತೆ ಜಾರಿಯಾಗಬೇಕು.
- ಮಲಬಾಚುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗಳಿಸಬೇಕು. ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸುರಕ್ಷಾ ಸೌಲಭ್ಯಗಳು, ಮ್ಯಾನ್‌ಹೋಲ್ ಮತ್ತು ಮಲದಗುಂಡಿಗಳ ಸ್ವಚ್ಛತೆಯ ಯಾಂತ್ರೀಕರಣ, ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಕಾಲಮಿತಿಯೊಳಗೆ ನಡೆಸಲು ಕ್ರಿಯಾಯೋಜನೆ ರೂಪಿಸಬೇಕು.

- ಪ್ಲಾಸ್ಟಿಕ್, ಅಣು ಮತ್ತು ವಿಷಕಾರಿ ತ್ಯಾಜ್ಯಗಳಿಂದ ಮುಕ್ತವಾದ ಆರೋಗ್ಯಕರ ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸಲು ಜಾಗೃತಿ, ಸೂಕ್ತ ಕ್ರಮ ಕೈಗೊಳ್ಳಬೇಕು.

## ಸಹಭಾಗಿ ಸಂಘಟನೆಗಳು:

**ಕರ್ನಾಟಕ:**

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ದಲಿತ ಕಲಾ ಮಂಡಳಿ ಗದಗ, ದಲಿತ ಬಹುಜನ ಚಳವಳಿ ಗದಗ, ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ ಬೆಂಗಳೂರು, ವಿಮೆನ್ಸ್ ವಾಯ್ಸ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ದಮನಿತರ ಸ್ವಾಭಿಮಾನ ಹೋರಾಟ ಸಮಿತಿ, ದೇಶಕ್ಕಾಗಿ ನಾವು, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸ್ಪಂದನ ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ವಿಮೋಚನ ಸಂಘ ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೊಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ದಲಿತ ಬಹುಜನ ಚಳವಳಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್ ಮುನ್ನಡೆ, ಸ್ತ್ರೀ ಜಾಗೃತ ಸಮಿತಿ, ಚರಕಾ ಮಹಿಳಾ ವಿವಿಧೋದ್ದೇಶ ಸಂಘ ಹೆಗ್ಗೋಡು, ಸಖೀ ಹೊಸಪೇಟೆ, ಎಸ್.ಎಫ್.ಐ, ಡಿವೈಎಫ್‌ಐ, ಎಐಟಿಯುಸಿ, ಸಿಐಟಿಯು, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪ್ರರ್ಯಾಯ ಕಾನೂನು ವೇದಿಕೆ, ಅನೇಕ ಬೆಂಗಳೂರು, ಜೀವ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಕಮ್ಯುನಿಟಿ, ರೇಡಿಯೋ ಆಕ್ಟಿವ್ ಬೆಂಗಳೂರು, ಪ್ರಜಾ ರಾಜ್ಯ ವೇದಿಕೆ, ವಿಸ್ತಾರ್,

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಜನಸಹಯೋಗ, ತರಿಕಿಟ ಕಲಾ ಕಮ್ಮಟ ಮಂಗಳೂರು, ಸಂಚಲನ ಕರ್ನಾಟಕ, ಸಂವಾದ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತ ಮಹಿಳಾ ಒಕ್ಕೂಟ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಮಹಿಳಾ ಸಮಖ್ಯಾ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು, ಮದ್ಯ ನಿಷೇಧ ಆಂದೋಲನ, ರಂಗಬೆಳಕು ತಂಡ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಚಾವಡಿ ಬಳಗ ಶಿವಮೊಗ್ಗ, ದಿ ಶಿವಮೊಗ್ಗ ಮಲ್ಟಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ನಿರಂತರ–ಶಿವಮೊಗ್ಗ, ಹೊಸ ಮನುಷ್ಯ ಪತ್ರಿಕಾ ಬಳಗ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ–ಶಿವಮೊಗ್ಗ, ಚಾರ್ವಾಕ ಪತ್ರಿಕಾ ಬಳಗ–ಸಾಗರ, ಸ್ಪಂದನ (ರಿ) ಸಾಗರ, ಯುವಕ ಯುವತಿಯರ ಸಂಘ – ಗಾಜನೂರು, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ.

**ಧಾರವಾಡ:**

ಎಐಎಮ್ಎಸ್ಎಸ್, ಕರ್ನಾಟಕ ವಿದ್ಯಾವರ್ಧಕ ಸಂಘ, ಭಾರತ ಸ್ಕೌಟ್ಸ್ & ಗೈಡ್ಸ್, ಮೇ ಸಾಹಿತ್ಯ ಮೇಳ ಬಳಗ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್, ಶಾಲ್ಮಲಾ ಮಹಿಳಾ ಮಂಡಳ, ಅಕ್ಕನ ಬಳಗ, ಉ.ಕ. ಲೇಖಕಿಯರ ಸಂಘ, ಕೆಎಸ್ಆರ್ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್, ಚಿತ್ತಾರ ಕಲಾ ಬಳಗ, ಚಿಲಿಪಿಲಿ ಸಂಸ್ಥೆ, ಜನಮುಖಿ ಸಂಸ್ಥೆ, ಪೀಪಲ್ಸ್ ಫಸ್ಟ್, ಸಮುದಾಯ ಸಂಘಟನೆ, ಗೊಂಬೆಮನೆ ಟ್ರಸ್ಟ್, ಜನ ಚಿಂತನ ಕೇಂದ್ರ, ಜನ ಸಾಹಿತ್ಯ ಸಂಘಟನೆ, ಜಿಲ್ಲಾ ಪಂಚಾಯತ್ ಪೌರ ಕಾರ್ಮಿಕರ ಮತ್ತು ನೌಕರರ ಸಂಘ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ಸುಸ್ಮಿತಾ ಸಂಸ್ಥೆ, ಅಕ್ಷರ ಸಾಹಿತ್ಯ ವೇದಿಕೆಹುಬ್ಬಳ್ಳಿ, ಅನನ್ಯ ಸಾಹಿತ್ಯ ವೇದಿಕೆ, ನಾಗಸುಧೆ ಜಗಲಿಹುಬ್ಬಳ್ಳಿ, ಸ್ನೇಹ ಬಳಗ ಮಹಿಳಾ ಮಂಡಲ, ಆದಿತ್ಯ ಕೌಶಲ ಕೇಂದ್ರ, ಶ್ರೀ ಲಕ್ಷ್ಮೀ ಮಹಿಳಾ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ, ಮಹಿಳಾ ವಕೀಲರ ಒಕ್ಕೂಟ, ರಾಷ್ಟ್ರೀಯ ಸಾಧನಾ ಮಹಿಳಾ ಚಿಂತನ ವೇದಿಕೆ, ಸೃಜನಿ ನಾಗರಿಕ ಸಂಘಟನೆ, ಸ್ಲಂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಜನಾಂದೋಲನ ಕರ್ನಾಟಕ, ಸಂವಿಧಾನ ಓದು ಅಭಿಯಾನ ಸಮಿತಿ, ಶಾಂತಿ ಪ್ರಗತಿ ಕೇಂದ್ರ, ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿ, ಸಮರ ಸೊಸೈಟಿ ಹುಬ್ಬಳ್ಳಿ, ಸಾಮರ್ಥ್ಯ ಸೊಸೈಟಿ ಹುಬ್ಬಳ್ಳಿ, ಗಾಂಧಿ ಶಾಂತಿ ಪ್ರತಿಷ್ಠಾನ, ನಳಿನಾ ಮಹಿಳಾ ನಗೆಕೂಟ, ಸಮುದಾಯ, ಆವಿಷ್ಕಾರ, ಕೃಷಿ ವಿ. ವಿ. ಗುತ್ತಿಗೆ ನೌಕರರ ಸಂಘಟನೆ, ಬಸವ ಕೇಂದ್ರ, ಹುಬ್ಬಳ್ಳಿ–ಧಾರವಾಡದ ಎಲ್ಲ ಪ್ರಗತಿಪರ ಮಹಿಳಾ ಮಂಡಲಗಳ ಸೋದರಿಯರು.

(ವಿ.ಸೂ.: ಜಾಥಾದಲ್ಲಿ ಭಾಗವಹಿಸುವ ಎಲ್ಲ ಸಹಭಾಗಿಗಳು ತಂತಮ್ಮ ಬ್ಯಾನರ್ ತಂದುಕೊಳ್ಳಬೇಕು.)

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**

**ಧಾರವಾಡದಲ್ಲಿ 2019, ಮಾರ್ಚ್ 8, 9ರಂದು ಸೇರೋಣ..**

**ಎಲ್ಲ ಒಂದಾಗಿ ಸಮತೆಯ ನಾಡ ಕಟ್ಟೋಣ..**

ಗುಲಾಬಿ ಬಿಳಿಮಲೆ, ಮರ್ಲಿನ್ ಮಾರ್ಟಿಸ್, ಮಂಗಳೂರು; ಎನ್. ಸುಮನಾ, ಬಿ. ಸಿ. ಮಂಜುಳಾ, ಮೈಸೂರು; ಸಿರಿಗೌರಿ, ಪ್ರತಿಭಾ ಆರ್., ಬೆಂಗಳೂರು;ದು. ಸರಸ್ವತಿ, ಮಲ್ಲಮ್ಮ ಯಾಳವಾರ, ವಿಜಯಪುರ; ಜ್ಯೋತಿ ಹಿಟ್ನಾಳ, ಅಜೀಮುನ್ನಿಸಾ, ಕೊಪ್ಪಳ; ರೇಖಾಂಬಾ, ಸಬಿತಾ ಬನ್ನಾಡಿ, ಶಿವಮೊಗ್ಗ; ಕೆ. ವಿ. ನೇತ್ರಾವತಿ, ಕೋಲಾರ; ಸುನಂದಾ ಕಡಮೆ, ಶಾರದಾ ಗೋಪಾಲ, ಲಿನೆಟ್ ಡಿ ಸಿಲ್ವ, ರಜನಿ ಗರುಡ, ಗೌರಮ್ಮ ದೊಡಮನಿ, ರಾಜೇಶ್ವರಿ ಜೋಶಿ, ಬಸಂತಿ ಹಪ್ಪಳದ, ಹೇಮಾ ಪಟ್ಟಣಶೆಟ್ಟಿ, ಅಕ್ಕಮ್ಮಾ ಅರಗಂಜಿ, ಶಾರದಾ ಪಾಟೀಲ್, ಮಧುಲತಾ, ಶೋಭಾ, ವಾಣಿ ಪೆರಿಯೋಡಿ, ಎಚ್. ಎಸ್. ಅನುಪಮಾ ಮತ್ತು ಸಂಗಾತಿಗಳು, ಧಾರವಾಡ.

**ಸಂಪರ್ಕ ಸಂಖ್ಯೆ:** 9902840033, 9901469338, 9449207919, 8277026286, 9480189642, 9742301962, 9380457136, 7411517848, 8762662131, 9480211320, 9448481340, 9482642147.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**'ಮಹಿಳೆ ಮತ್ತು ರಾಜಕೀಯ ಪ್ರಜ್ಞೆ'** ವಿಚಾರ ಸಂಕಿರಣ
**'ಅರಿವಿನೊಂದಿಗೆ ನಮ್ಮ ಪಯಣ'** ಪುಸ್ತಕ ಬಿಡುಗಡೆ
ಹಾಗೂ
**'ಹೆಜ್ಜೆ ಮಾತಾಡು' ಸಾಂಸ್ಕೃತಿಕ ಹಬ್ಬ**

ಮಾರ್ಚ್ 8, 2019, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಸಹಭಾಗಿತ್ವ: ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

**ಫಕೀರವ್ವಾ ಗುಡಿಸಾಗರ ಆವರಣ**
**ವಿಜಯಾ ದಬ್ಬೆ ವೇದಿಕೆ**
ಸ್ಥಳ: ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನ, ಧಾರವಾಡ.

ಸಾಂಸ್ಕೃತಿಕ ಕಾರ್ಯಕ್ರಮ: ಬೆಳಿಗ್ಗೆ 10.00–10.30
ಉದ್ಘಾಟನಾ ಸಮಾರಂಭ: ಬೆಳಿಗ್ಗೆ10.30

ಪ್ರಾಸ್ತಾವಿಕ ನುಡಿ: ಶಾರದಾ ಗೋಪಾಲ, ಧಾರವಾಡ
ಉದ್ಘಾಟನೆ, ಪುಸ್ತಕ ಬಿಡುಗಡೆ: ಶಾಂತಾ ಇಮ್ರಾಪುರ, ಧಾರವಾಡ
ಪುಸ್ತಕ ಕುರಿತು: ಬಿ. ಸಿ. ಮಂಜುಳಾ ಮೈಸೂರು
ದಿಕ್ಸೂಚಿ ಮಾತು: ಮಣಿಮಾಲಾ, ದೆಹಲಿ
ಸಮನ್ವಯ: ಉಷಾ ಮೂರ್ತಿ, ಧಾರವಾಡ

ಸ್ವಾಗತ: ಶಾರದಾ ಪಾಟೀಲ್, ವಂದನಾರ್ಪಣೆ: ಬಸಂತಿ ಹಪ್ಪಳದ
ನಿರ್ವಹಣೆ: ರಾಜೇಶ್ವರಿ ಜೋಷಿ

ವಿಚಾರ ಗೋಷ್ಠಿ: ನಡುಹಗಲು 1.30 – 4.00,

- ಅಧಿಕಾರ ರಾಜಕಾರಣ ಮತ್ತು ಮಹಿಳಾ ಪ್ರಾತಿನಿಧ್ಯ: ಶಾಂತಲಾ ದಾಮ್ಲೆ, ಎಎಪಿ, ಬೆಂಗಳೂರು
- ದಮನಿತ ನೆಲೆಯಿಂದ ಮಹಿಳಾ ಪ್ರಾತಿನಿಧ್ಯ: ಕಾವೇರಿ ಎಚ್. ಎಂ., ಮಾಜಿ ಜಿ.ಪಂ. ಸದಸ್ಯೆ, ಕೊಡಗು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- ಮಹಿಳಾ ರಾಜಕೀಯ ಪ್ರಜ್ಞೆ ಮತ್ತು ಪ್ರಜಾತಂತ್ರ: ಸಿರಿ ಗೌರಿ, ಕರ್ನಾಟಕ ಜನಶಕ್ತಿ, ಬೆಂಗಳೂರು
- ಸಾಮೂಹಿಕ ನಾಯಕತ್ವದತ್ತ ಮಹಿಳಾ ರಾಜಕಾರಣ:ಸ್ವರ್ಣ ಭಟ್, ಮದ್ಯ ನಿಷೇಧ ಆಂದೋಲನ

ಸಮನ್ವಯ: ಎನ್. ಗಾಯತ್ರಿ, ಬೆಂಗಳೂರು
ನಿರ್ವಹಣೆ: ಮಧುಲತಾ, ಧಾರವಾಡ

ಸಂಜೆ 4.30ರಿಂದ: 'ಹೆಜ್ಜೆ ಮಾತಾಡು' ಸಾಂಸ್ಕೃತಿಕ ಹಬ್ಬ
ಉದ್ಘಾಟನೆ: ವಿಜಯಮ್ಮ, ಬೆಂಗಳೂರು.
ನಿರ್ವಹಣೆ: ಒಕ್ಕೂಟದ ಯುವತಂಡ.

ಸಂಜೆ 7 ರಿಂದ 8: 'ಕಪ್ಪು ಉಡುಪಿನಲ್ಲಿ ಮಹಿಳೆಯರು',
ಬೆಳಗೋಣ ಸಾಲು ದೀಪ ಮೌನಜಾಗೃತಿ, ಜ್ಯುಬಿಲಿ ಸರ್ಕಲ್, ಧಾರವಾಡ

ನಿರ್ವಹಣೆ: ಜಯಶ್ರೀ ನಾಡಿಗ್, ಡೈಸಿ ಲೂರ್ಧಸ್ವಾಮಿ.

ಉದ್ಘಾಟನೆ: ಸುರೇಖಾ ದೇವಿ
ಉಪಸ್ಥಿತಿ:ಪ್ರಭಾ ಲೋಂಡೆ
ಮತ್ತು ನಾವು ನೀವು..

ಬಳಗದೊಂದಿಗೆ ಎಲ್ಲ ಬನ್ನಿ..

ಈ ಮೇಲಿನ ಕರಪತ್ರದಲ್ಲಿ ಹೇಳಿರುವಂತೆ ಮಾರ್ಚ್ 8ರಂದು ಮಹಿಳಾ ಸಮಾವೇಶ ಧಾರವಾಡದ ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ, ಇಂದು ಅದರ ಹೆಸರು ಫಕೀರವ್ವ ಗುಡಿಸಾಗರ ಆವರಣ, ವಿಜಯಾ ದಬ್ಬೆ ವೇದಿಕೆಯಲ್ಲಿ ಆರಂಭವಾಯಿತು. ಕವಿಯಿತ್ರಿ, ಡಾ. ಹೇಮಾ ಪಟ್ಟಣಶೆಟ್ಟಿಯವರು ಎಲ್ಲರಿಗೂ ಸ್ವಾಗತ ಕೋರುತ್ತ ಧಾರವಾಡದಲ್ಲಿ ಸಾಮಾಜಿಕ ಚಳುವಳಿ, ಸಂಸ್ಕೃತಿ, ಪರಂಪರೆ ಮತ್ತು ಮಹಿಳಾ ಸ್ವಾಭಿಮಾನ, ಸಾಕ್ಷರತೆಗಾಗಿ ದುಡಿದ ಮಹಿಳೆಯರನ್ನು ಸ್ಮರಿಸಿದರು. ಕಳೆದ ವರ್ಷ ಶಿವಮೊಗ್ಗಾದಲ್ಲಿ ನಡೆಸಲಾದ ಮಹಿಳಾ ಸಮಾವೇಶದ ನೆನಪಿನ ಬುತ್ತಿ, 'ಅರಿವಿನೊಂದಿಗೆ ನಮ್ಮ ಪಯಣ'ದ ಬಿಡುಗಡೆಯೊಂದಿಗೆ ಆ ಪುಸ್ತಕದ ಕುರಿತು ಮೈಸೂರಿನ ಬಿ. ಸಿ. ಮಂಜುಳಾ ಅವರು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಾತನಾಡಿದರು. ತದನಂತರ ಮಣಿಮಾಲಾ ಅವರು ದಿಕ್ಸೂಚಿ ಮಾತುಗಳನ್ನಾಡಿದರು. ಅವರ ಭಾಷೆ, ಭಾಷಣ ಅದೆಷ್ಟು ಹೃದಯಕ್ಕೆ ಮುಟ್ಟುವಂತಿತ್ತೆಂದರೆ ಭಾಷಾಂತರದ ಪ್ರಶ್ನೆಯೇ ಏಳಲಿಲ್ಲ.

ಎಲ್ಲರೂ ಇಷ್ಟಪಡುವ ಧಾರವಾಡದ ರೊಟ್ಟಿ ಊಟ. ಅಕ್ಕಮ್ಮ ಅರಗಂಜಿಯವರ ನೇತೃತ್ವದಲ್ಲಿ ಪಕ್ವಗೊಂಡ ರೊಟ್ಟಿ ಮುಳಗಾಯಿ ಪಲ್ಯ, ಗೋಧಿ ಹುಗ್ಗಿ ಮಹಿಳಾ ದಿನಾಚರಣೆಯ ಸಂಭ್ರಮವನ್ನು ಹೆಚ್ಚಿಸಿತು. ಮಧ್ಯಾಹ್ನದ ಮೇಲೆ ವಿಚಾರ ಸಂಕಿರಣದಲ್ಲಿ ಶಕುಂತಲಾ ದಾಮ್ಲೆ, ಕಾವೇರಿ, ಸಿರಿಗೌರಿ ಮತ್ತು ಸ್ವರ್ಣ ಭಟ್ ಎಲ್ಲರೂ ತಮ್ಮ ವಿಚಾರ ಮತ್ತು ಅನುಭವಗಳಿಂದ ಮೇಳೈಸಿದ ಮಾತುಗಳಿಂದ ನೆರೆದವರಲ್ಲಿ ಸಂಚಲನ ಮೂಡಿಸಿದರು. ಅವಕಾಶ ಸಿಕ್ಕಲ್ಲಿ ಮಹಿಳೆಯು ರಾಜಕೀಯದಲ್ಲಿ ಗಟ್ಟಿ ಹೆಜ್ಜೆಯಿಟ್ಟು ಮುಂದುಬರಬಲ್ಲಳು, ರಾಜಕೀಯದ ವಾತಾವರಣವನ್ನೇ ಬದಲಾಯಿಸಬಲ್ಲಳು ಎಂಬ ಆಶಾಭಾವನೆ ಮೂಡಿಸಿದರು.

ಸಂಜೆಗೆ ಸಾಂಸ್ಕೃತಿಕ ಕಾರ್ಯಕ್ರಮ, 'ಹೆಜ್ಜೆ ಮಾತಾಡು'. ಇಡೀದಿನ ನಮ್ಮ ಗಂಭೀರ ಚರ್ಚೆಗಳಾದರೆ ಸಾಕೇ? ಈ ಒಕ್ಕೂಟವನ್ನು ಮುಂದಕ್ಕೆ ಒಯ್ಯಲಿರುವ ನಮ್ಮ ಯುವ ಜನರಿಗೂ ಹಾಡಲು, ಕುಣಿಯಲು, ಅಭಿನಯ ಕಲೆ ಪ್ರದರ್ಶಿಸಲು ಒಂದವಕಾಶ ಇರಲೇ ಬೇಕು ಎಂದು ಸಂಜೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರಜನಿ ಗರುಡ ಅವರ ಜೊತೆ ಉಳಿದ ಸಂಗಾತಿಗಳೂ ಕೈಜೋಡಿಸಿದ್ದರು. ಗಂಗಾ ನಿರ್ದೇಶಿಸಿದ ಹೆಜ್ಜೆ ಮೇಳ, ಜಾಗೃತಿಯ ದೀಪ ನೃತ್ಯ ಜನಮನ ಸೆಳೆಯಿತು.

ಅಲ್ಲಿಗೇ ಮುಗಿಯಿತೇ? ಇನ್ನೂ ಇಲ್ಲ. ಬೆಳಗೋಣ ಸಾಲು ದೀಪ. ಸ್ಥಳೀಯ ಮಹಿಳಾ ಮಂಡಳಗಳಲ್ಲಿ, ಕಾಲೇಜುಗಳಲ್ಲಿ ಅಲ್ಲಲ್ಲಿ ಸಮುದಾಯಗಳಲ್ಲಿ, ದೇಣಿಗೆ ಕೊಟ್ಟವರಲ್ಲಿ ಸಾರಿದ್ದೆವಲ್ಲ, ಬನ್ನಿ ಸಾಲು ದೀಪ ಬೆಳಗೋಣ, ಮೌನವಾಗಿ ಒಂದು ತಾಸು ನಿಲ್ಲೋಣವೆಂದು. ಎಲ್ಲ ಕಡೆಯಿಂದ ಜನ ಬಂದರು. ಗದ್ದಲ ತುಂಬಿದ ಜ್ಯುಬಿಲಿ ವೃತ್ತದಿಂದ ವಿದ್ಯಾವರ್ಧಕಕ್ಕೆ ಹೋಗುವ ಜನ ನಿಬಿಡ ರಸ್ತೆಯನ್ನೇ ಆಯ್ಕೆ ಮಾಡಿಕೊಂಡು ಕೈಯಲ್ಲಿ ದೀಪ ಹಿಡಿದು ನಿಂತಿತು ಜನಸ್ತೋಮ. ಮೌನವಾಗಿ. ದಾಟಿ ಹೋಗುವವರೆಲ್ಲ ತಿರುಗಿ ನೋಡುವಂತೆ, ವಾಹನವನ್ನು ಅಲ್ಲೇ ಪಾರ್ಕ್ ಮಾಡಿ ತಾವೂ ಬಂದು ನಿಲ್ಲುವಂತೆ ಮಾಡಿದ ಮೌನ ಜಾಗೃತಿ ಕಾರ್ಯಕ್ರಮ. ಗದ್ದಲದ ಮಧ್ಯೆ ಸುರೇಖಾ ದೇವಿಯವರು ಮಾತಾಡಿದ್ದು ಸರಿಯಾಗಿ ಕೇಳದಿದ್ದರೂ ವಿಷಯ ಅರ್ಥವಾಗಿತ್ತು. ನೂರಾರು ಜನ ನಿಂತರು ಮೌನವಾಗಿ. ಅಲ್ಲಿಗೆ ಮೊದಲ ದಿನದ ಮಹಿಳಾ ಸಮಾವೇಶದ ಕಾರ್ಯಕ್ರಮ ಮುಕ್ತಾಯವಾಯಿತು. ಹೊರಟೆವು ಕೊಂಚ ವಿಶ್ರಾಂತಿ ತೆಗೆದುಕೊಂಡು ನಾಳಿನ ಇನ್ನೂ ದೊಡ್ಡ ಕಾರ್ಯಕ್ರಮಕ್ಕೆ ತಯಾರಾಗಲು...

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಮಾರ್ಚ್ 9, 2019. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ**
**ಹಕ್ಕೊತ್ತಾಯ ಜಾಥಾ ಮತ್ತು ಬೃಹತ್ ಸಾರ್ವಜನಿಕ ಸಮಾವೇಶ**

**ಬೆಳಿಗ್ಗೆ 9.30, ಕಡಪಾ ಮೈದಾನದ ಆವರಣ**
**ಶ್ಯಾಮಲಾದೇವಿ ಬೆಳಗಾಂವಕರ ವೇದಿಕೆ**

ಜಾಥಾ ಉದ್ಘಾಟನೆ: ಕ.ರಾ.ಮಹಿಳಾ ಗೃಹಕಾರ್ಮಿಕರ ಸಂಘಟನೆ ಸದಸ್ಯೆಯರು ಮತ್ತುಕಲಾ ತಂಡಗಳು

ಸಸಿ ಹಸ್ತಾಂತರ:ಲೂಸಿ ಸಾಲ್ಡಾನಾ, ಶಾರದಾ ಪಾಟೀಲ್, ದಿಲ್‌ಶಾದ್ ಸುತಾರ

ಜಾಥಾ ಚಾಲನೆ:ಲತಾ ಪ್ರತಿಭಾ ಮಧುಕರ್, ಹೈದರಾಬಾದ್

ನಿರ್ವಹಣೆ: ಲಿನೆಟ್ ಡಿ ಸಿಲ್ವ

ಜಾಥಾ ಮಾರ್ಗ: ಕಡಪಾ ಮೈದಾನ >> ವಿವೇಕಾನಂದ ಸರ್ಕಲ್ >> ಕೆಸಿಸಿ ಬ್ಯಾಂಕ್ ಸರ್ಕಲ್ >> ಮ್ಯಾದಾರ ಓಣಿ >> ಲೈನ್ ಬಜಾರ್ >> ಹನುಮಪ್ಪನ ಗುಡಿ >> ಎನ್‌ಟಿಟಿಎಫ್ >> ಜ್ಯುಬಿಲಿ ಸರ್ಕಲ್ >> ಕಡಪಾ ಮೈದಾನ.

**ಬಹಿರಂಗ ಸಾರ್ವಜನಿಕ ಸಭೆ,ಸಮಯ: 11.30.**
**ಜುಬೇದಾಬಾಯಿ ಸವಣೂರು ಆವರಣ**
**ಭಾಗೀರಥಿ ಬಾಯಿ ಪುರಾಣಿಕ ವೇದಿಕೆ**

ಆಶಯ ಗೀತೆಗಳು: ಒಕ್ಕೂಟದ ಸಂಗಾತಿಗಳಿಂದ

ಸ್ವಾಗತ: ಹೇಮಾ ಪಟ್ಟಣಶೆಟ್ಟಿ, ಧಾರವಾಡ

ಪ್ರಾಸ್ತಾವಿಕ ಮಾತು: ಪ್ರತಿಭಾ ಆರ್, ಬೆಂಗಳೂರು

ಆಶಯ ಮಾತು: ಮೀನಾಕ್ಷಿ ಬಾಳಿ, ಕಲಬುರಗಿ

ಅತಿಥಿಗಳ ಪರಿಚಯ: ಅಖಿಲಾ ವಿದ್ಯಾಸಂದ್ರ

ದಿಕ್ಸೂಚಿ ಭಾಷಣ: ಅಮರಜಿತ್ ಕೌರ್, ದೆಹಲಿ

ನಿರ್ಣಯ ಮಂಡನೆ:ರೇಖಾಂಬಾ ಟಿ. ಎಲ್., ಶಿವಮೊಗ್ಗ

ವಂದನಾರ್ಪಣೆ:ಅಕ್ಕಮ್ಮಾ ಅರಗಂಜಿ, ಧಾರವಾಡ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಉಪಸ್ಥಿತಿ:** ಮಧುಲತಾ, (ಎಐಎಂಎಸ್‌ಎಸ್), ಶೋಭಾ (ಸ್ಲಂ ಜನಾಂದೋಲನ,) ಸುಶೀಲಾ ಪಾಟೀಲ್ (ಮಹಿಳಾ ವಕೀಲರ ಸಂಘ), ಗೌರಮ್ಮ ದೊಡಮನಿ (ಕ.ರಾ. ದಲಿತ ಮಹಿಳಾ ಒಕ್ಕೂಟ), ಪ್ರತಿಭಾದೇವಿ ಚರಂತಿಮಠ, (ಕೆಎಸ್ಸಾರ್ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್); ವೀಣಾ ಸಂಕನಗೌಡರ್ (ಉ.ಕ.ಲೇ.ಸಂಘ); ಶೋಭಾ ಚಲವಾದಿ (ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿ), ರಾಜರತ್ನಂ (ಎಲ್‌ಜಿಬಿಟಿಕ್ಯು, ಸಮರ ಸಂಸ್ಥೆ), ವಿಶಾಲಾಕ್ಷಿ ಅಕ್ಕಿ, ಪತ್ರಕರ್ತೆ ಹುಬ್ಬಳ್ಳಿ; ಪರಿಮಳಾ ಜೈನ್, ನಿಂಗಮ್ಮ, ಅಫ್ರೋಸಾ ಕಾರೇವಾಡಿ, ಸಮುದ್ರಿ, (ಅಂಗನವಾಡಿ ಕಾರ್ಯಕರ್ತೆಯರ ಯೂನಿಯನ್); ಹರಿಣಿ, ಮಂಗಳೂರು; ನಳಿನಾ, ಮೈಸೂರು; ಪುಷ್ಪಲತಾ, ಬೆಂಗಳೂರು; ಮಲ್ಲಮ್ಮ ಯಾಳವಾರ ವಿಜಯಪುರ; ಸಲೀಮಾ, ಕೊಪ್ಪಳ;ಮಂಜಮ್ಮ ಸಾಗರ, ಶಿವಮೊಗ್ಗ; ಕೆ. ವಿ. ನೇತ್ರಾವತಿ, ಕೋಲಾರ; ಮಲ್ಲಿಕಾ ಬಸವರಾಜು ತುಮಕೂರು; ಪೂರ್ಣಿಮಾ ಮಂಡ್ಯ ಮತ್ತು ಸಹಭಾಗಿ ಸಂಘ–ಸಂಸ್ಥೆಗಳ ಪ್ರತಿನಿಧಿಗಳು.

**ನಿರ್ವಹಣೆ:** ರಜನಿ ಗರುಡ, ನಿರ್ಮಲಾ ಶೆಟ್ಟರ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹಾಡಿನ ಹುಚ್ಚವ್ವಾ!

**ಹಾ**ಡುಗಳೇ ನಮ್ಮ ಸಮ್ಮೇಳನದ ಜೀವದ್ರವ್ಯ. ಹೇಳಬೇಕಾಗಿದ್ದನ್ನು ಒಂದು ಹಾಡು, ಒಂದು ಪುಟ್ಟ ನಾಟಕ, ಒಂದು ಕತೆಯಲ್ಲಿ ಪೋಣಿಸಿದರೆ ಸಾಕು. ಶಾಲಾ ಕಾಲೇಜು ಹುಡುಗರು ತನ್ಮಯರಾಗಿ ಕೇಳುತ್ತಾರೆ, ನೋಡುತ್ತಾರೆ, ಗುಣಗುಣಿಸುತ್ತಾ ಹೋಗುತ್ತಾರೆ. ಆ ಮೂಲಕ ಸಂದೇಶವು ಹೃದಯವನ್ನು ಪ್ರವೇಶಿಸುತ್ತದೆ. ಸಮುದಾಯದಲ್ಲಿ, ಸಂತೆಯಲ್ಲಿ, ಬಸ್ಸಿನಲ್ಲಿ ಜನರ ಗಮನ ಸೆಳೆಯಲು ಬೇಕಾಗಿದ್ದೇ ಒಂದು ಗಟ್ಟಿ ಸಂದೇಶವುಳ್ಳ ಹಾಡು. ಒಕ್ಕೂಟದ ಗುಂಪಿನಲ್ಲಿ ಶಿವಮೊಗ್ಗದ ಸವಿತಾ ನಾಗಭೂಷಣರವರು ಹಾಕಿದ ಈ ಹಾಡು ನಮ್ಮ ಧಾರವಾಡದ ಸಮ್ಮೇಳನದಲ್ಲಿ ಮಾರ್ದನಿಗೊಂಡಿತು.ಇಡೀ ಸಮ್ಮೇಳನದ ಆಶಯ ಹಾಡೂ ಇದಾಯಿತು.

**ಹಾಡೇ ಹನುಮವ್ವ! ಹಾಡೇ ದುರಗವ್ವ!!**
ಕತ್ತಲ ಒಳಗೆ ಕರಗಿದೆ ಕೋಗಿಲ ಬೆಳಕಿಗೆ ತಾರವ್ವಾ!!

ಹಳ್ಳಾ–ಕೊಳ್ಳಾ ಹರಿಯೋ ಹಾಗೆ
ಮಾವೂ–ಬೇವೂ ಚಿಗಿಯೋ ಹಾಗೆ
ರಂಜ ಸುರಗಿ ಉದುರೋ ಹಾಗೆ
ಜಾಜಿ ಮಲ್ಲಿಗೆ ಬಿರಿಯೋ ಹಾಗೆ
ಹಾಡೇ ಹನುಮವ್ವಾ!1!

ಕಾಳಿಯ ಕೆಚ್ಚಲು ತುಂಬೋ ಹಾಗೆ
ಪಾತರಗಿತ್ತಿ ಕುಣಿಯೋ ಹಾಗೆ
ಆಡೋ ನವಿಲು ನಲಿಯೋ ಹಾಗೆ
ಹಕ್ಕಿ ಚುಕ್ಕಿ ಮರಳೋ ಹಾಗೆ .. ಹಾಡೇ ಹನುಮವ್ವಾ!2!

ಹಗಲು ರಾತ್ರಿ ಉರುಳೋ ಹಾಗೆ
ಸಾಲದ ಬಡ್ಡಿ ಸೊರಗೋ ಹಾಗೆ
ಕಾಳುಬೇಳೆ ಸುರಿಯೋ ಹಾಗೆ
ಕಟ್ಟಿಗೆ ಕೆಂಡ ಉರಿಯೋ ಹಾಗೆ .. ಹಾಡೇ ಹನುಮವ್ವಾ!3!

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನೀರೂ ಸಾರೂ ಕುದಿಯೋ ಹಾಗೆ
ಹಸಿವು ದಾಹ ನೀಗೋ ಹಾಗೆ
ಕಾಸಿನ ಕಾಲು ನಡುಗೋ ಹಾಗೆ
ಗರುವದ ಗೋಣು ಮುರಿಯೋ ಹಾಗೆ .. .. ಹಾಡೇ ಹನುಮವ್ವಾ!4!

ಸೇಡು ಕೇಡು ಕರಗೋ ಹಾಗೆ
ಬೇನೆ ಬೇಸರ ಕಳೆಯೋ ಹಾಗೆ
ಮೇಲು ಕೀಳೂ ಅಳಿಯೋ ಹಾಗೆ!
ಪ್ರೇಮ ಕರುಣೆ ಉಕ್ಕೋ ಹಾಗೆ .... ಹಾಡೇ ಹನುಮವ್ವಾ!5!

ಕನಸೋ ಕಣ್ಣು ತೆರೆಯೋ ಹಾಗೆ
ಮನಸಿನ ಬಾಗಿಲು ತಟ್ಟೋ ಹಾಗೆ
ದೇಹ ಜೀವ ಮಾಗೋ ಹಾಗೆ
ಮುಕ್ಕಣ್ಣನಿಗೆ ಮುಟ್ಟೋ ಹಾಗೆ .. .. ಹಾಡೇ ಹನುಮವ್ವಾ!6!

ಹಾಡಾ ಕೇಳಿ ಕಣ್ಣಾ ಮುಚ್ಚುವೆ/ಹಾಡಿನ ಹುಚ್ಚವ್ವಾ!!7!!

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅತಿಥಿಗಳ ಪರಿಚಯ

**– ದು. ಸರಸ್ವತಿ**

**ಮಣಿಮಾಲಾ** ಜನಿಸಿದ್ದು ಬಿಹಾರದ ಕುಗ್ರಾಮದ ಬಡ ಕುಟುಂಬದಲ್ಲಿ. ಶಿಕ್ಷಣದ ಮಹತ್ವ ತಿಳಿದ ಪೋಷಕರು ಬಡತನವನ್ನು ಲೆಕ್ಕಿಸದೇ ಮಗಳನ್ನು ಓದಿಸಿದರು. ಜಯಪ್ರಕಾಶ ನಾರಾಯಣ್ (ಜೆಪಿ) ಹುಟ್ಟು ಹಾಕಿದ ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಈಕೆ ಅವರ ಮಾನಸ ಪುತ್ರಿಯಾಗಿದ್ದಳು.

1987ರ ನವೆಂಬರ್ ತಿಂಗಳು. ರಾಂಚಿಯಲ್ಲಿ ನಡುಹಗಲು ಪೋಲೀಸ್ ಸ್ಟೇಷನ್ನಿನೆದುರೇ ಮಹಿಳೆಯೊಬ್ಬಳನ್ನು ನಗ್ನಳಾಗಿಸಿ ಮೆರವಣಿಗೆಯಲ್ಲಿ ಒಯ್ಯುತ್ತಿದ್ದರು. ಅವಳ ಹಿಂದೆ 'ಆ ಮಾಟಗಾತಿಯನ್ನು ಕೊಲ್ಲಿ' ಎಂದು ಹುಡುಗರು, ಗಂಡಸರು ಕೂಗುತ್ತಿದ್ದರು. ಫೋಟೋಗ್ರಾಫರನೊಬ್ಬ ನೋಡಿ, ಫೋಟೋ ತೆಗೆದು, ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರಿಂದ ಆಕೆ ಪಾರಾದಳು. ನವಭಾರತ್ ಟೈಮ್ಸ್‌ನಲ್ಲಿ ಪ್ರಕಟವಾದ ಈ ಸುದ್ದಿಯನ್ನು ಓದಿದ ಹೆಣ್ಣುಮಗಳೊಬ್ಬಳು ಮಾಟಗಾತಿಯರೆಂದು ಬೇಟೆಯಾಡಲ್ಪಡುವವರನ್ನು ಹುಡುಕಿ ಅವರ ನೋವಿನ ಕತೆಯನ್ನು ಲೋಕಕ್ಕೆ ತೆರೆದಿಡುವ ಪಣತೊಟ್ಟಳು. ಹಲವು ದಿನಗಳ ಕಾಲ ಹಳ್ಳ ಗುಡ್ಡ ಹತ್ತಿ ಇಳಿದು, ಮೈಲಿಗಟ್ಟಲೆ ನಡೆದು 50 ಸಂತ್ರಸ್ತರನ್ನು ಸಂದರ್ಶಿಸಿ ಲೇಖನಗಳ ಸರಣಿ ಬರೆದು ಪ್ರಕಟಿಸಿದರು.

ಮಾಟಗಾತಿಯೆಂದು ಹಲವರಿಗೆ ಉಚ್ಚೆ ಕುಡಿಸಿದ್ದರು, ಹೇಲು ತಿನ್ನಿಸಿದ್ದರು. ಛೋಟಾ ನಾಗ್ಪುರದ ಮಿರ್ಜಾ ಚೌಕಿಯಲ್ಲಿ 6 ತಿಂಗಳ ಕೂಸಿನ ತಾಯಿ ಬದಕಿ ಹಂದ್ಸಳ ಕತೆ ಕರುಳು ಮಿಡಿಯುವಂತಿದೆ. ಒಂದು ರಾತ್ರಿ 'ತಮ್ಮನ ಮಗನಿಗೆ ಎರಡು ತಿಂಗಳಿಂದ ಆರಾಮಿಲ್ಲ, ಮಾಟ ಮಾಡಿದವಳು ನೀನು, ತಿರುಗು ಮಾಟ ಹಾಕಿ ಅದನ್ನು ತೆಗೆ, ಅವನನ್ನು ಉಳಿಸು' ಎಂದು ಕೆಲವರು ಧಮಕಿ ಹಾಕಿದರು. ತನಗೇನೂ ಗೊತ್ತಿಲ್ಲ ಎಂದರೂ ನಂಬುತ್ತಿಲ್ಲ ಅವರು. ಮರುದಿನ ಬೆಳಿಗ್ಗೆ ರೋಗಿ ತೀರಿಕೊಂಡ. ಬಂದವರು ಮೊಲೆ ಕುಡಿಯುತ್ತಿದ್ದ ಅವಳ ಕೂಸನ್ನೆತ್ತಿ ನೆಲಕ್ಕಪ್ಪಳಿಸಿ ಬಿಸಾಡಿ ಅವಳ ಕೈಕಡಿದು ಹೋದರು. ಆಗಿನಿಂದ ಅವಳದು ಬೇಡಿ ಹೊಟ್ಟೆ ತುಂಬಿಸಿಕೊಳ್ಳುವ ಪಾಡು. ಇಂತಹ ಹಲವು ಕತೆಗಳನ್ನು ಹುಡುಕಿ ಹೋದ ಪತ್ರಕರ್ತೆ ಮಣಿಮಾಲಾ ಈ ಕಾರ್ಯಕ್ಕೆ ಮಾನವ ಹಕ್ಕುಗಳ ಪ್ರಶಸ್ತಿ ಪಡೆದುಕೊಂಡರು.

'ರವಿವಾರ್', 'ದಿನ್‌ಮಾನ್', 'ನವಭಾರತ್ ಟೈಮ್ಸ್', 'ಮಹಾನಗರ' ಹೀಗೆ ಹಲವಾರು ಪತ್ರಿಕೆಗಳಿಗೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಕುರಿತು ಬರೆದರು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಮತಾಂಧ ಕೋಮುವಾದಿಗಳು ಮಹಾನಗರ್ ಪತ್ರಿಕೆ ಕಚೇರಿಯ ಮೇಲೆ ನಡೆಸಿದ ದಾಳಿಯನ್ನು ಖಂಡಿಸಿ 1988ರಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಮಾರಣಾಂತಿಕ ಹಲ್ಲೆಗೆ ಒಳಗಾದರು. ಲಾಂಗಿನಲ್ಲಿ ಕುತ್ತಿಗೆಗೆ ಹೊಡೆದಿದ್ದರು. ಪೊಲೀಸರು ಬೇರೆ ಯಾರೂ ಬರದಂತೆ ಆಕೆಯೊಬ್ಬಳನ್ನೇ ವ್ಯಾನಿನಲ್ಲಿ ಸಾಗಿಸುವಾಗ ಚಂಗನೆ ಹತ್ತಿ ಕೂತು ಗೆಳತಿಗೆ ಆಸರೆಯಾದ ಲತಾ ಪ್ರತಿಭಾ ಮಧುಕರ್ ಗಾಯದಿಂದ ಸೋರಿದ ರಕ್ತದಲ್ಲಿ ತನ್ನ ಬಟ್ಟೆ ತೊಯ್ದದ್ದನ್ನು ಇನ್ನೂ ಮರೆತಿಲ್ಲ. ಆಕೆ ಬದುಕಿ ಉಳಿದದ್ದೇ ಹೆಚ್ಚು. ಆದರೂ ಅಂಜದೆ ಬರೆಯುವುದನ್ನು ಮುಂದುವರೆಸಿದರು. 'ಬುಕ್ ಫಾರ್ ಚೇಂಜ್' ಎಂಬ ಪರ್ಯಾಯ ಪ್ರಕಾಶನದ ಸಂಪಾದಕಿಯಾಗಿ ಭಾರತದಾದ್ಯಂತ ಹಲವಾರು ಜನಪರ ವಿಷಯಗಳ ಕುರಿತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದಿದ್ದಾರಲ್ಲದೆ ನೆಟ್‌ವರ್ಕ್ ಆಫ್ ವಿಮೆನ್ ಇನ್ ಮೀಡಿಯಾ, ಸೌತ್ ಏಶಿಯನ್ ಅಸೋಸಿಯೇಷನ್ ಆಫ್ ವಿಮೆನ್ ಜರ್ನಲಿಸ್ಟ್‌ನ ಸದಸ್ಯರಾಗಿದ್ದಾರೆ. ಗಾಂಧಿ ತತ್ವಗಳನ್ನು ನಂಬುವ ಇವರು ದೆಹಲಿಯ ಗಾಂಧಿ ಸ್ಮೃತಿ ದರ್ಶನದ ನಿರ್ದೇಶಕಿಯಾಗಿಯೂ ಕೆಲಸ ಮಾಡಿದ್ದಾರೆ.

ನಿವೃತ್ತ ರಿಸರ್ವ್ ಬ್ಯಾಂಕ್ ಅಧಿಕಾರಿಯಾದ ಬೆಂಗಳೂರಿನ **ಎನ್. ಗಾಯತ್ರಿ** ಲೇಖಕಿ, ಸಾಮಾಜಿಕ ಹೋರಾಟಗಾರ್ತಿ, ಪತ್ರಕರ್ತೆಯಾಗಿ ಪರಿಚಿತರಾಗಿದ್ದಾರೆ.ಮಹಿಳಾ ಚಳುವಳಿ–ಸಾಹಿತ್ಯ–ಮೀಸಲಾತಿ ಮೊದಲಾದ ವಿಷಯಗಳ ಕುರಿತು ಹತ್ತಾರು ಪುಸ್ತಕಗಳನ್ನು ಬರೆದು, ಅನುವಾದಿಸಿ ಸಂಪಾದಿಸಿದ್ದಾರೆ. 22 ವರ್ಷ ಕಾಲ ಅಚಲ ಮಹಿಳಾ ಮಾಸಪತ್ರಿಕೆಯ ಸಂಪಾದಕಿಯಾಗಿದ್ದರು. ಈಗ 'ಹೊಸತು' ಮಾಸಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದಾರೆ ಹಾಗೂ ಹಿತೈಷಿಣಿ ಎಂಬ ಮಹಿಳಾ ವೆಬ್ ಮ್ಯಾಗಜೀನಿನ ಸಹಸಂಪಾದಕಿಯಾಗಿದ್ದಾರೆ. ಐದು ವರ್ಷ ಕಾಲ ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಶಾಂತಲಾ ದಾಮ್ಲೆ** ಆಮ್ ಆದ್ಮಿ ಪಾರ್ಟಿಯ ರಾಜ್ಯ ಸಹಸಂಚಾಲಕಿ. ಮಹಿಳಾ ಸಬಲೀಕರಣವನ್ನು ಗುರಿಯಾಗಿಸಿಕೊಂಡ "ಅವಳ ಹೆಜ್ಜೆ" ಎಂಬ ಸಾಮಾಜಿಕ ಉದ್ಯಮದ ಸ್ಥಾಪಕಿ.ದಾವಣಗೆರೆಯ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಿಂದ ಬಿ.ಇ., ಅಮೆರಿಕಾದ ವರ್ಜೀನಿಯಾ ಯುನಿವರ್ಸಿಟಿಯಿಂದ ಎಂ.ಬಿ.ಎ. ಪದವಿ ಪಡೆದು ಭಾರತದಲ್ಲಿ 4 ವರ್ಷ, ಅಮೆರಿಕದಲ್ಲಿ 12 ವರ್ಷ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಿದರು. ರಾಜಕೀಯ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ 2010ರಲ್ಲಿ ಭಾರತಕ್ಕೆ ಮರಳಿದರು. 2013ರಲ್ಲಿ ಲೋಕಸತ್ತಾ ಪಕ್ಷದ ಅಭ್ಯರ್ಥಿಯಾಗಿ ಬಸವನಗುಡಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕಳೆದ ಐದು ವರ್ಷಗಳಿಂದ ಆಮ್ ಆದ್ಮಿ ಪಾರ್ಟಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಕೊಡಗಿನ ವಿರಾಜಪೇಟೆಯ ಪಾಲಿಬೆಟ್ಟದ **ಎಚ್. ಎಂ. ಕಾವೇರಿ** ಚಿಕ್ಕ ವಯಸ್ಸಿನಲ್ಲಿಯೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ರಾಜಕೀಯ ರಂಗ ಪ್ರವೇಶಿಸಿದರು. 2011ರಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯೆಯಾಗಿ ಅಮ್ಮತಿ ಕ್ಷೇತ್ರದಿಂದ ಆಯ್ಕೆಯಾದರು. ಮೊದಲ 20 ತಿಂಗಳು ಕೊಡಗು ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷೆಯಾಗಿ ನಂತರ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ ಕಾವೇರಿ ರಾಜಕೀಯ ರಂಗದಲ್ಲೂ ಮಹಿಳಾ ಹೆಜ್ಜೆ ಗುರುತುಗಳನ್ನು ಯಶಸ್ವಿಯಾಗಿ ಮೂಡಿದವರು. 2012ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಸಂಶೋಧನೆಗಾಗಿ ನೋಂದಾವಣಿ ಮಾಡಿಸಿ 2019ರಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ.

ಹೊಸತಲೆಮಾರಿನ ಹೋರಾಟಗಾರ್ತಿಯರ ಸಾಲಿನಲ್ಲಿ ಮುಂಚೂಣಿಯ ಹೆಸರು ಬೆಂಗಳೂರಿನ ಗೌರಿ ಅಥವಾ ಸಿರಿಗೌರಿ. ವಿದ್ಯಾರ್ಥಿ ದೆಸೆಯಿಂದಲೇ ಸಂಘಟನೆ–ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಗೌರಿ, ಮಹಿಳಾ ಮುನ್ನಡೆ, ಸಮಾನತಾ ಮಹಿಳಾ ವೇದಿಕೆ ಮೊದಲಾದ ಮಹಿಳಾ ಸಂಘಟನೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದವರು. ಹೋರಾಟದ ಸಂದರ್ಭದಲ್ಲಿ ಅವರ ದಿಟ್ಟ ಹಾಗೂ ನಿರ್ಭೀತ ಮಾತುಗಳು ಜೈಲು ವಾಸವನ್ನೂ ಬಳುವಳಿಯಾಗಿತ್ತಿವೆ. ಯಾವ ಬೆದರಿಕೆಗಳಿಗೂ ಅಂಜದ ಗೌರಿ, ಸದ್ಯ ಕರ್ನಾಟಕ ಜನಶಕ್ತಿಯ ಕಾರ್ಯಕಾರಿ ಸಮಿತಿಯಲ್ಲಿ ಒಬ್ಬರು. ಬರಹಗಾರ್ತಿ, ಉತ್ತಮ ಸಂಘಟಕಿ. ಅವರ ವ್ಯಕ್ತಿ ವಿವರದಾಚೆಗೂ ಅವರ ಸಮಾಜಮುಖಿ ಚಟುವಟಿಕೆಗಳು ಹರಡಿಕೊಂಡಿವೆ ಎನ್ನಬಹುದು.

ಮಂಗಳೂರು ಬಳಿಯ ಸುರತ್ಕಲ್‌ನ **ಸ್ವರ್ಣ ಭಟ್** ಕಳೆದ ಹತ್ತಾರು ವರ್ಷಗಳಿಂದ ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಮೊದಲು ಜಾಗೃತಿ ಸಂಸ್ಥೆಯಲ್ಲಿ ಸಕ್ರಿಯರಾಗಿದ್ದ ಸ್ವರ್ಣ ಈಗ 9 ವರ್ಷದಿಂದ ಗ್ರಾಮೀಣ ಕೂಲಿಕಾರರ ಸಂಘಟನೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗೆ ಸಾವಿರಾರು ಗ್ರಾಮೀಣ ಭಾಗದ ಮಹಿಳೆಯರು ಚಿತ್ರದುರ್ಗದಿಂದ ಬೆಂಗಳೂರಿನವರೆಗೆ 240 ಕಿಮೀ ನಡೆದು ಮದ್ಯನಿಷೇಧಕ್ಕಾಗಿ ಒತ್ತಾಯಿಸಿದ ಮದ್ಯ ನಿಷೇಧ ಆಂದೋಲನ ಪಾದಯಾತ್ರೆಯನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಗ್ರಾಮೀಣ ಕಾರ್ಮಿಕರ ಹಕ್ಕುಗಳಿಗಾಗಿ, ಮದ್ಯ ನಿಷೇಧ ಮತ್ತು ಭೂಮಿ ಮತ್ತು ವಸತಿ ಹಕ್ಕು ವಂಚಿತರಿಗಾಗಿನ ಹೋರಾಟಗಳಲ್ಲಿ ಸ್ವರ್ಣ ನಿರಂತರ ತೊಡಗಿಕೊಂಡಿದ್ದಾರೆ.

**ಲತಾ ಪ್ರತಿಭಾ ಮಧುಕರ್** ಮಹಾರಾಷ್ಟ್ರದ ನಾಗಪುರ ಮೂಲದವರು. ಕಳೆದ 35 ವರ್ಷಗಳಿಂದ ಮಹಿಳೆಯರು, ದಲಿತರು, ಹಿಂದುಳಿದವರು, ಆದಿವಾಸಿಗಳ ಮಾನವಹಕ್ಕು ಚಳುವಳಿಯಲ್ಲಿ ಸಕ್ರಿಯವಾಗಿದ್ದಾರೆ. ತಮ್ಮ 18ನೇ ವಯಸ್ಸಿಗೆ ಲತಾ ಅವರು ಜಯಪ್ರಕಾಶ್ ನಾರಾಯಣ್ ಅವರು ಹುಟ್ಟುಹಾಕಿದ ನಾಗಪುರದ ಛಾತ್ರ್ ಯುವ ಸಂಘರ್ಷ್ ವಾಹಿನಿಯ ಮೊತ್ತಮೊದಲ ಸಂಚಾಲಕಿಯಾಗಿದ್ದರು. ಅವರು ಓದುತ್ತಿದ್ದ ಬಿನ್ಸಾಣಿ ಮಹಿಳಾ ವಿದ್ಯಾಲಯದಲ್ಲಿ ವಿಶ್ವಸಂಸ್ಥೆಯ ಕರೆಯ ಮೇರೆಗೆ ಆಯೋಜಿಸಲಾಗಿದ್ದ ಮಹಿಳಾ ಸಮಾವೇಶದೊಂದಿಗೆ ಮಹಿಳಾ ಚಳುವಳಿಯ ಪಯಣ ಆರಂಭವಾಯಿತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳಾ ಚಳುವಳಿ, ನರ್ಮದಾ ಬಚಾವೋ ಆಂದೋಲನ್, ನ್ಯಾಷನಲ್ ಅಲಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ಸ್, ಎನ್ರಾನ್ ವಿರುದ್ಧದ ಹೋರಾಟ, ದಲಿತ ಬಹುಜನ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದು ಆಕೆ ಪಡೆದುಕೊಂಡ ಅನುಭವದ ಹರಹು ವಿಸ್ತಾರವಾದುದು. ಜೀವ ವಿರೋಧಿ ಅಭಿವೃದ್ಧಿ ವಿರುದ್ಧ 'ವಿಕಾಸ ಬೇಕು–ವಿನಾಶ ಬೇಡ' ಎಂಬ ಘೋಷವಾಕ್ಯದೊಂದಿಗೆ ನಡೆದ ಕೊಂಕಣ ವಿಕಾಸ ಯಾತ್ರೆಯಲ್ಲಿ ಲತಾ ಮುಂಚೂಣಿಯಲ್ಲಿದ್ದರು. ಯಾತ್ರೆ ಮಹಾಡ್‌ನ ಮಡ್ಗಾವ್ ತಲುಪಿದಾಗ ಪೊಲೀಸರು ಹೊಡೆದು ಬಂಧಿಸಿದ್ದಲ್ಲದೆ ಯರವಾಡ ಜೈಲಿಗೆ ಹಾಕಿದರು. ಇವರೊಂದಿಗೆ ಮೇಧಾ ಪಾಟ್ಕರ್ ಅವರೂ ಇದ್ದರು. ಪೊಲೀಸರ ಹಿಂಸಾಚಾರದಲ್ಲಿ ತಲೆಗೆ ತೀವ್ರವಾದ ಪೆಟ್ಟು ಬಿದ್ದ ಘಟನೆಯನ್ನು 'ಚಿಂತಿಸುವ ತಲೆಯೇ ಪೊಲೀಸರ ಗುರಿ. ಹಾಗಾಗಿ ತಲೆಗೆ ಹೊಡೆದರು' ಎಂದು ತಮಾಷೆಯಾಗಿ ನೆನಪಿಸಿಕೊಳ್ಳುತ್ತಾರೆ. ಹೋರಾಟದ ಭಾಗವಾಗಿ ಎಷ್ಟು ಸಲ ಜೈಲಿಗೆ ಹೋಗಿದ್ದಾರೆ ಲೆಕ್ಕವಿಟ್ಟಿಲ್ಲ.

ಮರಾಠಿ ಸಾಹಿತ್ಯದಲ್ಲಿ ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿಯನ್ನು, ಜರ್ನಲಿಸಂನಲ್ಲಿ ಪದವಿಯನ್ನು ಪಡೆದುಕೊಂಡಿದ್ದಾರಲ್ಲದೆ ಇತ್ತೀಚೆಗಷ್ಟೇ ಸಂಶೋಧನಾ ಪ್ರಬಂಧವನ್ನು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ಗೆ ಸಲ್ಲಿಸಿದ್ದಾರೆ. ಪ್ರಾಕ್ಟಿಕಲ್ ಅನುಭವ, ಬಹುಶಿಸ್ತೀಯ ಅಧ್ಯಯನ ಮತ್ತು ಆಳವಾದ ಓದು ಅವರ ಸಂಶೋಧನೆಗಳಿಗೆ ಬುನಾದಿಯಾಗಿವೆ. ಹತ್ತೊಂಭತ್ತನೇ ಶತಮಾನದ ಮರಾಠಿ ನಿಯತಕಾಲಿಕಗಳಲ್ಲಿನ ದೃಷ್ಟಿಕೋನಗಳು, ನರ್ಮದಾ ಬಚಾವೋ ಆಂದೋಲನದಲ್ಲಿ ತೊಡಗಿದ್ದ ನಾಯಕಿಯರ ಮೌಖಿಕ ಇತಿಹಾಸ, ಮಹಿಳಾ ಚಳುವಳಿಯಲ್ಲಿ ಭಾಗಿಯಾದ ಅಬ್ರಾಹ್ಮಣ ಮಹಿಳೆಯರ ಮೌಖಿಕ ಇತಿಹಾಸ ಕುರಿತು ಅವರ ನಡೆಸಿದ ಸಂಶೋಧನೆಗಳು ವಿದ್ವತ್‌ವಲಯದ ದಿಗ್ಗಜರಿಗೆ ಆಕರಗಳಾಗಿವೆ. ಕತೆ, ಕಾವ್ಯ, ನಾಟಕ, ಚಿತ್ರ, ಭಾಷಣಗಳಲ್ಲೂ ಮುಂದಿರುವ ಆಕೆಯ ಬಹುಮುಖೀ ಪ್ರತಿಭೆ ಹೋರಾಟಕ್ಕೆ ಸೃಜನಾತ್ಮಕತೆಯನ್ನು ಮತ್ತು ಹೋರಾಟ ಆಕೆಯ ಪ್ರತಿಭೆಗೆ ವಿಭಿನ್ನ ಆಯಾಮವನ್ನು ನೀಡಿದೆ. ಅವರ ವಿದ್ವತ್ತು ಚಳುವಳಿಯ ತಾತ್ವಿಕತೆಯನ್ನು ರೂಪಿಸಿದೆ. ಹಾಗೆಯೇ ಅವರ ಹೋರಾಟದ ಅನುಭವ ಅವರ ಅಧ್ಯಯನಕ್ಕೆ ಭದ್ರ ಬುನಾದಿ ನೀಡಿದೆ.

ಲಿಂಗತ್ವ ಸಂವೇದನಾಶೀಲತೆಯ ತರಬೇತುದಾರಳಾಗಿ ಉತ್ತಮ ತರಬೇತಿ ಪಠ್ಯ, ಮಾಧ್ಯಮ ಪರಿಕರ ಮತ್ತು ಕೌಶಲ್ಯ ಅಭಿವೃದ್ಧಿ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. 'ಸ್ತ್ರೀಕಥಿ', 'ಆವಾರ್ಗಿ', ನ್ಯಾಷನಲ್ ಸೆಂಟರ್ ಫಾರ್ ಬಹುಜನ್ ರಿಸರ್ಚ್ ಅಂಡ್ ಜೆಂಡರ್ ಸ್ಟಡೀಸ್, ಅಂಬೇಡ್ಕರೈಟ್ ವಿಮೆನ್ ಎಗೇನ್ಸ್ಟ್ ಅಟ್ರಾಸಿಟೀಸ್‌ನತಹ ಹಲವಾರು ಸಂಘಟನೆಗಳನ್ನು ಹುಟ್ಟುಹಾಕಿದ್ದಾರಲ್ಲದೆ ಕನ್‌ಫ್ರಾಂಟ್ ಎಂಬ ಇಂಗ್ಲಿಷ್ ತ್ರೈಮಾಸಿಕಕ್ಕೆ ಕಾರ್ಯಕಾರಿ ಸಂಪಾದಕರಾಗಿಯೂ ಕೆಲಸ ಮಾಡುತ್ತಿದ್ದಾರೆ.

**ಅಮರ್‌ಜೀತ್ ಕೌರ್:** ಡಂಕಲ್ ಪ್ರಸ್ತಾವನೆಗೆ ಭಾರತ ಸರ್ಕಾರ ಸಹಿ ಹಾಕಿದ್ದನ್ನು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ವಿರೋಧಿಸಿ 1994ರಲ್ಲಿ ದೆಹಲಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸುಮಾರು ಮೂರು ಲಕ್ಷ ಜನ ಸೇರಿದ್ದರು. ಪೊಲೀಸರು ಲಾಠಿ ಚಾರ್ಜ್ ಮಾಡಿ, ಅಶ್ರುವಾಯು ಸಿಡಿಸಿದರು. ಪರಿಸ್ಥಿತಿ ಬಿಗಡಾಯಿಸುತ್ತಿರುವುದನ್ನು ನಿಭಾಯಿಸಬೇಕಾದ ನಾಯಕರು ಸುಮ್ಮನಿದ್ದಾಗ ಹೆಣ್ಣುಮಗಳೊಬ್ಬಳು ನುಗ್ಗಿ ಹೋಗಿ ಸಿಟ್ಟಿಗೆದ್ದ ಜನ ಮತ್ತು ದಾಳಿ ಮಾಡಲು ಸಿದ್ಧರಾದ ಪೊಲೀಸರ ನಡುವೆ ನಿಂತಳು. ಪೊಲೀಸರೊಂದಿಗೆ ವಾದಿಸಿ, ಜನರನ್ನು ನಿಯಂತ್ರಿಸಿ ಫಯರಿಂಗ್‌ನಿಂದಾಗಬಹುದಾದ ಅನಾಹುತ ತಪ್ಪಿಸಿದಳು. ಆಕೆಯೇ ಅಮರ್‌ಜೀತ್ ಕೌರ್. 'ಪರಿಸ್ಥಿತಿ ಹಿಂಸಾತ್ಮಕವಾಗುತ್ತಿದೆ ಎಂದಾಗ ಸುಮ್ಮನೆ ನುಗ್ಗಿ ನಡುವೆ ನಿಂತುಬಿಡುತ್ತೇನೆ' ಎನ್ನುವ ಈಕೆನಾಲ್ಕು ದಶಕಗಳಿಂದಲೂವಿದ್ಯಾರ್ಥಿಗಳ, ಮಹಿಳೆಯರಮತ್ತು ಕಾರ್ಮಿಕರಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ.

ಈಕೆ ಜನಿಸಿದ್ದು ಪಂಜಾಬಿನ ಗುರ್‌ದಾಸ್‌ಪುರ ಗ್ರಾಮದ ಕೃಷಿಕ ಕುಟುಂಬದಲ್ಲಿ. ಬಾಲ್ಯದಿಂದಲೂ ಓದು, ಕ್ರೀಡೆ, ಭಾಷಣದ ಜೊತೆಗೆ ಸಾಮಾಜಿಕ ಹೋರಾಟಗಳಲ್ಲಿಯೂ ಮುಂದಿದ್ದ ಅಮರ್‌ಜಿ ತ್ ದೆಹಲಿ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು, ಕಾನೂನು ವಿಷಯದಲ್ಲಿ ಪದವಿಯನ್ನು ಪಡೆದುಕೊಂಡಿದ್ದಾರೆ. 16ನೇ ವಯಸ್ಸಿನಲ್ಲಿಯೇ ಶಾಲಾ ವಿದ್ಯಾರ್ಥಿಗಳ ಮುಷ್ಕರದಲ್ಲಿ ಈಕೆ ಪಾಲ್ಗೊಂಡಿದ್ದರು. ಕಾಲೇಜಿನ ದಿನಗಳಲ್ಲಿ ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರಲ್ಲದೆ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಮಹಾ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ನ್ಯಾಷನಲ್ ಫೆಡರೇಷನ್ ಫಾರ್ ಇಂಡಿಯನ್ ವಿಮೆನ್ ಮಹಿಳಾ ಸಂಘಟನೆಯಲ್ಲಿಯೂ ಸಕ್ರಿಯವಾಗಿದ್ದ ಈಕೆ ಅಲ್ಲಿ ಮಹಾ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಕಾರ್ಯದರ್ಶಿಯಾಗಿ ಸಮರ್ಥ ನಾಯಕತ್ವ ನೀಡಿದ್ದಾರೆ.1920ರಲ್ಲಿ ಆರಂಭವಾದ ದೇಶದ ಮೊತ್ತ ಮೊದಲ ಕಾರ್ಮಿಕ ಸಂಘಟನೆ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ, ಅದರ ಕಾರ್ಯದರ್ಶಿಯಾಗಿ ನಾಲ್ಕು ಬಾರಿ ಆಯ್ಕೆಯಾಗಿದ್ದರು. 2017ರಲ್ಲಿ ಮಹಾಕಾರ್ಯದರ್ಶಿಯಾಗಿ ಆಯ್ಕೆಯಾದದ್ದು ಆಕೆಯ ಸಾಮರ್ಥ್ಯಕ್ಕೆ ಸಂದ ಗೌರವ. ಅಲ್ಲದೆ ಇಡೀ ದೇಶದಲ್ಲಿಯೇ ಕಾರ್ಮಿಕ ಸಂಘಟನೆಯ ಅತ್ಯುನ್ನತ ಸ್ಥಾನವನ್ನು ತಲುಪಿದ ಮೊತ್ತ ಮೊದಲ ಮಹಿಳೆ ಅವರು. ಅಸಂಘಟಿತ ವಲಯದ ಅಂಗನವಾಡಿ ಕಾರ್ಯಕರ್ತೆಯರನ್ನು ರಾಷ್ಟ್ರಮಟ್ಟದಲ್ಲಿ ಸಂಘಟಿಸಿರುವ ಖ್ಯಾತಿ ಇವರದು. ಹಲವು ಹೋರಾಟಗಳನ್ನು ಯಶಸ್ವಿಯಾಗಿ ಮನ್ನಡೆಸಿರುವ ಈಕೆ ಹಲವಾರು ಬಾರಿ ಜೈಲುವಾಸ ಅನುಭವಿಸಿದ್ದಾರೆ. ಕೋಪನ್‌ಹೆಗನ್‌ನಲ್ಲಿ 1980ರಲ್ಲಿ ಹಾಗೂ 1995ರಲ್ಲಿ ಬೀಜಿಂಗ್‌ನಲ್ಲಿ ನಡೆದ ವಿಶ್ವ ಸಂಸ್ಥೆಯ ಜಾಗತಿಕ ಮಹಿಳಾ ಸಮಾವೇಶಗಳಲ್ಲದೆ ಹಲವಾರು ಜಾಗತಿಕ ಸಮಾವೇಶಗಳಲ್ಲೂ ಭಾರತವನ್ನು ಪ್ರತಿನಿಧಿಸಿದ್ದಾರೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಮಹಿಳೆ ಮತ್ತು ರಾಜಕೀಯ ಪ್ರಜ್ಞೆ

**– ಮಣಿಮಾಲಾ, ದೆಹಲಿ**

ನನಗೆ ಕನ್ನಡ ಮಾತನಾಡಾಲು ಬಾರದೇ ಇರುವುದಕ್ಕೆ ಎಲ್ಲರಲ್ಲಿ ಕ್ಷಮೆ ಯಾಚಿಸುತ್ತ ನನ್ನ ಮಾತನ್ನು ಆರಂಭಿಸುವೆ. ಹಿಂದಿಯಲ್ಲಿ ಒಂದು ಜನಪ್ರಿಯ ಹಾಡು ಇದೆ. 'ಆಪ್ ಯೂಂಹಿ ಅಗರ ಹಮ್ ಸೆ ಮಿಲತೇ ರಹೇ, ದೇಖಿಯೇ ಏಕ ದಿನ್ ಪ್ಯಾರ ಹೋ ಜಾಯೆಗಾ' (ನೀವು ಹೀಗೇ ನನಗೆ ಭೇಟಿಯಾಗುತ್ತಲಿದ್ದರೆ ನೋಡಿ, ಒಂದಿನ ಪ್ರೀತಿ ಆಗಿಬಿಡುತ್ತದೆ!) ಅದೇ ರೀತಿ ನಾನು ನಿಮ್ಮನ್ನು ಆಗಾಗ ಭೇಟಿಯಾಗುತ್ತಲಿದ್ದರೆ ಒಂದಿನ ಕನ್ನಡ ಕಲಿಯುವುದು ಖಂಡಿತ.

'ಮಹಿಳೆ ಮತ್ತು ರಾಜಕೀಯ ಪ್ರಜ್ಞೆ' ಈ ವಿಷಯ ಕ್ಲಿಷ್ಟವೂ ಹೌದು, ಕ್ಲಿಷ್ಟವಲ್ಲದ್ದೂ ಹೌದು. ಈ ಸಂದರ್ಭದಲ್ಲಿ ನಾನೊಂದು ಕಾರ್ಯಕ್ರಮದ ಬಗ್ಗೆ ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುವೆ. ನಾನು ಆಗ 'ಗಾಂಧೀ ಸ್ಮೃತಿ ಮತ್ತು ದರ್ಶನ' ಸಮಿತಿಯಲ್ಲಿ ನಿರ್ದೇಶಕಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೆ. ಅದೊಂದು ಸರಕಾರಿ ಸಂಸ್ಥೆಯಾಗಿದ್ದರೂ ಮಹಿಳಾ ದಿನಾಚರಣೆಯನ್ನು ಆಚರಿಸಲು ಅನುಮತಿ ನೀಡಿತ್ತು. ಮಹಿಳಾ ದಿನಾಚರಣೆಯನ್ನು ಸ್ತ್ರೀತ್ವವನ್ನು ಸಂಭ್ರಮಿಸುವ ದಿನವನ್ನಾಗಿ ಆಚರಿಸುವುದು ಎಂದು ನಾನು ಯೋಚಿಸಿದ್ದೆ. ನಮ್ಮೊಳಗಿನ ಸ್ತ್ರೀ ಗುಣವನ್ನು ಅರಿಯುವ ಕಾರ್ಯಕ್ರಮ ಅದಾಗಬೇಕೆಂದು ನನ್ನ ಇಚ್ಛೆ ಇತ್ತು. ಆ ಕಾರ್ಯಕ್ರಮಕ್ಕೆ ಮುಕ್ತ ಆಮಂತ್ರಣವಿತ್ತು. ಆಸಕ್ತಿಯುಳ್ಳ ಯಾರಾದರೂ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಿತ್ತು. ಅಲ್ಲಿ ಯಾವುದೇ ಮುಖ್ಯ ಅತಿಥಿ, ಮುಖ್ಯ ಭಾಷಣಕಾರರು ಅಥವಾ ವೃತ್ತಿಪರ ಹಾಡುಗಾರರ ಗುಂಪನ್ನು ನಾವು ಆಹ್ವಾನಿಸಿರಲಿಲ್ಲ. ಮಹಿಳೆಯರು, ಪುರುಷರು, ಮಕ್ಕಳು, ವೃದ್ಧರು, ಯಾರೂ ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮೊಳಗಿನ ಸ್ತ್ರೀತ್ವವನ್ನು ಸಂಭ್ರಮಿಸಬಹುದಾಗಿತ್ತು.

ನಿಗದಿತ ಸಮಯಕ್ಕೆ ಮೊದಲೇ ಸಾಕಷ್ಟು ಜನ ಕಾರ್ಯಕ್ರಮಕ್ಕೆ ಬಂದು ಸೇರಿದ್ದರು. ಬಂದವರಲ್ಲಿ ಮಹಿಳೆಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮಹಿಳೆಯರ ಉಪಸ್ಥಿತಿ ಕಡಿಮೆ ಇತ್ತು. ಆದರೆ ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳು ಸೇರಿದ್ದರು. ವಿಶೇಷವೆಂದರೆ ಗಂಡು ಹುಡುಗರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಅವರೆಲ್ಲ ತಮ್ಮೊಳಗಿನ ಸ್ತ್ರೀತ್ವದ ಬಗ್ಗೆ ಮಾತನಾಡಲು ಕಾತರರಾಗಿದ್ದರು. ಆ ದಿನ ಮಾತನಾಡಿದವರೆಲ್ಲ ಹೇಳಿದ್ದು ಒಂದೇ ವಿಷಯವನ್ನು; "ನಮ್ಮೊಳಗೂ ಸ್ತ್ರೀಗುಣಗಳಿವೆ, ಆದರೆ ಆ ಗುಣಗಳನ್ನು ವ್ಯಕ್ತಪಡಿಸಲು ನಮಗೆ ಅವಕಾಶವೇ ಇಲ್ಲ" ಎಂದು. ಇದು ರಾಜಕಾರಣ. "ನಮ್ಮೊಳಗೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸ್ತ್ರೀಗುಣಗಳಿವೆ" ಎಂಬುದನ್ನು ತಿಳಿದುಕೊಳ್ಳುವ ಆಸಕ್ತಿ ಯಾರಿಗೂ ಇಲ್ಲ. ಎಲ್ಲರೂ ಅದನ್ನು ಅದುಮಿ ಇಟ್ಟಿದ್ದಾರೆ. ಮಹಿಳೆಯರು ಮಾಡುವ ಅನೇಕ ಕೆಲಸಗಳನ್ನು ಮಾಡಬೇಕು ಎಂದು ನಮಗೂ ಅನಿಸುತ್ತದೆ" ಎಂದು ಅನೇಕ ಪುರುಷರು ಹೇಳಿಕೊಂಡರು. ಒಬ್ಬ ಹುಡುಗ 'ನನಗೆ ಫ್ರಾಕ್ ತೊಡಬೇಕು ಎಂದು ಅನಿಸುತ್ತದೆ' ಎಂದು ಹೇಳಿದ. 'ನನ್ನ ಸಹೋದರಿ ತೊಡುವಂಥ ಬಣ್ಣ ಬಣ್ಣದ, ನೆರಿಗೆಯುಳ್ಳ ಅಂಗಿ ತೊಡಬೇಕು ಎಂದೆನಿಸುತ್ತದೆ, ತಲೆಯಲ್ಲಿ ಹೂ ಮುಡಿಯಬೇಕು ಅನಿಸುತ್ತದೆ, ಆದರೆ ನಮಗ್ಯಾಕೆ ಹೂ ಮುಡಿದುಕೊಳ್ಳಲು ಬಿಡುವುದಿಲ್ಲ?' ಒಬ್ಬ ವಯಸ್ಕ ಪುರುಷರು "ನನಗೆ ತುಂಬಾ ಹತ್ತಿರವಿರುವವರಿಗೆ ನೋವಾದಾಗ, ಅವರನ್ನು ಕಳೆದುಕೊಂಡಾಗ ಜೋರಾಗಿ ಅಳಬೇಕು ಅನಿಸುತ್ತದೆ. ಆದರೆ ನಾನು ಅಳುವುದು ಸಾದ್ಯವಿಲ್ಲ. ನಾನು ಗಂಡಸಾಗಿದ್ದರಿಂದ ನಾನು ಅಳಬಾರದೆಂಬ ಕಟ್ಟಳೆ ನನ್ನ ಮೇಲಿದೆ". ಮತ್ತೊಬ್ಬ ಪುರುಷ ಹೇಳಿದ್ದೇನೆಂದರೆ, "ನಾನು ತುಂಬ ಪ್ರೀತಿಸುವವರಿಗೆ ನನ್ನ ಕೈಯ್ಯಾರೆ ಅಡುಗೆ ಮಾಡಿ ಬಡಿಸಬೇಕು ಅನ್ನಿಸುತ್ತದೆ. ಆದರೆ ಹಾಗೆ ಮಾಡಲು ಆಗುವುದಿಲ್ಲ. ನಾನು ಗಂಡಸು ಎಂದು ನನಗೆ ಅಡುಗೆ ಮಾಡುವುದನ್ನು ಕಲಿಸಿಲ್ಲ. ಎರಡನೆಯದಾಗಿ ನಾನು ಅಡುಗೆ ಮಾಡಲು ಪ್ರಯುತ್ನಿಸಿದರೆ ಜನರು ತವಾಷೆ ಮಾಡುತ್ತಾರೆ." ಇದರಲ್ಲಿ ತವಾಷೆ ಮಾಡುವಂಥದ್ದೇನಿದೆ? 10 ವರ್ಷದ ಒಬ್ಬ ಹುಡುಗ ಬಂದು ಅಳುತ್ತ ತನಗೇನೋ ಹೇಳಬೇಕು ಎಂದ. "ಒಂದು ಸಲ ನಮ್ಮ ಟೀಚರ್ ನಮ್ಮನ್ನು ಎರಡು ದಿನದ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು. ನಮ್ಮೊಂದಿಗೆ ಹುಡುಗಿಯರೂ ಇದ್ದರು. ನಮಗೆ ಉಳಿದುಕೊಳ್ಳಲು ಜಾಗದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಎರಡು ಹಾಲ್‌ಗಳಿದ್ದವು. ಒಂದರಲ್ಲಿ ಸ್ನಾನದ ಕೋಣೆ ಇತ್ತು. ಆದ್ದರಿಂದ ಅಲ್ಲಿ ಹುಡುಗಿಯರನ್ನು ಉಳಿಸಿದರು. ನಾವಿದ್ದ ಹಾಲ್‌ನಲ್ಲಿ ಸ್ನಾನದ ಕೋಣೆ ಇರಲಿಲ್ಲ. ರಸ್ತೆಯ ಆಚೆ ಇದ್ದ ಸಾರ್ವಜನಿಕ ಸ್ನಾನಗ್ರಹಕ್ಕೆ ಹೋಗಿ ಹುಡುಗರು ಸ್ನಾನ ಮಾಡಿ ಬರಬೇಕಿತ್ತು. ನಾನು ಸ್ನಾನ ಮಾಡಿಕೊಂಡು ಟವೆಲ್ ಸುತ್ತಿಕೊಂಡು ಬರುತ್ತಿದ್ದೆ. ರಸ್ತೆಯ ಮಧ್ಯದಲ್ಲಿಯೇ ಟವೆಲ್ ಕಳಚಿ ಬಿತ್ತು. ನನಗೆ ತುಂಬ ಬೇಸರವಾಯಿತು. ನಮ್ಮನ್ಯಾಕೆ ರಸ್ತೆಯಲ್ಲಿ ಬೆತ್ತಲು ಮಾಡುತ್ತೀರಿ? ಗಂಡಸರು ದೊಡ್ಡವರಾಗಿ ಬೆತ್ತಲು ಇರಬೇಕೇನು? ನಾವು ರಸ್ತೆಯಲ್ಲಿ ಬೆತ್ತಲು ತಿರುಗಿದರೆ ಸಮಾಜದ ಗತಿಯೇನು? ಯಾಕೆ ಹೀಗೆ ಭೇದ ಭಾವ ಮಾಡುತ್ತಾರೆ? ನಮ್ಮ ಟೀಚರಿಗೆ ಭೇಟಿಯಾಗಿ ಹೀಗೆ ಭೇದ ಭಾವ ಮಾಡಬಾರದೆಂದೂ, ಮುಂದಿನ ಸಲ ಪ್ರವಾಸಕ್ಕೆ ಹೋದಾಗ ಸ್ನಾನದ ಕೋಣೆ ಇರುವ ಹಾಲ್‌ನಲ್ಲೇ ನಮಗೂ ಉಳಿಯುವ ವ್ಯವಸ್ಥೆ ಮಾಡಬೇಕೆಂದು ಹೇಳಿ. ನಾವು ಒಳ್ಳೆಯವರಾಗಿ ಬೆಳೆಯಬಾರದೆಂಬ ರಾಜಕಾರಣ ಇದು. ನನಗೆ ಒಳ್ಳೆಯವನಾಗಬೇಕಿದೆ." ಎಂದು ದೊಡ್ಡ ಧ್ವನಿಯಲ್ಲಿ ಆ ಹುಡುಗ ಮಾತನಾಡುತ್ತಿದ್ದ. ಕೆಲವರ್ಷಗಳ ಹಿಂದೆ 'ಬೋಲ್ ಬೇಟಿ ಬೋಲ್' ಶೀರ್ಷಿಕೆಯಡಿಯಲ್ಲಿ ನಾನೊಂದು ಕವಿತೆ ಬರೆದಿದ್ದೆ. ಮಾತನಾಡುವ ವಿಷಯದಲ್ಲಿ ಹೆಣ್ಣುಮಕ್ಕಳಿಗಿರುವಷ್ಟು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕಟ್ಟಳೆಗಳು ಗಂಡುಮಕ್ಕಳಿಗಿಲ್ಲ. ಆದರೆ ಇಂಥದ್ದನ್ನು ಮಾತನಾಡಬಹುದು, ಕೆಲವನ್ನು ಮಾತನಾಡಬಾರದು ಎಂಬ ನಿಯಮವನ್ನು ಗಂಡಸರ ಮೇಲೂ ಹೇರಲಾಗಿದೆ. ಇದು ರಾಜಕಾರಣವೇ ಸರಿ. ಇದು ನಮ್ಮ ರಾಜಕೀಯ ಪ್ರಜ್ಞೆಯನ್ನು ಬೆಳೆಯದಂತೆ ನೋಡಿಕೊಳ್ಳುತ್ತದೆ. ಇಲ್ಲಿ ಎರಡು ಅಂಶಗಳಿವೆ. ಮೊದಲನೆಯದಾಗಿ ಆಯ್ಕೆಯ ಸ್ವಾತಂತ್ರ್ಯದ ಮೇಲೆ ನಿರ್ಬಂಧ. ನಾವು ಏನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯವಿಲ್ಲ. ಎರಡನೆಯದಾಗಿ ಕೆಲಸದ ವಿಭಜನೆ. ಕೆಲಸದ ವಿಭಜನೆ ಅವಕಾಶಗಳನ್ನು ಸೀಮಿತಗೊಳಿಸುತ್ತದೆ. ಎಲ್ಲರಿಗೂ ಒಂದೇ ತೆರನಾದ ಅವಕಾಶಗಳು ಸಿಗುವುದಿಲ್ಲ.

ನಾನು ಗಾಂಧೀಜಿಯವರ ಪುಸ್ತಕ ಓದುತ್ತಿದ್ದೆ. ಶುರುವಿಗೆ ಗಾಂಧೀಜಿಯವರು ಜಾತಿ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಂತೆ ತೋರುತ್ತದೆ. ಜಾತಿ ವ್ಯವಸ್ಥೆ ಕೆಲಸವನ್ನು ವಿಭಜಿಸುತ್ತದೆ. ಇದರಿಂದ ಯಾವ ತೊಂದರೆ ಇಲ್ಲ. ಆದರೆ ಈ ಕೆಲಸವನ್ನು ಆಧಾರವಾಗಿಟ್ಟುಕೊಂಡು ಜನರನ್ನು ಮೇಲು, ಕೀಳು ಎಂದು ವಿಭಾಗಿಸುವುದು ತಪ್ಪು ಎಂದು ಗಾಂಧೀಜಿ ಹೇಳುತ್ತಿದ್ದರು. ಮುಂದೆ ಅವರೇ ಈ ಜಾತಿ ವ್ಯವಸ್ಥೆಯನ್ನು ದೂಷಿಸುತ್ತಾರೆ. ಜಾತಿ ವ್ಯವಸ್ಥೆ ಕೆಲಸವನ್ನು ವಿಭಜಿಸುವುದರೊಂದಿಗೆ ಮನುಷ್ಯರನ್ನೂ ವಿಭಾಗಿಸುತ್ತದೆ. ಇದು ಸರಿಯಲ್ಲ, ಮಹಿಳೆ ಮನೆಯೊಳಗಿನ ಕೆಲಸವನ್ನೇ ಮಾಡಬೇಕು, ಪುರುಷ ಹೊರಗಿನ ಕೆಲಸ, ದಲಿತರು ಶೌಚಾಲಯಗಳನ್ನು ಸ್ವಚ್ಛಗೊಳಿಸಬೇಕು, ಬ್ರಾಹ್ಮಣರು ಪಾಠ ಮಾಡಬೇಕು ಎಂಬ ನಿಯಮವನ್ನು ಹೇರಿದರೆ ವ್ಯಕ್ತಿಯ ಬೆಳವಣಿಗೆ ತನ್ನ ಕೆಲಸದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ. ಹೀಗೆ ಕೆಲಸ, ಕೆಲಸದೊಂದಿಗೆ ಜನರನ್ನು ವಿಭಾಗಿಸುವುದು ತುಂಬಾ ದೊಡ್ಡ ರಾಜಕಾರಣ. ಕೆಲಸವನ್ನು ವಿಭಾಗಿಸುವುದೇನಿದೆಯಲ್ಲ ಅದು ಎಲ್ಲಕ್ಕಿಂತ ದೊಡ್ಡ ರಾಜಕಾರಣ.

ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶ ಇದೆ ಎಂದು ಹೇಳಲಾಗುತ್ತದೆ. ಆದರೆ ಒಬ್ಬ ಮಹಿಳೆಗೆ ಸ್ಪರ್ಧಾತ್ಮಕ ಪರೀಕ್ಷೆ ಕೊಡುವುದಿದೆ ಅಂದರೆ ಇದಕ್ಕಾಗಿ ಓದಲು ಅವಳು ತನ್ನ ಎಲ್ಲ ಮನೆವಾರ್ತೆಯ ಕೆಲಸಗಳನ್ನು ಮುಗಿಸಿಯೇ ಸಮಯ ಹೊಂದಿಸಿಕೊಳ್ಳಬೇಕು. ಅವೆಲ್ಲದರ ನಡುವೆಯೂ ಅವಳು ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಉದ್ಯೋಗ ಪಡೆದುಕೊಂಡರೆ ಅಲ್ಲಿಯೂ ಒಳ್ಳೆಯ ಕೆಲಸಕ್ಕೆ, ಸಮರ್ಥ ಕೆಲಸಗಾರ್ತಿ ಎಂದು ಗುರುತಿಸಿಕೊಳ್ಳುವುದಕ್ಕೆ ಅವಳಿಗೆ ಸಮಯ ಬೇಕು. ಮಹಿಳೆಯರಿಗೆ ತಮ್ಮನ್ನು ತಾವು ಸಾಬೀತು ಪಡಿಸಿಕೊಳ್ಳಲು ಗಂಡಸರಿಗಿಂತ ಎಷ್ಟೋ ಪಟ್ಟು ಹೆಚ್ಚು ಶ್ರಮವಹಿಸಬೇಕಾಗುತ್ತದೆಂಬುದು ನಮ್ಮೆಲ್ಲರ ಅನುಭವ. ಪುರುಷರೊಂದಿಗೆ ಕೆಲಸ ಮಾಡಿ ನಮ್ಮನ್ನು ನಾವು ಸಾಬೀತು ಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ನಾವು ಅವರಿಗಿಂತ ಹೆಚ್ಚು ಕಷ್ಟ ಪಡಬೇಕಾಗುತ್ತದೆ. ಆದರೆ ನಮಗೆ ಸಮಯದ ಅಭಾವವಿರುವುದರಿಂದ ಅಷ್ಟು ಕಷ್ಟ ಪಡುವುದು ಸಾಧ್ಯವಾಗುವುದಿಲ್ಲ. ಇದು ತುಂಬ ದೊಡ್ಡ ರಾಜಕಾರಣ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮಹಿಳೆಯರು ಈ ರಾಜಕಾರಣವನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಸಾಕಷ್ಟು ವಾದವನ್ನೂ ಮಾಡುತ್ತಿದ್ದಾರೆ. ಮಹಿಳೆಯರ ಮೇಲಿರುವ ಕೆಲಸದ ಭಾರ ಕಡಿಮೆಯಾಗಿದೆ ಅಂತೇನಿಲ್ಲ. ಕೆಲವು ಕುಟುಂಬಗಳಲ್ಲಿ ಪುರುಷರು ಮಹಿಳಾ ಪರವಾಗಿ ಯೋಚಿಸುತ್ತಿದ್ದಾರೆ. ಅವರ ಮನೆಗೆಲಸಗಳಲ್ಲಿ ಭಾಗಿಯಾಗುತ್ತಾರೆ ಆದರೆ ಈ ಕೆಲಸದ ಹಂಚಿಕೆ ಪೂರ್ಣ ಪ್ರಮಾಣದಲ್ಲಿ ಆಗಿದೆ ಎಂದು ಇನ್ನೂ ಅನ್ನಿಸುವುದಿಲ್ಲ. ಎಷ್ಟೋ ಕುಟುಂಬಗಳಲ್ಲಿ ಮನೆಗೆಲಸದ ಹಂಚಿಕೆಯೇ ಆಗುವುದಿಲ್ಲ. ಮಹಿಳೆಯರು ಪುರುಷರಿಗಿಂತ ಮೂರು ಪಟ್ಟು, ಐದು ಪಟ್ಟು ಹೆಚ್ಚು ಶ್ರಮವಹಿಸಿ ತಮ್ಮನ್ನು ತಾವು ಸಾಬೀತು ಪಡಿಸಿಕೊಳ್ಳುವ ಸವಾಲನ್ನು ಸ್ವೀಕರಿಸಿದ್ದಾರೆ. ತಮ್ಮ ಅರಿವನ್ನು ವಿಸ್ತರಿಸಿಕೊಂಡಿದ್ದಾರೆ.

ನಾವೀಗ ತಥಾಕಥಿತ ರಾಜಕಾರಣದ ಬಗ್ಗೆ ವಿಚಾರ ಮಾಡೋಣ. ಬಹಳಷ್ಟು ಜನರು ಈ ರಾಜಕಾರಣವನ್ನು ಇಷ್ಟ ಪಡುವುದಿಲ್ಲ. ಅನೇಕ ಪಂಡಿತರು, ವಿದ್ವಾಂಸರು "ನಾವು ರಾಜಕಾರಣವನ್ನು ದ್ವೇಷಿಸುತ್ತೇವೆ" ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಯಾವುದನ್ನು ನಾವು ಅಧಿಕಾರದ ರಾಜಕಾರಣ ಎಂದು ಕರೆಯುತ್ತೇವೆಯೋ ಅದರಲ್ಲಿ ನಾನೂ ನೇರವಾಗಿ ಭಾಗವಹಿಸುವುದಿಲ್ಲ. ಆದರೆ ನಾನು ರಾಜಕಾರಣವನ್ನು ದ್ವೇಷಿಸುವುದಿಲ್ಲ. ನಾನು, ಇಲ್ಲಿ ಉಪಸ್ಥಿತರಿರುವ ಲತಾ ಮತ್ತು ನಮ್ಮಂಥ ಅನೇಕರ ಸಾರ್ವಜನಿಕ ಬದುಕು ಶುರುವಾದದ್ದು 1975ರ ತುರ್ತುಪರಿಸ್ಥಿತಿ ವಿರೋಧಿ ಚಳುವಳಿಯಲ್ಲಿ ಭಾಗವಹಿಸುವುದರೊಂದಿಗೆ. ಆಗ ಅದು ನಮ್ಮ ರಾಜಕೀಯ ಪ್ರಜ್ಞೆಯಾಗಿತ್ತು. ಸ್ವಾತಂತ್ರ್ಯ ನಂತರದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ಈ ತುರ್ತುಪರಿಸ್ಥಿತಿ ವಿರೋಧಿ ಚಳುವಳಿಯಲ್ಲಿ. ನಮಗೆ ಪ್ರಜಾಪ್ರಭುತ್ವ ಬೇಕಾಗಿತ್ತು. ಅದು ಕುರುಡೋ, ಕುಂಟೋ ಇನ್ನಾವುದೇ ಸ್ಥಿತಿಯಲ್ಲಿದ್ದರೂ ಆ ಸ್ವಾತಂತ್ರ್ಯ ನಮಗೆ ಬೇಕಾಗಿತ್ತು. ನಮಗೆ ಇದುವರೆಗೂ ಸಂಪೂರ್ಣವಾದ ಸ್ವಾತಂತ್ರ್ಯ ಸಿಕ್ಕೇಇಲ್ಲ. ಈ ಅರ್ಥ ಕೊಡುವ ಹಾಡುಗಳನ್ನೂ ನಾವು ಹಾಡುತ್ತೇವೆ. 'ಸೌ ಮೆ ಸತ್ತರ ಆದಮಿ ಫಿಲಹಾಲ ಜಬ ನಾಶಾದ ಹೈ, ದಿಲ್ ಪೆ ರಖಕರ ಹಾಥ ಕಹಿಯೆ ದೇಸ ಕ್ಯಾ ಆಝಾದ ಹೈ'(ನೂರರಲ್ಲಿ 70ರಷ್ಟು ಜನರು ಬಡತನದಿಂದ ಬಳಲುತ್ತಿರುವಾಗ ಎದೆ ಮೇಲೆ ಕೈಯಿಟ್ಟು ಹೇಳು, ಇದೆಂಥ ಸ್ವಾತಂತ್ರ್ಯ ಬಂದಿದೆ?). ಸರಕಾರಿ ಅಂಕಿ ಅಂಶಗಳ ಪ್ರಕಾರ ಈ '70%'ಈಗ 82 ಕ್ಕೆ ಏರಿದೆ. ಅರ್ಜುನ ಸೇನ್‌ಗುಪ್ತಾ ಸಮಿತಿಯ ಪ್ರಕಾರ ದೇಶದ 82% ಜನರ ಆದಾಯ ದಿನಕ್ಕೆ 20 ರೂಪಾಯಿ ಇದೆ. 20 ರೂಪಾಯಿಯಲ್ಲಿ ಏನು ಸಿಗುತ್ತದೆ? ಹೌದು, ನಮ್ಮ ಸ್ವಾತಂತ್ರ್ಯ ಅಪೂರ್ಣವಾದದ್ದಿದೆ. ನಮ್ಮ ಗಣತಂತ್ರ ನಿಜವಾದ ಅರ್ಥದಲ್ಲಿ ಇನ್ನೂ ಗಣತಂತ್ರವಾಗಿಲ್ಲ. ಆದಾಗ್ಯೂ ಈ ಸ್ವಾತಂತ್ರ್ಯ ನಮಗೆ ಬೇಕು. ಯಾಕೆಂದರೆ ಈ ಅರ್ಧಂಬರ್ಧ ಸ್ವಾತಂತ್ರ್ಯದ ಮೂಲಕವೇ ನಾವು ಸಂಪೂರ್ಣ ಸ್ವಾತಂತ್ರ್ಯದತ್ತ ಹೋಗಲು ಸಾಧ್ಯವಿದೆ. ಇದು ರಾಜಕೀಯ ಪ್ರಜ್ಞೆ.

ನೀವು ಇವತ್ತಿನ ನಿಮ್ಮ ಕಾರ್ಯಕ್ರಮವನ್ನು ಸಂಧಾನದ ಪೀಠಿಕೆಯನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಾಮೂಹಿಕವಾಗಿ ಓದುವುದರ ಮೂಲಕ ಶುರು ಮಾಡಿದಿರಿ. ನನಗೆ ನೆನಪಿದ್ದಂತೆ ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದೆ ನಾವು ಈ ರೀತಿ ಮಾಡುತ್ತಿರಲಿಲ್ಲ. ಆದರೆ ಈ ವರ್ಷ ನಾನು ಹೋದಲ್ಲೆಲ್ಲ ಸಂವಿಧಾನದ ಪೀಠಿಕೆಯ ಬಗ್ಗೆ ಮಾತುಕತೆ ಆಗುತ್ತಿದೆ. ಸಾಮೂಹಿಕವಾಗಿ ಸಂವಿಧಾನದ ಪೀಠಿಕೆ ಓದುವುದನ್ನು, ಸಂವಿಧಾನವನ್ನು ಉಳಿಸುವ ಕುರಿತು ಮಾತನಾಡುವುದನ್ನು ಮಾಡುತ್ತಿದ್ದೇವೆ. ಯಾಕೆಂದರೆ ಸಂವಿಧಾನ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯವಿದೆ. ಇದು ರಾಜಕೀಯ ಪ್ರಜ್ಞೆ.

ಮಹಿಳೆಯರ ಮೇಲಾಗುವ ದೈಹಿಕ ದೌರ್ಜನ್ಯ, ಮಹಿಳೆಯರ ಮೇಲಾಗುವ ಅತ್ಯಾಚಾರವನ್ನು ನಾವು ವಿರೋಧಿಸಿದೆವು. ಅವೆಲ್ಲ ಈಗ ನಿಂತು ಹೋಗಿವೆ ಅಂತೇನಿಲ್ಲ. ಮಹಿಳೆ–ಪುರುಷರ ನಡುವಿನ ರಾಜಕೀಯವನ್ನು ಅರ್ಥ ಮಾಡಿಕೊಳ್ಳುತ್ತಲೇ ರಾಜಕೀಯದಲ್ಲೂ ನಮಗೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕಾಗಿದೆ. ಇಂದು ಮಹಿಳೆ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವ ಅಗತ್ಯತೆ ಇದೆ. ಕೆಲ ಮಹಿಳೆಯರು ಈಗಾಗಲೇ ರಾಜಕೀಯದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಆದರೆ ರಾಜಕೀಯದಲ್ಲಿ ಗುರುತಿಸಿಕೊಳ್ಳುವುದೇ ರಾಜಕೀಯ ಪ್ರಜ್ಞೆಯ ಮಾನದಂಡವೇ? ಸಮಾಜದಲ್ಲಿ ಈ ರಾಜಕೀಯ ಪ್ರಜ್ಞೆ ಇದ್ದೇ ಇದೆ. ಅದಿಲ್ಲದಿದ್ದರೆ ನಾವಿಂದು ಇಲ್ಲಿ ಇರಲು ಸಾಧ್ಯವಿರಲಿಲ್ಲ. ಬೇರೆಲ್ಲ ಚಳುವಳಿಗಳಿಗಿಂತಲೂ ಮಹಿಳಾ ಚಳುವಳಿಯಲ್ಲಿ ಹೆಚ್ಚು ರಾಜಕೀಯ ಪ್ರಜ್ಞೆ ಇತ್ತು ಎಂದು ನಾನು ಹೇಳಬಯಸುತ್ತೇನೆ. ನಾವು ಚಳುವಳಿಯಲ್ಲಿರುವ ಮಹಿಳೆಯರು ಒಟ್ಟಿಗೆ ಸೇರಿದಾಗ ನಮ್ಮ ಮಧ್ಯೆ ಜಾತಿ, ಧರ್ಮದ ಗೋಡೆಗಳೇಳುವುದಿಲ್ಲ. ನಮ್ಮೊಂದಿಗಿರುವವರಲ್ಲಿ ಯಾರು ವಿಧವೆಯರು, ಯಾರು ಅಲ್ಲ ಎಂದೆಲ್ಲ ನಾವು ವಿಚಾರ ಮಾಡುವುದಿಲ್ಲ. ಹಾಗೆ ಸ್ನೇಹಿತೆಯರಾಗಿ ನಮಗೆ ಅವರ ಬಗ್ಗೆ ಮಾಹಿತಿ ಇರುತ್ತದೆ. ನಮ್ಮ ಸುಖದುಃಖಗಳನ್ನು ಪರಸ್ಪರರಲ್ಲಿ ಹಂಚಿಕೊಳ್ಳುತ್ತೇವೆ.

ಒಂದು ಕಾಲದಲ್ಲಿ ಪರ್ಸನಲ್ ಈಸ್ ಪೊಲಿಟಿಕಲ್ ಎಂಬುದು ನಮ್ಮ ಘೋಷವಾಕ್ಯವಾಗಿತ್ತು. ಆದರೆ ಇಂಥ ವಿಷಯಗಳನ್ನು ನಾವು ಚರ್ಚೆಯ ವಿಷಯಗಳನ್ನಾಗಿ ಮಾಡುತ್ತಿರಲಿಲ್ಲ. ಆದರೆ ಇವತ್ತಿನ ಸ್ಥಿತಿ ಬೇರೆಯೇ ಇದೆ. ನಾನಿಲ್ಲಿ ರಾಜಕೀಯ ಪಕ್ಷಗಳ ಹೆಸರು ಎತ್ತುವುದಿಲ್ಲ ಅಥವಾ 2019ರ ಚುನಾವಣೆಯ ಬಗ್ಗೆ ಮಾತನಾಡುವುದಿಲ್ಲ ಎಂದು ಹೇಳಲಾರೆ. ನನಗೆ ಈ ಕುರಿತು ಮಾತನಾಡಬೇಕಿದೆ. ಯಾಕೆಂದರೆ ಇದು ನಮ್ಮ ಜೀವನದ ದಿಶೆಯನ್ನು ಬದಲಾಯಿಸುತ್ತದೆ. ಸಮಾಜದ ದೊಡ್ಡ ಸಮಸ್ಯೆಗಳು ಶುರುವಾಗುವುದೇ ಅಲ್ಲಿಂದ. ಆದ್ದರಿಂದ ರಾಜಕೀಯವನ್ನು ದ್ವೇಷಿಸುವುದರಿಂದ, ಅದರಿಂದ ಅಂತರ ಕಾಯ್ದುಕೊಳ್ಳುವುದರಿಂದ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ.

ನಾವೀಗ ಅಧಿಕಾರ ರಾಜಕೀಯದಲ್ಲಿ ಮಹಿಳಾ ರಾಜಕಾರಣಿಗಳ ರಾಜಕೀಯ ಪ್ರಜ್ಞೆಯ ಕುರಿತು ಚರ್ಚಿಸೋಣ. ಹದಿನೈದು ವರ್ಷಗಳ ಹಿಂದಿನ ಮಾತು. ಕಾಂಗ್ರೆಸ್ಸು ಚುನಾವಣೆಯಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ಸನ್ನು ಮತ್ತೆ ಅಧಿಕಾರಕ್ಕೆ ತರುವಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸೋನಿಯಾ ಗಾಂಧಿಯ ಪಾತ್ರ ಏನಿತ್ತು ಎನ್ನುವುದನ್ನು ನಾವು ನೋಡಬೇಕು. ಕಾಂಗ್ರೆಸ್ ಪಕ್ಷ ಚದುರಿ ಹೋಗಿತ್ತು. ಅದನ್ನು ಒಂದಾಗಿಸಿದ್ದೇ ಸೋನಿಯಾ ಗಾಂಧಿ. ಆದರೆ ಇಲ್ಲಿ ರಾಜಕಾರಣ ಹೇಗಿತ್ತೆಂದರೆ ವಿರೋಧ ಪಕ್ಷಗಳು ಸೋನಿಯಾ ಗಾಂಧಿಯನ್ನು ವಿದೇಶೀ ಸೊಸೆಯನ್ನಾಗಿ ಬಿಂಬಿಸಿದವು. ಒಂದೆಡೆ, 'ಡೋಲಿ ಹೋದರೆ ಮುಗಿಯಿತು. ಅಲ್ಲಿಂದ ಅವಳ ಹೆಣವೇ ಹೊರಬರಬೇಕೇ ಹೊರತು ಅವಳು ಬರಬಾರದು. ಅದು ಸಂಪ್ರದಾಯ' ಎಂದು ಹೇಳಲಾಗುತ್ತದೆ. ತನ್ನ ಗಂಡನ ಮನೆಯೇ ಅವಳ ಮನೆ. ಹೀಗಿದ್ದಾಗ ಬೇರೆ ದೇಶದ ಹೆಣ್ಣು ಮದುವೆಯಾಗಿ ನಮ್ಮ ದೇಶಕ್ಕೆ ಬಂದ ನಂತರ ಅವಳ ದೇಶ ಯಾವುದು? ಅವಳು ಎಲ್ಲಿ ಹೋಗಿ ರಾಜಕಾರಣ ಮಾಡಬೇಕು? ಅವಳು ಎಲ್ಲಿ ಆಡಳಿತ ಮಾಡಬೇಕು? ಆವಳಿಗೆ ಆಡಳಿತದಲ್ಲಿ ಆಸಕ್ತಿ ಇದ್ದರೆ ತಪ್ಪೇನು? ಮಹಿಳೆಯರಲ್ಲಿ ಆಡಳಿತದ ಹಸಿವು ಜಾಸ್ತಿ ಎಂದು ಜನ ಹೇಳುತ್ತಾರೆ. ತಪ್ಪೇನಿದೆ ಅದರಲ್ಲಿ? ನಾವು ಹೆಚ್ಚು ಸಶಕ್ತರಾಗಲು ಇಚ್ಛಿಸುತ್ತೇವೆ. ನಾವು ಆಳ್ವಿಕೆ ಮಾಡಬೇಕು. ನಾವು ರಾಜ್ಯವಾಳಿದರೇನೇ ಸಮಾಜವನ್ನು ಬದಲಿಸಲು ಸಾಧ್ಯ. ನಾವು ರಾಜಕಾರಣದಲ್ಲಿದ್ದುಕೊಂಡೇ ಸಮಾಜವನ್ನು ಬದಲಾಯಿಸುತ್ತೇವೆ. ನಮಗೆಲ್ಲ ಸುಷ್ಮಾ ಸ್ವರಾಜ್ ತುಂಬ ತಿಳಿವಳಿಕೆಯುಳ್ಳ ಮಹಿಳಾ ರಾಜಕಾರಣಿ ಎಂದು ಗೊತ್ತು. ಅನೇಕ ವರ್ಷಗಳಿಂದ ಅವರು ರಾಜಕಾರಣದಲ್ಲಿದ್ದಾರೆ. ರಾಜಕಾರಣವನ್ನು ಚೆನ್ನಾಗಿ ಅರಿತುಕೊಂಡವರೂ ಹೌದು. ಅವರ ಮಾತೂ ತುಂಬ ತೂಕದ್ದು. ಆದರೆ ಅವರು ಮಾಡಿದ್ದೇನು? ಅವರು ಮತ್ತು ಉಮಾ ಭಾರತಿ "ನಾವು ವಿಧವೆಯರಂತೆ ಬದುಕುತ್ತೇವೆ, ಬಿಳಿ ಸೀರೆ ಉಡುತ್ತೇವೆ, ಜಡೆ ಹಾಕುವುದಿಲ್ಲ, ನೆಲದ ಮೇಲೆ ಮಲಗುತ್ತೇವೆ" ಅಂತೆಲ್ಲ ವಿಧವಾ ರಾಗದ ಆಲಾಪನೆ ಶುರು ಮಾಡಿದರು. ಇದರಲ್ಲಿ ಎಷ್ಟೊಂದು ರಾಜಕಾರಣ! ಯಾವುದನ್ನು ವಿರೋಧಿಸುತ್ತಿದ್ದರೋ ಅದನ್ನೇ ಸಮರ್ಥಿಸಿಕೊಳ್ಳಲು ಶುರು ಮಾಡಿದರು. ಮಹಿಳೆಗೆ ವಿಧವೆಯ ಪಟ್ಟ ಕಟ್ಟಿದರು. ವಿಧವೆಯಾದರೆ ಏನೇನು ಕಟ್ಟಳೆಗಳನ್ನು ಪಾಲಿಸಬೇಕು ಎಂಬುದನ್ನು ಹೇಳಿದರು. ಅವಳು ಬಣ್ಣದ ಬಟ್ಟೆ ತೊಡಬಾರದು, ನೆಲದ ಮೇಲೆ ಮಲಗಬೇಕು, ರುಚಿಯಾದ ಊಟಮಾಡಬಾರದು, ನಾವೂ ಇದನ್ನೆಲ್ಲ ಪಾಲಿಸುತ್ತೇವೆ ಎಂದು ಮಾತನಾಡಿದರು. ತಮ್ಮ ಮಾತಿನ ಮೂಲಕ ಸೋನಿಯಾ ಗಾಂಧಿ ವಿಧವೆ ಎಂಬುದನ್ನು ಜನರಿಗೆ ತೋರಿಸಿದರು. ಸೋನಿಯಾ ದೇಶದ ನಾಯಕತ್ವ ವಹಿಸಿದರೆ ದೇಶದ ಎಲ್ಲ ಮಹಿಳೆಯರೂ ವಿಧವೆಯರಾಗುತ್ತಾರೆ ಎಂದು ಹೇಳಿದರು. ಎಲ್ಲಿ ಹೋಯಿತು ಸುಷ್ಮಾ ಸ್ವರಾಜರ ರಾಜಕೀಯ ಪ್ರಜ್ಞೆ? ಎಲ್ಲಿ ಹೋಯಿತು ಉಮಾ ಭಾರತಿಯ ರಾಜಕೀಯ ಪ್ರಜ್ಞೆ? ಇವರಿಬ್ಬರೂ ಅನೇಕ ವರ್ಷಗಳಿಂದ ರಾಜಕೀಯದಲ್ಲಿ ಇದ್ದವರು. ಸಾಮಾನ್ಯವಾಗಿ ಪುರುಷ ರಾಜಕಾರಣಿಗಳು ಮಹಿಳೆಯರಿಗೆ ಮಾತನಾಡಲು ಅವಕಾಶ ಕೊಡುವುದು ಕಡಿಮೆ. ಆದರೆ ಇಲ್ಲಿ ಮಹಿಳೆಯರನ್ನು ಮುಂದೆ ಮಾಡಿ ಅವರು ಏನೇನೋ ಮಾತನಾಡುವಂತೆ ಮಾಡಿದರು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆಡಬಾರದಂಥ ಮಾತುಗಳನ್ನು ಆಡುವ ಪ್ರಸಂಗ ಇದ್ದಾಗ, ಸಮಾಜವನ್ನು ಹಿಂಬದಿಗೆ ಎಳೆಯುವಾಗ ಮಹಿಳೆಯರನ್ನು ಮುಂದೆ ನಿಲ್ಲಿಸುವುದು ಪುರುಷ ರಾಜಕಾರಣ. ಇಂಥ ಸಂದರ್ಭದಲ್ಲಿ ಮಹಿಳೆಯರ ರಾಜಕೀಯ ಪ್ರಜ್ಞೆಯನ್ನು ಗುರುತಿಸುವುದು ಕಷ್ಟದ ಕೆಲಸ. ಮಹಿಳಾ ರಾಜಕಾರಣಿ ಪಕ್ಷದ ಚೌಕಟ್ಟಿನಲ್ಲಿ ಬಂದರೆ ಅವರ ರಾಜಕೀಯ ಪ್ರಜ್ಞೆ ಕಳೆದು ಹೋಗುತ್ತದೆ. ಪಕ್ಷದಿಂದ ಹೊರಗಡೆ ಬಂದರೆ ಅವಳ ರಾಜಕೀಯ ಪ್ರಜ್ಞೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಹಾಗಾದರೆ ಮಹಿಳೆ ಏನು ಮಾಡಬೇಕು?

ಮೇಧಾ ಪಾಟಕರ ನರ್ಮದಾ ಬಚಾವೋ ಆಂದೋಲನವನ್ನು ಮುನ್ನಡೆಸುತ್ತಿದ್ದಾರೆ. ಸರದಾರ ಸರೋವರ ಯೋಜನೆಯನ್ನು ವಿರೋಧಿಸುವ ಮೂಲಕ 'ವಿಕಾಸಕ್ಕಾಗಿ ವಿನಾಶವನ್ನು ಸಹಿಸುವುದಿಲ್ಲ' ಎಂಬ ಸಂದೇಶವನ್ನು ಜಗತ್ತಿನಾದ್ಯಂತ ತಲುಪಿಸಿದ್ದಾರೆ. ಅಂಥ ಮಹಿಳೆ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವರಿಗೆ ಬೆರಳೆಣಿಕೆಯಷ್ಟು ಮತ ಸಿಗುತ್ತವೆ. ಇರೋಮ್ ಶರ್ಮಿಲಾಗೂ ಇದೇ ಅನುಭವವಾಯಿತು. ಅವರು ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವರಿಗೆ 99 ಮತ ಸಿಕ್ಕವು. 100 ಕೂಡ ತಲುಪಲಿಲ್ಲ. ನಮ್ಮೊಳಗೆ ರಾಜಕೀಯ ಪ್ರಜ್ಞೆ ಇದೆ, ಆದರೆ ಅಧಿಕಾರ ರಾಜಕಾರಣದಲ್ಲಿ ನಮಗೆ ಅವಕಾಶವೇ ಇರುವುದಿಲ್ಲ. ಈ ಕಂದರ ತುಂಬ ವಿಶಾಲವಾದದ್ದಿದೆ. ಇದನ್ನು ಜೋಡಿಸಬೇಕಾಗಿದೆ. ಅಧಿಕಾರ ರಾಜಕೀಯದಲ್ಲಿ ಮಹಿಳೆಯರಿಗೆ ಗೌರವದ, ಗಟ್ಟಿ ನೆಲೆಯ ಜಾಗವನ್ನು ಯಾವ ರಾಜಕೀಯ ಪಕ್ಷವೂ ಕೊಡಲು ತಯಾರಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈಗ ಕೊಡುತ್ತಲೂ ಇಲ್ಲ.

ಎರಡನೆಯದಾಗಿ ಮಹಿಳೆಯರ ರಾಜಕೀಯ ಪ್ರಜ್ಞೆಗೆ ಯಾರ್ಯಾರು ಅಡೆತಡೆಗಳನ್ನು ಒಡ್ಡುತ್ತಾರೆ ಎಂದು ನೋಡಿದಾಗ ಎಲ್ಲಕ್ಕಿಂತ ಮೊದಲು ಕಾಣುವುದು ಧರ್ಮ. ಧರ್ಮಕ್ಕಿಂತ ಒಂದು ಹೆಜ್ಜೆ ಮುಂದಿರುವುದು ದೇಶ ಭಕ್ತಿ. ಪ್ರತಿಯೊಬ್ಬರೂ ಇನ್ನೊಬ್ಬರ ದೇಶ ಭಕ್ತಿಯನ್ನು ಅಳೆಯುತ್ತಿರುವುದು ಕಾಣುತ್ತಿದೆ. ಈ ದೇಶ ಭಕ್ತಿಯ ಮಾನದಂಡಗಳು ಎಂಥವು? 'ವಂದೇ ಮಾತರಮ್' 'ಬೋಲೋ ಭಾರತ ಮಾತಾ ಕೀ ಜೈ' ಅನ್ನುವುದು ಮಾತ್ರವೇ? ಕಥುವಾದಲ್ಲಿ ಬಾಲಕಿಯ ಮೇಲೆ ಅತ್ಯಾಚಾರವಾಗುತ್ತದೆ. ಭಾರತದ ಧ್ವಜವನ್ನು ಹಿಡಿದು ಅತ್ಯಾಚಾರಿಗಳ ಪರವಾಗಿ ಮೆರವಣಿಗೆ ಹೊರಡುತ್ತದೆ. 'ಬೋಲೋ ವಂದೇ ಮಾತರಮ್" ಅನ್ನುತ್ತದೆ! ನೀವು ಬ್ಯಾಂಕ್ ದರೋಡೆ ಮಾಡಿ ವಿಮಾನ ನಿಲ್ದಾಣದಲ್ಲಿ 'ಭಾರತ್ ಮಾತಾ ಕಿ ಜೈ' ಘೋಷಣೆ ಹಾಕಿದರೆ ಸಾಕು, ಪಾಸ್‌ಪೋರ್ಟ್ ಕೇಳದೇನೇ ನಿಮ್ಮನ್ನು ಒಳಗೆ ಕಳಿಸುತ್ತಾರೆ. ನಮ್ಮ ದೇಶಭಕ್ತಿ ಈ ಮಟ್ಟಕ್ಕೆ ಇಳಿದಿದೆ! 'ನೀವು ದೇಶ ಭಕ್ತರಲ್ಲವೇ?' ಎಂದು ಯಾರೋ ನನ್ನನ್ನು ಕೇಳಿದರು. 'ಹೌದು, ನಾನು ದೇಶ ಭಕ್ತಳಲ್ಲ' ಎಂದು ಅವರಿಗೆ ಹೇಳಿದೆ. ನಾನು ಯಾವ ತರಹದ ಭಕ್ತಿಯನ್ನೂ ಸಮರ್ಥಿಸುವುದಿಲ್ಲ. ಯಾಕೆಂದರೆ ಭಕ್ತಿ ಇದ್ದಲ್ಲಿ ವಿವೇಚನೆ ಇರುವುದಿಲ್ಲ. ಯಾವುದೇ ವಿಚಾರ ಮಾಡದೇ ಇನ್ನೊಬ್ಬರ ಮಾತನ್ನು ಒಪ್ಪುವುದು ಭಕ್ತಿ ಎನಿಸಿಕೊಳ್ಳುತ್ತದೆ. ಇಂಥ ಭಕ್ತಿಯಲ್ಲಿ ನನಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಆಸಕ್ತಿ ಇಲ್ಲ. ನಾನು ನನ್ನ ತಂದೆ ತಾಯಿಯನ್ನು ನನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸಿದ್ದೇನೆ. ಈಗ ಅವರಿಲ್ಲ. ಆದರೆ ನಾನು ಅವರ ಭಕ್ತಳಾಗಿರಲಿಲ್ಲ. ಪ್ರತಿದಿನವೂ ಅವರೊಂದಿಗೆ ವಾದ ಮಾಡುತ್ತಿದ್ದೆ. ಹಾಗೆ ನನ್ನ ತಂದೆ ತಾಯಿ ಪ್ರಗತಿಪರರೇ ಆಗಿದ್ದರು. ಇವತ್ತು ನಾನು ಏನಾಗಿದ್ದೇನೆಯೋ ಅದಕ್ಕೆ ಅವರೇ ಕಾರಣ. ನನ್ನ ಅವರ ಮಧ್ಯೆ ಬಿಸಿ ಬಿಸಿ ಚರ್ಚೆಗಳು ನಡೆಯುತ್ತಿದ್ದವು. ಹಾಗಾಗಿ ಈಗಿನವರು ನಿರೀಕ್ಷಿಸುವಂತೆ ನಾನು ದೇಶ ಭಕ್ತಳಲ್ಲ. ನನಗೆ ದೇಶದ ಬಗ್ಗೆ ಪ್ರೀತಿ ಇದೆ.

ದೇಶವೆಂದರೇನು? ಒಮ್ಮೆ ಗಾಂಧೀಜಿ ಜನರಿಗೆ ಈ ಪ್ರಶ್ನೆಯನ್ನು ಕೇಳಿದ್ದರು. ಹಿಂದಿಯ ಕವಿ ಸರ್ವೇಶ್ವರ ದಯಾಳ ಸಕ್ಸೇನಾ ಬರೆದಿದ್ದರು 'ದೇಶ ಕಾಗದದ ಮೇಲೆ ಬಿಡಿಸಿದ ನಕಾಶೆಯಲ್ಲ. ದೇಶ ಜನರಿಂದ ಘಟಿಸುತ್ತದೆ' ಎಂದು. ಗಾಂಧೀಜಿಯವರೂ ಇದನ್ನೇ ಹೇಳಿದ್ದರು. 'ದೇಶವೆಂದರೆ ನಾವು, ನೀವು, ಎಲ್ಲರೂ' ಎಂದು. ನಾನು ಮುಂಬಯಿಯಲ್ಲಿದ್ದಾಗ ಜನ ಮಾತನಾಡುವುದನ್ನು ಕೇಳಿದ್ದೇನೆ. ರಜೆಯ ದಿನಗಳಲ್ಲಿ ತಮ್ಮ ಊರಿಗೆ ಹೋಗುವಾಗ 'ಮುಲುಕ್ ಜಾತೆ ಹೈ' (ನಮ್ಮ ಊರಿಗೆ ಹೋಗುತ್ತೇವೆ) ಎಂದು ಹೇಳುತ್ತಿದ್ದರು. ಮುಲುಕ್ ಎಂಬ ಶಬ್ದವನ್ನು ತಮ್ಮ ಬೇರುಗಳಿರುವ ತಮ್ಮ ಊರನ್ನು ಸೂಚಿಸಲು ಉಪಯೋಗಿಸುತ್ತಿದ್ದರು. ಹಾಗೇನೇ, ನಮ್ಮ ಬೇರುಗಳೆಲ್ಲಿವೆಯೋ ಅದೇ ನಮ್ಮ ದೇಶ. ಹಿಂದಿ ಲೇಖಕ ಪ್ರೇಮಚಂದರ ಹೆಸರನ್ನು ನೀವೆಲ್ಲ ಕೇಳಿರಬಹುದು. ಅವರ ಗೋದಾನ ಎಂಬ ಕಾದಂಬರಿಯನ್ನು ಆಧರಿಸಿದ ಅದೇ ಹೆಸರಿನ ಸಿನೇಮಾ ಇತ್ತು. ಅದರಲ್ಲಿ ರಾಜಕುಮಾರ್ ಮತ್ತು ಮೆಹಮೂದ್ ನಟಿಸಿದ್ದರು. ಆ ಚಿತ್ರದ 'ಪುರವಾ ಕೆ ಝೋಕವಾ ಮೆ ಆಯೋರೆ ಸಂದೇಸವಾ ' ಎಂಬ ಹಾಡು ತುಂಬ ಸುಂದರವಾಗಿತ್ತು. ಅದರ ಭಾಷೆಯ ಸೊಗಡೇ ಬೇರೆ. ಬಹಳ ಚಂದ! ಭಾಷೆಯ ಕುರಿತು ನಮಗೆ ಪ್ರೀತಿ ಇರುತ್ತದೆ. ಪ್ರೀತಿಗಾಗಿಯೂ ಜನ ಜೀವ ಕೊಡುತ್ತಾರೆ, ಕೇವಲ ಭಕ್ತಿಗಾಗಿ ಅಲ್ಲ. ಹೀಗೆ ಅನೇಕ ವಿಷಯಗಳ ಬಗ್ಗೆ ನನಗೆ ಪ್ರೀತಿ ಇದೆಯೇ ಹೊರತು ಭಕ್ತಿ ಇಲ್ಲ ಎಂದು ನಾನವರಿಗೆ ಹೇಳಿದೆ. ಅದಕ್ಕೆ ಅವರು ಪ್ರೀತಿಯ ಮುಂದಿನ ಹೆಜ್ಜೆಯೇ ಭಕ್ತಿಯಲ್ಲವೇ ಎಂದರು. ಹಾಗಿದ್ದರೆ ನಾನು ಪ್ರೀತಿಯ ಹಂತಕ್ಕೇ ನಿಲ್ಲಲು ಇಚ್ಛಿಸುತ್ತೇನೆ, ಮುಂದೆ ಹೋಗುವುದಿಲ್ಲ ಎಂದು ಹೇಳಿದೆ. ವಿವೇಕ ಶೂನ್ಯತೆಯ ಷರತ್ತಿನ ಮೇಲೆ ದೇವರೇ ಪ್ರತ್ಯಕ್ಷನಾಗುವುದಾದರೂ ನನಗೆ ಅದು ಬೇಡ. ನಾನು ಏನನ್ನೇ ಪಡೆಯುವುದಾಗಲಿ ಅದು ವಿವೇಕ ಬುದ್ಧಿಯಿಂದ ಮಾತ್ರ. ನಾನು ಯಾವುದೇ ನಿರ್ಣಯವನ್ನು ಕೈಗೊಂಡರೂ ಅದು ನನ್ನ ವಿವೇಚನಾ ಶಕ್ತಿಯ ಮೂಲಕ. ವಿವೇಚನಾ ಶಕ್ತಿಯನ್ನು ಕೊಂದು ಏನನ್ನೂ ಪಡೆಯಲು ಇಚ್ಛಿಸುವುದಿಲ್ಲ. ನಮ್ಮ ವಿವೇಚನಾ ಶಕ್ತಿ ಕೊನೆಯಾದಂದು ಪ್ರಜಾತಂತ್ರವೂ ಕೊನೆಗೊಳ್ಳುತ್ತದೆ.

ನಾವು ತುಂಬ ಕಠಿಣವಾದ ದಾರಿಯಲ್ಲಿ ಕ್ರಮಿಸುತ್ತಿದ್ದೇವೆ. ಈ ದಾರಿಯಲ್ಲಿ, ಧರ್ಮ, ರಾಜಕಾರಣ ಮತ್ತು ದೇಶಭಕ್ತಿಯ ಸಂಕರವಿದೆ. ಈ ದಾರಿಯಲ್ಲಿ ನೀವು ಯಾವುದೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ವಿಷಯದ ಕುರಿತು ತಾರ್ಕಿಕವಾದ ಚರ್ಚೆಯನ್ನು ಮಾಡಲು ಅವಕಾಶವಿಲ್ಲ. ಕಾಶ್ಮೀರದ ಸಮಸ್ಯೆಯನ್ನೇ ತೆಗೆದುಕೊಳ್ಳಿ. ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಯುವಕರ ಪರಿಸ್ಥಿತಿಯ ಬಗ್ಗೆಯಂತೂ ಕೇಳಲೇ ಬೇಡಿ. ಯಾರಿಗೂ ಈ ವಿಷಯಗಳ ಕುರಿತ ಕಾಳಜಿ ಇಲ್ಲ. ಕಾಶ್ಮೀರ ನಮ್ಮದು ಆದರೆ ಕಾಶ್ಮೀರಿಗಳು ನಮ್ಮವರಲ್ಲ. ಕಾಶ್ಮೀರದ ಯುವಕರ ಸಮಸ್ಯೆ ನಮ್ಮ ಸಮಸ್ಯೆಯಲ್ಲ. ಭಾರತ ಯುವಕರ ದೇಶವೆಂದು ಹೇಳುತ್ತೇವೆ. ಯುವಕರ ಅತ್ಯಂತ ದೊಡ್ಡ ಸಮಸ್ಯೆ ಯಾವುದು? ಈ ಸಭೆಯಲ್ಲಿ ಯುವಕರು, ಯುವತಿಯರು ಸಾಕಷ್ಟು ಸಂಖ್ಯೆಯಲ್ಲಿ ಇದ್ದೀರಿ. ಯುವಜನತೆಯ ಅಳಲು ಏನು ಎಂದು ನಿಮ್ಮ ಹೃದಯವನ್ನು ಮುಟ್ಟಿ ಹೇಳಿ. ನಿರುದ್ಯೋಗ ಅಲ್ಲವೆ? ಎಷ್ಟೊಂದು ಜವಾಬ್ದಾರಿ ಇದೆ ಯುವ ಜನತೆಯ ಮೇಲೆ; ತನ್ನ ತಂದೆ ತಾಯಿಯನ್ನು ನೋಡಿಕೊಳ್ಳಬೇಕು, ಮನೆಯನ್ನು ನಿರ್ವಹಿಸಬೇಕು, ಹೆಂಡತಿ ಮಕ್ಕಳ ಜವಾಬ್ದಾರಿ, ಸ್ವಂತ ಕರಿಯರ್ ಮಾಡಿಕೊಳ್ಳಬೇಕು. ಇದ್ಯಾವುದನ್ನೂ ಸಾಧಿಸಲು ಯುವಕರಿಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆಲ್ಲ ಹೋರಾಟ ಮಾಡಬೇಕು. ಆದರೆ ಹೋರಾಟ ಈಗ ದೇಶದ್ರೋಹವೆನಿಸಿಕೊಳ್ಳುತ್ತಿದೆ. ಕೆಲಸ ಕೇಳುವ ಪ್ರತಿಯೊಬ್ಬ ಯುವಕ ಯುವತಿಯೂ ದೇಶದ್ರೋಹಿಯಾಗಿದ್ದಾನೆ/ಳೆ. ಅದೇ ಯುವಜನತೆ ದಂಗೆಯಲ್ಲಿ ಭಾಗವಹಿಸಿದರೆ ಅದು ದೇಶ ಭಕ್ತಿ ಎನಿಸಿಕೊಳ್ಳುತ್ತಿದೆ. ನಮ್ಮ ರಾಜಕೀಯ ಪ್ರಜ್ಞೆ ಈ ಮಟ್ಟಕ್ಕೆ ಬಂದು ಮುಟ್ಟಿದೆ.

ನಮ್ಮಲ್ಲಿ ಭಾರತ ಮಾತೆಯ ಚಿತ್ರವಿದೆ. 'ಭಾರತ ಮಾತಾ ಕಿ ಜೈ' ಎಂಬ ಘೋಷಣೆ ಪದೇ ಪದೇ ಕೇಳುತ್ತಿರುವಾಗ ಭಾರತ ಮಾತೆಯ ಚಿತ್ರದ ಮೂಲದ ಕುರಿತು ನಾನೊಂದು ಅಧ್ಯಯನ ಮಾಡಿದೆ. ಎಲ್ಲಕ್ಕೂ ಮೊದಲು ಒಬ್ಬ ಬಂಗಾಲಿ ಚಿತ್ರಕಾರರು ಭಾರತ ಮಾತೆಯ ಚಿತ್ರವನ್ನು ಬಿಡಿಸಿದ್ದು ತಿಳಿದುಬಂತು. ಆ ಚಿತ್ರದಲ್ಲಿ ಭಾರತದ ನಾಕಾಶೆಯ ಮಧ್ಯೆ ಮಹಿಳೆಯೊಬ್ಬಳು ಧಾನ್ಯದ ಕಟಾವು ಮಾಡುತ್ತಿದ್ದಾಳೆ. ಇದರರ್ಥ ಎಲ್ಲರಿಗೂ ಅನ್ನ ಕೊಡುವವಳು ಭಾರತಮಾತೆ. ಇವತ್ತಿನ ಭಾರತ ಮಾತೆಯ ಕೈಯ್ಯಲ್ಲಿ ತ್ರಿವರ್ಣ ಧ್ವಜ ಇರಬೇಕಿತ್ತು ಆದರೆ ಕೇಸರಿ ಧ್ವಜವಿದೆ. ಕೇಸರಿ ಧರ್ಮದ ಚಿಹ್ನೆಯೇ ಹೊರತು ದೇಶದ ಚಿಹ್ನೆ ಆಗಲು ಸಾಧ್ಯವಿಲ್ಲ. ಭಾರತದಂಥ ದೇಶದಲ್ಲಿ ಅನೇಕ ಧರ್ಮದ ಜನರಿರುವಾಗ, ಒಂದೇ ಧರ್ಮದ ಧ್ವಜ, ಒಂದೇ ಧರ್ಮದ ಪ್ರತೀಕ, ಒಂದೇ ಧರ್ಮದ ಚಿಹ್ನೆಗಳು ಇರಬಾರದು.

ಕೊನೆಯದಾಗಿ, ಇಂದು ಸಂವಿಧಾನ ಅಪಾಯದಲ್ಲಿದೆ. ಅನೇಕ ಕಾರಣಗಳಿಂದಾಗಿ ಸಂವಿಧಾನ ಅಪಾಯದಲ್ಲಿದೆ. ಮೊದಲನೆಯದಾಗಿ ಕೆಲ ವಿಶಿಷ್ಟ ರಾಜಕಾರಣಿಗಳಿಗೆ, ನಮ್ಮ ಸಂವಿಧಾನದ ಕರಡು ಪ್ರತಿಯನ್ನು ಒಬ್ಬ ದಲಿತ ವಿದ್ವಾಂಸರು ರಚಿಸಿದ್ದು ಎಂಬ ವಿಷಯವನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಯಾವುದೂ ಪರಿಪೂರ್ಣವಲ್ಲ. ಯಾವುದೂ ಅಂತಿಮವಲ್ಲ. ಯಾವ ಸಂಘರ್ಷವೂ ಅಂತಿಮವಲ್ಲ. ಪ್ರತಿ ಯುಗಕ್ಕೂ ತನ್ನದೇ ಆದ ಸಂಘರ್ಷ ಇದ್ದೇ ಇದೆ. ಆದ್ದರಿಂದಲೇ ಸಂವಿಧಾನದಲ್ಲಿಯೂ ಬದಲಾವಣೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ತರುವ ವಿಚಾರವನ್ನು ಇಡಲಾಗಿತ್ತು. ಸಂವಿಧಾನದ ಕುರಿತು ಅಂದಾಜು ನೂರರಷ್ಟು ಸಂಶೋಧನೆಗಳು ನಡೆದಿವೆ. ಆದರೀಗ ಸಂವಿಧಾನವನ್ನು ಪೂರ್ತಿಯಾಗಿ ಬದಲಾಯಿಸುವ ಪ್ರಯತ್ನಗಳು ಜಾರಿಯಲ್ಲಿವೆ. ಈ ಸಂದರ್ಭದಲ್ಲಿ 2019ರ ಚುನಾವನೆ ನಮಗೆ ತುಂಬ ಮಹತ್ವದ್ದಾಗಿದೆ. ನಮ್ಮ ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸಿ ಚುನಾವಣೆಯತನಕ ತಲುಪಬೇಕಾಗಿದೆ. ವಿರೋಧದ, ಒತ್ತಾಯದ ಧ್ವನಿಗಳನ್ನು ಕೇಳಿಸಿಕೊಳ್ಳಬೇಕಿದೆ. ಒಂದು ಪಕ್ಷದ ಅಧ್ಯಕ್ಷರಾದವರು 'ನಾವು ಚುನಾವಣೆಯಲ್ಲಿ ಗೆದ್ದರೆ ಮುಂದಿನ 50 ವರ್ಷ ನಾವು ಇಲ್ಲಿಂದ ಸರಿಯುವುದಿಲ್ಲ' ಅಂತ ಹೇಳುವಾಗ ಈ ಹೇಳಿಕೆಯ ಹಿಂದೆ ಏನೇನು ಉದ್ದೇಶಗಳು ಅಡಗಿವೆ ಎಂಬುದನ್ನು ನಾವು ತಿಳಿದುಕೊಂಡು ಮುಂದಿನ ಕೆಲಸ ಮಾಡಬೇಕಿದೆ. ನಾವು ಮಹಿಳೆಯರು ಅಧಿಕಾರ ರಾಜಕಾರಣದಿಂದ ದೂರ ಉಳಿದು ಸಮಾಜ ರಾಜಕಾರಣದಲ್ಲಿ ಸಕ್ರಿಯರಾಗಿದ್ದೇವೆ. ಆದ್ದರಿಂದ ನಮ್ಮಿಂದ ಈ ಕೆಲಸ ಸಾಧ್ಯವಾಗಲಿದೆ. ಇಂದು ನಮ್ಮ ದೇಶದಲ್ಲಿ ಜಾತಿವಾದ ಬಲಗೊಳ್ಳುತ್ತಿದೆ. ಗೋ ರಕ್ಷಣೆಯ ಹೆಸರಿನಲ್ಲಿ ಮುಸಲ್ಮಾನರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ದಲಿತರನ್ನು ಕೊಂದು ಹಾಕಲಾಗಿದೆ. ಅತೀ ಹೆಚ್ಚು ಸಂಖ್ಯೆಯಲ್ಲಿ ಅತ್ಯಾಚಾರ ನಡೆದಿದ್ದು ದಲಿತ ಮಹಿಳೆಯರ ಮೇಲೆ. ಈ ಜಾತಿವಾದ ಮತ್ತು ಕಟ್ಟರ್ ಧಾರ್ಮಿಕ ಭಾವನೆಗಳು ಮತ್ತೊಮ್ಮೆ ನಮ್ಮ ಪ್ರಜಾತಂತ್ರದೊಂದಿಗೆ ಆಟವಾಡುತ್ತಿವೆ.

ನಾವು ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸಲೇ ಬೇಕು. ಜಯಪ್ರಕಾಶ ನಾರಾಯಣರು ಇದ್ದಾಗ ಅವರು 'ಕ್ಷಾತ್ರ ಸಂಘರ್ಷ ವಾಹಿನಿ' ಎಂಬ ಸಂಘಟನೆಯನ್ನು ಕಟ್ಟಿದ್ದರು. ಆ ಸಂಘಟನೆಯಲ್ಲಿ ನಾನು ಮತ್ತು ಲತಾ ಸದಸ್ಯರಾಗಿದ್ದೆವು. ಜೆ.ಪಿ.ಯವರು ಇದನ್ನು ಅಪಕ್ಷೀಯ ಸಂಘಟನೆ ಎಂದು ಕರೆದಿದ್ದರು. ಅರಾಜಕೀಯ ಸಂಘಟನೆ ಅಂತಲ್ಲ. ನಾನು ಆಗಲೂ ರಾಜಕೀಯದಲ್ಲಿದ್ದೆ. ಆದರೆ ಜನಸಂಘದ ಸದಸ್ಯೆ ಆಗಿರಲಿಲ್ಲ. ಆವಾಗ ತುರ್ತು ಪರಿಸ್ಥಿಯನ್ನು ನಾನು ವಿರೋಧಿಸಿದ್ದೆ. ಜೈಲಿಗೆ ಹೋಗಿದ್ದೆ. ನನ್ನ ಮೂಳೆಗಳನ್ನು ಮುರಿದುಕೊಂಡಿದ್ದೆ. ಈಗಿನ ಪರಿಸ್ಥಿತಿಯನ್ನು ವಿರೋಧಿಸಿದರೆ ನಾನು ಕಾಂಗ್ರೆಸ್ಸಿನವಳು ಎಂದು ಹೇಳುತ್ತಾರೆ. ನಾನು ಜನಸಂಘದ ಸದಸ್ಯೆ ಆಗದೇನೇ ತುರ್ತುಪರಿಸ್ಥಿತಿಯನ್ನು ವಿರೋಧಿಸಲು ಸಾಧ್ಯವಾದಾಗ, ಇವತ್ತಿನ ಪರಿಸ್ಥಿತಿಯನ್ನು ವಿರೋಧಿಸುವ ನಾನು ಅದು ಹೇಗೆ ಕಾಂಗ್ರೆಸ್ಸಿಗಳಾಗುತ್ತೇನೆ? ನಾನು ಅಧಿಕಾರದ ರಾಜಕಾರಣದಲ್ಲಿ ಇಲ್ಲ. ಆದರೆ ನಾನು ಖಂಡಿತವಾಗಿಯೂ ರಾಜಕಾರಣದಲ್ಲಿದ್ದೇನೆ. ಮಹಿಳೆ ಬರೀ ರಾಜಕೀಯ ಮಾಡುವವಳಲ್ಲ. ಅವಳು ಮಾನವೀಯತೆಯ ರಾಜಕೀಯವನ್ನು ಮಾಡುವವಳು. ಇದೇ ದಾರಿಯಲ್ಲಿ ನಡೆಯುವವಳು.

ಧನ್ಯವಾದಗಳು.

*(ಭಾಷಣದ ಅನುವಾದ ಮತ್ತು ಬರಹ ರೂಪ: **ರಾಜೇಶ್ವರಿ ಜೋಶಿ**)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಅಧಿಕಾರ ರಾಜಕಾರಣ ಮತ್ತು ಮಹಿಳಾ ಪ್ರಾತಿನಿಧ್ಯ

**– ಶಾಂತಲಾ ದಾಮ್ಲೆ**

ಅಧಿಕಾರ ರಾಜಕಾರಣ ಮತ್ತು ಆಡಳಿತವೆಂದಾಗ ಸಾರ್ವಜನಿಕ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವಂಥ ಜವಾಬ್ದಾರಿಯಂಥ ವಿಷಯಗಳು ಬರುತ್ತವೆ. ಆದಾಯ ಮೂಲಗಳ ರೂಪರೇಷೆ ಹಾಕುವುದು ಸಮಗ್ರವಾದ ರಾಷ್ಟ್ರೀಯ ಉತ್ಪಾದನಾ ನೀತಿಯನ್ನು ನಿರ್ಣಯಿಸುವುದು, ಉತ್ಪಾದನಾ ವಿಧಾನಗಳನ್ನು ನಿರ್ಧರಿಸೋದು ಇವೆಲ್ಲ ಇರುತ್ತದೆ. ಇದರ ಜೊತೆಗೆ ಕೇಂದ್ರ ಸರಕಾರದ ಮುಖ್ಯ ಜವಾಬ್ದಾರಿಯಾಗಿ ವಿದೇಶೀ ನೀತಿ, ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ರಕ್ಷಣೆ ಇವೆಲ್ಲ ಬರುತ್ತವೆ. ಅಧಿಕಾರ ರಾಜಕಾರಣದಲ್ಲಿ ಬಹುಮುಖ್ಯವಾದದ್ದು ಕೇಂದ್ರ ಸರಕಾರದಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆಗಳಿರುತ್ತವೆ. ರಾಜ್ಯ ಸರಕಾರದಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಿರುತ್ತವೆ. ಇನ್ನು ಸ್ಥಳೀಯ ಸರಕಾರದಲ್ಲಿ ಅಂದರೆ ನಮ್ಮ ಗ್ರಾಮ ಪಂಚಾಯತಿ ಇರುತ್ತದೆ. ನಮ್ಮ ದೇಶದಲ್ಲಿ ಇರೋದು ಪ್ರಾತಿನಿಧಿಕ ಪ್ರಜಾಪ್ರಭುತ್ವ. ಇವೆಲ್ಲದರ ನಡುವೆ ಮಹಿಳಾ ಪ್ರತಿನಿಧ್ಯ ಹೇಗೆ ಇರಬೇಕಿತ್ತು. ಅದು ಈಗ ಹೇಗಿದೆ ಮತ್ತು ಯಾವ ರೀತಿಯಲ್ಲಿ ಇರಬೇಕೋ ಆಥರ ಮಾಡೋದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡುವ ಮೊದಲು ಮಹಿಳಾ ಪ್ರಾತಿನಿಧ್ಯ ಯಾಕಿರಬೇಕು ಎಂಬ ಪ್ರಶ್ನೆ ಕೇಳಿಕೊಳ್ಳೋಣ. ಪ್ರಪಂಚದ ಜನಸಂಖ್ಯೆಯಲ್ಲಿ ನಾವು ಅರ್ಧದಷ್ಟಿದ್ದೀವಿ. ಅದಕ್ಕಾಗಿ ಆಡಳಿತದಲ್ಲಿ ನಮ್ಮ ಪ್ರಾತಿನಿಧ್ಯ ಇರಬೇಕು. ಅಷ್ಟೇ. ಅದಕ್ಕೆ ಹೆಚ್ಚಿಲ್ಲ, ಕಡಿಮೆಯಿಲ್ಲ. ಅದರ ಬಗ್ಗೆ ಎರಡನೇ ಪ್ರಶ್ನೆ ಇಲ್ಲ.

ಆದರೆ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ, ಲೋಕಸಭೆಯಲ್ಲಿ ನಮ್ಮ ಪ್ರಾತಿನಿಧ್ಯ ಎಷ್ಟಿದೆ ಎಂದು ನೋಡಿದರೆ ಅದು ಈಬಾರಿ 11% ಇದೆ. ಇಷ್ಟರೊಳಗೆ ಇನ್ನೂ ಕಡಿಮೆಯಿತ್ತು. 10% ನ್ನು ಮೀರುತ್ತಿರಲಿಲ್ಲ. ಈ ಬಾರಿಯೇ ಅದು 11% ಆಗಿರೋದು. 481 ಜನ ಗಂಡಸರಿದ್ದರೆ 63 ಜನ ಹೆಂಗಸರಿದ್ದಾರೆ. ರಾಜ್ಯಸಭೆಯಲ್ಲಿಯೂ ಈ ಸಂಖ್ಯೆ ಹೆಚ್ಚಿಲ್ಲ. 11% ಮಾತ್ರವೇ. ಎಮ್ಮೆಲ್ಲೆ ಮತ್ತು ಎಂಪಿಗಳನ್ನು ಸೇರಿಸಿದಾಗ 4896 ಪ್ರತಿನಿಧಿಗಳಲ್ಲಿ 418 ಜನ ಅಂದರೆ ಕೇವಲ 9% ಮಹಿಳೆಯರು. ಇನ್ನುಳಿದ 91% ಗಂಡಸರೇ ಆಗಿದ್ದಾರೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಆದರೆ ಸ್ಥಳೀಯ ಸರಕಾರಗಳಲ್ಲಿ ನೋಡಿದಾಗ 50% ಮಹಿಳೆಯರನ್ನು ನಾವು ಕಾಣುತ್ತೇವೆ. 2,67,000 ಪಂಚಾಯತಿಗಳಿವೆ, 5000 ನಗರಸಭೆಗಳಿವೆ. ಇದರಲ್ಲಿ 50% ಮಹಿಳೆಯರು ಗಂಡಸರಿಗೆ ಸಮನಾಗಿ ಕುರ್ಚಿಗಳಲ್ಲಿ ಕುಳಿತಿರುವುದನ್ನು ನಾವು ಕಾಣುತ್ತೇವೆ. ಆದರಿದು ಸರಿಯಾದ ಮಹಿಳಾ ಪ್ರಾತಿನಿಧ್ಯವೇ? ಮಹಿಳೆಯರಿಗೆ ನಿಜವಾದ ಪ್ರಾತಿನಿಧ್ಯ ಸಿಕ್ಕಿದೆಯೇ? ಗಂಡಸರ ವಾರಸುದಾರರಾಗಿ, ವಾರಸುದಾರರೂ ಅಲ್ಲ, ಬದಲಿಗೆ ಪ್ರಾಕ್ಸಿಯಾಗಿ ಬಂದಿರುತ್ತಾರೆ. ಅದಕ್ಕಾಗಿ ಅವರನ್ನು ದೂಷಿಸುವುದಿಲ್ಲ ನಾನು. ಅವರಿಗೆ ಇಷ್ಟವಿರಲಿ ಬಿಡಲಿ, ಅವರನ್ನು ಎಳೆತಂದು ಅಲ್ಲಿ ಕೂಡಿಸಿದವರು ಅವರ ಮನೆ ಗಂಡಸರು. ಗೆದ್ದ ಮೇಲೂ ಸ್ವತಂತ್ರವಾಗಿ ಪಂಚಾಯತಿಗೆ ಹೋಗಲಿಕ್ಕೆ ಅವರು ಬಿಡುತ್ತಿರಲಿಕ್ಕಿಲ್ಲ. ಹಾಗಾಗಿ ಅವರನ್ನು ನಾನು ದೂಷಿಸುವುದಿಲ್ಲ. ಆದರೆ ಅವರು ಮಹಿಳೆಯರನ್ನು ಪ್ರತಿನಿಧಿಸುತ್ತಿಲ್ಲ ಎನ್ನುತ್ತೇನೆ ಅಷ್ಟೇ. ಆ ಥರದ ಸೀಟುಗಳಲ್ಲಿ ಕುಳಿತಿರುವವರು ಪುರುಷರನ್ನೇ ಪ್ರತಿನಿಧಿಸುತ್ತಿರುತ್ತಾರೆ. ಅಲ್ಲಿ ಪುರುಷರೇ ಆಡಳಿತ ಮಾಡುತ್ತಿರುತ್ತಾರೆ.

ಇನ್ನು ಮೀಸಲಾತಿ. ಮಹಿಳಾ ಮೀಸಲಾತಿ. ಮೂರ್ನಾಲ್ಕು ಬಾರಿಯ ಲೋಕಸಭೆ ಮುಗಿದರೂ ಇನ್ನೂ ಮಸೂದೆಗೊಂದು ಕಾನೂನು ರೂಪ ಸಿಗದ ಮಹಿಳಾ ಮೀಸಲಾತಿ. ಈ ಶಬ್ದವೇ ತಪ್ಪು. ಅದನ್ನು ಮಹಿಳಾ ಪ್ರಾತಿನಿಧ್ಯ ಮಸೂದೆ ಎನ್ನಬೇಕು. ಒಂದುವೇಳೆ ಒಂದಾನೊಂದು ಕಾಲಕ್ಕೆ ಈ ಮಸೂದೆಗೂ ಕಾನೂನು ರೂಪು ಸಿಕ್ಕೇಬಿಟ್ಟಿತು ಎಂದುಕೊಳ್ಳೋಣ. ಆಗ ಏನಾಗಬಹುದು? ಎಮ್ಮೆಲ್ಲೆ, ಎಂಪಿ ಜಾಗಗಳಲ್ಲಿ ಹೆಚ್ಚು ಹೆಣ್ಣುಮಕ್ಕಳನ್ನು ನಾವು ಕಾಣಬಹುದು. ಅಷ್ಟೇ ತಾನೇ? ಅದಕ್ಕಿಂತ ಹೆಚ್ಚೇನೂ ಆಗಲಿಕ್ಕಿಲ್ಲ. ಈಗಿನ ಸ್ಥಳೀಯ ಸರಕಾರಗಳಲ್ಲಿ ಆಗಿರುವಂತೆಯೇ ಮಹಿಳೆಯರು ಪುರುಷರ ಪ್ರತಿನಿಧಿಗಳಾಗಿ ಬಂದು ಕುಳಿತುಕೊಳ್ಳುತ್ತಾರಷ್ಟೇ. ಅದು ಆಗಬಾರದೆಂದರೆ ಏನು ಮಾಡಬೇಕು?

ನಿಜವಾದ ಮಹಿಳಾ ಪ್ರಾತಿನಿಧ್ಯ ಬರಬೇಕೆಂದರೆ ಏನು ಮಾಡಬೇಕು? ಇದನ್ನು ಚರ್ಚಿಸುವ ಮೊದಲು ನಾವು ಇನ್ನೊಂದು ವಿಷಯವನ್ನು ಗಮನದಲ್ಲಿರಿಸಿಕೊಳ್ಳಬೇಕು. ನಮ್ಮ ಮಹಿಳೆಯರು ತಲೆತಲಾಂತರಗಳಿಂದಲೂ ಅಧಿಕಾರವನ್ನು ಅನುಭವಿಸಿದವರಲ್ಲ. ಶಿಕ್ಷಣ, ಉದ್ಯೋಗ ಕೂಡ ಈಗ ಒಂದು ನೂರು ವರ್ಷಗಳಿಂದ ಮಾತ್ರ ಅವಳಿಗೆ ದೊರಕಿದೆ. 10,000 ವರ್ಷಗಳಿಂದ ಮನುಷ್ಯ ಈ ಭೂಮಿಯ ಮೇಲಿದ್ದರೂ ಮಹಿಳೆ ಮಾತ್ರ ಕುಟುಂಬಕ್ಕೆ ಮಾತ್ರ ಸೀಮಿತವಾಗಿಯೇ ಇದ್ದಾಳೆ. ಶ್ರೀಮಂತ ಮಹಿಳೆಗೆ ಕೂಡ ತೀರ ಇತ್ತೀಚಿನ ವರ್ಷಗಳವರೆಗೂ ಆರ್ಥಿಕ ಸ್ವಾವಲಂಬನೆ ಸಿಕ್ಕಿರಲಿಲ್ಲ. ಆಸ್ತಿ, ಕುಟುಂಬದ ಆದಾಯದಲ್ಲಿ ಆಕೆಗೆ ಪಾಲಿರುತ್ತಿರಲಿಲ್ಲ. ಅಧಿಕಾರದಲ್ಲಿ ಆಕೆ ಪಾಲು ಪಡೆಯಬೇಕು ಎಂಬುದರ ಬಗ್ಗೆ ನಾವು ಕೆಲಸ ಮಾಡಬೇಕು.

ಇನ್ನು ಸರಕಾರದ ಮುಖ್ಯ ಮುಖ್ಯ ನಿರ್ಣಯಗಳನ್ನು ಅಧಿಕಾರಶಾಹಿಯೇ ಹೆಚ್ಚಾಗಿ ಮಾಡುತ್ತಿರುತ್ತಾರೆ ಹೊರತು ಪ್ರತಿನಿಧಿಗಳಲ್ಲ. ಅಲ್ಲಿ ಕೂಡ ಮಹಿಳೆಯರಿಗೆ ಮಹತ್ವದ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಿರ್ಣಾಯಕ ಸ್ಥಾನಗಳನ್ನು ಕೊಡುವಂತಾಗಬೇಕು.

ರಾಜಕೀಯದಲ್ಲಿ ನಾವು ಅಭ್ಯರ್ಥಿಗಳನ್ನು ಮಾತ್ರ ನೋಡುತ್ತೇವೆ. ಒಂದು ರಾಜಕೀಯ ಪಕ್ಷವೆಂದರೆ ಅಲ್ಲಿಯೂ ಕೂಡ ಅನೇಕ ನಿರ್ಣಾಯಕ ಸ್ಥಾನಗಳಿರುತ್ತವೆ. ರಾಜ್ಯಾಧ್ಯಕ್ಷ, ಜಿಲ್ಲಾಧ್ಯಕ್ಷ, ಅಭ್ಯರ್ಥಿ ಆಯ್ಕೆ ಸಮಿತಿ ಹೀಗೆ. ಈ ಸ್ಥಾನಗಳಲ್ಲಿ ಮಹಿಳೆಯರಿರುವುದು ಬಹಳ ಕಡಿಮೆ. ಅಭ್ಯರ್ಥಿ ಆಯ್ಕೆ ಸಮಿತಿಯವರು ಹೆಣ್ಣುಮಕ್ಕಳಿಗೆ ಎಷ್ಟು ಸ್ಥಾನಗಳನ್ನು ಕೊಡುತ್ತಾರೆ? 50%? 10%? 11%? ಮಹಿಳಾ ಮೀಸಲಾತಿ ಇಲ್ಲದಿದ್ದರೆ ಮಹಿಳೆಯರಿಗೆ ಸ್ಥಾನ ಕೊಡುವುದು ಅತ್ಯಂತ ಕಡಿಮೆ. ಕಾರ್ಯಕರ್ತರಲ್ಲಿಯೂ ಮಹಿಳೆಯರಿರುವುದು ಬಹಳ ಕಡಿಮೆ. ಅಭ್ಯರ್ಥಿ ಆಯ್ಕೆ ಸಮಿತಿಯಲ್ಲಿ ಹೆಣ್ಣುಮಕ್ಕಳಿದ್ದರೆ ಆಕೆಗೆ ಮಹಿಳಾ ಅಭ್ಯರ್ಥಿಗಳು ಕಾಣಬಹುದು. ಗಂಡಸರಿಗೆ ತನಗೆ ಟಿಕೆಟ್ ಕೊಡಲೇಬೇಕೆಂದು ಲಾಬಿ ಮಾಡುತ್ತಿರುವ ಗಂಡಸರಷ್ಟೇ ಕಾಣಸಿಗುತ್ತಾರೆ. ತನ್ನ ಹೆಂಡತಿಗೆ ಟಿಕೆಟ್ ಕೊಡಿ ಎಂದು ಲಾಬಿ ಮಾಡುತ್ತಿರುವ ಗಂಡಸರೇ ಕಾಣುತ್ತಾರೆ. ಮಹಿಳೆಗೆ ಅಧಿಕಾರ ಸಿಕ್ಕರೂ ಕೂಡ ಆಕೆ ಇನ್ನಷ್ಟು ಮಹಿಳೆಯರನ್ನು ತಂದು ತುಂಬುವ ಬಗ್ಗೆ ವಿಚಾರ ಮಾಡುವುದಿಲ್ಲ. ಪಕ್ಷದವರಿಗೂ ಕೂಡ ಈಕೆಗೆ ಟೋಕನ್ ಆಗಿ ಸ್ಥಾನ ಕೊಟ್ಟಿದ್ದೀವಲ್ಲ ಎಂದು. ಆಕೆಗೆ, ಇನ್ನೊಬ್ಬಳು ಬಂದರೆ ತನ್ನ ಸ್ಥಾನವೆಲ್ಲಿ ಹೋಗಿಬಿಡುವುದೊ ಎಂಬ ಹೆದರಿಕೆ.

ಇನ್ನು ಮಹಿಳಾ ಮತದಾರರು: ತಮಗೆ ರಾಜಕೀಯ ಇಷ್ಟ ಇಲ್ಲ ಎಂದೇ ಹೇಳುತ್ತಾರೆ ಏಕೆಂದರೆ ತಮ್ಮ ಜೀವನದಲ್ಲಿ ಸ್ವಂತ ನಿರ್ಣಯಗಳನ್ನೇ ಎಂದೂ ಅವರು ಮಾಡಿರುವುದಿಲ್ಲ. ತಾನು ಕೆಲಸಕ್ಕೆ ಸೇರಬೇಕೋ, ಬೇಡವೋ, ಎಲ್ಲಿ ಕೆಲಸ ಮಾಡಬೇಕು, ಯಾವ ಕೆಲಸ ಮಾಡಬೇಕು ಎಂಬ ನಿರ್ಧಾರಗಳೂ ಬಹಳಷ್ಟು ಸಾರೆ ಆಕೆ ಮಾಡಿರುವುದೇ ಇಲ್ಲ. ತಮ್ಮ ಮತದಿಂದ ಬದಲಾವಣೆಯನ್ನು ತರ್ತೀವಿ ಎಂಬ ನಂಬಿಗೆ, ಅರಿವು ಅವರಿಗೆ ಇರುವುದೇ ಇಲ್ಲ. ಯಾಕೆಂದರೆ ಅವರ ಮನೆಗಳಲ್ಲೇ ಅವರ ಮತಕ್ಕೆ ಬೆಲೆ ಇರುವುದಿಲ್ಲ. ಈ ಕಾರಣಕ್ಕಾಗಿ ಮಹಿಳಾ ಮತದಾರರ ಜಾಗೃತಿ ಮೊಟ್ಟ ಮೊದಲನೆಯದಾಗಿ ಮಾಡಬೇಕಾದ ಕೆಲಸ. ತಳಮಟ್ಟದಿಂದ ಕೆಲಸ ಆರಂಭವಾಗಬೇಕು. ಇದಕ್ಕಾಗಿ ಮಹಿಳಾ ರಾಜಕಾರಣಿಗಳ ಜೊತೆ ಮಹಿಳಾ ಮತದಾರರ ಮಾತುಕತೆಗಳನ್ನೇರ್ಪಡಿಸಬೇಕು. ಎರಡನೆಯದಾಗಿ ವಿದ್ಯಾರ್ಥಿ ಸಂಘಟನೆಗಳು. ಹಿಂದಕ್ಕೆಲ್ಲ ಇವು ಬಹಳ ಪ್ರಚಲಿತದಲ್ಲಿತ್ತು. ಆದರೆ ರೌಡಿಯಿಸಂ ಹೆಚ್ಚಾಗಿದ್ದಕ್ಕಾಗಿ, ನೆಗಡಿ ಬಂತೆಂದು ಮೂಗನ್ನೇ ಕತ್ತರಿಸಿದ ರೀತಿಯಲ್ಲಿ ರೌಡಿಯಿಸಂ ಬಂತೆಂದು ವಿದ್ಯಾರ್ಥಿ ಚುನಾವಣೆಗಳನ್ನೇ ಬಹಿಷ್ಕರಿಸಲಾಗಿದೆ. ಕಾಲೇಜಿನಲ್ಲಿರುವಾಗಲೇ ಚುನಾವಣೆ ಮತ್ತು ರಾಜಕೀಯ ಪ್ರಜ್ಞೆಯನ್ನು ಬೆಳೆಸಬೇಕು. ಮಕ್ಕಳು ಚಿಕ್ಕವರಿದ್ದಾರೆಂಬ ಕಾರಣಕ್ಕೆ ಕೆಲಸ ಬಿಟ್ಟುಬಿಡುವ ಹೆಣ್ಣುಮಕ್ಕಳಿದ್ದಾರೆ. ಅವರು ಆರ್ಥಿಕವಾಗಿ ಸಬಲರಿದ್ದರೆ, ಮತ್ತೆ ಕೆಲಸಕ್ಕೆ ಸೇರಲೇಬೇಕೆಂಬ ಕಾರಣವಿಲ್ಲದಿದ್ದರೆ ಅಂಥ ಕಲಿತ ಹೆಣ್ಣುಮಕ್ಕಳು ರಾಜಕೀಯವನ್ನು ಆರಿಸಿಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಅಭ್ಯರ್ಥಿಗಳು ಹೆಣ್ಣುಮಕ್ಕಳಾಗಿದ್ದರೆ ಸಾಲದು, ನೂರಿನ್ನೂರು ಹೆಣ್ಣುಮಕ್ಕಳು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅಭ್ಯರ್ಥಿಗಳಾಗಿ ನಿಂತರೆ ಅವರಿಗಾಗಿ ಕೆಲಸ ಮಾಡಲು ಬೂತ್ ಮಟ್ಟದವರೆಗೆ ಕನಿಷ್ಟ 10,000 ಜನ ಕಾರ್ಯಕರ್ತರು ಬೇಕಾಗುತ್ತಾರೆ. ಪಂಚಾಯತಿಗಳಲ್ಲಿ ಇನ್ನೂ ಹೆಚ್ಚು ಜನ ಬೇಕು.

ಇನ್ನು ಮಾಧ್ಯಮ: ಮಾಧ್ಯಮದಲ್ಲಿಯೂ ಕೂಡ ಎಷ್ಟರಮಟ್ಟಿಗೆ ಮಹಿಳೆಯರಿಗೆ ಪ್ರಾತಿನಿಧ್ಯ ಇದೆ? ಮಾಧ್ಯಮಗಳು ಯಾರನ್ನು ಹೆಚ್ಚಾಗಿ ಬಿಂಬಿಸುತ್ತಿರುತ್ತಾರೋ ಅವರೇ ನಾಯಕರು ಎಂದು ಸಮಾಜ ನಂಬುವುದಿದೆ. ಮಾಧ್ಯಮದಲ್ಲಿಯೂ ಕೂಡ ಮಹಿಳೆಯರ ಸಂಖ್ಯೆ ಹೆಚ್ಚಾದರೆ ಸಹಜವಾಗಿಯೇ ಅವರ ಕಣ್ಣಿಗೆ ಮಹಿಳೆಯರು ಬೀಳುತ್ತಾರೆ. ಮಹಿಳೆಯರಿಗೆ ಅವಕಾಶಗಳು ಲಭಿಸುತ್ತವೆ.

ಧನ್ಯವಾದಗಳು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ದಮನಿತ ನೆಲೆಯಿಂದ ಮಹಿಳಾ ಪ್ರಾತಿನಿಧ್ಯ

**– ಕಾವೇರಿ ಎಚ್. ಎಂ.**

**ಯಾ**ವುದೇ ಒಂದು ಮೀಸಲು ಜಾಗಕ್ಕೆ ಅಭ್ಯರ್ಥಿಯೊಬ್ಬರು ಬೇಕಾಗಿದ್ದಾರೆ ಎಂದ ತಕ್ಷಣ ಎಲ್ಲಾ ಪಕ್ಷಗಳೂ ಹೇಳಿದ ಮಾತು ಕೇಳಿಕೊಂಡು ಬಿದ್ದಿರುವ ರಬ್ಬರ್‌ಸ್ಟಾಂಪ್‌ಗಳಿಗಾಗಿ ಹುಡುಕಾಟ ನಡೆಸುತ್ತಾರೆ. ಆದರೆ ನನ್ನಂಥವರು ಅವರಿಗೆ ಸಿಕ್ಕಾಗ ಮಾತ್ರ ಅವರ ಯೋಜನೆಗಳೆಲ್ಲ ತಲೆಕೆಳಗಾಗಿಬಿಡುತ್ತವೆ.

ರಾಜಕೀಯದಲ್ಲಿ ಕ್ಲಾಸ್, ಕಾಸ್ಟ್, ಜೆಂಡರ್ ಮತ್ತು ಗಾಡ್ ಫಾದರ್‌ಗಳು ಬಹಳ ಮುಖ್ಯ. ದಲಿತ ಮಹಿಳೆಯೊಬ್ಬರು ಚುನಾವಣೆಗೆ ನಿಲ್ಲುತ್ತಿದ್ದಾರೆಂದರೆ ಸಾಮಾನ್ಯವಾಗಿ ಜನರಲ್ಲಿ ಮೂಡುವ ಪ್ರಶ್ನೆ, ಇಲ್ಲಿಯವರೆಗೆ ನಿಂತವರನ್ನು ನೋಡಿಲ್ಲವಾ? ಇವರೇನು ನಿಂತು ಕಡಿದು ಗುಡ್ಡೆ ಹಾಕುವವರು? ಅಂತ. ಅಭಿವೃದ್ಧಿ, ಆಡಳಿತಗಳ ಬಗ್ಗೆ ಇವರಿಗೇನು ಗೊತ್ತು? ಎಂದು. ಕೊಡಗಿನಲ್ಲಿ ಒಬ್ಬ ಆದಿವಾಸಿ ಮಹಿಳೆ ಪಂಚಾಯತಿ ಚುನಾವಣೆಗೆ ನಿಂತಳು. ಆಕೆ ನಿಂತಿದ್ದು ತನ್ನ ತೋಟದ ಯಜಮಾನದ ನಿರ್ದೇಶನದಂತೆಯೇ. ಗೆದ್ದೂ ಬಂದಳು, ಅಧ್ಯಕ್ಷೆಯೂ ಆದಳು. ಆದರೆ ಆಕೆ ಮಾಡಬೇಕಾಗಿದ್ದು ಆ ಯಜಮಾನನ ಆಶಯ ಮತ್ತು ನಿರ್ದೇಶನಕ್ಕನುಗುಣವಾಗಿ ಮಾತ್ರ. ಮುಂದೆ ಇದು ಹೊರಬಿದ್ದಾಗ, ಪರಿಶಿಷ್ಟ ಪಂಗಡದ ಜನಕ್ಕೆ ಗೊತ್ತಾಗಿ ದೊಡ್ಡ ಗದ್ದಲವಾದಾಗ ಕೇಸು ಕೂಡ ಆಯಿತು. ಇದೀಗ ಆ ಮನುಷ್ಯ, ಆತನದೇನೂ ತಪ್ಪಿಲ್ಲವೆಂದು ಖುಲಾಸೆಯಾಗಿ ಹೊರಬಂದಿದ್ದಾನೆ. ಪರಿಶಿಷ್ಟ ಜನಾಂಗದ ಮಹಿಳೆಯೆಂದಾಕ್ಷಣ ಆಕೆಗೇನೂ ಗೊತ್ತಿಲ್ಲ ಎಂದುಕೊಂಡು ಅಂಥವರಿಗೇ ಟಿಕೆಟ್ ಕೊಡಲು ಪಕ್ಷಗಳು ಮುಂದಾಗುತ್ತವೆ.

ಎರಡನೆಯದು ಜಾತಿ. ಚುನಾವಣೆ ಮುಗಿದು ಅವರು ಸದಸ್ಯರು ಆದ ತಕ್ಷಣ ಎಲ್ಲಾ ಹಬ್ಬ ಹರಿದಿನಗಳಿಗೂ ಹಣಸಂಗ್ರಹಣೆಗೆ ಜನರು ಅವರ ಬಳಿಗೆ ಬರುತ್ತಾರೆ. ಗಣೇಶ ಹಬ್ಬದಲ್ಲಿ ಇದು ಶುರುವಾಗುತ್ತದೆ. ಮನೆತನಕ ಬಂದವರಿಗೆ ಕೊಟ್ಟು ಕಳಿಸಲು ಇವರ ಕೈಯಲ್ಲಿ ಹಣ ಇಲ್ಲ. ಹಣವೇ ಇಲ್ಲದವರು ಏನು ಮಾಡಿಯಾರು? ಕೆಲಸಕ್ಕೆ ಬಾರದವರೆಂದು ಜನರು ತಳ್ಳಿಹಾಕಿಬಿಡುತ್ತಾರೆ. ಕ್ಷೇತ್ರದಲ್ಲಿ ಸಿಗುವ ಗೌರವ ಕಡಿಮೆಯಾಗುತ್ತದೆ. ಇವರಿಗೆ ಸಿಗುವ ಗೌರವಧನವೇ ಕಡಿಮೆ. ಉದಾಹರಣೆಗೆ ಜಿಲ್ಲಾ ಪಂಚಾಯತಿ ಸದಸ್ಯರಿಗೆ ಸಿಗುವ ಎರಡೂವರೆ ಸಾವಿರದಲ್ಲಿ ಜಿಲ್ಲೆಯಲ್ಲೆಲ್ಲ ಓಡಾಡಬೇಕು, ಕರೆದಲ್ಲಿಗೆ ಹೋಗಬೇಕು. ಇದಕ್ಕೆ ಹಣ ಸಾಕಾಗದಾಗ ಬಹುತೇಕ ಪರಿಶಿಷ್ಟರು ಗುತ್ತಿಗೆದಾರರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಿಡುತ್ತಾರೆ. ಅವರು ಕೊಡುವ ಕಮೀಷನ್ನಿಗೆ ಕೈಚಾಚುತ್ತಾರೆ. ಭ್ರಷ್ಟಾಚಾರ ಹುಟ್ಟೋದೇ ಇಲ್ಲಿ. ಬಂದವರ ಸಮಸ್ಯೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೇಳಬೇಕು, ಪ್ರತಿಷ್ಠೆ ಉಳಿಸಿಕೊಳ್ಳಬೇಕು. ಆರೋಗ್ಯ ಸಮಸ್ಯೆಯೆಂದು ಕೇಳಿಕೊಂಡು ಬಂದವರಿಗೆ ಕೈಲಾದ ಸಹಾಯ ಮಾಡಬೇಕು. ಇದಕ್ಕೆಲ್ಲ ಹಣ ಬೇಕು. ಹಣ ಹೊಂದಿಸಲಿಕ್ಕಾಗಿ ಆಕೆ ಭ್ರಷ್ಟಾಚಾರಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡುಬಿಡುತ್ತಾಳೆ. ನಮ್ಮಲ್ಲಿ ಅನೇಕ ಒಳ್ಳೆಯ, ಜನಪ್ರಿಯ ಪ್ರತಿನಿಧಿಗಳು ಮಾಡಿದ್ದು, ಮಾಡುತ್ತಿರುವುದು ಇದನ್ನೇ.

**ಜಂಡರ್:** ಚುನಾವಣೆಯಲ್ಲಿ ಗೆದ್ದಾಕ್ಷಣ ಆಕೆಗೊಂದು ಪದವಿ ಕೊಟ್ಟುಬಿಡುತ್ತಾರೆ. ಆದರೆ ಅಧ್ಯಕ್ಷರಂಥ ಸ್ಥಾನದಲ್ಲಿ ಒಬ್ಬ ಮಹಿಳೆ ಕುಳಿತುಕೊಳ್ಳುವುದನ್ನು ಬಹುತೇಕ ಜನ ಸಹಿಸುವುದಿಲ್ಲ. ಗಂಡಸರ ಮಾತಿನಲ್ಲಿರುವಷ್ಟು ದರ್ಪ, ಅಹಂಕಾರ ಈಕೆಯ ಧ್ವನಿಯಲ್ಲಿ ಬಾರದು. ಆ ಕಾರಣಕ್ಕಾಗಿ ಯಾರೂ ಆಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ತನಗೂ ಗಂಡಿನಷ್ಟೇ ಸಾಮರ್ಥ್ಯವಿದೆ ಎಂದು ತೋರಿಸಿಕೊಡಲು ಆಕೆ ಅವನಿಗಿಂತ ಹತ್ತುಪಟ್ಟು ಹೆಚ್ಚು ಕೆಲಸ ಮಾಡಿ ತೋರಿಸಬೇಕಾಗುತ್ತದೆ.

ಕಡೆಯದಾಗಿ ಗಾಡ್ ಫಾದರ್: ರಾಜಕೀಯದಲ್ಲಿ ಒಬ್ಬ ಗಾಡ್ ಫಾದರ್ ಇಲ್ಲದೆಯೇ ಬದುಕುವುದು ಕಷ್ಟ. ಸಾಧ್ಯವೇ ಇಲ್ಲ. ಎಷ್ಟೇ ಸಾಮರ್ಥ್ಯ, ಬುದ್ಧಿವಂತಿಕೆ, ಮಾನವೀಯ ಕಳಕಳಿ, ಜನಪರ ಕಾಳಜಿ ಇದ್ದರೇನು? ಅದೊಂದೂ ಲೆಕ್ಕಕ್ಕಿಲ್ಲ. ಆದರೆ ಒಳ್ಳೆಯ ಶಿಕ್ಷಣವಿದ್ದರೆ ಮಾತ್ರ ಅದು ನಮ್ಮನ್ನು ರಾಜಕೀಯದಲ್ಲಿ ನಿಲ್ಲಿಸಬಹುದು. ಈ ಕಾನೂನುಗಳು, ನೀತಿ ನಿಯಮಗಳನ್ನು ನಾನೂ ಓದಬಲ್ಲೆ, ತಿಳಿದುಕೊಂಡು ಮಾತಾಡಬಲ್ಲೆ ಎಂದು ಅಧಿಕಾರಿಗೆ ಗೊತ್ತಾದಾಗ ಮಾತ್ರ ಆತ ನಮಗೆ ಗೌರವ ಕೊಡುತ್ತಾನೆ. ಅಕ್ಷರ ಕಲಿಯದವರೂ ಅಧಿಕಾರ, ಆಡಳಿತ ಮಾಡಿ ತೋರಿಸಿದ್ದಾರೆ, ಇಲ್ಲವೆಂತಲ್ಲ, ಆದರೆ ಶಿಕ್ಷಣ ನಮ್ಮನ್ನು ರಾಜಕೀಯದಲ್ಲಿ ಗಟ್ಟಿಯಾಗಿ ನಿಲ್ಲಿಸುತ್ತದೆ.

ಎಲ್ಲವೂ ಬರಿಯ ಋಣಾತ್ಮಕ ಅಂಶಗಳೇ ಅಂತಲ್ಲ. ಧನಾತ್ಮಕ ಅಂಶಗಳೂ ಇವೆ. ಹೆಣ್ಣುಮಕ್ಕಳು ಅವರಿಗೆ ತೊಂದರೆಯಾದಾಗ ಹೆಣ್ಣುಮಕ್ಕಳ ಬಳಿ ಹೇಳಿಕೊಳ್ಳುವಷ್ಟು ಸಲೀಸಾಗಿ ಗಂಡಸರ ಬಳಿ ಹೇಳಿಕೊಳ್ಳುತ್ತಾರೆ. ಆದರೆ ಪಂಚಾಯತಿಗಳಲ್ಲಿರಬಹುದು. ಶಾಸಕ, ಸಂಸದರಾಗಿ ಎಷ್ಟು ಹೆಣ್ಣುಮಕ್ಕಳು ಇದ್ದಾರೆ? ನಮ್ಮವರ ಸಂಖ್ಯೆ ಎಷ್ಟಿದೆ? ಇಂದು ಶಾಲಾ ಪಠ್ಯ ಪುಸ್ತಕ, ಕಲಿಸುವುದರಲ್ಲಿಂದ ಹಿಡಿದು ಎಲ್ಲಾ ಕಡೆಗೂ ಲಿಂಗ ತಾರತಮ್ಯ ತಾಂಡವವಾಡುತ್ತಿದೆ. ಇದನ್ನು ಬದಲಾಯಿಸಬೇಕೆಂದರೆ ನಾವು ಎಲ್ಲೆಡೆಯೂ ಇರಬೇಕು. ಶಾಸನ ಮಾಡುವಲ್ಲಿಯೂ ಇರಬೇಕು, ಕಾನೂನುಗಳನ್ನು ಜಾರಿಗೆ ತರುವಲ್ಲಿಯೂ ನಾವಿರಬೇಕು. ಆದರೆ ಪ್ರಗತಿಪರರು, ಮಾನವೀಯ ಮೌಲ್ಯ ಇರುವಂಥವರು ಸುತ್ತ ನೋಡಿದರೆ ನಮಗೂ ಗಂಡಸರೇ ಕಾಣುತ್ತಾರೆ ಹೊರತು ಹೆಂಗಸರ ಸಂಖ್ಯೆ ಅಲ್ಲಿಯೂ ಹೆಚ್ಚಿಲ್ಲ. ಇಂಥ ಹೆಣ್ಣುಮಕ್ಕಳನ್ನು ನಾವು ಚುನಾವಣೆಗೆ ನಿಲ್ಲಿಸುವಂತಾಗಬೇಕು. ಅವರು ಹೆಚ್ಚೆಚ್ಚು ಗೆದ್ದು ಬರುವಂತಾಗಬೇಕು. ಆಗಲೇ ಬದಲಾವಣೆ ಸಾಧ್ಯ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಮಹಿಳಾ ರಾಜಕೀಯ ಪ್ರಜ್ಞೆ ಮತ್ತು ಪ್ರಜಾತಂತ್ರ

– ಸಿರಿ ಗೌರಿ

**ಈ** ಎರಡೂ ಶಬ್ದಗಳೆಂದರೆ ಏನು ಎಂಬುದು ನಾವೀಗ ಮೂಲಭೂತವಾಗಿ ಹಾಕಿಕೊಳ್ಳಬೇಕಾದ ಪ್ರಶ್ನೆಯಾಗಿದೆ. ಮಹಿಳಾ ರಾಜ್ಕೀಯ ಪ್ರಜ್ಞೆಯೊಂದೇ ಅಲ್ಲ, ಪ್ರಜಾತಂತ್ರವೆಂದರೇ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸುವಂಥಾದ್ದು, ಆರೋಗ್ಯಕರ ವಾದದ್ದು ಮತ್ತು ಸಮಾಜವಾದವನ್ನು ಮುಂದಿಡುವಂಥಾದ್ದು, ಸಮಾನತೆಯೆಡೆಗೆ ಕೊಂಡೊಯ್ಯುವಂಥಾದ್ದು. ಆದರೆ ಹೆಣ್ಣುಮಕ್ಕಳಲ್ಲಿ ಪ್ರಜಾತಂತ್ರವನ್ನು ಬೆಳೆಸುವುದೆಂದರೆ.. ಹುಟ್ಟಿದಾಗಿನಿಂದ ನೀನು ಹೀಗೇ ಇರಬೇಕು, ಈ ಮಗ್ಗುಲಲ್ಲೇ ಮಲಗಬೇಕು, ಆ ಮಗ್ಗುಲಲ್ಲೇ ಏಳಬೇಕು ಎನ್ನುತ್ತ ಒಂದೊಂದು ನಡೆಯನ್ನು ತಿದ್ದುತ್ತ ಹೀಗೆಯೇ ಇರಬೇಕೆಂದು ರೂಪುಗೊಂಡವಳು ಅವಳು. ಪುರುಷಕೇಂದ್ರಿತ ಸಮಾಜದಲ್ಲಿ ಅಡಿಯಾಳಾಗಿ ಇರುವಂತೆಯೇ ಅವಳನ್ನು ತಿದ್ದಿ ತೀಡಲಾಗಿರುತ್ತದೆ. ಹೀಗಿರುವಾಗ ಪ್ರಜಾ ತಾಂತ್ರಿಕ ಮೌಲ್ಯಗಳತ್ತ ಬರಬೇಕೆಂದರೆ ಬಲವಂತವಾಗಿ ನಮ್ಮನ್ನೆಳೆದುಕೊಂಡು ಬಂದು ಈ ವಿಚಾರಧಾರೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

ಪ್ರಜಾತಂತ್ರವನ್ನು ಪ್ರಾತಿನಿಧ್ಯದ ಮೂಲಕ ಬೆಳೆಸಬೇಕೇ ಅಥವಾ ಇಡೀ ಸಮಾಜದಲ್ಲೇ ಆಮೂಲಾಗ್ರವಾದ ಬದಲಾವಣೆಯನ್ನು ತರಲು ಪ್ರಯತ್ನಿಸಬೇಕೇ ಎಂಬುದು ಪ್ರಶ್ನೆ. ಪ್ರಜಾತಂತ್ರವೆಂದರೆ ಅದು ಒಂದು ಮೌಲ್ಯವೂ ಹೌದು, ಆಡಳಿತ ಪದ್ಧತಿಯೂ ಹೌದು. ಪ್ರಜಾತಂತ್ರವೆಂದಾಗ ನೆನಪಿಗೆ ಬರೋರು ಡಾ. ಬಾಬಾಸಾಹೇಬ ಅಂಬೇಡ್ಕರ್. ಮಹಿಳಾ ಸಮಾನತೆ ಮತ್ತು ಪ್ರಜಾತಂತ್ರ ಎರಡನ್ನೂ ಅವರನ್ನು ಬಿಟ್ಟು ಮಾತಾಡಲಿಕ್ಕೇ ಸಾಧ್ಯವಿಲ್ಲ. ಹಿಂದೂ ಕೋಡ್ ಬಿಲ್‌ನಲ್ಲಿ ಏಳು ವಿಚಾರಗಳ ಮೂಲಕ ಅವರು ಪ್ರಜಾತಂತ್ರ ಮತ್ತು ಮಹಿಳಾ ಸಮಾನತೆಯ ವಿಚಾರವನ್ನು ವೈಜ್ಞಾನಿಕವಾಗಿ ಮಂಡಿಸುತ್ತಾರೆ. ಮೊದಲನೆಯದು ವಿವಾಹ ಪದ್ಧತಿ. ವಿವಾಹವೆಂಬುದು ಕುಟುಂಬ ವ್ಯವಸ್ಥೆಯ ಮೂಲಾಧಾರವಾಗಿದ್ದು ಮಹಿಳೆಯ ಲೈಂಗಿಕತೆಯನ್ನು ನಿಯಂತ್ರಿಸುವ ಮೂಲಕ ಅವಳ ಮೇಲೆ ನಿಯಂತ್ರಣವನ್ನು ಕುಟುಂಬದೊಳಗೆ ಹೇರಲಾಗುತ್ತದೆ. ಎರಡನೆಯದು ಧರ್ಮ. ಧರ್ಮದ ಮೂಲಕ ಕೂಡ ಮಹಿಳೆಯ ಮೇಲೆ ನಿಯಂತ್ರಣವನ್ನು ಹೇರಲಾಗಿದೆ. ಇವೆರಡೂ ವಿಚಾರಗಳನ್ನು ಚರ್ಚೆಗೆ ತರುವುದರ ಮೂಲಕ, ವೈಜ್ಞಾನಿಕವಾಗಿ ವಿಶ್ಲೇಷಿಸುವುದರ ಮೂಲಕ ನಮಗೆ ಅಂಬೇಡ್ಕರರು ಆದರ್ಶಪ್ರಾಯರಾಗಿ ನಿಲ್ಲುತ್ತಾರೆ. ಮೂರನೆಯದ್ದು ಜಂಡರ್ ಅನ್ನುವ ವಿಚಾರ. ಅದು ಶಾಸಕಾಂಗ ಇರಬಹುದು ಅಥವಾ ಕಾರ್ಯಾಂಗ ಇರಬಹುದು ಕುಟುಂಬ ವ್ಯವಸ್ಥೆಯಲ್ಲಿರುವಂತೆಯೇ ಮಹಿಳೆಯನ್ನು ನಿಯಂತ್ರಿಸುವ ಕ್ರಮವನ್ನು ನಾವು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ನೋಡುತ್ತ ಬಂದಿದ್ದೇವೆ. ಜೆಂಡರ್ ಎನ್ನುವಂಥಾದ್ದು ಎಲ್ಲರನ್ನೂ, ಎಲ್ಲವನ್ನೂ ಆಳುತ್ತಿರುತ್ತದೆ.

ಇವೆಲ್ಲವನ್ನೂ ನಾವು ಮಹಿಳಾ ಚಳುವಳಿಯಲ್ಲಿರುವವರು ಅಥವಾ ಮಹಿಳಾ ಮನಸ್ಸುಗಳಿರುವ ಪುರುಷರನ್ನೊಳಗೊಂಡು ಮಹಿಳಾ ಚಳುವಳಿಯ ಮೂಲಕ ಇರಬಹುದು, ಸಾಮಾಜಿಕ ಚಳುವಳಿಯ ಮೂಲಕ ಇರಬಹುದು ಒಂದುಗೂಡಿ ಕೆಲಸ ಮಾಡಿ ಬದಲಾಯಿಸುವ ಅಗತ್ಯವಿದೆ. ಪ್ರಜಾತಂತ್ರದ ಮೂಲಕವೇ ಸರಿಯಾದ ಪ್ರಾತಿನಿಧ್ಯವನ್ನು ತರುವ ಕಾರ್ಯತಂತ್ರವನ್ನು ನಾವಿಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

ಆದರೆ ಅಧಿಕಾರ ಸಂಬಂಧದಲ್ಲಿ ಪ್ರಶ್ನೆ ಮಾಡುವ ಪ್ರಜ್ಞೆಯನ್ನು ಬೆಳೆಸಿಕೊಳ್ಳಲಿಲ್ಲವೆಂದರೆ ಪ್ರಜಾತಂತ್ರವೂ ನಿಷ್ಪ್ರಯೋಜಕವಾಗುತ್ತದೆ. ಈಗಾಗಲೇ ಹೆಣ್ಣುಮಕ್ಕಳೆಂದರೆ ಅವರ ಬುದ್ಧಿ ಮೊಳಕಾಲ ಕೆಳಗೆ, ಅವರನ್ನು ಗೊಂಬೆಗಳಂತೆ ಆಟವಾಡಿಸಬಹುದು ಎಂಬ ನಂಬಿಕೆ ಗಟ್ಟಿಯಾಗಿ ಕುಳಿತಿರುವಾಗ ಅದನ್ನು ಮೀರಿ ನಿಲ್ಲುವಂಥ ಪ್ರಜ್ಞೆಯನ್ನು ಹೆಣ್ಣುಮಕ್ಕಳಲ್ಲಿ ಬೆಳೆಸುವ ದಿಕ್ಕಿನಲ್ಲಿ ನಾವು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಬೇಕಾಗಿದೆ.

ಮತ್ತೊಮ್ಮೆ ಡಾ. ಅಂಬೇಡ್ಕರರನ್ನು ನೆನೆಸುತ್ತೇನೆ. ಅವರ ವಿಚಾರಗಳಿಗೆ ಮರಳಿ ಹೋಗಬೇಕೆಂದರೆ ಅವರು ಮಹಿಳೆಯರ ಆಸ್ತಿ ಹಕ್ಕು ಮತ್ತು ವಿಚ್ಛೇದನದ ಹಕ್ಕುಗಳ ಬಗ್ಗೆ ಮಾತಾಡಿದರು. ಸಮಾಜವನ್ನು ಪ್ರಜಾತಾಂತ್ರಿಕವಾಗಿ ಬೆಳೆಸಬೇಕಾದರೆ ಇವೆರಡೂ ಅತಿ ಅವಶ್ಯ ಎಂದು ಅವರು ಹೇಳಿದರು. ಆಗಿನ ಕಾಲದಲ್ಲಿ ಅಂಬೇಡ್ಕರರ ಈ ವಿಚಾರಕ್ಕೆ ಅದೆಷ್ಟು ವಿರೋಧ ಬಂತೆಂದು ಎಲ್ಲರೂ ಬಲ್ಲೆವು. ಈಗಿನ ಕಾಲದಲ್ಲಿಯೂ ಕೂಡ ಇದನ್ನು ಅರ್ಥ ಮಾಡಿಸಲು, ಸ್ವೀಕರಿಸುವಂತೆ ಮಾಡಲು ದೊಡ್ಡ ಹೋರಾಟವನ್ನೇ ಮಾಡಬೇಕಾಗಿದೆ.

ಅಧಿಕಾರವನ್ನು ಪ್ರಶ್ನೆ ಮಾಡುವ ಕೆಲಸವನ್ನೇ ಮಹಿಳಾ ಚಳುವಳಿ ಮಾಡುತ್ತ ಬಂದಿದೆ. ಇಂದಿನ ಸಂಧರ್ಭದಲ್ಲಿ ಅದನ್ನು ಇನ್ನೂ ಗಟ್ಟಿಯಾಗಿ ಮಾಡಬೇಕಾದ ಅವಶ್ಯಕತೆ ಬಹಳವಿದೆ.

ನಮ್ಮ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಲ್ಲಿ ಇರುವಷ್ಟು ಪ್ರಜಾತಂತ್ರವನ್ನು ಇನ್ನೆಲ್ಲೂ ಕಾಣಲಾಗದು. ಮಹಿಳೆಯರಲ್ಲಿ ಹುಟ್ಟುತ್ತಲೇ ನಾಯಕತ್ವದ ಗುಣ ಬಂದಿರುವುದಿಲ್ಲ. ಅದನ್ನು ಬೆಳೆಸಬೇಕು ಬಹಳ ಪ್ರಯತ್ನ ಮಾಡಿ. ಈ ಕಾರಣಕ್ಕಾಗಿಯೇ ಪುರುಷರ ಯಾವುದೇ ಸಂಘಟನೆಗಿಂತ ನೋಡಿ, ಇಲ್ಲಿ ಪ್ರಜಾತಂತ್ರ ಹೇರಳವಾಗಿದೆ. ಇದನ್ನು ಬೆಳೆಸಿಕೊಂಡು ಬಂದಿರುವಂಥ ರೀತಿಯೇ ಅಂಥಾದ್ದು. ಮಂಗಳೂರಿನಲ್ಲಿ ಸರಸ್ವತಿಯವರಿರಬಹುದು, ಅನುಪಮಾ ಇರಬಹುದು ವಾಣಿ ಇರಬಹುದು, ಇವರೆಲ್ಲ ಈ ಸಂಘಟನೆಯನ್ನು ಒಯ್ಯುತ್ತಿರುವ ರೀತಿ ಅಂಥಾದ್ದಿದೆ.

ರಾಜಕೀಯ ಪ್ರಜ್ಞೆಯನ್ನು ಮಹಿಳೆಯೊಬ್ಬಳು ಬೆಳೆಸಿಕೊಂಡಳೆಂದರೆ ಅಧಿಕಾರವನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪ್ರಶ್ನಿಸುವ ಆ ಗುಣ ಅವಳ ಕುಟುಂಬಕ್ಕೊಂದೇ ಸೀಮಿತವಾಗಿರದೇ ಸುತ್ತಲಿನ ಪರಿಸರಕ್ಕೂ, ಮುಂದಿನ ಪೀಳಿಗೆಗೂ ವಿಸ್ತರಿಸುತ್ತಿರುತ್ತದೆ.

ಇಲ್ಲಿ ಎರಡು ಉದಾಹರಣೆಗಳನ್ನು ನಾವು ನೋಡಬಹುದು: ಒಂದೆಂದರೆ ಮದ್ಯ ನಿಷೇಧ ಆಂದೋಲನದಲ್ಲಿ ಎದ್ದು ನಿಂತಿರುವ ಗ್ರಾಮೀಣ ಮಹಿಳೆಯರು. ಗಟ್ಟಿಗಿತ್ತಿ ಮಹಿಳೆಯರು ಅವರು. ಚಿತ್ರದುರ್ಗದಿಂದ 210 ಕಿಲೋಮೀಟರು 12 ದಿನಗಳ ಕಾಲ ನಡೆಯುವುದೆಂದರೆ ಸಾಮಾನ್ಯ ಮಾತಲ್ಲ. ಅಷ್ಟು ಮಾಡಿದಾಗಲೂ ಅವರಿಗೇನು ಸಿಕ್ಕಿತು? ನಿರಾಶೆಯೇ. ನಿರಾಶರಾಗಿ ಹಿಂತಿರುಗಿ ಬಂದು ಅವರೇನೂ ಕೈಕಟ್ಟಿ ಕುಳಿತಿಲ್ಲ. ತಮ್ಮ ತಮ್ಮ ಗ್ರಾಮಗಳಲ್ಲಿ, ಓಣಿಗಳಲ್ಲಿ, ಮನೆಗಳಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ಇದು ನಿಜವಾದ ರಾಜಕೀಯ ಪ್ರಜ್ಞೆ.

ಮಹಿಳೆಯು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡಾಗ ಸುತ್ತಲಿನ ರಾಜಕೀಯವನ್ನು ಪ್ರಶ್ನೆ ಮಾಡತೊಡಗಿದಾಗ ಸುತ್ತಲಿನ ಸಮಾಜ ಸುಮ್ಮನೆ ಕುಳಿತು ನೋಡುವುದಿಲ್ಲ. ಬದಲಿಗೆ ತಿರುಗಿ ಬೀಳುತ್ತದೆ. ದೊಡ್ಡ ಪೆಟ್ಟನ್ನು ಕೊಡುತ್ತದೆ. ಗೌರಿ ಲಂಕೇಶ್ ವಿಷಯದಲ್ಲಿ ನಾವಿದನ್ನು ನೋಡಿದ್ದೇವೆ. ಇನ್ನೂ ಒಂದು ಉದಾಹರಣೆ ಕೊಡಬೇಕೆಂದರೆ ಬೆಂಗಳೂರಿನ ಸ್ಲಂ ಪ್ರದೇಶವೊಂದರಲ್ಲಿ ವಾಸಿಸುತ್ತಿದ್ದ ದಲಿತ ಮಹಿಳೆ ಧರಣಿ ಎಂಬಾಕೆಯದು. ಈ ದಲಿತ ಹೆಣ್ಮಗಳು ಶಿಕ್ಷಣ ಪಡೆದಳು. ವಕೀಲೆಯಾದಳು. ರಾಜಕೀಯ ಪ್ರಜ್ಞೆ ಬೆಳೆಸಿಕೊಂಡಳು. ಇವಳು ತನ್ನ ವಯಸ್ಸಾದ ತಾಯಿಯೊಂದಿಗೆ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಳು. ಪಕ್ಕದ ಸೈಟಿನವನು ಒಬ್ಬ ಕಾರ್ಪೋರೇಟರ್. ಇವರ ಮನೆಯನ್ನೂ ನುಂಗಿಹಾಕುವ ಕನಸು ಕಾಣುತ್ತಿದ್ದಾತ ಈಕೆಗೆ ಅದೆಷ್ಟು ನಮೂನೆಯ ಕಿರುಕುಳಗಳನ್ನು–ಲೈಂಗಿಕ ಕಿರುಕುಳವನ್ನೂ ಕೊಟ್ಟ ಎಂದರೆ ಲೆಕ್ಕವಿಲ್ಲ. ಆತನ ಕಿರುಕುಳದ ಬಗ್ಗೆ ಧರಣಿ 21 ಆಯೋಗಗಳಿಗೆ ಪತ್ರ ಬರೆದು, ದೂರು ದಾಖಲಿಸಿದ್ದಳು. ಒಂದೂ ಆಯೋಗ ಆಕೆಯ ಸಮಸ್ಯೆಯನ್ನು ವಿಚಾರಿಸಲು ಬರಲಿಲ್ಲ. ನ್ಯಾಯಾಧೀಶರಲ್ಲಿ ಹೋಗಿ ಮೊರೆಯಿಟ್ಟರೂ ಆ ನ್ಯಾಯಾಧೀಶರು ಆಕೆಗೆ ಭರವಸೆ ಕೊಡಲಿಲ್ಲ. ಸಹಾಯಕ್ಕೆ ಬರಲಿಲ್ಲ. ಕಡೆಗೆ ಆತನ ಕಿರುಕುಳ ತಾಳಲಾರದೇ ಸನಿಹವೇ ಪೋಲೀಸ್ ಇದ್ದೂ, 108 ಸೌಲಭ್ಯವಿದ್ದೂ ಒಂದೂ ಸಹಾಯ ಸಿಗದೆ ಆತ್ಮಹತ್ಯೆಗೆ ಶರಣಾದಳು. ಇದನ್ನು ನೋಡಿದಾಗ ಇದೊಂದು ಆತ್ಮಹತ್ಯೆ ಎಂದೆನಿಸುವುದೇ ಇಲ್ಲ, ಇದು ಒಂದು ವ್ಯವಸ್ಥಿತ ಕೊಲೆ. ಪ್ರಶ್ನೆಮಾಡುವುದನ್ನು ಬೆಳೆಸಿಕೊಂಡ ಮಹಿಳೆಯನ್ನು ಮಟ್ಟ ಹಾಕುವ ವ್ಯವಸ್ಥಿತ ಸಂಚೆಂಬುದು ಬಹಳ ಸ್ಪಷ್ಟವಾಗುತ್ತದೆ. ಈಗ ತನಗೆ ನ್ಯಾಯದಾನ ಸಿಕ್ಕರೆ ಆ ಕಾಗದವನ್ನು ಹಾಕಿ ಅರೀಲಾ ಎಂದು ಕೇಳುತ್ತಾಳೆ ಆ ವಯಸ್ಸಾದ ತಾಯಿ.

ಇಂಥ ಪ್ರತಿರೋಧವನ್ನು, ದ್ವೇಷವನ್ನು, ಎದುರಿಸುತ್ತಾ ಸಮಾನತೆ ತರುವುದಕ್ಕಾಗಿ ಪ್ರಜಾತಂತ್ರವನ್ನು ವಿಸ್ತರಿಸುತ್ತ ಬೆಳೆಸುತ್ತ ಹೋಗಬೇಕಾದ ಕೆಲಸ ನಮ್ಮದಿದೆ.

ಧನ್ಯವಾದಗಳು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಸಾಮೂಹಿಕ ನಾಯಕತ್ವದತ್ತ ಮಹಿಳಾ ರಾಜಕಾರಣ

**– ಸ್ವರ್ಣ ಭಟ್**

ರಾಜಕೀಯ ಮತ್ತು ಮಹಿಳಾ ನಾಯಕತ್ವ ಅಂದಕೂಡಲೇ ಪಾಲಿಟ್‌ಬ್ಯುರೋ ರಾಜಕೀಯದ ಬಗ್ಗೆ ಯೋಚಿಸುತ್ತೇವೆ ನಾವು. ಆದರೆ ಸಾಮೂಹಿಕ ಮಹಿಳಾ ರಾಜಕಾರಣದಲ್ಲಿ ಮುಂದಾಳತ್ವ ಏಳುವುದೇ ಬೇರೆ ರೀತಿಯಲ್ಲಿ. ಇದೊಂದು ಕಾರ್ಯಕಾರಿಣಿ ಅಲ್ಲ. ಹೆಣ್ಣುಮಕ್ಕಳು ಒಬ್ಬೊಬ್ಬರಾಗಿ ಜೊತೆ ಸೇರಿ ಒಟ್ಟಿಗೆ ಬಂದು ರೂಪುಗೊಳ್ಳುವ ನಾಯಕತ್ವ ಇದು. ಇಲ್ಲಿ ಯಾರೊಬ್ಬರು ನಾಯಕಿಯರಲ್ಲ. ಒಟ್ಟಿಗೆ ಬರುತ್ತಾರೆ, ಸುತ್ತ ನೋಡುತ್ತಾರೆ. ತಮ್ಮ ಸಮಸ್ಯೆ, ಸಂಸಾರ ಕೋಟಲೆಯೊಳಗೆ ಮುಳುಗಿ ಹೋಗಿರುವ ಹೆಣ್ಣುಮಕ್ಕಳಿವರು. ಹೊರಗಿನ ಜಗತ್ತು ಗೊತ್ತಿಲ್ಲ ಇವರಿಗೆ. ಇನ್ನು ಒಂದು ಕೊರತೆ ಅನ್ನೋಣವೇ? ಕೊರತೆ ಅನ್ನುವುದಕ್ಕಿಂತಲೂ ವಾರೆ ಕೋರೆ ಅನ್ನೋಣ. ಮಾಹಿತಿಯ ಕೊರತೆಯ ವಾರೆಕೋರೆಗಳನ್ನು ಸರಿಪಡಿಸಿ, ತಿದ್ದಿ ತೀಡಿ ಒಂದು ಸರಿಯಾದ ರೂಪ ಕೊಟ್ಟಾಗ ಅಲ್ಲಿ ಸಾಮೂಹಿಕ ನಾಯಕತ್ವ ಬೆಳೆಯುತ್ತದೆ. ಬೆಳಗುತ್ತದೆ. ಅತ್ಯಂತ ತಳಮಟ್ಟದ ಧ್ವನಿಗಳಿವು. ಇವರನ್ನು ನಾವು ಸಂಘಟಿಸಿದ್ದು ಗ್ರಾಮ ಮಟ್ಟದಲ್ಲಿ. ಸ್ಥಳೀಯ ಸರಕಾರವಾದ ಪಂಚಾಯತಿಯ ಮಟ್ಟದಲ್ಲಿ. ಇವರು ತಮ್ಮ ಹಕ್ಕುಗಳನ್ನು ಪಡೆಯುವುದನ್ನು ಕಲಿತಿದ್ದು ಪಂಚಾಯತಿ ಮಟ್ಟದಲ್ಲಿ. ಇಂದು ರಾಜ್ಯ ಮಟ್ಟದ ಸುದ್ದಿ ಮಾಡಿರುವ ಮದ್ಯ ನಿಷೇಧ ಆಂದೋಲನದಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ರಾಜಕೀಯ ಪಜ್ಞೆ ತನ್ನಿಂದ ತಾನೇ ಬರಲಿಲ್ಲ. ಯಾರೂ ಇವರನ್ನು ಕಟ್ಟೆ ಹತ್ತಿಸಿಲ್ಲ. ರಾಜಕೀಯ ತರಬೇತಿಗಳನ್ನು ಕೊಡಲಿಲ್ಲ. ಆದರವರು ಅದನ್ನು ಸ್ವಲ್ಪ ಸ್ವಲ್ಪವಾಗಿಯೇ ಕಲಿಯುತ್ತ ಹೋದರು.

ನಾವು ಇವರನ್ನು ಸಂಘಟಿಸಲು ಶುರುಮಾಡಿದ್ದು ನರೇಗಾ ಅಥವಾ ಉದ್ಯೋಗ ಖಾತರಿ ಕಾನೂನಿನ ಮೂಲಕ. ಕಾನೂನು ಪಂಚಾಯತಿಯ ಜನರಿಗೆ ಗ್ರಾಮ ಮಟ್ಟದಲ್ಲಿ ಕೆಲಸ ಕೊಡುತ್ತದೆ. ಕೂಲಿಯನ್ನೂ ಕೊಡುತ್ತದೆ. ಆದರೆ ಆ ಕೆಲಸ ಮತ್ತು ಕೂಲಿಯನ್ನು ಯಾರೋ ಬಾಚಿಕೊಂಡು ಹೋಗುತ್ತಿರುವುದನ್ನು ಸಂಘಟನೆಯ ಮೂಲಕ ಅವರು ಕಂಡುಕೊಂಡರು. ಪಂಚಾಯತಿಯ ಒಳಗೆ ಹೊಕ್ಕರು. ಅಲ್ಲಿಯವರೆಗೆ ಎಂದೆಂದೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪಂಚಾಯತಿಯ ಮುಂದೆ ಸುಳಿದಾಡದ ಹೆಣ್ಣುಮಕ್ಕಳು, ತಮಗೆ ಒಂದು ಮನೆಯೋ, ನಳವೋ ಬೇಕೆಂದಾಗ ಅಧ್ಯಕ್ಷರ ಬಾಗಿಲು ತಟ್ಟುತ್ತಿದ್ದವರು ಅಧ್ಯಕ್ಷರ ಪಾತ್ರವೇನು, ಪಂಚಾಯತಿಯೊಳಗಿರುವ ಅಧಿಕಾರಿಗಳ ಪಾತ್ರವೇನು ಎಂಬುದನ್ನು ಅರಿತರು. ಸರಿಯಾಗಿ ತಮ್ಮ ಹಕ್ಕು ಚಲಾಯಿಸಿ ತಮ್ಮದನ್ನು ತಾವು ಪಡೆದುಕೊಂಡರು. ಅದು ರಾಜಕೀಯದಲ್ಲಿ ಅವರಿಗೆ ಮೊದಲ ಪಾಠ. ಮುಂದೆ ಚುನಾವಣೆಗೂ ನಿಂತರು ಈ ಮಹಿಳೆಯರು. ಆದರೆ ಕ್ಲಾಸ್ ಮತ್ತು ಕಾಸ್ಟ್‌ಗಳಿಂದ ಪೆಟ್ಟು ತಿಂದರು. ಚುನಾವಣಾ ರಾಜಕೀಯಕ್ಕೆ ಅವರಿನ್ನೂ ಪಳಗಿರಲಿಲ್ಲ. ಅವರಿಗೆ ರಾಜಕಾರಣದ ಪಟ್ಟುಗಳನ್ನು ಯಾರೂ ಕಲಿಸಿರಲಿಲ್ಲ. ಇದೀಗ ಪ್ರಾಥಮಿಕ ಹಂತದ ಪಾಠಗಳನ್ನು ಒಂದೊಂದೇ ಕಲಿಯುತ್ತಿರುವ ಇವರು ಇನ್ನಷ್ಟು ರಾಜಕೀಯ ಪಟ್ಟುಗಳನ್ನು ಕಲಿತೇ ಮುಂದಕ್ಕೆ ಹೋಗಬೇಕಾಗಿತ್ತು ಎಂದು ನಮಗೆಲ್ಲ ಅರ್ಥವಾಯಿತು. ಈ ಮಹಿಳೆಯರಿಗೆ ತಮ್ಮ ಗ್ರಾಮದ ಮಟ್ಟದಲ್ಲಿಯೇ ಕೆಲಸ ಸಿಕ್ಕಿತು ನಿಜ, ಆದರೆ ಜೀವನದಲ್ಲಿ ಬದಲಾವಣೆ ಆಗಲಿಲ್ಲ. ಬದಲಾವಣೆ ಹೇಗೆ ಬರುತ್ತದೆ? ಏನು ಮಾಡಬೇಕು ಎಂದು ನಾವು ಅವರೊಂದಿಗೆ ಕೂತು ಮಾತುಕತೆ ಮಾಡಿದೆವು. ಅವರಂದು ಹೇಳಿದ ಮಾತು ನಮಗೆಲ್ಲ ಶಾಕ್ ಕೊಟ್ಟಿತು. ಅವರನ್ನು ಕಾಡುತ್ತಿದ್ದುದು ಕುಡಿತ. ಮನೆಮನೆಗಳಲ್ಲಿ, ಓಣಿಯಲ್ಲಿನ ಕುಡಿತ ಈ ಹೆಣ್ಣುಮಕ್ಕಳ ತಲೆ ತಿನ್ನುತ್ತಿತ್ತು. ಕುಡಿತ ಈ ಹೆಣ್ಣುಮಕ್ಕಳ ಜೀವನದಲ್ಲಿ ಯಾವುದೇ ಬದಲಾವಣೆ ಬಾರದಂತೆ ತಡೆಹಿಡಿದಿತ್ತು. ಇವರಿಗೆ ಬೇಕಾಗಿದ್ದನ್ನು ಪಡೆದುಕೊಳ್ಳುವುದಕ್ಕೆ ಅಡ್ಡವಾಗಿ ಕುಡಿತ ನಿಂತಿರುವುದನ್ನವರು ಕಂಡುಕೊಂಡಿದ್ದರು.

ಅವರಿಗೆ ಗೊತ್ತಿತ್ತು ಚುನಾವಣೆ ನಡೆಯುವುದೇ ಮದ್ಯದ ಆಧಾರದ ಮೇಲೆ ಎಂದು. ಚುನಾವಣೆಗೆ ಹಣ ಕೊಡುವವರೇ ಮದ್ಯದ ದೊರೆಗಳು, ಚುನಾವಣೆಯಲ್ಲಿ ಹಂಚಿಕೆಯಾಗುವ ಮದ್ಯವೇ ಮತಗಳ ನಿರ್ದೇಶಕ ಎಂಬುದು ಈ ಮಹಿಳೆಯರಿಗೆ ಗೊತ್ತಾಗಿತ್ತು. ಇದು ರಾಜಕೀಯ ಪ್ರಜ್ಞೆ, ತಳಮಟ್ಟದ ಮಹಿಳೆಯರ ರಾಜಕೀಯ ಪ್ರಜ್ಞೆ, ತಮಗೆ ಬೇಕಾಗಿದ್ದನ್ನು ಪಡೆಯುವುದಕ್ಕೆ ಅಡ್ಡಲಾಗಿ ನಿಂತಿರುವ ಈ ಮದ್ಯ ಮಾರಾಟವನ್ನು ತಡೆದುಹಾಕುವುದೇ ತಾವು ಮಾಡಬೇಕಾದ ದೊಡ್ಡ ಕೆಲಸ ಎಂದು ಈ ಮಹಿಳೆಯರೆಲ್ಲರೂ ನಿರ್ಧರಿಸಿದರು. ಇದು ಮಹಿಳೆಯರ–ತಳಮಟ್ಟದ ಮಹಿಳೆಯರ ನಿರ್ಧಾರವಾಗಿತ್ತು. ಕಾರ್ಯಕಾರಣಿಯಲ್ಲ, ತಳಮಟ್ಟದ ಮಹಿಳೆಯರೇ ನಿರ್ಧಾರ ಮಾಡಿದ್ದು.

ಅಂದಿನಿಂದ ಮಹಿಳೆಯರ ಸಾಮೂಹಿಕ ನೇತೃತ್ವದಲ್ಲಿ ಆರಂಭವಾದ ಮದ್ಯ ನಿಷೇಧ ಚಳುವಳಿ ಜನೆವರಿಯಲ್ಲಿ ಚಿತ್ರದುರ್ಗದಿಂದ ಬೆಂಗಳೂರಿನವರೆಗೆ 210 ಕಿಲೋಮೀಟರ್ ದೂರ 3000 ಮಹಿಳೆಯರು ಕಾಲ್ನಡಿಗೆಯಲ್ಲಿ ನಡೆಸಿತು. ಆ ಜಾಥಾದಲ್ಲಿ ಯಾರೊಬ್ಬರ ಮುಂದಾಳತ್ವವಿರಲಿಲ್ಲ. ಬದಲಿಗೆ ಸಾಮೂಹಿಕ ನಾಯಕತ್ವವಿತ್ತು. ಇಡೀ ರಾಜ್ಯದ ಅಷ್ಟೇ ಏಕೆ, ರಾಷ್ಟ್ರದ ಗಮನ ಸೆಳೆದ ಈ ಕಾಲ್ನಡಿಗೆ ಜಾಥಾ ಅವರ ಬೇಡಿಕೆ ಈಡೇರಿಸಿಕೊಳ್ಳುವಲ್ಲಿ ಸಫಲವಾಗಲಿಲ್ಲ. ಸರಕಾರ ನಮ್ಮ ಬೇಡಿಕೆಯನ್ನು ಒಪ್ಪಲಿಲ್ಲ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮುಂದೇನು ಮಾಡುವುದೆಂದು ತೋಚದೆ ನಾವು ಕುಳಿತಿದ್ದಾಗ ಈ ಮಹಿಳೆಯರು ಚುನಾವಣಾ ಬಹಿಷ್ಕಾರ ಮಾಡುತ್ತೇವೆಂದು ತೀರ್ಮಾನ ತೆಗೆದುಕೊಂಡರು. ನೋಟಾ ಹಾಕುವುದರ ಮೂಲಕ ಸಾಂಕೇತಿಕವಾಗಿ ನಮ್ಮ ಸರಕಾರಕ್ಕೆ ನಮ್ಮ ಶಕ್ತಿಯನ್ನು ತೋರಿಸುವುದು ಎಂದು ನಿರ್ಧರಿಸಿದರು. ಇಲ್ಲಿ ಇದು ಕೂಡ ಯಾರೊಬ್ಬರ ನಿರ್ಧಾರವಾಗಿರಲಿಲ್ಲ, ಇಡೀ ಮಹಿಳಾ ಸಮೂಹ ಒಟ್ಟಿಗೆ ಸೇರಿ ತೀರ್ಮಾನ ಮಾಡಿತು. ಇದು ಸಾಮೂಹಿಕ ನಾಯಕತ್ವದ ಮಹಿಳಾ ರಾಜಕಾರಣ.

*(ಭಾಷಣಗಳ ಬರಹ ರೂಪ: **ಶಾರದಾ ಗೋಪಾಲ**)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಮಹಿಳೆ ಮತ್ತು ರಾಜಕೀಯ ಪ್ರಜ್ಞೆ

– ಎನ್. ಗಾಯತ್ರಿ

ರಾಜಕೀಯ ಮತ್ತು ಅಧಿಕಾರ ಇವೆರಡೂ ಪುರುಷರ ಲೋಕವೇ ಆಗಿವೆ. 'ಅಧಿಕಾರ' ಎನ್ನುವ ಪರಿಕಲ್ಪನೆಯೇ ಪುರುಷ ಪ್ರಧಾನ ಸಂಸ್ಕೃತಿಯ ಎಲ್ಲಾ ಮೌಲ್ಯಗಳನ್ನೂ ತನ್ನೊಡಲಿನಲ್ಲಿಟ್ಟುಕೊಂಡಿದೆ. ಆಳುವ ಮತ್ತು ಆಳಿಸಿಕೊಳ್ಳುವ ಸಂಬಂಧದ ಪ್ರಕ್ರಿಯೆಯಲ್ಲಿ ಎಂದೂ ಆಳುವ ರೂಢಿಯಿರುವ ಪುರುಷ ಸಮುದಾಯಕ್ಕೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ತಮ್ಮ ಸ್ಥಾನಗಳನ್ನು ಆಕ್ರಮಿಸುವುದು ಸಂತೋಷದ ವಿಷಯವೇನೂ ಅಲ್ಲ. ಹೆಣ್ಣನ್ನು ಗೃಹಲಕ್ಷ್ಮಿಯಾಗಿಯೇ ವೈಭವಿಸುವ, ಆದರಿಸುವ ನಮ್ಮ ಸಮಾಜದಲ್ಲಿ ಸಾಮಾಜಿಕ ಸ್ಪೇಸ್‌ನ್ನು ಕೇಳುವ ರಾಜಕಾರಣಕ್ಕೆ ಅವಳು ಪ್ರವೇಶಿಸುವುದಕ್ಕೆ ಅಡ್ಡಿ ಆತಂಕಗಳು ನೂರಾರು. ರಾಜಮಹಾರಾಜರ ಕಾಲದಿಂದ ಹಿಡಿದು ಆಧುನಿಕ ಜಗತ್ತಿನ ಪ್ರಜಾಪ್ರಭುತ್ವ ಸರ್ಕಾರಗಳವರೆಗೂ ರಾಜಕಾರಣವೆನ್ನುವುದು ಪುರುಷರ ಜಗತ್ತೇ ಆಗಿದೆ.

ತಮ್ಮ ರಾಜರುಗಳ ಅನುಪಸ್ಥಿತಿಯಲ್ಲಿ ಅಧಿಕಾರದ ಗದ್ದುಗೆಯೇರಿದ ಹಲವಾರು ರಾಣಿಯರು ಅವಕಾಶ ಸಿಕ್ಕರೆ, ಅಗತ್ಯ ಬಿದ್ದರೆ ತಾವೇನೂ ಕಡಿಮೆಯಿಲ್ಲ ಎಂಬುದನ್ನು ತಮ್ಮ ಶೌರ್ಯದಿಂದ ರುಜುವಾತು ಮಾಡಿದ್ದಾರೆ. ಹಾಗಿದ್ದರೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಕ್ಕಿನಿಂದ ರಾಜಕೀಯ ಭಾಗವಹಿಸುವಿಕೆಯಲ್ಲಿ ಪುರುಷನೊಂದಿಗೆ ತೊಡಗಿಕೊಂಡದ್ದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ. ಮಹಿಳೆಯರನ್ನು ಒಂದು ಸಮುದಾಯವಾಗಿ ಅಗತ್ಯ ಬಿದ್ದಾಗಲೆಲ್ಲ ಬಳಸುತ್ತಾ ಬಂದ ಪುರುಷ ಸಮಾಜ, ಅದರ ಉದ್ದೇಶಿತ ಗುರಿ ತಲುಪಿದ ನಂತರ ಹಾಗೆಯೇ ಅವರನ್ನು ಹಿಂದಕ್ಕೆ ಸರಿಸಿರುವುದನ್ನು ಚರಿತ್ರೆಯಲ್ಲಿ ಕಾಣುತ್ತಾ ಬಂದಿದ್ದೇವೆ. ಈ ಮಾತು ಸ್ವಾತಂತ್ರ್ಯ ಹೋರಾಟದ ಸಂದರ್ಭಕ್ಕೆ ಮಾತ್ರವಲ್ಲದೆ, ಇಂದಿನ ಸಮಕಾಲೀನ ಸಂದರ್ಭಕ್ಕೂ ಅನ್ವಯಿಸುವ ಮಾತಾಗಿದೆ.

"ಶಾಸನ ಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ಹೆಚ್ಚಿದಲ್ಲಿ ಸಾಮಾಜಿಕ ಬದ್ಧತೆ ಹಾಗೂ ಸೂಕ್ಷ್ಮತೆ ಉನ್ನತ ಮಟ್ಟದಲ್ಲಿರುತ್ತದೆ. ಸದನದಲ್ಲಿ ಶಿಸ್ತು, ಸಂಯಮದ ವಾತಾವರಣದ ಮೂಡುವುದಲ್ಲದೆ ಕಿರಿ ಕಿರಿ ಉಂಟುಮಾಡುವ ಸನ್ನಿವೇಶಗಳು ಕಡಿಮೆಯಾಗುತ್ತವೆ " ಎಂದು ನಮ್ಮ ಹಿಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಕೆ.ಆರ್.ನಾರಾಯಣನ್

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೇಳಿದ್ದರು. ಇಂತಹ ಮನಃಸ್ಥಿತಿಯಿರುವ ಪುರುಷರು ಹೆಚ್ಚಾಗಬೇಕು. ಚುನಾಯಿತರಾದ ಮಹಿಳೆಯರು ಆದರ್ಶ ರಾಜಕಾರಣಿಗಳಾಗುವ ಗುಣಗಳನ್ನು ಬೆಳೆಸಿಕೊಳ್ಳಬೇಕು.

2019ರ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ದೇಶಾದ್ಯಂತ 542 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 8049 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅವರಲ್ಲಿ ಸ್ಪರ್ಧಿಸುವ ಅವಕಾಶ ದಕ್ಕಿದ್ದು 716 ಮಹಿಳೆಯರಿಗೆ ಮಾತ್ರ. ಅದರಲ್ಲಿ ಚುನಾಯಿತ ಮಹಿಳಾ ಸಂಸದರ ಸಂಖ್ಯೆ 78ಕ್ಕೆ ಏರಿದ್ದು, ಅದು ಕಳೆದ ಅರವತ್ತು ದಶಕಗಳ ಹಲವಾರು ಚುನಾವಣೆಗಳಿಗೆ ಹೋಲಿಸಿದರೆ ಅತ್ಯಧಿಕ ಶೇ 14ರಷ್ಟು ಎನ್ನಬಹುದಾದರೂ ಮೀಸಲಾತಿ ಮಸೂದೆ ಉದ್ದೇಶಿಸಿದ ಶೇಕಡ 33ರ ಹತ್ತಿರವೂ ಬರಲಿಲ್ಲ, ಎನ್ನುವುದು ವಾಸ್ತವ. ಕಳೆದ ಬಾರಿಯ ಚುನಾವಣೆಯಲ್ಲಿ 62 ಇದ್ದದ್ದು ಈ ಬಾರಿ 78ಕ್ಕೆ ಏರಿರುವುದಕ್ಕೆ ಪ್ರಾದೇಶಿಕ ಪಕ್ಷಗಳು ತೆಗೆದುಕೊಂಡ ನಿರ್ಧಾರಗಳೇ ಕಾರಣವಾಗಿವೆ. ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ 42 ಸಂಸದರಲ್ಲಿ 17ಮಂದಿ (ಶೇಕಡ 40ಕ್ಕಿಂತ ಹೆಚ್ಚು) ಮಹಿಳಾ ಅಭ್ಯರ್ಥಿಗಳಿದ್ದರು. ಹಾಗೆಯೇ ಒಡಿಶಾದ ಬಿಜು ಜನತಾದಳದಿಂದ ಸ್ಪರ್ಧಿಸಿದ್ದ 21 ಸಂಸದರಲ್ಲಿ 7 ಮಂದಿ (ಶೇಕಡ 33ಕ್ಕಿಂತ ಸ್ವಲ್ಪ ಹೆಚ್ಚು) ಮಹಿಳಾ ಅಭ್ಯರ್ಥಿಗಳಿದ್ದರು.

ಮಹಿಳೆಯರು ಒತ್ತಾಯಿಸುತ್ತಿರುವ ಮೀಸಲಾತಿ ರಾಜಕೀಯವು ಅವರ ಅಸ್ತಿತ್ವವನ್ನು ಗುರುತಿಸುವಂತೆ ಮಾಡುವ ರಾಜಕೀಯವೇ ಆಗಿದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳಿಂದಾಗಿ ಸ್ಥಳೀಯ ಮತ್ತು ಪಂಚಾಯಿತಿ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ದೊರೆತ ಅವಕಾಶಗಳಿಂದಾಗಿ ಅವರು ತೋರಿಸಿರುವ ಸಾಮರ್ಥ್ಯ ಮತ್ತು ಎದುರಿಸುತ್ತಿರುವ ಸಮಸ್ಯೆಗಳು ಶಾಸನ ಸಭೆಯ ಚುನಾವಣೆಗಳಿಗೂ ಮಾರ್ಗದರ್ಶಿಯಾಗಬಹುದಾಗಿದೆ. ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ಕೆಲವು ಜಿಲ್ಲೆಗಳಲ್ಲಿ ಚುನಾಯಿತರಾದ ಮಹಿಳೆಯರು 20ರಿಂದ 40ರ ವಯೋಮಾನದ ಯುವತಿಯರು ಮತ್ತು ಅವರೂ ಪರಿಶಿಷ್ಟ ಜಾತಿ/ಪಂಗಡಗಳಿಗೆ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರೂ ಆಗಿದ್ದಾರೆ, ಎಂಬುದನ್ನು ಗಮನಿಸಬೇಕು. ಈ ಚುನಾವಣೆಗಳಲ್ಲಿ ಅಧಿಕಾರ ವಲಯಕ್ಕೆ ಸೇರ್ಪಡೆಯಾಗುತ್ತಿರುವ ಈ ವೈವಿಧ್ಯಮಯ ಮಹಿಳಾ ಸಮುದಾಯ ಶಾಸನ ಸಭೆಗಳ ಮಹಿಳಾ ಮೀಸಲಾತಿಗೆ ದಿಕ್ಸೂಚಿಯಾಗಲಿದೆ. ಆದ್ದರಿಂದ ಮಹಿಳೆಯರನ್ನು ಕೇವಲ ವೋಟಿನ ಬ್ಯಾಂಕುಗಳಾಗಿ ಮಾತ್ರ ನೋಡುವ ರಾಜಕೀಯ ಪಕ್ಷಗಳು ತಮ್ಮ ಚಿಂತನೆಯ ದಿಕ್ಕನ್ನು ಬದಲಿಸಿಕೊಳ್ಳಬೇಕಿದೆ.

ಇಂದು ಭಾರತದ ರಾಜಕೀಯ ಭೂಪಟದಲ್ಲಿ ಮಹಿಳೆಯರು ಪ್ರಧಾನ ಮಂತ್ರಿ, ಮುಖ್ಯ ಮಂತ್ರಿ, ರಾಷ್ಟ್ರಾಧ್ಯಕ್ಷೆ, ರಾಜ್ಯಪಾಲರಾಗಿ, ಸಭಾಪತಿಯಾಗಿ ಅಧಿಕಾರ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಆದರೂ ಒಬ್ಬ ಸಾಮಾನ್ಯ ಮಹಿಳೆಗೆ ರಾಜಕೀಯ ಪ್ರವೇಶ ಅಷ್ಟೊಂದು ಸುಲಭವಿಲ್ಲ. ಪಂಚಾಯತ್ ರಾಜ್ ಚುನಾವಣೆಗಳಲ್ಲಿ ದೊರಕಿದ ಮೂರನೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಒಂದು ಸ್ಥಾನದ ಮೀಸಲಾತಿಯಿಂದಾಗಿ ಅಪಾರ ಸಂಖ್ಯೆಯ ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸುವ ಅವಕಾಶ ದೊರಕಿರುವುದರಿಂದ 'ಮೀಸಲಾತಿ'ಯನ್ನು ಒಂದು ಇತ್ಯಾತ್ಮಕ ಅಂಶವಾಗಿ ಪರಿಗಣಿಸುವಂತಾಗಿದೆ. ಆಡಳಿತದ ಎಲ್ಲ ಸ್ತರಗಳಲ್ಲಿ ವಿಶೇಷವಾದ ಸ್ತ್ರೀಕೇಂದ್ರಿತ ತಿಳುವಳಿಕೆಯ ಅಗತ್ಯವನ್ನು ಒಪ್ಪಬೇಕಾದ ಮನೋನಿರ್ಣಯಕ್ಕೆ ಕ್ರಿಯಾರೂಪ ಕೊಡುವ ಅಪರೂಪದ ಅಂಶ ಇದು.

ಮಹಿಳೆಯರು ಸ್ವತಃ ಅಧಿಕಾರ ಗಳಿಸಲು ಪ್ರಯತ್ನಿಸುವುದು ಹಾಗೂ ಮಹಿಳೆಯರು ಅಧಿಕಾರ ಗಳಿಸುವಂತೆ ಇತರರು ಮಾಡುವುದು– ಇವೆರಡೂ ಪ್ರಕ್ರಿಯೆಗಳು ಮಹಿಳಾ ಸಬಲೀಕರಣದ ಎರಡು ಮುಖಗಳು. ಮಹಿಳಾ ಮೀಸಲಾತಿ ನಮ್ಮ ರಾಜಕಿಯ ವ್ಯವಸ್ಥೆಯ ಎಲ್ಲ ಅಸಮಾನತೆಯನ್ನು ಹೋಗಲಾಡಿಸಿಬಿಡುತ್ತದೆಂಬ ಭ್ರಮೆ ಇಟ್ಟುಕೊಳ್ಳಬೇಕಿಲ್ಲ. ಮೀಸಲಾತಿಯು ಆರಂಭದಲ್ಲಿ ರಾಜಕೀಯ ಕ್ಷೇತ್ರದಲ್ಲಿ ನಿರ್ಧಾರ ತೆಗೆದುಕೊಳ್ಳಬಲ್ಲ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಇಂತಹ ಹೆಚ್ಚಿನ ಸಂಖ್ಯೆಯ ಮಹಿಳೆಯರಿಂದಾಗಿ ಒಂದು ಹೊಸ ರೀತಿಯ ಮಹಿಳಾ ಸಂಸ್ಕೃತಿ ಸೃಷ್ಟಿಯಾಗುತ್ತದೆ. ಮೀಸಲಾತಿಯು ಪುರುಷ ಪ್ರಾಧಾನ್ಯತೆಯನ್ನು ಪ್ರಶ್ನಿಸುವ, ಸಮಾಜದ ಸ್ಥಾಪಿತ ಮೌಲ್ಯಗಳಿಗೆ ಸವಾಲೆಸೆಯುವ ಪ್ರಯತ್ನವಾಗಿದೆ. ಸಮಾಜದ ಸ್ಥಗಿತತೆಯನ್ನು ಅಲುಗಾಡಿಸಿ ಬದಲಾವಣೆಯತ್ತ ಮುಖ ಮಾಡಲು ಮೀಸಲಾತಿಯು ಕೊಡಬಹುದಾದ ಚಿಕ್ಕ ಚಿಕ್ಕ ಶಾಕ್‌ಗಳು ತುಂಬ ಪ್ರಯೋಜನಕಾರಿಯಾಗಿದೆ.

ಅಧಿಕಾರ ರಾಜಕೀಯದಿಂದ ವಿಶಾಲ ಕ್ಷೇತ್ರಕ್ಕೆ ಕಾಲಿಡುವ ಮುನ್ನ ಮಹಿಳೆಯರು ತಮ್ಮಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ದೃಢವಾದ ರಾಜಕೀಯ ಅಂಶಗಳೂ ಮಾತ್ರ ಸಬಲೀಕರಣವನ್ನು ವಾಸ್ತವವಾಗಿಸಲು ಸಾಧ್ಯ. ಅಭಿವೃದ್ಧಿ ರಾಜಕೀಯದ ಸೈದ್ಧಾಂತಿಕ ಅಂಶಗಳನ್ನು ಹೆಚ್ಚಿಸಿದಾಗ ಸಬಲೀಕರಣಕ್ಕೊಂದು ಅರ್ಥ ಬರುತ್ತದೆ. ರಾಜಕೀಯ ಎನ್ನುವ ಪದವೇ ವಿಸ್ತಾರವಾದ ವ್ಯಾಪ್ತಿಯನ್ನು ಪಡೆಯಬೇಕು. ಅಧಿಕಾರ ಮತ್ತು ಸಂಪನ್ಮೂಲಗಳ ಹಂಚಿಕೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಬೇಕು. ತಾವು ಸರ್ಕಾರದ ಔದಾರ್ಯದಿಂದ ನೀಡಲಾಗುವ ದಾನ, ಧರ್ಮದ ಫಲಾನುಭವಿಗಳು ಮಾತ್ರ ಎಂದು ತೃಪ್ತರಾಗದೆ, ಸರ್ಕಾರದ ಅಧಿಕಾರದಲ್ಲಿ ಪಾಲು ಕೇಳುವುದರಲ್ಲೂ ಹೆಂಗಸರು ಬಾಧ್ಯಸ್ಥರಾಗಬೇಕು.

ಮಹಿಳೆಯರನ್ನು ಒಂದು ಸಮುದಾಯವಾಗಿ ಪರಿಗಣಿಸಲು ಮಹಿಳಾ ರಾಜಕಾರಣಿಗಳಿಗೆ ಸಾಧ್ಯವಾಗಿದೆಯೇ, ಎಂದು ಪ್ರಶ್ನಿಸಿಕೊಂಡರೆ ಅಲ್ಲೂ ಉತ್ತರ ಆಶಾದಾಯಕವಾಗಿಲ್ಲ. ಮಹಿಳಾ ಪ್ರಾತಿನಿಧ್ಯಕ್ಕಾಗಿ ಮತ್ತು ಮಹಿಳಾ ಮೀಸಲಾತಿಗಾಗಿ ಮಹಿಳಾ ಚಳುವಳಿಯು ದೀರ್ಘ ಹೋರಾಟವನ್ನು ನಡೆಸಿದೆಯಾದರೂ ಚುನಾಯಿತರಾದ ಮಹಿಳಾ ಕಾಳಜಿಗಳನ್ನು ವ್ಯಕ್ತಪಡಿಸುವುದಕ್ಕಿಂತ ಹೆಚ್ಚಾಗಿ ಅವರ ಪಕ್ಷದ ಆಶೋತ್ತರಗಳಿಗೆ, ಇಲ್ಲವೆ ರಾಜಕೀಯ ಆಮಿಷಗಳಿಗೆ ಸ್ಪಂದಿಸುತ್ತಾರೆ. ಶಬರಿಮಲೆ ಪ್ರಕರಣದಲ್ಲಿ ಮಹಿಳಾ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ರಾಜಕಾರಣಿಗಳು ತಾವು ಹೆಣ್ಣೆಂಬುದನ್ನು ಮರೆತು ತಮ್ಮ ಪಕ್ಷಗಳ ಧ್ವನಿಯನ್ನು ಮತ್ತೆ ಮೊಳಗಿಸಿ ಸ್ತ್ರೀ ವಿರೋಧಿ ನಿಲುವಿಗೆ ಸಾಕ್ಷಿಯಾಗಿದ್ದಾರೆ! "ಮಹಿಳೆಯರಿಗೆ ಸಮಾನತೆ ಬೇಡ" ಎನ್ನುವ ಭಾಜಪದ ರಾಜ್ಯ ಘಟಕದ ಅಧ್ಯಕ್ಷೆ ಭಾರತಿ ಶೆಟ್ಟಿಯಂಥವರ ಮಾತು ಮತ್ತು ರಾಜಕೀಯ ಚಟುವಟಿಕೆಗಳಿಂದ ಸ್ತ್ರೀ ಸಮುದಾಯಕ್ಕೆ ಏನು ಲಾಭ? ಮಹಿಳಾ ಚಳುವಳಿಗೂ ಮಹಿಳಾ ಜನ ಪ್ರತಿನಿಧಿಗಳಿಗೂ ಪರಸ್ಪರ ಕೊಳು ಕೊಡುಗೆಗಳಿಲ್ಲದೆ ಇದ್ದಲ್ಲಿ ಮಹಿಳಾ ಪ್ರತಿನಿಧೀಕರಣಕ್ಕೆ ಲಾಭವಿಲ್ಲ. ಚಳುವಳಿಯಿಂದಲೇ ಮೂಡಿಬಂದವರು ಮಾತ್ರ ಗುಣಾತ್ಮಕವಾದ ನಾಯಕತ್ವವನ್ನು ಕೊಡಲು ಸಾಧ್ಯ.

ಮಹಿಳಾ ಸಂಘಟನೆಗಳು ಎಂಭತ್ತರ ದಶಕದಲ್ಲಿ ಆರಂಭಿಸಿದ್ದ ಸಾಮಾಜಿಕ ಸಮಸ್ಯೆಗಳ ವಿರುದ್ಧದ 'ಪ್ರತಿಭಟನಾ ರಾಜಕೀಯ' ಇಂದು ತನ್ನ ನೆಲೆಯನ್ನು ರಾಜಕೀಯ ಮುಖ್ಯವಾಹಿನಿಗೆ ಬದಲಾಯಿಸಿದೆ. ಸಮಾಜ ಮತ್ತು ರಾಜಕೀಯ ಪರಿವರ್ತನೆಯಲ್ಲಿ ತನ್ನದು ಮಹತ್ವದ ಪಾತ್ರ ಎನ್ನುವ ಮಹಿಳಾ ಚಳುವಳಿ ರಾಜಕೀಯ ಮೀಸಲಾತಿಯನ್ನು ತನ್ನ ಪ್ರಮುಖ ಅಜೆಂಡಾ ಆಗಿ ಮಾಡಿಕೊಳ್ಳಬೇಕಿದೆ. ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದು 24 ವರ್ಷಗಳೇ ಕಳೆದಿವೆ. ಹೋರಾಟಗಾರ್ತಿಯರು ಇದನ್ನೊಂದು ಬಹುಮುಖ್ಯ ಅಜೆಂಡಾ ಮಾಡಿಕೊಳ್ಳುವ ಸಂಕಲ್ಪ ತೊಟ್ಟು ಹೋರಾಟ ಮುಂದುವರೆಸಬೇಕಾಗಿದೆ. ಮಮತಾ ಬ್ಯಾನರ್ಜಿ ಮತ್ತು ಬಿಜು ಪಾಟ್ನಾಯಕ್ ಇಬ್ಬರೂ ತಮ್ಮ ಪಕ್ಷಗಳಲ್ಲಿ ಮೀಸಲಾತಿ ಕೊಟ್ಟಂತೆ ಉಳಿದ ಪಕ್ಷಗಳೂ ಮೀಸಲಾತಿ ಕೊಟ್ಟು ಬಿಟ್ಟಾವು ಎಂಬ ಭ್ರಮೆ ಬೇಡ. ಮೀಸಲಾತಿಯೆನ್ನುವುದು ಶಾಸನಬದ್ಧ ಹಕ್ಕಾದಾಗ ಮಾತ್ರ ಅದಕ್ಕೊಂದು ಸ್ವಾಭಿಮಾನದ ಮೌಲ್ಯ ಹುಟ್ಟುತ್ತದೆ.

ಕಳೆದ ಆರು ತಿಂಗಳಿಂದೀಚೆಗೆ ದೇಶದ ರಾಜಕೀಯದಲ್ಲಿ ಉಂಟಾದ ಪಲ್ಲಟಗಳು ಹೆಣ್ಣಿನ ರಾಜಕೀಯ ಪ್ರಜ್ಞೆಯನ್ನು ಹರಿತಗೊಳಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ. ಪೌರತ್ವ ಕಾಯಿದೆ ಸಂಸತ್ತಿನಲ್ಲಿ ಅಂಗೀಕೃತವಾಗಿರುವಾಗ, ಅದನ್ನು ಅನುಸರಿಸಿ ಬರಲಿರುವ ಎನ್‌ಪಿಆರ್ ಮತ್ತು ಎನ್‌ಆರ್‌ಸಿ ದಾಖಲೆಗಳ ಕ್ರೋಡೀಕರಣದ ಪ್ರಕ್ರಿಯೆಯು ನಡೆದಿರುವಾಗ ಮಹಿಳೆಯರು ಸಿಡಿದೆದ್ದಿದ್ದಾರೆ. ಇಂದು ಲಕ್ಷಾಂತರ ಸಂಖ್ಯೆಯಲ್ಲಿ ಮಹಿಳೆಯರು ಆಜ಼ಾದಿಯ ಕನವರಿಕೆಯಲ್ಲಿ ಪ್ರಭುತ್ವಕ್ಕೆ ಸವಾಲೆಸೆದು ಹುಚ್ಚೆದ್ದು ಬೀದಿಗಿಳಿದಿದ್ದಾರೆ.

ಅಧಿಕಾರ ಕೊಡುವ ಮೀಸಲಾತಿ ರಾಜಕಾರಣದಲ್ಲಿ ತಮಗೆ ನ್ಯಾಯ ದೊರಕಿಲ್ಲದಿದ್ದರೂ ಇಂದಿನ ಪ್ರತಿಭಟನಾ ರಾಜಕೀಯದಲ್ಲಿ ಮಹಿಳೆ ಸಿಂಹಪಾಲು ಆವರಿಸಿಕೊಂಡಿದ್ದಾಳೆ; ರಾಜಕೀಯ ಭವಿಷ್ಯ ಬರೆಯುವ ಮಹಾನ್ ಕಾಯಕದಲ್ಲಿ ಮುಂಚೂಣಿಯಲ್ಲಿದ್ದಾಳೆ. ದೇಶದ ಎಲ್ಲೆಡೆ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಯುವತಿಯರ ಸಂಖ್ಯೆ ಮತ್ತು ಆಕ್ರೋಶ ಎದ್ದುಕಾಣುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮೊದಲ ಬಾರಿಗೆ ಬದ್ಧತೆ ಮತ್ತು ದೃಢತೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬೀದಿಗಿಳಿದಿರುವ ಈ ಮಹಿಳೆಯರ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಮನಸ್ಸಿನಲ್ಲಿ ಸ್ಪಷ್ಟ ಗೊತ್ತು ಗುರಿಗಳಿವೆ, ಭಯದ ಕರಿನೆರಳನ್ನು ಮೆಟ್ಟಿ ನಿಲ್ಲುವ ಛಲವಿದೆ. ಸಮಕಾಲೀನ ಬೆಳವಣಿಗೆಗಳ ಅರಿವು ಮತ್ತು ತಂತ್ರಜ್ಞಾನದ ನೆರವು ಅವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ.

21ನೇ ಶತಮಾನ ಕೇವಲ ಪುರುಷರ ಹುಚ್ಚಾಟಗಳಿಂದ ನಿರ್ಧಾರವಾಗುವುದಿಲ್ಲ, ಇಂದು ರಾಜಕಾರಣವನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂಬುದನ್ನು ಮಹಿಳೆಯರು ಅರಿತಿದ್ದಾರೆ. ಅತ್ಯಾಚಾರಿಗಳ ಜೀವ ತೆಗೆಯಬೇಕೆಂಬ ಬೇಡಿಕೆಗಿಂತ ಭಿನ್ನವಾಗಿ ಲಿಂಗಸಮಾನತೆಯ ಭಿನ್ನ ಸಂಕಥನಗಳನ್ನು ಈ ಮಹಿಳೆಯರು ಕಟ್ಟುತ್ತಿದ್ದಾರೆ. ಲಿಂಗಸಮಾನತೆ ಬರಬೇಕಾದರೆ ಇಂತಹ ಪೌರತ್ವ ಕಾಯಿದೆಗಳನ್ನು ವಿರೋಧಿಸಬೇಕು, ಎಂಬುದರ ರಾಜಕೀಯ ಪ್ರಜ್ಞೆ ಮಹಿಳೆಯರಲ್ಲಿ ಮೂಡತೊಡಗಿದೆ. ನಮ್ಮ ದೇಶದಲ್ಲಿ ವ್ಯಾಪಕವಾಗಿರುವ ಅನಕ್ಷರತೆ ಮತ್ತು ಬಡತನದ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ದಾಖಲೆಗಳು ದೊರೆಯುವುದೆಷ್ಟು ಕಷ್ಟ ಎಂಬುದರ ಹಿನ್ನೆಲೆಯಲ್ಲಿ ಅವರ ಹೋರಾಟ ಗಟ್ಟಿಗೊಳ್ಳುತ್ತಿದೆ. ಹೆಚ್ಚಿದ ನಿರುದ್ಯೋಗ ಮತ್ತು ಸರ್ಕಾರದ ಕೆಟ್ಟ ಆರ್ಥಿಕ ಮತ್ತು ಸಾಂಸ್ಕೃತಿಕ ನೀತಿಗಳಿಂದಾಗಿ ದೇಶದ ಐಕ್ಯತೆ ಮತ್ತು ಸಾರ್ವಭೌಮತ್ವ ನುಚ್ಚು ನೂರಾಗುತ್ತಿರುವುದನ್ನು ಮತ್ತು ವಿಶ್ವದ ನಕಾಶೆಯಲ್ಲೂ ದೇಶ ಕೆಳಗಿಳಿಯುತ್ತಿರುವುದನ್ನೂ ತಮ್ಮ ಕಣ್ಣೆದುರಿಗೇ ಭಾರತದ ಮಹಿಳೆಯರು ನೋಡುತ್ತಿದ್ದಾರೆ. ಈ ದಿಕ್ಕಿನಲ್ಲಿ ಮುರಿದು ಬೀಳುತ್ತಿರುವ ದೇಶವನ್ನು ಕಟ್ಟಬೇಕೆಂಬ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆಂಬುದೇ ನಮ್ಮೆಲ್ಲರ ಆಶಾಕಿರಣ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹಕ್ಕೊತ್ತಾಯ ಜಾಥಾ ಮತ್ತು ಸಮಾವೇಶ

ಎರಡನೆಯ ದಿನ ಧಾರವಾಡದ ಪ್ರಸಿದ್ಧ ಕಡಪಾ ಮೈದಾನದಲ್ಲಿ ಕಾರ್ಯಕ್ರಮಗಳು ಆರಂಭವಾದದ್ದು ಲತಾ ಅವರ ಆಶಯ ಭಾಷಣದೊಂದಿಗೆ. ಮುಂದಿನ ವರ್ಷ ಯಾವ ಜಿಲ್ಲೆಯಲ್ಲಿ ಸಮಾವೇಶ ನಡೆಸುವುದೆಂದು ಮಾತುಕತೆಗಳ ಮೂಲಕ ಆಗಲೇ ನಿರ್ಧಾರವಾಗಿತ್ತು. ಮಂಡ್ಯದ ಗೆಳತಿಯರು ಉತ್ಸಾಹದಿಂದ ನಿಂತಿದ್ದರು. ಮಲಪ್ರಭಾ ನದಿಯ ನೀರಿನಿಂದ ಬೆಳೆಸಿದ ಗಿಡವನ್ನು ಸಾಂಕೇತಿಕವಾಗಿ ಕೊಟ್ಟು ಕಾವೇರಿ ನದಿ ನೀರು ಹಾಕಿ ಬೆಳೆಸಿರೆಂದು ಹೇಳುತ್ತ ದಿಲಶಾದ, ಶಾರದಾ ಪಾಟೀಲ ಮತ್ತು ಲೂಸಿ ಸಲ್ಡಾನಾ ಗಿಡವನ್ನು ಮಂಡ್ಯದ ಗೆಳತಿಯರಿಗೆ ಕೊಡುವುದರ ಮೂಲಕ ಒಕ್ಕೂಟದ ಬಳ್ಳಿಗೆ ಮುಂದೆ ಹಬ್ಬಿಕೊಳ್ಳಲು ಅನುವು ಮಾಡಿಕೊಟ್ಟರು. ಅಷ್ಟರಲ್ಲಾಗಲೇ ಸಾವಿರಾರು ವಿದ್ಯಾರ್ಥಿಗಳು, ಅಂಗನವಾಡಿ, ಆಶಾ ಸಖಿಯರು, ದೂರದೂರಿನಿಂದ ಬಂದ ಗೆಳತಿಯರು ಮೈದಾನದಲ್ಲಿ ತುಂಬಿಕೊಂಡಿದ್ದರು. ಕಲಾತಂಡದ ಜೊತೆಗೆ ಏರುಬಿಸಿಲನ್ನೂ ಲೆಕ್ಕಿಸದೆ ಜಾಥಾ ಅರ್ಧ ಧಾರವಾಡವನ್ನೇ ಸುತ್ತಿ ಬಂದಿತು. ಕೆ.ಎಂ.ಎಫ್. ನೆರವಿನಿಂದ ಎಲ್ಲರಿಗೂ ಮಜ್ಜಿಗೆ ನೀಡಲು ಬಸಂತಿ ಬಾಗಿಲಲ್ಲೇ ನಿಂತಿದ್ದರು.

ಮುಂದಿನದು ಜುಬೇದಾಬಾಯಿ ಸವಣೂರು ಆವರಣದಲ್ಲಿ ಬಾಗೀರಥಿಬಾಯಿ ಪುರಾಣಿಕ ವೇದಿಕೆಯ ಮೇಲೆ ಕಲ್ಬುರ್ಗಿಯ ಮಿನಾಕ್ಷಿ ಬಾಳಿಯವರ ಮೈನವಿರೇಳಿಸುವ ಭಾಷಣ. ಅದರ ಹಿಂದೆಯೇ ಅಮರ್‌ಜಿತ್ ಕೌರ್ ಅವರ ದಿಕ್ಸೂಚಿ ಭಾಷಣ. ಮದ್ಯ ನಿಷೇಧ ಆಂದೋಲನದ ಮುಂದಾಳುಗಳಿಗೆ ಶಾಲು ಹೊದೆಸಿ ಕಾಣಿಕೆ ಕೊಟ್ಟು ಗೌರವಿಸಿತು ಒಕ್ಕೂಟ. ಭಾಷಣಗಳ ಅಣಿಮುತ್ತುಗಳನ್ನು ಮತ್ತೆ ಮತ್ತೆ ನೆನೆಸುತ್ತ ಮಧ್ಯಾಹ್ನದ ಬಿಸಿ ಬಿಸಿ ಊಟ. ಗದಗದ ದಲಿತ ಕಲಾಮಂಡಳಿಯ ಸೋದರರ ಶಿಸ್ತು ಮತ್ತು ಶ್ರಮ ನೆನೆಯಲೇಬೇಕು. ಊಟದ ರುಚಿಯನ್ನು ಮೆಲುಕು ಹಾಕುತ್ತ ಸಾರ್ವಜನಿಕರು ತಂತಮ್ಮ ಊರುಗಳಿಗೆ ಪಯಣ ಬೆಳೆಸಿದರೆ ನಮ್ಮದು ಎಲ್ಲಾ ಸೇರಿಸಿ, ಪೇರಿಸಿ, ಹೊಂದಿಸಿ, ಕೊಡುವವರಿಗೆ ಕೊಟ್ಟು, ಪಾತ್ರೆಗಳನ್ನು ಬೆಳಗಿಸಿ, ಪೆಂಡಾಲನ್ನು ಕೆಳಗಿಳಿಸಿ ಎಲ್ಲ ಸ್ವಚ್ಛಗೊಳಿಸಿ ಮಣಭಾರದ ಮನವ ಹೊತ್ತು ಹಿಂದಿರುಗುವ ಸಮಯ. ಬಂದೇ ಬಿಟ್ಟಿತು ಆ ಘಳಿಗೆ. ಆರು ತಿಂಗಳಿನಿಂದ ಒಂದು ಮನೆಯವರಂತೆ ಇದ್ದ ಎಲ್ಲರೂ 'ಇದನ್ನು ಇಲ್ಲಿಗೇ ನಿಲ್ಲಿಸುವುದು ಬೇಡ, ಅರಿವಿನ ಪಯಣವನ್ನು ಮುಂದುವರೆಸುವಾ' ಎನ್ನುತ್ತ ನಮ್ಮ ನಮ್ಮ ಮನೆಗಳತ್ತ ಮುಖ ಮಾಡಿದೆವು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ನಮ್ಮದು ಪ್ರೀತಿಯ ರಾಜಕೀಯ!

**– ಡಾ. ಲತಾ ಪ್ರತಿಭಾ ಮಧುಕರ್**

ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಾವೆಲ್ಲ ಇಲ್ಲಿ ಒಟ್ಟಿಗೆ ಸೇರಿದ್ದೇವೆ. ನಾನು ಕರ್ನಾಟಕಕ್ಕೆ ಅನೇಕ ಬಾರಿ ಬಂದಿದ್ದೇನೆ. ಆದರೆ ಧಾರವಾಡಕ್ಕೆ ಬಂದಿರುವುದು ಮೊದಲನೆಯ ಸಲ. ಈ ರಾಜ್ಯ, ಬಸವಣ್ಣ, ಅಕ್ಕಮಹಾದೇವಿ, ಗೌರಿ ಲಂಕೇಶ, ಕಲಬುರ್ಗಿ, ಮಹಿಳೆಯರ ಅಂದೋಲನಗಳ ಮಾನವ ಹಕ್ಕು ಅಂದೋಲನಗಳ ಪರಂಪರೆಯನ್ನು ಹೊಂದಿರುವಂಥದ್ದು. ಈ ಎಲ್ಲ ಮಹನೀಯರಿಗೂ ನನ್ನ ವಂದನೆಗಳು ಹಾಗೂ ಸಲಾಮ್. ಇವತ್ತು ನಾವು ರ್‍ಯಾಲಿ ಮೂಲಕ ಊರು ಸುತ್ತುವವರಿದ್ದೇವೆ. ಆದರೆ ನಿಮ್ಮ ಊರು ಜಾಗೃತವಾಗಿರುವಂಥ ಊರು. ಇವತ್ತಿನ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಅದು ನಮ್ಮ ರಾಜ್ಯದ ರಾಜಕೀಯ ಹೇಗಿದೆ ಎಂಬುದನ್ನು ತೋರಿಸುವಂಥದ್ದು. ದಿ. ಅಂಬರೀಷ್ ಅವರ ಪತ್ನಿ ಸುಮಲತಾ ಒಬ್ಬ ವಿಧವೆ, ಆ ಕಾರಣಕ್ಕೆ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಯೋಗ್ಯರಲ್ಲ ಎಂಬ ವಿಚಾರ ಇವತ್ತಿನ ಪತ್ರಿಕೆಯ ಮುಖ್ಯ ಸುದ್ದಿಯಾಗಿ ಪ್ರಕಟಗೊಂಡಿದೆ. ವಿಧವೆ ಎಂಬ ಕಾರಣಕ್ಕೆ ಒಬ್ಬ ಮಹಿಳೆ ರಾಜಕೀಯ ಪ್ರವೇಶಿಸಬಾರದು ಎಂಬ ಪೊಳ್ಳು ತತ್ವಗಳನ್ನನುಸರಿಸುವ ಆಡಳಿತಶಾಹಿಯ ವಿರುದ್ಧ ನಮ್ಮ ಹೋರಾಟವಿದೆ.

18 ವರ್ಷದವರಾದೊಡನೆ ನಮ್ಮ ದೇಶದ ಎಲ್ಲ ಪ್ರಜೆಗಳಿಗೂ ಮತ ಚಲಾಯಿಸುವ ಹಕ್ಕಿದೆ. ಚುನಾವಣೆ ಹತ್ತಿರ ಬಂದಾಗ ಎಲ್ಲ ಉಮೇದುವಾರರೂ ನಮ್ಮ ಮನೆಗಳ ತನಕ ಬರುತ್ತಾರೆ. ಮತ ಹಾಕಬೇಕೆಂದು ಅಂಗಲಾಚುತ್ತಾರೆ. ಇದೇ ರಾಜಕಾರಣಿಗಳು ನಮ್ಮ ಸಮಸ್ಯೆಗಳನ್ನು ಕೇಳಿಕೊಳ್ಳುತ್ತಾರೆಯೆ? ನಮ್ಮ ಶಾಲೆಗಳ, ಕಾಲೇಜುಗಳ, ನಮ್ಮ ಗ್ರಾಮದ, ಸಮುದಾಯಗಳ, ದಲಿತರ, ಆದಿವಾಸಿಗಳ, ಅಲ್ಪಸಂಖ್ಯಾತರ, ವಸತಿ ಹೀನರ ಸಮಸ್ಯೆಗಳನ್ನು ಪರಿಹರಿಸುವ ಎಜೆಂಡಾ ಇವರ ಪ್ರಣಾಳಿಕೆಯಲ್ಲಿ ಇದ್ದರೆ ಮಾತ್ರ ನಾವು ಚುನಾವಣೆಯಲ್ಲಿ ಸ್ಪರ್ಧಿಸುವವರೊಂದಿಗೆ ಮಾತನಾಡಬಹುದು. 'ಬೇಟಿ ಬಚಾವೋ ಬೇಟಿ ಪಢಾವೋ' ಎಂಬ ಕರೆಯನ್ನು ಮೊದಲು ಕೊಟ್ಟಾವರ್‍ಯಾರು? ಈ ಘೋಷಣೆ ಮಹಿಳಾ ಚಳುವಳಿಗಳಲ್ಲಿ ಹುಟ್ಟಿಕೊಂಡದ್ದು. ಇದು ಮಹಿಳಾ ರಾಜಕಾರಣದ ಘೋಷಣೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಿಮ್ಮ ಊರಿನವರೇ ಆದ ಡಾ. ಸಂಜೀವ ಕುಲಕರ್ಣಿಯವರು ತಮ್ಮ ಮೊದಲ ಸಂಶೋಧನಾ ಲೇಖನದಲ್ಲಿ, 1986–87ರಲ್ಲಿ ಗಂಡು ಹೆಣ್ಣಿನ ಅನುಪಾತ 1000 ಕ್ಕೆ 922 ಇದೆ ಎಂಬುದನ್ನು ನಮೂದಿಸಿದ್ದರು. ಆ ಸಮಯದಲ್ಲಿ ನಾವು ಹೆಣ್ಣು ಭ್ರೂಣಹತ್ಯೆ ವಿರೋಧಿ ಅಭಿಯಾನವನ್ನು ಮಾಡಿದೆವು. ಆ ಸಮಯದಲ್ಲಿ ನಾವು ಹೇಳಿದ್ದು 'ಮಹಿಳೆಗೆ ಗರ್ಭಪಾತದ ಹಕ್ಕಿದೆ, ಆದರೆ ಲಿಂಗ ಆಯ್ಕೆಯ ಗರ್ಭಪಾತದ ಹಕ್ಕು ಇಲ್ಲ' ಎಂದು. ಈ ಅಭಿಯಾನ ಮಹಾರಾಷ್ಟ್ರ, ಕರ್ನಾಟಕ, ತಮಿಳ್ನಾಡು ರಾಜ್ಯಗಳಲ್ಲಿ ವ್ಯಾಪಕವಾಗಿ ನಡೆಯಿತು. ಕುಸಿಯುತ್ತಿರುವ ಹೆಣ್ಣುಗಂಡಿನ ಅನುಪಾತದ ವಿರುದ್ಧ ನಾವು ಧ್ವನಿ ಎತ್ತಿದೆವು. ಇಂದು ಕರ್ನಾಟಕದಲ್ಲಿ ಗಂಡು ಹೆಣ್ಣಿನ ಅನುಪಾತ 1000 ಕ್ಕೆ 973 ಇದೆ. ಅಂದರೆ ಸಾವಿರಕ್ಕೆ 27 ಹೆಣ್ಣುಮಕ್ಕಳ ಕೊರತೆ! ನಮ್ಮಲ್ಲಿರುವ ರಾಜಕಾರಣ ಈ ಕಾಣೆಯಾದ ಹೆಣ್ಣುಮಕ್ಕಳ ಸಮಸ್ಯೆಯನ್ನು ಎತ್ತಿಕೊಂಡಿದೆಯೆ? ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಯನ್ನು ಅರ್ಥ ಮಾಡಿಕೊಂಡಿದೆಯೆ? ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ ನಡೆದೇ ಇವೆ. ಕುಟುಂಬದೊಳಗಿನ ಹಿಂಸೆಯನ್ನು ವಿರೋಧಿಸುವಲ್ಲಿ ನಮ್ಮ ರಾಜಕಾರಣವಿದೆ.

ಮಹಿಳೆಯರ ರಾಜಕಾರಣ ಕುಟುಂಬವನ್ನು ಜೋಡಿಸುವಲ್ಲಿ ನಂಬಿಕೆಯನ್ನಿಟ್ಟಿದೆ. ಕುಟುಂಬವನ್ನು ಒಟ್ಟಿಗೆ ಇಡುವುದು ನಮ್ಮ ರಣನೀತಿಯಾಗಿದೆ. ಜೋಡಿಸುವ ರಾಜಕಾರಣದೊಂದಿಗೆ ನಾವು ಅಧಿಕಾರಕ್ಕೆ ಬರಲು ಯತ್ನಿಸಿದರೆ, ನೀವು ಪರಿತ್ಯಕ್ತರೆ? ವಿಧವೆಯೇ? ಮದುವೆ ಆಗಿದೆಯೇ? ಒಂಟಿ ಮಹಿಳೆಯೇ? ಎಂದೆಲ್ಲ ನಮ್ಮ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ನಮ್ಮ ಪ್ರಧಾನ ಮಂತ್ರಿಗಳು ಪರಿತ್ಯಕ್ತರೇನು ಎಂದು ನಾವೆಂದಾದರೂ ಕೇಳಿದ್ದೇವೆಯೇ? ಹೆಂಡತಿಯನ್ನು ನೋಡಿಕೊಳ್ಳಲಾಗದ ನೀವು ಪ್ರಧಾನಿಯಾಗಲು ಯೋಗ್ಯರಲ್ಲ ಎಂದು ನಾವೆಂದಾದರೂ ಹೇಳಿದ್ದೇವೆಯೇ? ಆದರೆ ಮಹಿಳೆ ಅಧಿಕಾರಕ್ಕೆ ಬರುತ್ತಾಳಾದರೆ ಈ ಎಲ್ಲ ಪ್ರಶ್ನೆಗಳನ್ನೂ ಎದುರಿಸಬೇಕು. 'ನಿಮ್ಮ ಮದುವೆ ಆಗಿದೆಯೇ? ಹಾಗಾದರೆ ಮನೆಯಲ್ಲಿದ್ದು ಸಂಸಾರ ನೋಡಿಕೊಳ್ಳಿ, ಗಂಡ ಸತ್ತುಹೋಗಿದ್ದಾರೆಯೇ? ಹಾಗಿದ್ದರೆ ಮನೆಯಲ್ಲೇ ಇರಿ, ಕುಟುಂಬದ ಜವಾಬ್ದಾರಿ ವಹಿಸಿ, ರಾಜಕಾರಣ ನಿಮಗಲ್ಲ' ಎಂದು ಹೇಳುತ್ತಾರೆ. ನಾವು ಮತದಾರರು ಆದರೆ ಕೇವಲ ಮತದಾರರಲ್ಲ. ನಮ್ಮ ರಾಜನೀತಿಯನ್ನು ನಾವು ನಿರ್ಧರಿಸುತ್ತೇವೆ. ಆಡಳಿತ ಮಾಡುವವರು ಮಹಿಳೆಯರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಆಡಳಿತ ಮಾಡುವುದಿಲ್ಲ. ನಮ್ಮ ಸಮಸ್ಯೆಗಳೇನು? ರೇಶನ್, ನೀರು, ಹಸಿವು, ಉದ್ಯೋಗ ಮುಂತಾದ ಸಮಸ್ಯೆಗಳನ್ನು ನಾವು ಎದುರಿಸುತ್ತಿದ್ದೇವೆ. ಆದರೆ ಈ ಸಮಸ್ಯೆಗಳ ಕುರಿತು ಯಾವತ್ತೂ ಚರ್ಚೆಯಾಗುವುದಿಲ್ಲ. ಇವತ್ತು ಆಹಾರ, ವಸತಿಗಾಗಿ ಆಂದೋಲನಗಳು ನಡೆಯುತ್ತಿವೆ. ಒಂಟಿ ಮಹಿಳೆಯರ ಹಕ್ಕಿಗಾಗಿ, ತೃತೀಯ ಲಿಂಗಿಗಳ ಹಕ್ಕಿಗಾಗಿ, ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳಿಗಾಗಿ ಆಂದೋಲನಗಳು ನಡೆಯುತ್ತಿವೆ. ಶಾಲೆಗಳಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹೆಣ್ಣುಮಕ್ಕಳಿಗಾಗಿ ಸರಿಯಾದ ಶೌಚಾಲಯಗಳಿಲ್ಲ. ಆದರೆ ಸ್ವಚ್ಛತೆಯ ಬಗ್ಗೆ ಮಾತನಾಡುತ್ತದೆ ನಮ್ಮ ಸರಕಾರ. ಬಸ್ ನಿಲ್ದಾಣಗಳಲ್ಲಿಯ ಶೌಚಾಲಯಗಳು ಯಾವತ್ತೂ ಸ್ವಚ್ಛವಾಗಿರುವುದಿಲ್ಲ.

ನಮ್ಮ ಯಾವುದೇ ಆಂದೋಲನ ಇರಲಿ, 'ಇಂಥದ್ದನ್ನು ಮಾಡಿ' ಎಂದು ನಾವು ಸರಕಾರವನ್ನು ಕೇಳಿಕೊಳ್ಳುತ್ತೇವೆ. ಇನ್ನು ಮುಂದಿನ ನಮ್ಮ ರಾಜನೀತಿ ಲೋಕನೀತಿ ಯಾಗಲಿದೆ. ನಮ್ಮ ಹಕ್ಕುಗಳಿಗಾಗಿ ನಾವು ಹೋರಾಡುವೆವು. ನಮ್ಮ ಅಧಿಕಾರಕ್ಕಾಗಿ ನಾವು ಹೋರಾಡುವೆವು. ಈ ನಮ್ಮ ಅಧಿಕಾರ ಜನಾಧಿಕಾರವಾಗಲಿದೆ. ಆದ್ದರಿಂದಲೇ ನಾವೆಲ್ಲ ರಸ್ತೆಗಳಲ್ಲಿ ಒಗ್ಗೂಡಿದಾಗ 'ಸಂವಿಧಾನಕ್ಕೆ ಜಯವಾಗಲಿ' ಎಂದು ಹೇಳಬಹುದು. ಯಾಕೆಂದರೆ ಸಂವಿಧಾನ ನಮ್ಮ ಕೈಗೆ ನಮ್ಮ ಹಕ್ಕುಗಳನ್ನು ಕೊಟ್ಟಿದೆ. ಮಹಾತ್ಮಾ ಫುಲೆ, ಸಾವಿತ್ರಿ ಬಾ, ನಾರಾಯಣಗುರು, ಮಹಾತ್ಮಾ ಗಾಂಧಿ, ಶಾಹು, ಪೆರಿಯಾರ್, ಅಂಬೇಡ್ಕರ ಇವರೆಲ್ಲ ನಮಗೆ ಪ್ರಜಾಪ್ರಭುತ್ವದ ವಿಚಾರಗಳನ್ನು ಕೊಟ್ಟಿದ್ದಾರೆ. ಪ್ರಜಾಪ್ರಭುತ್ವ ಅಂದರೆ ಅದು ಜನಾಧಿಕಾರ, ಜನರಿಗಾಗಿ ಇರುವ ಅಧಿಕಾರ. ಅಧಿಕಾರ ಯಾವುದೇ ವ್ಯಕ್ತಿಯ ಉಪಭೋಗಕ್ಕಾಗಿ ಇರುವುದಲ್ಲ. ಯಾವುದೇ ಉದ್ಯೋಗಪತಿ ಮತ್ತಷ್ಟು ಹಣಗಳಿಸಿ ಶ್ರೀಮಂತನಾಗುವುದಕ್ಕಾಗಿಯೂ ಇರುವುದಲ್ಲ.

ನೋಟು ಅಮಾನ್ಯೀಕರಣದಿಂದ ಮಹಿಳೆಯರಿಗೆ ದೊಡ್ಡ ಪೆಟ್ಟು ಬಿತ್ತು. ನಾವು ಮಹಿಳೆಯರು ಅಡುಗೆ ಮನೆಯ ಚಿಕ್ಕ ಚಿಕ್ಕ ಡಬ್ಬಗಳಲ್ಲಿ ಹಣ ಒಟ್ಟುಮಾಡಿ ಇಟ್ಟಿದ್ದೆವು. ಆ ಹಣ ಸರಕಾರದ ದೃಷ್ಟಿಯಲ್ಲಿ ಕಪ್ಪು ಹಣವಾಯಿತು. ಸ್ವಿಸ್ ಬ್ಯಾಂಕಿನಲ್ಲಿರುವ ಕಪ್ಪು ಹಣವನ್ನು ಅವರು ಏನೂ ಮಾಡಲಾಗಲಿಲ್ಲ. ಮಹಿಳೆಯರ ಹತ್ತಿರ ಇರುವ ಹಣ ಶ್ರಮಪಟ್ಟು ಗಳಿಸಿದ್ದು. ಕುಡುಕ ಗಂಡನಿಂದ ಬಚ್ಚಿಡಲು ಅಕ್ಕಿ, ಬೇಳೆಯ ಡಬ್ಬಗಳಲ್ಲಿ ಹುದುಗಿಸಿಟ್ಟದ್ದು. ಈ ಹಣವನ್ನು ಸರತಿಯಲ್ಲಿ ನಿಂತು ಬ್ಯಾಂಕಿಗೆ ಜಮಾ ಮಾಡಿ ಎಂದು ಸರಕಾರ ಆದೇಶಿಸಿತು. ಅನೇಕ ಮಹಿಳೆಯರು 'ನಮ್ಮದೇ ಹಣ ನಮಗೆ ಬೇಕು ಅಂದಾಗ ಸಿಗುವುದಿಲ್ಲ. ನಮ್ಮ ಮಕ್ಕಳ ಶಿಕ್ಷಣಕ್ಕೆ ಹಣ ಬೇಕು ಅಂತಾದರೆ ಬ್ಯಾಂಕಿನೆದುರು ಸರತಿಯಲ್ಲಿ ನಿಂತು ಹಣ ಪಡೆಯಬೇಕು'ಎಂದು ನನಗೆ ಅಲವತ್ತುಕೊಂಡಿದ್ದರು.

ಇವತ್ತು ನಮ್ಮ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಶಿಕ್ಷಣ ಸಿಗದಂತಾಗಿದೆ. ಶಿಕ್ಷಣ ಪಡೆದವರಿಗೆ ಉದ್ಯೋಗ ಇಲ್ಲದಂತಾಗಿದೆ. ನಮ್ಮ ಹೋರಾಟ ಪಿತೃಪ್ರಧಾನ ಮೌಲ್ಯವನ್ನು ಸಮ್ಮತಿಸುವ ಸರಕಾರದ ವಿರುದ್ಧ ಹೋರಾಟ. ಜಾತೀಯತೆಯನ್ನು ಎತ್ತಿ ಹಿಡಿಯುವ, ಧರ್ಮ, ವರ್ಗಗಳನ್ನು ಮನ್ನಿಸುವ ಅಧಿಕಾರದ ವಿರುದ್ಧ, ನಮ್ಮನ್ನು ಮೂರ್ಖರನ್ನಾಗಿಸುವ ಹುಕುಂ ಶಾಹಿಯ ವಿರುದ್ಧ ನಮ್ಮ ಹೋರಾಟವಿದೆ. ಆದ್ದರಿಂದ ನಾವೆಲ್ಲ ಒಗ್ಗೂಡುವುದು ತುಂಬ ಅವಶ್ಯಕವಾಗಿದೆ. ಆದರೆ ನಮ್ಮ ಧ್ವನಿ ತುಂಬ ಕ್ಷೀಣವಾಗಿದೆ. ಈ ಐದು ವರ್ಷಗಳ ಅವಧಿಯಲ್ಲಿ (2014–19) ಏನೇನು ನಡೆದಿದೆ? ನಮಗೆ ಆರೋಗ್ಯದ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹಕ್ಕು ಲಭಿಸಿಲ್ಲ. ಧಾರ್ಮಿಕ ಸ್ವಾತಂತ್ರ್ಯವಿಲ್ಲ. ಶಬರಿಮಲೈ ದೇವಸ್ಥಾನದಲ್ಲಿ ನಮಗೆ ಪ್ರವೇಶವಿಲ್ಲ. ದೇವಸ್ಥಾನವನ್ನು ಪ್ರವೇಶಿಸಲು ಪ್ರಯತ್ನಿಸಿದವರನ್ನು ಸಮಾಜವಷ್ಟೇ ಅಲ್ಲ, ಅವರ ಕುಟುಂಬದವರೂ ಬಹಿಷ್ಕರಿಸಿದರು. ಮಹಿಳೆಯರನ್ನು ಅಸ್ಪೃಶ್ಯರನ್ನಾಗಿ ಕಾಣುವ ಈ ಪದ್ಧತಿಯ ವಿರುದ್ಧ ನಮ್ಮ ಹೋರಾಟವಿದೆ. ನಮ್ಮ ಹೋರಾಟ ಎರಡು ದಿಕ್ಕಿನಲ್ಲಿದೆ. ಒಂದು ಬದಿಯಿಂದ ಅಸಮಾನತೆಯನ್ನು ಮನ್ನಿಸುವ ಅಧಿಕಾರದ ವಿರುದ್ಧ ಹೋರಾಟ, ಇನ್ನೊಂದು ಬದಿಯಿಂದ ಅಧಿಕಾರವನ್ನು ಪ್ರವೇಶಿಸುವುದಕ್ಕಾಗಿ ಹೋರಾಟ. ಈ ಎರಡೂ ದಾರಿಗಳು ಮುಳ್ಳಿನ ದಾರಿಗಳೇ.

ನನಗೆ ಕನ್ನಡ ಮಾತನಾಡಲು ಬರುವುದಿಲ್ಲ. ಆದರೆ ಸ್ವಲ್ಪ ಸ್ವಲ್ಪ ಅರ್ಥ ಮಾಡಿಕೊಳ್ಳುತ್ತೇನೆ. ನಾನು ಮಹಾರಾಷ್ಟ್ರದಿಂದ ಬಂದಿದ್ದೇನೆ, ಮಣಿಮಾಲಾ ದೇಶದ ಮತ್ತೊಂದು ಭಾಗದಿಂದ ಬಂದವರು. ಅಮರಜೀತ್ ಬೇರೊಂದು ರಾಜ್ಯದಿಂದ ಬಂದವರು. ನೀವು ಕರ್ನಾಟಕದಲ್ಲಿ ಇರುವವರು. ನಾವೆಲ್ಲ ಬೇರೆ ಬೇರೆ ಭಾಷೆ ಮಾತನಾಡುವವರು, ಬೇರೆ ಬೇರೆ ಧರ್ಮ ಪಾಲಿಸುವವರು. ನಿನ್ನೆ ಮಣಿಮಾಲಾ ಮಾತನಾಡುತ್ತ 'ನನ್ನಲ್ಲಿ ದೇಶಭಕ್ತಿ ಇಲ್ಲ ಆದರೆ ದೇಶದ ಕುರಿತು ಪ್ರೀತಿ ಇದೆ' ಎಂದರು. ಇಂದು ಅಂತರ್ಜಾತೀಯ ಅಂತರ್ಧರ್ಮೀಯ ವಿವಾಹಗಳಾದರೆ ಅವನ್ನು ಸಹಿಸುವುದಿಲ್ಲ. ಅದೇ ಕಾರಣಕ್ಕೆ ಕೊಲೆಗಳಾಗುತ್ತವೆ. ಲವ್ ಜಿಹಾದ್‌ನ ಕಾರಣ ಹೇಳಿ ಕೊಲೆ ಮಾಡಲಾಗುತ್ತದೆ. ಪ್ರೀತಿಸುವ ಸ್ವಾತಂತ್ರ್ಯವನ್ನು ನಾವು ಕೇಳುತ್ತಿದ್ದೇವೆ.

ನಾವು ರಾಜಕಾರಣದ ಬಗ್ಗೆ ಮಾತನಾಡುವುದೆಂದರೆ ಅದು 'ಆಝಾದಿ' ಕುರಿತ ಮಾತಾಗಿರುತ್ತದೆ. ಸಮಾನತೆಯ ಬಗೆಗಿನ ಮಾತಾಗಿರುತ್ತದೆ. ಸಮತೆಯ ಕುರಿತ ಮಾತಾಗಿರುತ್ತದೆ. ಸ್ನೇಹದ ಕುರಿತ ಮಾತಾಗಿರುತ್ತದೆ. ಸ್ನೇಹದಿಂದಲೇ ನಾವೆಲ್ಲ ಇಲ್ಲಿ ಒಗ್ಗೂಡಿದ್ದೇವೆ. ಮೇರಿ ಬೆಹನಾ ಮಾಂಗೆ ಆಜಾದಿ, ಮೇರಿ ಬಚ್ಚಿ ಮಾಂಗೆ ಆಜಾದಿ... ಹಿಂಸಾ ಕೆ ಖಿಲಾಫ್ ಆಜಾದಿ, ಅತ್ಯಾಚಾರ ಕೆ ಖಿಲಾಫ್ ಆಜಾದಿ, ಅರೆ ಪ್ಯಾರ್ ಕೇ ಲಿಯೆ ಆಜಾದಿ.

ತ್ರಿವಳಿ ತಲಾಖ್ ವಿಷಯ 1986ರಲ್ಲೇ ಮುನ್ನೆಲೆಗೆ ಬಂದಿತ್ತು. ಆದರೆ ಇಂದಿನ ಸರಕಾರ ಆ ವಿಷಯ ತನ್ನದೆಂದು ಕೊಚ್ಚಿಕೊಳ್ಳುತ್ತಿದೆ. ಮಹಿಳಾ ಆಂದೋಲನಗಳು ಈ ಕುರಿತು ಮಾತನಾಡಿದ್ದವು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಮ್ಮೆಲ್ಲ ಸಮಸ್ಯೆಗಳನ್ನು ಮುಂದೆ ಇಡೋಣ. ನಮ್ಮ ಹಕ್ಕುಗಳನ್ನು ಮಂಡಿಸೋಣ. ನಮ್ಮ ಮುಂದೆ ಅನೇಕ ಸಮಸ್ಯೆಗಳಿವೆ. ನೀರು, ಆರೋಗ್ಯ, ಆಹಾರ, ವಸತಿ, ಬೆಲೆಯೇರಿಕೆ,..... ಇವತ್ತು ಎಲ್ಲದಕ್ಕೂ ತೆರಿಗೆ; ಗ್ಯಾಸ್ ಸಿಲಿಂಡರ್, ನೀರು, ನಡೆಯುವುದಕ್ಕೆ, ಮಾತನಾಡಲು, ಎಲ್ಲದಕ್ಕೂ ತೆರಿಗೆ. ನಾವೆಲ್ಲ ಒಗ್ಗೂಡಿ ಈ ತೆರಿಗೆ ವಿರುದ್ಧ ಮಾತನಾಡುವುದೇ ನಮ್ಮ ಎಜೆಂಡಾ. ಮಹಿಳೆಯರ ಸಮಸ್ಯೆ, ಮಕ್ಕಳ ಸಮಸ್ಯೆಗಳು, ನಮ್ಮ ಮಕ್ಕಳಿಗಾಗಿ ಉದ್ಯೋಗ, ನೀರು, ವಸತಿ, ಆಹಾರ ಇವೆಲ್ಲ ನಮ್ಮ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಎಜೆಂಡಾದಲ್ಲಿರಲಿವೆ. ನಮ್ಮ ಹೋರಾಟ ಶ್ರಮಿಕರಿಗಾಗಿ, ಮಕ್ಕಳಿಗಾಗಿ, ಆದಿವಾಸಿಗಳಿಗಾಗಿ, ತೃತೀಯ ಲಿಂಗಿಗಳಿಗಾಗಿ, ಲೈಂಗಿಕ ಕಾರ್ಯಕರ್ತೆಯರಿಗಾಗಿ. ಮಗು ಅಳುವ ತನಕ ತಾಯಿ ಹಾಲು ಕುಡಿಸುವುದಿಲ್ಲ. ಹಾಗೇ ನಾವು ಹೋರಾಟ ಮಾಡದೇ ನಮಗೆ ನಮ್ಮ ಹಕ್ಕುಗಳು ಸಿಗುವುದಿಲ್ಲ. ಅದಕ್ಕೇ, ನಾವು ರಸ್ತೆಗಿಳಿದು ಧ್ವನಿ ಎತ್ತಲೇಬೇಕು. ಸಂವಿಧಾನ ನಮಗೆ ಒಗ್ಗೂಡುವ ಹಕ್ಕನ್ನು ಕೊಟ್ಟಿದೆ. ಆ ಹಕ್ಕನ್ನು ಚಲಾಯಿಸಲು ನಾವಿಲ್ಲಿ ಸೇರಿದ್ದೇವೆ. ನಾವು ಜಾಗೃತರಾಗುತ್ತಿದ್ದೇವೆ. ಈ ಜಾಗೃತಿಯೇ ರಾಜಕಾರಣದಲ್ಲಿ ನಮ್ಮ ರಣನೀತಿಯನ್ನು ನಿರ್ಧರಿಸಲಿದೆ.

ಹುಕುಮ್‌ಶಾಹಿ ಧೋಕಾ ಹೈ! ಧಕ್ಕಾ ಮಾರೋ ಮೌಕಾ ಹೈ
ಹಿಂದೂ ಸತ್ತಾ ಧೋಕಾ ಹೈ! ಧಕ್ಕಾ ಮಾರೋ ಮೌಕಾ ಹೈ
ಜಾತಿ ಸತ್ತಾ ಧೋಕಾ ಹೈ! ಧಕ್ಕಾ ಮಾರೋ ಮೌಕಾ ಹೈ
ಔರತೋಂಕೇ ಸಹಭಾಗ್ ಬಿನಾ! ಹರ್ ಬದಲಾವ್ ಅಧೂರಾ ಹೈ
ಸಂವಿಧಾನ್ ಝಿಂದಾಬಾದ್
ಅಂತಾರಾಷ್ಟ್ರೀಯ ಮಹಿಲಾ ದಿನ್ ಝಿಂದಾಬಾದ್...

*(ಭಾಷಣದ ಅನುವಾದ ಮತ್ತು ಬರಹ ರೂಪ: **ರಾಜೇಶ್ವರಿ ಜೋಶಿ**)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಣ್ಣು ಇಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳಾಕ ಸಾಧ್ಯ ಇಲ್ಲ

**– ಡಾ. ಮೀನಾಕ್ಷಿ ಬಾಳಿ**

ಅಜ್ಞಾನವೆಂಬ ತೊಟ್ಟಿಲಲ್ಲಿ ಜ್ಞಾನವೆಂಬ ಶಿಶುವ ಮಲಗಿಸಿ ಸಕಲ ವೇದಶಾಸ್ತ್ರಗಳೆಂಬ ನೇಣು ಬಿಗಿದು ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ, ತೊಟ್ಟಿಲು ಮುರಿದಲ್ಲದೇ ನೇಣು ಕಡಿದಲ್ಲದೇ ಜೋಗುಳ ನಿಂದಲ್ಲದೇ ಗುಹೇಶ್ವರ ಲಿಂಗವ ಕಾಣಬಾರದು ನೋಡಾ..

ಅಲ್ಲಮನ ಈ ವಚನದೊಂದಿಗೆ ಇವತ್ತಿನ ಅಭೂತಪೂರ್ವ ಮತ್ತು ಅತ್ಯಂತ ಮೌಲಿಕವಾದ ವೇದಿಕೆಯ ಎದುರು ಇರತಕ್ಕಂತಹ ಒಕ್ಕೂಟದ ಸಂಗಾತಿಗಳಿಗೆಲ್ಲ ಅನಂತಾನಂತ ನಮಸ್ಕಾರ ತಿಳಿಸುತ್ತ ನಮ್ಮ ಹೆಣ್ಮಕ್ಳ ವಿಚಾರದ ಬಗ್ಗೇನೇ ಕೆಲ ಮಾತುಗಳನ್ನು ಹೇಳಬೇಕು ಅಂದ್ಕೊಂಡಿದೀನಿ. ಸಂಗಾತಿಗಳೇ, ಇವತ್ತು ಅಸಂಖ್ಯಾತ ಮಹಿಳೆಯರು ನಾವಿಲ್ಲಿದ್ದೇವೆ. ಯಾವುದನ್ನ ಭಾರತೀಯ ಸಂಸ್ಕೃತಿ ಅಂತ ಕರೀತೇವೋ ಅದರೊಳಗೆ ಹೆಣ್ಮಕ್ಕಳೀಗೆ ಎರಡನೇ ದರ್ಜೆ ನಾಗರಿಕರಾಗೇ ಇಟ್ಟಾರ. ನಮ್ಮ ಹೆಣ್ಮಕ್ಕಳು ಮೊದ್ಲು ತಮ್ಮೊಳಗಿರೋ ಅಜ್ಞಾನವನ್ನ ಕಿತ್ತು ಒಗೆದು ವೈಚಾರಿಕ ನಿಲುವಿನತ್ತ ಸಾಗಬೇಕಾಗಿದೆ, ಬಾಬಾ ಸಾಹೇಬರು ಹೇಳಿದಂತೆ ಇವತ್ತು ನಮ್ಮ ಸೋದರಿಯರು ಗುಡಿಗುಂಡಾಂತರಗಳ ಮುಂದೆ ಪೂಜೆ–ಪುನಸ್ಕಾರಕ್ಕೆ ಕ್ಯೂ ಹಚ್ಚೋ ಬದ್ಲು ಗ್ರಂಥಾಲಯದ ಎದುರು ಕ್ಯೂ ಹಚ್ಚಿ ವೈಚಾರಿಕವಗಿ ಬೆಳೀಬೇಕಾಗೇತಿ. ಸ್ನೇಹಿತರೆ, ವೈದಿಕ ಸಿದ್ಧಾಂತ ಹೆಣ್ಣನ್ನು ಮಾಯೆ ಅಂದ್ರು, ಹೆಣ್ಣನ್ನು ನಡೆದಾಡುವ ಸ್ಮಶಾನ, ಹೆಣ್ಣುರಾಕ್ಷಸ, ಹೆಣ್ಣು ಚಂಚಲೆ, ಹೆಣ್ಣಿನಿಂದ ವಿಶ್ವಾಮಿತ್ರ ಬಿದ್ದ, ರಾವಣ ಬಿದ್ದ ಹೆಣ್ಣಿನಿಂದ, ದೇವಾನುದೇವತೆಗಳು ಕೆಟ್ಟರು ಹೆಣ್ಣಿನಿಂದ ಅಂದ್ರು, ಅವರ ಚಿತ್ತ ಸರೀಯಿಲ್ಲ. ಅದರಕಾರಣ ನಮ್ಮನ್ನ ಕೂಡಿಟ್ರು. ಈ ಹಿನ್ನೆಲೆಯಲ್ಲಿ ಇವತ್ತು ಭಾಳ ದೊಡ್ಡ ಮಹಿಳಾ ಲೋಕ ನಮ್ಮೆದುರಿಗೆ ಇದೆ. ಅವರನ್ನು ಸಾಂಸ್ಕೃತಿಕವಾಗಿ ಪರ್ಯಾಯಗಳನ್ನು ರೂಪಿಸಿ ಮುಂದೆ ತೆಗೆದುಕೊಂಡು ಹೋಗಬೇಕಾದಂತಹ ಜವಾಬ್ದಾರಿ ನಮ್ಮ ಮೇಲಿದೆ.

ಇಲ್ಲಾಂದ್ರೆ ಅವರಿಗೆ ವೈಭವ ಲಕ್ಷ್ಮೀ, ಗೌರಿಜಪ, ಸಹಸ್ರಜಪ, ಆ ಜಪಯಜ್ಞಾ ಈ ಜಪಯಜ್ಞಾ ಇವೆಲ್ಲವುಗಳನ್ನೂ ಹೇಳಿ, ಆ ಕಾಲದಿಂದ ನಮ್ಮ ಮನೆ ಹೆಣ್ಮಕ್ಳನ್ನು ಮನೀ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹೊರಗ ಬಿಟ್ಟಿಲ್ಲ, ಅವರರ ಏನ ಮಾಡ್ತಾರ, ಸಿನೆಮಾಕ ಹೋಗ್ತೇವಂದ್ರ ಮನಿಯಾಗ ಕಳಸಂಗಿಲ್ಲ, ಭಾಷಣ ಕೇಳಾಕ ಹೋಗ್ತೇವಂದ್ರ ಕಳಸಂಗಿಲ್ಲ, ದೇವರಗುಡಿ ಅಂದ್ರ ಕಳಸ್ತಾರ, ಸತ್ಸಂಗ ಅಂದ್ರ ಕಳಸ್ತಾರ, ಅದಕ ನಾವ ಅಲ್ಲೇ ಹೆಚ್ಚೀಗ ಹೋಗಾಕ ಹತ್ತೇವಿ, ನಮಗ ಅಂಥಧಾರ್ಮಿಕ ಸಂಸ್ಥೆಗಳು ನಮ್ಮ ರಿಕ್ರಿಯೇಷನ್ ಕ್ಲಬ್‌ಗಳಾಗ್ಯಾವು. ಅಲ್ಲೀಗ ಅದೆಂಥದೋ ಯೋಗಾ ಹೇಳಿಕೊಡಲಿಕ್ಕ ಹತ್ಯಾರು, ಯೋಗಾ ಮಾಡಬೇಕಿದ್ರ ಕಂಪಲ್ಸರೀ ಚೂಡಿದಾರ ಹಾಕ್ಕೋಬೇಕಂತ, ನಮ್ಮ ಹೈದರಾಬಾದ ಕರ್ನಾಟಕದ ಕಡೆ ಹೆಣ್ಮಕ್ಳು ಚುಡಿದಾರ ಹಾಕ್ಕೋಳದು ಅಷ್ಟ ಇಸೀ ಇರಲಿಲ್ಲ. ಯೋಗಾ ಕ್ಲಾಸೀಗ ಹೋದ್ರ ಹಂಗರೇ ಚುಡೀದಾರ ಹಕ್ಕೋಳಾಕ ಸಿಗತೇತಿ ಅಂತ ನಮ್ಮ ಆಂಟಿಗಳು ಹೆಚ್ಚು ಹೆಚ್ಚು ಯೋಗಾ ಕ್ಲಾಸಿಗ ಹೋದ್ರು. ಅಂದ್ರ ನಾವು ಮಹಿಳೆಯರು ಧಾರ್ಮಿಕರಲ್ಲ, ಮಹಿಳೆಯರು ಮೌಢ್ಯದ ಒಳಗಡೆಯಿಲ್ಲ, ಅವರು ಧರ್ಮ ಮತ್ತು ಕಂದಾಚಾರದೊಳಗ ಇನ್ನೊಂದು ಆಪ್ಶನ್ ಇರಲಾರದ್ದಕ್ಕೆ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂಥ, ತಮ್ಮ ಅಸ್ತಿತ್ವದ ಹುಡುಕಾಟದಲ್ಲಿ ವಿಹರಿಸ್ತಾ ಇರ್‍ತಾರೆ. ಹೀಗಾಗಿ ನಮಗಾಗಿಯೇ ಒಂದು ಪರ್ಯಾಯ ಕಟ್ಟಿಕೊಡುವಂತಹ ಸಾವಿತ್ರಿ ಬಾಯಿ ಫುಲೆ ಅಂತಹ ನಡೆಗಳು ನಮ್ಮ ನಡುವೆ ಮಹತ್ವದ ಸಂಗತಿಗಳಾಗಬೇಕು. ಸಾವಿತ್ರಿ ಬಾಯಿ ಮಕ್ಕಳಿಗೆ ಶಾಲೆ ಕಲಿಸುವದನ್ನು ಮಕ್ಕಳಿಗಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟಿರುವಂಥದ್ದನ್ನು ಹೇಳುವ ಮೂಲಕ ಈ ನಾಡಿನ ಮಹಿಳೆಯರ ಸಾಮರ್ಥ್ಯವನ್ನು ಎತ್ತಿಹಿಡಿಯಬೇಕು ಮತ್ತು ಈ ನಾಡಿನ ಮಹಿಳೆಯರನ್ನ ವಿಜ್ಞಾನದತ್ತ ವೈಚಾರಿಕತೆಯತ್ತ ಎಳೆದು ತರಬೇಕಾದಂತಹ ಒಂದು ಗುರುತರವಾದ ಜವಾಬ್ದಾರಿ ನಮ್ಮ ಒಕ್ಕೂಟದ ಮೇಲೆ ಇದೆ. ನಮ್ಮೆಲ್ಲ ಪ್ರಗತಿಪರ ಹೋರಾಟಗಳಲ್ಲಿ ಚಳುವಳಿಗಳಲ್ಲಿ ಮಹಿಳೆಯರು ಮುನ್ನಲೆಗೆ ಬರಬೇಕು, ಅಂದಾಗ ಮಾತ್ರ ಮಹಿಳೆಯರ ಮೂಲಕ್ಕೆ ನಾವು ವೈಚಾರಿಕತೆಯನ್ನ ಬಿತ್ತಲಿಕ್ಕೆ ಸುಲಭ ಆಗ್ತದೆ.

ಯಾಕಂದ್ರ ಭಾಳ ಸಂದರ್ಭದಲ್ಲಿತಮ್ಮ ಮಕ್ಕಳೀಗೆ ದೇವರ ದೆವ್ವಗಳ ಅಂಜಿಕಿ ಹಕೋರ ನಮ್ಮ ಹೆಣ್ಮಕ್ಳು, ದೆವ್ವ ಬರ್ತದ ನೋಡ ಸುಮ್ಮ ಮಕ್ಕೋ, ಅಂತಅಂತ ಅಂಜಸ್ತೀವಿಲ್ಲ ನಾವು ಮಕ್ಕಳೀಗೆ? ಅಷ್ಟೇ ಅಲ್ಲದ, ದೇವ್ರೀಗ ನೀವೇದ್ಯ ತಪ್ಪಸಬ್ಯಾಡ್ವಾ, ಮೊದ್ಲ ನಮಗ ದೆವ್ವ ಕಾಡಕಹತ್ತೇತಿ ಅಂತ ಮಕ್ಕಳನ್ನ ಗುಡಿಗುಂಡಾಂತರಕ್ಕ ಕಳಸಕಿ ಅಕೀನೆ ಇರ್ತಾಳ. ಅಕೀ ಸೈಕಾಲಜಿ ಏನು ಅಂದ್ರ, ಅಕೀ ಕಷ ನಷ್ಟ ಕೇಳೂವಂಥ ಜೀವಂತ ಮನಷ್ಯಾರು ಅಕೀಗ ಸಿಗಂಗಿಲ್ಲ, ಇನ್ನೊಂದಂದ್ರ ಸಣ್ಣಾನ ಹಿಡ್ದು ಅಕೀನ್ನ ಅತಂತ್ರದಾಗ ಬೆಳಸಿರತಾರ, ಸ್ವಲ್ಪ ದೊಡ್ಡಾಕಿ ಆದಲಂದ್ರ ಆ ಗೊಂಬಿ ನಂದು ಈ ಗೊಂಬಿ ನಂದು, ಈ ಕ್ವಾಣಿ ನಂದು ಈ ರೂಂ ನಿಂದುಅಂತ ಪೋರಿ ಪೋರ ಆಡತಿದ್ರ ಅ ಮನೀ ಅಜ್ಜಿ ಬಂದ ಹೇಳ್ತಾಳ ಏನಂದ್ರ ನೀಏನ್ ಇಲ್ಲೇ ಇರುವಾಕಿ ಎನ? ಗಂಡನ ಮನೀಗ್ ಹೋಗಕಿ, ಇದ ಎಲ್ಲಾ ಮಟ್ಯಂದು ಅಂತಾಳ. ಅವ್ವ ಮನೀಗ ಭಾಂಡೀ ಅಂತ ಒಂದ ಸಣ್ಣ ಚಮಚೆ ತೊಗೊಂಡ್ರೂ ಸಹ ಸಂಗಪ್ಪ ನಿಂಗಪ್ಪ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅಂತ ಮಗನ ಹೆಸರ ಹಾಕಸತಾಳ, ದೊಡ್ಡಾಕಿ ಆದಳಂದ್ರಂತೂ ಮಣೀ ಮ್ಯಾಗ ಕುಂಡರ್ಸೆ ಬಿಡ್ತಾರ, ಹೊರಗಿನವರ ನೋಡಾಕ ಬರಾಕ ಸುರು, ನಿಂತ ತೋರಸ ತಂಗೀ, ನಡದ ತೋರಸ ತಂಗೀ, ಪೇಪರ ಓದ ತೋರಸತಂಗಿ, ಅ ವರನ ತೊದಲತನ ಅಂದ್ರ ನಡೀತೇತಿ, ಇಕೀ ಮತ್ರ ತೊದಲಬಾರದ. ಮುಂದ ಮದ್ವಿ ಆದ ಮ್ಯಾಗ ಇಕೀಗ 25 ವರ್ಷಾ, 8 ವರ್ಷದ ಮೈದುನಂಗ ಇಕೀ ಬರ್ರೀ ಹೋಗ್ರಿ ಅಂತರೀ ಹಚ್ಚೀ ಮತಾಡಬೇಕ, ಹಂಗಾಗಿ ಅಕೀಗ ಅತಂತ್ರ ಭಯ ಕಾಡಿ ಸ್ವಲ್ಪ ಅಗ್ರೆಸಿವ್ ಆಕ್ಕಾಳ. ಗಂಡ ಒಬ್ನ ತನ್ನವ ಅನಸಕ ಸುರೂ ಅಕ್ಕೇತಿ, ಗಂಡ ನನ್ನತನ್ನಕಡೆ ವಲಸಕೊಳಕ ಸುರೂ ಮಾಡ್ತಾಳ, ಮನೀ ಒಡದ್ಯ ಅಂತಾರ ಎಲ್ಲರೂ ಆಮ್ಯಾಗ. ಗಂಡಸರ ಯಾವಾಗೂ ಮನೀ ಒಡಿಯೂದಿಲ್ಲಂತ ಮತ್ತ, ಮನೀ ಒಡೀಲಿಕ್ಕ ನಿಮಗೇನೂ ಪ್ರಾಬ್ಲೆಮ್ಮೇ ಇಲ್ಲ ಇಲ್ಲಿ. ಮನೀ ಬಿಟ್ ಬ್ಯಾರೇ ಮನೀಗ ಬಂದವರಲ್ಲ ನೀವು, ಏನರ ಅಂದ್ರ ಕಳಸ್ತೇನ್ ನೋಡ ನಿನ್ನ ತವರ ಮನೀಗೆ, ಅಲ್ಲಿ ಹೋದ್ರ ಒಂದ ವಾರ ಆತಂದ್ರ, ಯಾಕವ್ವಾ ಹೋಗಂಗಿಲ್ಲೆನ ನಿನ ಗಂಡನ ಮನೀಗೆ? ದಾಸರ ಹೇಳ್ತಾರ 'ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ' ನಮಗ ಅಲ್ಲೀನೂ ಇಲ್ಲ ಇಲ್ಲೀನೂ ಇಲ್ಲ. ಅದಕ್ಕ ಬಾಬಾ ಸಾಹೇಬರು ಹೆಣ್ಮಕ್ಕೀಗೂ ಆಸ್ತೀ ಹಕ್ಕ ಕೊಟ್ರು, ನಂ ಹೆಣ್ಮಕ್ಳು ಯಾವ ದೇವ್ರೀಗೂ ನಮಸ್ಕಾರ ಮಾಡಬೇಕಾಗಿಲ್ಲ, ನಮಸ್ಕಾರ ಮಾಡೂದ ಇತ್ತಂದ್ರ ಅಂಬೇಡ್ಕರ್‌ಗ ಮಾಡ್ರಿ,

ಅಂಬೇಡ್ಕರ್ ಕೊಟ್ರ ಖರೆ, ಎಷ್ಟ್ ಮಂದೀ ಗಂಡಸರು ಹೆಂಡತೀ ಹೆಸರಾಗ ಆಸ್ತೀ ಮಾಡ್ಯಾರ್ರೀ? ಯಾರ ಒಬ್ರ ಇಬ್ರ ಇನ್‌ಕಂಟ್ಯಾಕ್ಸ್ ಉಳಸಾಕ ಏನರ ಮಾಡಿರಬೇಕು. ಅದಿರಲಿ, ಹೀಂಗ ಬಾಬಾ ಸಾಹೇಬ್ ಆಸ್ತಿ ಹಕ್ಕ ಕೊಟ್ಟಿದ್ದಕ್ಕ ನಮ್ಮ ಮೇಲ್ವರ್ಗದ ಹೆಣ್ಮಕ್ಕಳೂ ಅವರಿಗೆ ಋಣಿಯಾಗಿರ್ಬೇಕು, ಆ ಕಾನೂನು ಪಾಸಾಗಲಿಲ್ಲ ಅನ್ನೋಕಾರಣಕ್ಕ ಸಂಸತ್ತಿಗೆ ರಾಜೀನಾಮೆ ಬಿಸಾಕಿದ ಏಕಮಾತ್ರ ರಾಜಕಾರಣಿ ನಮ್ಮ ಬಾಬಾ ಸಾಹೇಬ, ಜಗತ್ತಿನ ಅರ್ಧದಷ್ಟಿರುವ ನಮ್ಮ ಹೆಣ್ಮಕ್ಕಳ ಸಂಖ್ಯೆ ಇವತ್ತು ಕಡಮಿಯಾಗಾಕ ಹತ್ತೇತಿ, ಯಾಕ ಹ್ಯಾಂಗ ಕಡಮಿಯಾಗಾಕ ಹತ್ತೇತಿ? ಹೊಟ್ಯಾಗರ ಕೊಲ್ರಿ, ಹುಟ್ಟೀದ ಬಳೀಕರ ಕೊಲ್ರಿ, ವರದಕ್ಷಿಣೆ ಹೆಸರನಾಗರ ಕೊಲ್ರಿ, ಮರ್ಯಾದಾ ಹೆಸರನಾಗರೆ ಕೊಲ್ರಿ, ಅಯ್ಯಪ್ಪ ಸ್ವಾಮಿ ಹೆಸರನಾಗರೆ ಹಲ್ಲೆ ಮಾಡರೀ, ದೇವರದು ನಮ್ದು ನಡೂವ ನೀವ್ಯಾಕ ಬರ್ತೀರಪ? ನಮಗ ದೇವ್ರೀಗೆ ಬಿದ್ದೇತಿ ಜಿದ್ದು, ನಾವ ನಾವ ಹ್ಯಾಂಗರೆ ಸರೀ ಮಾಡ್ಕೋತೆವಿ, ಇಲ್ಲೂ ಪುರೋಹಿತಶಾಹಿ ಸ್ವಾರ್ಥ ಐತಿ ಅನ್ನೋದನ್ನ ನಾವು ಅರ್ಥ ಮಾಡ್ಕೋಬೇಕು ಸೋದರಿಯರೇ. ಹೀಗಿರುವಾಗ ಮಹಿಳೆಯರನ್ನ ಒಂದು ವೈಚಾರಿಕ ತಳಹದಿಯ ಮೇಲೆ ತರುವಂಥ ಒಂದು ಗಟ್ಟಿಯಾದ ಮತ್ತು ನಮ್ಮನ್ನ ಪ್ರಧಾನ ಧಾರೆಯೊಳಗ ಒಳಗೊಳ್ಳುವಂಥ ಕೆಲಸ ಆಗಬೇಕಾಗೇತಿ.

ನಮ್ಮ ಹೆಣಮಕ್ಳ ಅಭಿವೃದ್ಧಿ ದಾರಿಯೊಳಗ ಈ ಮೌಢ್ಯಗಳು ಅಡ್ಡಗಾಲ ಆಗತಾವು, ಭಾಳ ಸಲ ಜನ್ರತಲೀ ಒಳಗ ಏನಿರ್ತದ ಅಂದ್ರ ಹೆಣ್ಮಕ್ಕಳ ಹೆಚ್ಚ ಮೂಢನಂಬಿಕೆ ಆಚರ್ಸತಾರ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅಂತ, ಖರೇ ಹೇಳಬೇಕಂದರ ಹೆಣಮಕ್ಕಳೇ ಹೆಚ್ಚು ವೈಚಾರಿಕವಾಗಿರ್ತಾರ, ಈ ಗಂಡಸರ ಬುದ್ಧಿ ಶುದ್ಧ ಮಾಡೋ ಸಲ್ವಾಗಿ ಸುಮಸುಮ್ನೇ ಆಚರಣಿ ಮಾಡಬೇಕಾಗ್ತದ ನಾವು. ಸ್ನೇಹಿತರೇ, ಮೌಢ್ಯ ಅನ್ನೋದು ಆಚರಣೆ ಮಾತ್ರ ಅಲ್ಲ, ಎಲ್ಲ ಬಗೆಯ ಮೌಢ್ಯಗಳನ್ನು ಪ್ರಚುರ ಪಡಿಸೋಒಂದು ವ್ಯಾಪಾರೀ ಲೋಕ ಇದೆಯಲ್ಲ, ಅದು ಅತ್ಯಂತ ಅಪಾಯಕಾರಿ. ಪ್ರಗತಿಪರ ಜನರೆಲ್ಲ ಒಗ್ಗಟ್ಟಾಗೋ ಕಾಲ ಬಂದಿದೆ ಈಗ. ಇವತ್ತು ಹೆಣ್ಮಕ್ಕಳ ಕುರಿತು ಮಾತಾಡಬೇಕಾದಾಗ ಶಬರಿ ಮಲೆ ಪ್ರಕರಣ ನೆನಪಿಗೆ ಬರ್‍ತಾ ಇದೆ. ಶಬರಿಮಲೆಯಲ್ಲಿ ಹೆಣ್ಮಕ್ಕಳು ಮುಟ್ಟು ಆರಂಭ ಆಗಿ ಮುಟ್ಟು ಹೊರಗ ಹೋಗೂ ತಂಕ ಹೋಗಬಾರದು ಅಂದ್ರು, ಅಯ್ಯಪ್ಪಗ ಮುಟ್ಟಾಗೋ ಹೆಣ್ಮಕ್ಳಂದ್ರ ಆಗೂದಿಲ್ಲಂತ, ಯಾಕ? ಅಯ್ಯಪ್ಪ ಹುಟ್ಟಿದ್ದು ಹ್ಯಾಂಗ? ಅವ್ರು ಹೇಳ್ತಾರ ಹರಿಹರ ಸುತನೇಅಯ್ಯಪ್ಪ, ಆ ಹರಿ ರಾಕ್ಷಸರಸಂಹಾರ ಮಾಡೂ ಹೊತ್ನ್ಯಾಗ ಮೋಹಿನಿ ವೇಶ ತೊಟ್ಕೊಂಡು ಬಂದು ಹರನ ಜೊತೀ ಸಂಯೋಗ ಹೊಂದಿ ಹುಟ್ಟಿದವ ಅಯ್ಯಪ್ಪ, ಐದು ನಿಮಿಷರೇ ಹರಿ ಹೆಣ್ಣಾಗಿದ್ದ. ಯಾರರ ಆಗ್ಲಿ ಅಂವ ನಮ್ ಹೊಟ್ಟೀ ಒಳಗ ಹುಟ್ಟಿ ಬರ್‍ಬೇಕು, ಮ್ಯಾಗಿಂದ ನೀವ್ಯಾರೂ ಹುಟ್ಟಿಲ್ಲ, ದೇವ್ರ ದೃಷ್ಟೀ ಒಳಗ ಭೇದಭಾವಇಲ್ಲ, ಅಯ್ಯಪ್ಪನ ಪ್ರಬ್ಲೆಮ್ ಅಲ್ಲ ಇದ, ಅವನ ಭಕ್ತರದೂ ಪ್ರಾಬ್ಲಂ ಅಲ್ಲ, ಅಯ್ಯಪ್ಪನನ್ನ ಎನ್‌ಕ್ಯಾಶ್ ಮಾಡಿಕೊಳ್ಳೋರ ಸಮಸ್ಯೆ ಇದು. ಇದೊಂದು ರಾಜಕೀಯ ಅಝೆಂಡಾ ಆಗೇದ. ದೇಶಕ್ಕ ಹೆಣ್ಣುಮಕ್ಕಳೀಗ ಅಪಾಯ ಇರೋದು ಇಂಥೋರಿಂದ. ಭಕ್ತಿವಂತದೇಶ ನಮ್ಮದು ಅದರೊಳಗ ಎರಡ ಮಾತಿಲ್ಲ, ಆದ್ರ ಭಕ್ತಿಯೇ ಬ್ಯಾರೆ, ಮೌಢ್ಯವೇ ಬ್ಯಾರೆ, ಭಕ್ತಿಯಲ್ಲಿ ಅನನ್ಯತೆಇದೆ, ಆಪ್ತತೆ ಇದೆ, ಶಾಂತ ಭಾವ ಇದೆ, ಕಲಬುರ್ಗಿ ಗೌರಿ ಪನ್ಸಾರೆ ಮಾಡಿದ್ದು ಭಕ್ತಿ, ಆದರೆ ಅಂಥ ಭಕ್ತಿಯನ್ನೇ ಮೌಢ್ಯವಾಗಿ ರೂಪಾಂತರ ಮಾಡಿ ದೇವರ ಹೆಸರಲ್ಲಿ ಜನರನ್ನು ಕೊಲ್ತೀರಲ್ಲ? ಅದು ಉನ್ಮಾದ, ಅದು ಭ್ರಮೆ, ಸಂಗಾತಿಗಳೇ ಇವತ್ತು ಅಪಾಯಕಾರಿ ದಿನಗಳನ್ನು ಎದುರು ನೋಡ್ತಾ ಇದೇವೆ. ಅವರು ಹಿಂಸೆಯನ್ನ ವಿಜ್ರಂಭಿಸ್ತಾ ಇದಾರೆ, ಇದಕ್ಕಿಂತ ಅತಿರೇಕಕ್ಕೆ ಒಂದುದೇಶ ಹೋಗಲಿಕ್ಕೆ ಸಾಧ್ಯ ಇಲ್ಲ.

ಇಂದು ಪುರೋಹಿತಶಾಹಿ ನೀತಿತನ್ನ ಸ್ವಾರ್ಥವನ್ನು ಮುಗ್ದರೊಳಗೆ ಭಿತ್ತುವ ಮೂಲಕ ಭಾಳ ಮುಖ್ಯವಾದಂತಹ ನಮ್ಮ ಸಂಸ್ಕೃತಿಕುರಿತಾಗಿ ನಮ್ಮ ವೇಷ ಭೂಷಣ ಕುರಿತಾಗಿ ಕಮೆಂಟ್ ಮಾಡ್ತಾಯಿದೆ, ಸಂಸ್ಕೃತಿ ವಿಷಯ ಬಂದಾಗೆಲ್ಲ ಟಾರ್ಗೆಟ್ ಮಾಡೋದು ಮಹಿಳೆಯರನ್ನೇ, ನಾವು ಎಲ್ಲಿಕೂಡ್ತೇವಿ, ಹ್ಯಂಗ ನಿಂದರತೇವಿ, ಎಲ್ಲೀಗ ಹೊಕ್ಕೇವಿ, ಎಲ್ಲ ನಿಂದರತೇವಿ ಏನ್ ಹಾಕ್ಕೋತೇವಿ, ಅನ್ನೋದೆಲ್ಲ ಕಂಟ್ರೋಲ್ ಮಾಡ್ತಿರ್‍ತದ ಒಂದು ಕೈಯಿ. ಸಂಸ್ಕೃತಿ ಅಂದ್ರನ ನಾವು. ಇಪ್ಪತ್ತು ವರ್ಷದ ಹಿಂದಒಂದ ಫಂಕ್ಷನ್‌ಕ ಹೋಗಿದ್ದೆ, ನಾವ್ ಕೆಲವರ ಸೀರಿ ಉಟ್ಕೊಂಡಿದ್ವಿ, ಪಂಜಾಬ ಕಡೆಯಿಂದ ಬಂದವ್ರು ಕೆಲವರು ಚೂಡಿದಾರ ಹಾಕ್ಕೊಂಡಿದ್ರು. ಅಲ್ಲಿಂದ ಒಬ್ಬ ಮನುಷ್ಯ ನಮ್ಮ ಹತ್ರ ಬಂದವ್ನ 'ಚೆನ್ನಾಗಿದ್ದೀರ ಮೇಡಂ? ನಮ್ಮ ಸಂಸ್ಕೃತಿ ಎಷ್ಟ ಚಂದ ಉಳಸಾಕ ಹತ್ತೀರಿ ನೀವು,

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸೀರಿ ನಂ ಸಂಸ್ಕೃತಿ' ಅಂದ, ನನಗ ತಿಳೀತು ಇಂವ ಆ ಚೂಡಿದಾದ ಹೆಣ್ಮಕ್ಕೀಗ ಟಾರ್ಗೆಟ್ ಮಾಡಾಕ ಹತ್ತಾನ ಅಂತ, ನಾ ಯಾಕ ಅಂದೆ, ನಮ್ಮ ಸಂಸ್ಕೃತಿಯೊಳಗ ಗಂಡಸರು ಹಿಂದ ಪಂಚೆ ರುಮಾಲಾ ಹಕ್ಕೋತಿದ್ರು, ನೀಯಾಕ ಉಟ್ಕೊಂಡಿ ಪ್ಯಾಂಟಾ? ಅಂದೆ. ಹೀಂಗ ಸಂಸ್ಕೃತಿಯನ್ನ ನಮಗಷ್ಟ ಗುತಗೀ ಕೊಟ್ಟಾರ ಇವ್ರು? ಶಬರಿ ಮಲೈ ದೇವಸ್ಥಾನ ಪ್ರಕರಣದಾಗೂ ಹಂಗ, ಹೆಣ್ಮಕ್ಳ ಆಪೋಸ್ ಮಾಡೂವಂಗ ಸೀನ್ ಕ್ರಿಯೇಟ್ ಮಾಡ್ತಾರ ಅವ್ರು, ಅವರ ಮನೋಭೂಮೀನ ಡೇಂಜರ್ ಐತಿ. ಮೂವತ್ಮೂರು ಪರ್ಸೆಂಟ್ ಬಿಲ್ ಆಪೋಸ್ ಮಾಡೋ ಮುಂದನೂ ಹೆಣ್ಮಕ್ಳನ್ನ ಮುಂದು ಮಾಡಿದ್ರು, ಸಂಸ್ಕೃತಿಗೆ ಪೆಟ್ಟು ಬಿದ್ದಕೂಡಲೇ ಪುರೋಹಿತರಿಗೆ ಮೈನಡುಕ ಬರ್ತೇತಿ, ಯಾವಾಗಯಾವಾಗ ಮಹಿಳೆಯರ ಅಭಿವೃದ್ಧಿ ವಿಷಯ ಬರ್ತೇತಿ ಆವಾಗೆಲ್ಲ ಅವರು ಭಯಗ್ರಸ್ತರಾಗ್ತಾರ, ಮತ್ತ ಕಿನ್ನರಿಯರನ್ನ ಮಹಿಳೆಯರನ್ನ ಟಾರ್ಗೆಟ್ ಮಾಡ್ತಾರ. ಅದಕ್ಕಾಗಿ ನಾವು ಇವತ್ತು ಪ್ರಗತಿಪರಚಿಂತನೆ ನಿಲುವು ಇರೋರೆಲ್ಲ, ಅಲ್ಲಲ್ಲಿ ಹರಿದು ಹಂಚಿ ಹೋದೋರೆಲ್ಲ ಒಂದಾಗೋ ಕಾಲ ಬಂದಿದೆ. ವಚನ ಕಾಲದ ಸಂದರ್ಭದಲ್ಲಿ ಒಂದು ದೊಡ್ಡ ಸಾಂಘಿಕ ಶಕ್ತಿಯಾಗಿ ಹೋರಾಟ ಮಾಡಿದ್ದನ್ನು ನಾವು ನೋಡಿದ್ದೇವೆ.

ನಮ್ಮ ಭಾರತೀಯ ಮುಗ್ಧ ಜನ ಭಕ್ತಿಯ ವಿವಿಧ ಆಯಾಮಗಳಲ್ಲಿ ಬದಕ್ತಿರತಾರ, ಜನಪದರು ಕಟ್ಟಿದ ಕಾವ್ಯಗಳಲ್ಲಿ ನಮ್ಮ ದೇಶದಲ್ಲಿ ಐನೂರು ರಾಮಾಯಣಗಳಿವೆ, ಇವತ್ತು ರಾಮನನ್ನು ಧರ್ಮದ ಹೆಸರಲ್ಲಿ ಹೈಜಾಕ್ ಮಾಡಿ ರಾಜಕೀಯ ಮಾಡುತ್ತಿದ್ದವರ ಕುರಿತು ನಾವು ಎಚ್ಚರದಿಂದ ಇರಬೇಕಾಗಿದೆ. ಜನರ ನಡುವೆ ಈ ತಿಳಿವಳಿಕೆಯನ್ನು ತೊಗೊಂಡು ಹೋಗಬೇಕಾಗಿದೆ ಸಂಗಾತಿಗಳೇ. ಬಾಬಾ ಸಾಹೇಬ ಕಬೀರರ ಭಕ್ತರಾಗಿದ್ದರು, ಕಬೀರರ ದೋಹೆ ಅವರಿಗೆ ಅಂತರ್ಗತವಾಗಿತ್ತು. ಇವತ್ತು ವಾರಿಕರಿ ಅನ್ನೋ ಸಂಪ್ರದಾಯ ಇರಬಹುದು, ಅಲ್ಲಿ ಮುಸ್ಲಿಂ ಇದ್ರು, ದಲಿತರಿದ್ರು, ಲಿಂಗಾಯತರಿದ್ರು, ಎಲ್ಲರೂಇದ್ರು, ಜನರ ನಡುವೆ ಇನ್ನೂ ಭಾವೈಕ್ಯತೆ ಇದೆ. ಹಾಗೇ ನಾಥ ಪಂಥ ಇರಬಹುದು, ಆರೂಢ, ಸಿದ್ದ ಇರಬಹುದು, ಇವುಗಳ ಮೂಲಕ ಜನರ ನಾಡಿಯನ್ನು ನಾವು ಹಿಡೀಬೇಕಾಗಿದೆ. ಜನರ ನಡುವೆ ಜಾತ್ಯಾತೀತತೆಇದೆ, ಆದರೆ ಜನರ ಭಾವನೆಗಳನ್ನು ಜನರ ಭಕ್ತಿಯನ್ನು ದುರ್ಬಳಕೆ ಮಾಡಿಕೊಳ್ಳುವ ಒಂದು ದುಷ್ಟ ಶಕ್ತಿ ಏನಿದೆಯಲ್ಲ, ಅದು ಮಾನವ ವಿರೋಧಿ ಫಿಲಾಸಫಿ, ಅದು ಸ್ತ್ರೀ ವಿರೋಧಿ ಫಿಲಾಸಫಿ, ಅದು ಶೂದ್ರ ವಿರೋಧಿ ಫಿಲಾಸಫಿ, ಅದು ಬಡವರ ವಿರೋಧಿ ಫಿಲಾಸಫಿ. ಬೆರಳೆಣಿಕೆಯಷ್ಟಿರುವ ಜನ ಈ ದೇಶದ ಸಂಪತ್ತನ್ನು ಉಪಭೋಗಿಸಬೇಕು ಅನ್ನುವ ಸ್ವಾರ್ಥ ಫಿಲಾಸಫಿ ಅದು.

ಮುಟ್ಟನ್ನ ಮೈಲಿಗೆ ಅಂತ ನೀವ್ ಕರೀತೀರಿ ಅಂತಾದ್ರ ಮುಟ್ಟಾದ ಮೂರು ದಿನಕ ಹುಟ್ಟಿ ಬಂದವರು ನೀವು ನಮಗ ಛೀತೂ ಅಂತೀರಿ? ನಾವರೆ ನಿಮ್ಮನ್ನ ಹುಟ್ಟೀಸದೋರ ಅದೀವಿ, ನಮ್ಮನ್ನ ನಗಣ್ಯಗೊಳಿಸುವಂಥ ಫಿಲಾಸಫಿ ಕುರಿತು ನಾವು ತಿಳಕೊಳ್ಳಬೇಕಾಗೇತಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸಂಗಾತಿಗಳೇ. ನಮ್ಮ ಒಂಬತ್ತು ತಿಂಗಳ ಮುಟ್ಟುಕಟ್ಟಿ ನೀವು ಹುಟ್ಟಿ ಬಂದದ್ದು, ನೀವೇನ್ ಗುಲಾಬ ಜಾಮೂನಾಗ ಹುಟ್ಟಿಲ್ಲ. ವೈದಿಕ ಸಿದ್ಧಾಂತ ನಮ್ಮನ್ನ ಮಾಯೆ ಅಂತದೆ, ಹೆಣ್ಣು ನಡೆದಾಡೋ ಸ್ಮಶಾನ ಅಂತದೆ, ಹೆಣ್ಣನ್ನು ರಾಕ್ಷಸಅಂತದೆ, ಹೆಣ್ಣು ಚಂಚಲೆ ಅಂತದೆ, ವಿಶ್ವಾಮಿತ್ರ ಬಿದ್ದ ಹೆಣ್ಣಿನಿಂದ, ರಾವಣ ಬಿದ್ದ ಹೆಣ್ಣಿನಿಂದ, ದೇವಾನುದೇವತೆಗಳು ಕೆಟ್ಟರು ಹೆಣ್ಣಿನಿಂದ, ಆದ್ದರಿಂದ ಹೆಣ್ಣು ಮಾಯೆ, ಅವರು ತಪಸ್ಸು ಮಾಡೋವಾಗ ಅವಳು ಎದುರು ಬಂದ್ರೆ ತಪಸ್ಸು ಭಂಗ ಆಗಿ ಅವರ ಚಿತ್ತ ಚಂಚಲವಾಗ್ತದಂತೆ, ನೀವ್ ದೇವ್ರನ್ ನೋಡ್ತಿದ್ರ ನೀವ್ ಸಾಧನಿ ಮಾಡ್ತಿದ್ರ, ನಮಗ ನೋಡಿ ನಿಮ್ ತಲೀ ಯಾಕ ಕೆಡಬೇಕು? ನೀವ್ ಅಷ್ಟ ಪರಿ ವೀಕ್‌ಇದ್ರ ನಾವೇನ್ ಮಾಡ್ಬೇಕು? ನಮ್ಮನ್ ನೋಡೀದ್ರ ನಂ ತಲೀಕೆಡಂಗಿಲ್ಲ? ನಾವ್ ಹ್ಯಾಂಗ ಸುಮ್ನ್ ಇರ್ತೇವಿ? ನೀವ್ ತಿಂದಿದ್ದ ಅದ ಉಪ್ಪಖಾರಾ ಹುಳೀ ನಾವೂ ತಿಂದೇವಿ, ನೀವ್ ನಮಕಾ ಬ್ಯಾರೇ ನಮೂನಿ ಹುಟ್ಟೀರಿ? ನಾವರೇ ನಿಮ್ಮನ್ ಹುಟ್ಟೀಸ್ದೋರ್ ಅದೀವಿ. ಹುಟ್ಟಿಸಿದ ನಮ್ಮನ್ನ ನಗಣ್ಯಗೊಳಿಸುವಂಥ ಒಂದು ಫಿಲಾಸಫಿ ಕುರಿತು ನಾವು ಮಾತಾಡಬೇಕಾಗೇತಿ. ಯಾರ ಹೆಚ್ಚೂ ಅಲ್ಲ ಯಾರ ಕಮ್ಮೀನೂ ಅಲ್ಲ ಇಲ್ಲಿ, ತೊಗಲೋಳು ತೊಗಲೊಕ್ಕಿತಗಲಿ ಬಂದವ ನೀನು, ಗಂಡು ಹೆಣ್ಣು ಸಂಯುಕ್ತಗೊಂಡು ಬಂದವರು ನಾವೆಲ್ಲ, ಹೀಗಿದ್ರೂ ನಮ್ಮನ್ನ ಮೈಲಿಗೆ ಅಂತ ಕರೀತೀರಲ್ಲ? ಇದರ ಹಿಂದಿರೋ ರಾಜಕಾರಣ ಆದ್ರೂ ಏನು? ಒಂದು ಸಾವಿರ ವರ್ಷಗಳ ಹಿಂದೆ ಹೆಣ್ಣನ್ನು ಮಾಯೆ ಛೀಥೂ ಅಂತ ಕರದ್ರಿ, ಸುಮ್ನಇದ್ವಿ, ಆದರೆ ಈ ಇಪ್ಪತ್ತೊಂದನೇ ಶತಮಾನದಲ್ಲೂ ವಿಜ್ಞಾನತಂತ್ರಜ್ಞಾನ ಬೆಳೆದ ಸಂದರ್ಭದಲ್ಲೂ ಹೆಣ್ಮಕ್ಳನ್ನ ನಾಲ್ಕು ಗ್ವಾಡಿ ನಡೂವ ಕಟ್ಟಿ ಹಾಕುವ ಹುನ್ನಾರಗಳು ನಡೀತಾನ ಇರ್ತಾವು.

ನಾವೆಲ್ಲ ಮಹಿಳೆಯರು ಒಂದೇ, ನಮಗ ಆತಂಕ ಏನು ಕಾಡ್ತಿದೆಅಂದ್ರ, ಇವತ್ತು ಭಾಳಷ್ಟು ಜನಾ ಮಹಿಳೆಯರು ಹೊರಗ ಬಂದು ದುಡೀಬೇಕಾದದ್ದು ಅನಿವಾರ್ಯ ಆಗೇತಿ, ಇವತ್ತು ಮುಂಜಾನಿಂದ ಸಂಜೀತನಕಾ ದುಡೀಬೇಕಾಗೇತಿ ನಾವು, ಹೌದಲ್ಲೋ? ನಮ ಹೆಣ್ಮಕ್ಳು ಸಾಫ್ಟವೇರ್ ಎಂಜಿನಿಯರ್ ಆಗ್ಯಾರ, ಡಾಕ್ಟರ್‌ಆಗ್ಯಾರ, ವಕೀಲರಗ್ಯಾರ, ಮೊದಲ ಏನ ಮಾಡ್ತಿದ್ರು? ಮನ್ಯಾಗಿದ್ರು, ಒಳ್ಗ ನಡೀತಿತ್ತು ಅತ್ಯಾಚಾರಗಳು, ಈಗ ಹೊರಗ ಅತ್ಯಾಚಾರಗಳು ನಡೀತಾವ, ಅದಕ ನಾವು ಏನ್ ಹೇಳ್ಬೇಕಾಗೇದ ಅಂದ್ರ, ಈಗ ನೋಡ್ರಿ ನಾವು ಮಹಿಳೆಗೆ ಎಲ್ಲಾರೀತಿಯ ಹಕ್ಕನ್ನೂ ಕೊಟ್ಟೇವಿ, ಅಧಿಕಾರ ಕೊಟ್ಟೇವಿ, ಹೊರಗ ಹೋಗೀ ದುಡದ ನೌಕ್ರೀ ಮಾಡ್ತಾರ, ನೌಕ್ರೀ ಮಾಡಾಕ ಪರ್ಮಿಷನ್ ಕೊಟ್ಟೇವಿ, ನಾವೇನ್ ಹೊರಗ ಹೋಗಾಕ ಒಲ್ಲೆ ಅಂದೇವೇನ್ರೀ ಅಂತ ನೀವ್ ಹೇಳ್ತಿರಿ, ಕೊಟ್ಟರಿ ನೀವ್‌ಇಲ್ಲನ್ನಂಗಿಲ್ಲ, ಕೊಟ್ಟೀರಿ ಅನ್ನೋದೇನ್ ಮಣ್ಣು? ನಾವ ತೊಗೊಂಡೇವಿ. ನೀವೇನ್ ಕೊಡ್ತೀರಿ, ಕೊಟ್ಟೀರೇನ್ ನೀವ್ ಎಂದರೆ? ಕೊಡೋದು ಬಿಡೋದು ಸುಳ್ಳ ಮಾತ, ನಾವ್ ತೊಗೊಂಡೇವಿ, ಈಗ ಆದ್ರ ನೀವ್ ಸುಮ್ಕ ಕೊಡಾಕ ಹತ್ತೀರಿ, ಯಾಕ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಸುಮ್ಕ ಕೊಡಾಕ ಹತ್ತೀರಿ ಅಂದ್ರ, ಒಬ್ರದ ಗಳಿಕಿ ಮ್ಯಾಲ ಸಂಸಾರ ನಡೀವಲ್ದಾಗೇತಿ ಈಗ, ಇಬ್ರೂ ಮೂರೂ ಮಂದಿ ದುಡೀಬೇಕಾಗೇತಿ, ಹೊರಗ ಹೋಗಿ ದುಡದ್ರೂನೂ ಹೆಣ್ಮಕ್ಕಳು ದುಡದತಂದ ಹಾಕೂದು ಸಂಸಾರಕ್ಕೇ, ಅದೇ ಗಂಡ ಅದೇ ಮಕ್ಕಳು ಅತ್ತೀ ಮಾವ ಸಂಸಾರ, ಹೊರಗ ದುಡದ್ರೂನೂ ಮನಿಯೊಳಗ ಕೆಲಸಾ ಮಾಡ್ತೇವಿ, ನಿಮ್ಮಪ್ಪ ಅವ್ವ ಸತ್ರೂ ಹೆಣದ ಮುಂದ ಕೂತು ನಾವ ಅಳತೀವಿ, ನಮ್ಮಪ್ಪ ಅವ್ವ ಸತ್ರೂ ನಾವ ಅಳತೇವಿ, ಹೀಂಗಿದ್ರೂ ನಮ್ಮ ಹೆಣ್ಮಕ್ಕಳನ್ನ ಒಜ್ಜೀ ಅಂತ ತಿಳಕೊಂಡ್ರಲ್ಲ? ಯಾಕ ನಮಗ ಒಜ್ಜೀ ಅಂದ್ರಿ? ಯಾಕ ನಮಗ ತುಚ್ಛ ಆಗಿ ಕಂಡ್ರೀ? ಯಾಕ ನಮಗ ಧಂ ತಿಳದ್ರೀ? ಧಂ ತಿಳಿಬ್ಯಾಡ್ರೀ, ಹೆಣ್ಣು ಇಲ್ಲದ ಜಗತ್ತು ಕಲ್ಪಿಸಿಕೊಳ್ಳಾಕ ಸಾಧ್ಯ ಇಲ್ಲಾ, ಇಂದು ಒಕ್ಕೂಟದ ಮೂಲಕ ಮಹಿಳೆಯರನ್ನ ಒಂದು ಶಾಂತ ಸಮಾನತೆಯ ಬದುಕಿನತ್ತ ಚಲಿಸುವ ಕೆಲಸಗಳು ಆಗಬೇಕಾಗೇತಿ ಅನ್ನೋ ಸಂಗತಿಯನ್ನ ಹೇಳಿ ನನ್ನ ಮಾತನ್ನ ಮುಗಸ್ತೇನಿ.

*(ಭಾಷಣದ ಬರಹ ರೂಪ: **ಸುನಂದಾ ಕಡಮೆ**)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ದೇಶಭಕ್ತಿ ಮತ್ತು ಯುದ್ಧೋನ್ಮಾದ

**– ಅಮರ್‌ಜಿತ್ ಕೌರ್**

ಗೌರಿ ಲಂಕೇಶ್ ಅವರಿಗೆ 'ನಿಮ್ಮನ್ನು ಈ ಭೂಮಿಯ ಮೇಲೆ ಇಲ್ಲದಂತೆ ಮಾಡುತ್ತೇವೆ' ಎಂದಾಗ ಅವರು, 'ನನ್ನನ್ನು ನೀವು ಇಲ್ಲವಾಗಿಸಿದರೇನಂತೆ ಇನ್ನೊಬ್ಬ ಗೌರಿ ಲಂಕೇಶ ಹುಟ್ಟುತ್ತಾಳೆ' ಎಂದು ಹೇಳಿದ್ದರು. ದಾಭೋಲ್ಕರರನ್ನೂ ನೀವು ಕೊಂದು ಹಾಕಿದಿರಿ. ಆದರೆ ವಿಜ್ಞಾನವನ್ನು ಸತ್ಯವೆಂದು ಸಾರುವ ಅಂದೋಲನ ಸತ್ತು ಹೋಯಿತೇ? ಕಲ್ಬುರ್ಗಿಯನ್ನು ಕೊಂದು ಹಾಕಿದ್ದಕ್ಕೆ ಪ್ರಜ್ಞೆ, ವಿಜ್ಞಾನವನ್ನು ಆಧರಿಸಿದ ಆಂದೋಲನ ನಿಂತು ಹೋಯಿತೇ? ಅದನ್ನು ನೀವು ಕೊಲ್ಲಲಾಗಲಿಲ್ಲ ಯಾಕೆಂದರೆ ಅಸಂಖ್ಯ ಜನರು ಅದನ್ನು ವಿರೋಧಿಸಿ ರಸ್ತೆಗಿಳಿದರು. ನಾನು ಗೌರಿ, ನಾನು ಕಲ್ಬುರ್ಗಿ, ನಾನು ದಾಭೋಲ್ಕರ್, ನಾನು ಗೋವಿಂದ ಪಾನ್ಸರೆ ಎಂದು ಸಾರಿದರು. ನಿಮಗೆ ಯಾವ ತತ್ವವನ್ನೂ ಕೊಲ್ಲಲಾಗುವುದಿಲ್ಲ. ಪ್ರಜಾಪ್ರಭುತ್ವದ ಬೇರುಗಳು ತುಂಬ ಆಳದಲ್ಲಿವೆ. ಸೆಕ್ಯುಲರಿಸಮ್‌ನ ಬೇರುಗಳು ತುಂಬ ಆಳದಲ್ಲಿವೆ. ಎಲ್ಲರನ್ನೂ ಒಳಗೊಂಡು ಮುನ್ನಡೆವ ಈ ದೇಶದ ಸಂಸ್ಕೃತಿ ತುಂಬ ಆಳವಾಗಿ ಬೇರೂರಿದ್ದು. ಈ ದೇಶದ ಭ್ರಾತೃತ್ವದ ಪರಿಕಲ್ಪನೆ ತುಂಬ ಆಳವಾದದ್ದು, ವಿಶಾಲವಾದದ್ದು.

ಈ ದೇಶದ ಯಾರನ್ನೇ ಹೆದರಿಸಲು ನೀವು ಪ್ರಯತ್ನಿಸಿ, ನಿಮಗೆ ಯಶ ಸಿಗಲಾರದು. ಈ ಹಿಂದುಸ್ತಾನ ತುಂಬ ಜಾತ್ಯಾತೀತ ಆಗಿರುವಂಥದ್ದು. ಇದನ್ನು ಕಿತ್ತು ಎಸೆಯುವುದು ನಿಮ್ಮಿಂದ ಸಾಧ್ಯವೇ ಇಲ್ಲ. ಜನಸಾಮಾನ್ಯರ ಧ್ವನಿಯನ್ನು ಅಡಗಿಸುವ ನಿಮ್ಮ ಪ್ರಯತ್ನಕ್ಕೆ ಫಲ ಸಿಗದು. ನಮ್ಮ ಶ್ರಮಿಕ ಅಂದೋಲನ, ರೈತ ಚಳುವಳಿ, ವಿದ್ಯಾರ್ಥಿ ಚಳುವಳಿ, ಮಹಿಳಾ ಅಂದೋಲನ ಎಲ್ಲವೂ ಈಗ ರಸ್ತೆಗಿಳಿದಿವೆ. ಇವತ್ತು ರಾಜಕೀಯ ಪ್ರಜ್ಞೆಯ ಕುರಿತ ಚರ್ಚೆ ನಡೆಯುತ್ತಿದೆ. ನಮ್ಮ ಸಂವಿಧಾನವನ್ನು ಸಂರಕ್ಷಿಸಿಕೊಳ್ಳುವ ಅಗತ್ಯ ಎದ್ದು ಕಾಣುತ್ತಿದೆ. ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಅಗತ್ಯತೆ ಎಂದಿಗಿಂತಲೂ ಹೆಚ್ಚಾಗಿದೆ. ಹಾಗೆಯೇ ದೇಶವನ್ನು ನಾಶಗೊಳಿಸಲು ಹೊಂಚುಹಾಕುತ್ತಿರುವ ಅಪಾಯದಿಂದ ನಮ್ಮ ದೇಶವನ್ನು ರಕ್ಷಿಸಬೇಕಿದೆ.

ಇವರು ಏನು ಮಾಡಲೂ ಹೇಸುವವರಲ್ಲ ಎಂಬ ಎಚ್ಚರಿಕೆಯನ್ನು ನಾನು ನಿಮಗೆ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಕೊಡಲು ಇಚ್ಛಿಸುತ್ತೇನೆ. ಇವರೆಲ್ಲ ರಸ್ತೆಗಿಳಿದು ಜೋರು ಜೋರಾಗಿ ದೇಶಭಕ್ತಿಯ ರಾಗ ಹಾಡುತ್ತಿದ್ದಾರೆ. ಇವರನ್ನು ಕೇಳಬೇಕಿದೆ, 14 ಫೆಬ್ರುವರಿಯಂದು ಪುಲ್ವಾಮಾದಲ್ಲಿ ಸೈನಿಕರ ಮೇಲೆ ನಡೆದ ದಾಳಿಯ ಬಗ್ಗೆ ನಿಮಗೆ ಮೊದಲೇ ಗೊತ್ತಿತ್ತು. 'ಯಾವುದೇ ಕ್ಷಣಕ್ಕೆ ನಮ್ಮ ಮೇಲೆ ದಾಳಿ ಆಗುವ ಸಾಧ್ಯತೆ ಇದೆ, ನಮಗೆ, ಹೆಲಿಕಾಪ್ಟರ್, ಯುದ್ಧ ವಿಮಾನಗಳ ಅವಶ್ಯಕತೆ ಇದೆ, ಇವನ್ನೆಲ್ಲ ಒದಗಿಸಿ' ಎಂದು ಕೇಳಿಕೊಂಡಿದ್ದರು. ಆದರೆ ಈ ಸರಕಾರ ಯುದ್ಧ ವಿಮಾನಗಳನ್ನು ಪೂರೈಸಲಿಲ್ಲ. ಹೆಲಿಕಾಪ್ಟರ್ ಕೊಡಲಿಲ್ಲ. 80 ಗಾಡಿಗಳನ್ನು ಸೈನಿಕರು ರಸ್ತೆಗೆ ತರಬೇಕಾಯಿತು. 250 ಸಿ.ಆರ್.ಪಿ.ಎಫ್. ಸೈನಿಕರನ್ನು ರಸ್ತೆಗಿಳಿಸಲಾಯಿತು. ಇವರೆಲ್ಲರ ಮೇಲೆ ದಾಳಿ ಆಗಲಿದೆ ಎಂಬುದು ಸರಕಾರಕ್ಕೆ ಗೊತ್ತಿತ್ತು. ಈ ಮಾತನ್ನು ನಾವು ಹೇಳಿದ್ದಲ್ಲ. ಜಮ್ಮು ಕಾಶ್ಮೀರದ ರಾಜ್ಯಪಾಲರೇ 'ಸೆಕ್ಯುರಿಟಿ ಲ್ಯಾಪ್ಸ್ ಆಯ್ತು' ಎಂದು ಹೇಳಿದ್ದಾರೆ. ಈ ಸೆಕ್ಯುರಿಟಿ ಲ್ಯಾಪ್ಸ್‌ನಿಂದಾಗಿಯೇ ಶತ್ರುಗಳ ದಾಳಿಯನ್ನು ತಡೆಯಲಾಗಲಿಲ್ಲ. 'ನೀವಿದನ್ನು ಬೇಕೆಂತಲೇ ಮಾಡಿದ್ದೀರಲ್ಲವೆ?' ಎಂದು ನಾವು ಕೇಳಬೇಕಿದೆ. ಎಲ್ಲ ಗೊತ್ತಿದ್ದೂ ಸರಕಾರ ಯಾವ ಎಚ್ಚರಿಕೆಯನ್ನೂ ವಹಿಸಲಿಲ್ಲ. 250 ಕೆಜಿ ಆರ್.ಡಿ.ಎಕ್ಸ್.ನ್ನು ಹೊತ್ತ ಗಾಡಿ ಅಲ್ಲಿಗೆ ತಲುಪಿದ್ದು ಹೇಗೆ? ಸೆಕ್ಯುರಿಟಿಗಾಗಿ ಏನೇನು ಕ್ರಮ ತೆಗೆದುಕೊಂಡಿದ್ದಿರಿ? ನಮ್ಮ 42 ಸಿ.ಆರ್.ಪಿ.ಎಫ್. ಜವಾನರು ಹುತಾತ್ಮರಾಗುತ್ತಾರೆ. ಇದಾದ 3 ಗಂಟೆಗಳ ತನಕ ಪ್ರಧಾನ ಮಂತ್ರಿಗಳು ಈ ವಿಷಯದ ಕುರಿತು ಮಾತೇ ಆಡುವುದಿಲ್ಲ. ಯಾಕೆಂದರೆ ಅವರು ಉತ್ತರಾ ಖಂಡದ ಗುಡ್ಡ ಬೆಟ್ಟಗಳ ಮೇಲೆ ನಡೆಯುತ್ತಿದ್ದ ಶೂಟಿಂಗ್‌ನಲ್ಲಿ ಬಿಝಿ ಆಗಿದ್ದರು! ಮಳೆ ಇತ್ತು, ವಾತಾವರಣ ಅನುಕೂಲಕರವಾಗಿರಲಿಲ್ಲವಂತೆ ಮೆಸೇಜ್ ಕಳಿಸಲು! ಇಂಥವರ ಕೈಯ್ಯಲ್ಲಿ ನಮ್ಮ ದೇಶ ಸುರಕ್ಷಿತವಾಗಿರಲು ಸಾಧ್ಯವೇ? ಇವರ ಕರ್ತವ್ಯ ಲೋಪದ ಕುರಿತು ಪ್ರಶ್ನಿಸಿದರೆ, ಇಂಥ ಪ್ರಶ್ನೆಗಳನ್ನು ಕೇಳುವವರು ದೇಶದ್ರೋಹಿಗಳು ಎಂದು ಬಿಂಬಿಸಲಾಯಿತು. ಈ ದೇಶದ ಜನತೆಗೆ ತಮ್ಮ ಸೈನಿಕರ ಬಗ್ಗೆ ಹೆಮ್ಮೆಯಿದೆ. ನಮಗೆ ನಮ್ಮ ಸೈನಿಕರ ಮೇಲೆ ಸಂಪೂರ್ಣ ವಿಶ್ವಾಸವಿದೆ. ಆದರೆ ನಿಮಗಿರುವಂತಿಲ್ಲ.

ಇಲ್ಲಿರುವ ಹೆಣ್ಣುಮಕ್ಕಳಿಗೆ ಅಭಿನಂದನ್ ಅವರ ಸಹೋದರಿ ಬರೆದ ಕವಿತೆಯನ್ನು ಓದಿ ಎಂದು ಹೇಳ ಬಯಸುತ್ತೇನೆ. ಅಭಿನಂದನ್ ಕೈದಿಯಾದ ದಿನ, ವಾಟ್ಸ್ ಆ್ಯಪ್‌ನಲ್ಲಿ ಕಂಡ ಅವರ ಭಾವಚಿತ್ರದಲ್ಲಿ ಅವರ ಕಣ್ಣಿಗೆ ಪಟ್ಟಿಯಿತ್ತು. ಅವರ ದೇಹದ ಮೇಲೆ ರಕ್ತದ ಕಲೆಗಳಿದ್ದವು. ಅವರ ಹೆಸರು ಕೇಳುತ್ತಿದ್ದಾರೆ. ತಾನೆಲ್ಲಿಯವನು ಎಂಬುದನ್ನು ಅಭಿನಂದನ್ ಹೇಳುತ್ತಿದ್ದಾರೆ. ತುಂಬು ಧೈರ್ಯದಿಂದ ಇಂಟರೋಗೇಶನ್ ಎದುರಿಸುತ್ತಿದ್ದಾರೆ. ಅವರ ಆ ಭಾವಚಿತ್ರವನ್ನು ನೋಡಿ ಅವರ ಸಹೋದರಿ ಕವಿತೆ ಬರೆದಿದ್ದಾರೆ. 'ಅಭಿನಂದನ್, ನಿನ್ನ ಮೇಲೆ ನಮಗೆ ಹೆಮ್ಮೆಯಿದೆ, ನೀನು ಎಷ್ಟು ಧೈರ್ಯದಿಂದ ಅಲ್ಲಿ ನಿಂತಿರುವೆ, ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಿರುವೆ, ಇಡೀ ಭಾರತ ಹೆಮ್ಮೆ ಪಡುತ್ತಿದೆ! ಯಾವುದೇ ಪರಿವಾರದ ಸದಸ್ಯ ಶತ್ರು ಪಾಳ್ಯದಲ್ಲಿ ನಿಂತಿರುವಾಗ ಆ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಪರಿವಾರ ಅನುಭವಿಸುವ ನೋವು ಎಂಥದು ಎಂದು ನಮಗೆ ಗೊತ್ತಿದೆ, ಅಂಥ ಸಂದರ್ಭದಲ್ಲಿಯೂ ಅವಳು ಸವಾಲು ಎಸೆಯುತ್ತಿದ್ದಾಳೆ! ರಸ್ತೆಗಳ ಮೇಲೆ ಉನ್ಮಾದ ಹರಡುತ್ತಿರುವ, ಯುದ್ಧಕ್ಕಾಗಿ ಹಪಹಪಿಸುತ್ತಿರುವ, ಭಾರತ ಪಾಕಿಸ್ತಾನದ ನಡುವೆ ಯುದ್ಧವಾಗಲೆಂದು ಬೇಡುತ್ತಿರುವ ಅವರಿಗೆ ಈ ಸುಳ್ಳು ದೇಶಭಕ್ತಿಯ ರಾಗ ಹಾಡುವುದನ್ನು ನಿಲ್ಲಿಸಿ ಎಂದು ಹೇಳುತ್ತಿದ್ದಾಳೆ. ಯುದ್ಧ ಅಂದರೇನು, ಅದರ ಪರಿಣಾಮಗಳೇನು ಎಂದು ಗೊತ್ತಿರದ ಮುಗ್ಧರ ಮನಸ್ಸಿನಲ್ಲಿ ಯುದ್ಧೋನ್ಮಾದವನ್ನು ತುಂಬುತ್ತಿದ್ದೀರಿ. ಹಿಂದುಸ್ತಾನ ಪಾಕಿಸ್ತಾನಗಳ ನಡುವೆ ಯುದ್ಧವಾದರೆ ಈ ದೇಶದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂಬುದು ಅವರಿಗೆ ಗೊತ್ತಿಲ್ಲ. ಇದನ್ನೆಲ್ಲ ಅಭಿನಂದನ್‌ನ ಸಹೋದರಿ ಹೇಳುತ್ತಿದ್ದಾಳೆ. ಕೆಲ ಸೈನಿಕರ ಪತ್ನಿಯರು ತಮ್ಮ ವಾಟ್ಸ್ ಆ್ಯಪ್ ಮೂಲಕ ಹೇಳುತ್ತಿದ್ದಾರೆ. 'ನಮ್ಮನ್ನು ಕೇಳಿ ನೋವು ಎಂದರೆ ಏನು ಎಂದು. ಯುದ್ಧದ ನೋವು ಎಂಥದೆಂದು. ಆದ್ದರಿಂದ ಯುದ್ಧದ ಉನ್ಮಾದವನ್ನು ಹರಡಬೇಡಿ' ಎಂದು.

ಪ್ರತಿಯೊಂದು ವಿಷಯದಲ್ಲಿಯೂ ಇಂದಿನ ಸರಕಾರ ಅಯಶಸ್ವಿಯಾಗಿದೆ. ಜನರಿಗೆ 15 ಲಕ್ಷ ಕೊಡುತ್ತೇವೆ ಎಂದರು, ಪ್ರತಿವರ್ಷ 2 ಕೋಟಿ ಜನರಿಗೆ ಉದ್ಯೋಗ ಸೃಷ್ಟಿಸುತ್ತೇವೆ ಎಂದರು ಆದರೆ ಇದ್ಯಾವುದನ್ನೂ ಕೊಡಲಿಲ್ಲ. ನೋಟು ಬಂದಿ ಮಾಡಿ ಜನರ ಉದ್ಯೋಗ ಕಸಿದುಕೊಂಡರು, ಭ್ರಷ್ಟಾಚಾರವನ್ನು ನಿಲ್ಲಿಸಲು ಇವರಿಗೆ ಸಾಧ್ಯವಾಗಲಿಲ್ಲ. ಇವೆಲ್ಲದರಲ್ಲಿಯೂ ಸರಕಾರ ಅಯಶಸ್ವಿಯಾಗಿದೆ. ಇದನ್ನೆಲ್ಲ ಮರೆಮಾಚಲು ಹುತಾತ್ಮರ ದುರ್ಬಳಕೆ ಮಾಡಿಕೊಂಡು ದೇಶ ಭಕ್ತಿಯ ಮಾತನ್ನಾಡುತ್ತಿದ್ದಾರೆ. ಜನರನ್ನು ದೇಶ ಭಕ್ತರು, ದೇಶದ್ರೋಹಿಗಳು ಎಂದು ವಿಭಾಗಿಸಿ ವೋಟಿನ ರಾಜಕಾರಣ ಮಾಡುತ್ತಿದ್ದಾರೆ. ನಾವು ಮಹಿಳೆಯರು ಒಂದು ನೆನಪಿಡಬೇಕು, ನಾವು ಜೀವ ತೆಗೆಯುವವರಲ್ಲ, ಜೀವ ಕೊಡುವವರು, ಈ ಜಗತ್ತು ನಡೆಯುವುದು ನಮ್ಮಿಂದ, ಹೊಸ ಜೀವಕ್ಕೆ ಜನ್ಮ ಕೊಡುವವರು ನಾವು. ಜೀವ ತೆಗೆಯುವುದರಲ್ಲಿ ನಮಗೆ ವಿಶ್ವಾಸವಿಲ್ಲ. ಜೀವ ಉಳಿಸುವುದರಲ್ಲಿ, ಜೀವವನ್ನು ಸೃಷ್ಟಿಸುವುದರಲ್ಲಿ ನಮಗೆ ವಿಶ್ವಾಸವಿದೆ. ಸರಕಾರ ಎಷ್ಟೇ ಆಟ ಆಡಲಿ, ನಮ್ಮ ಒಗ್ಗಟ್ಟು ಮುರಿಯಲು ನಾವು ಬಿಡುವುದಿಲ್ಲ. ಯುದ್ಧದಲ್ಲಿ ನಮ್ಮ ದೇಶ ತಲೆಬಾಗುವಂತೆ ಮಾಡುವುದಿಲ್ಲ. ಹುತಾತ್ಮರಾದ ಸೈನಿಕರನ್ನು ಬಳಸಿಕೊಂಡು ತಮ್ಮ ರಾಜಕೀಯದ ಬೇಳೆ ಬೇಯಿಸಿಕೊಳ್ಳುವುದನ್ನು ನಾವು ಒಪ್ಪುವುದಿಲ್ಲ.

ಅವರು ಯುದ್ಧದ ಮಾತು ಆಡಿದಾಗೆಲ್ಲ ನಾವು ಉದ್ಯೋಗದ ಬೇಡಿಕೆಯನ್ನಿಡೋಣ, ನಮ್ಮ ರೇಶನ್ ಎಲ್ಲಿದೆ ಎಂದು ಕೇಳೋಣ, ನಮ್ಮ ಪೆನ್ಶನ್ ಬಗ್ಗೆ ಕೇಳೋಣ, ನಮ್ಮ ಪ್ರಶ್ನೆಗಳನ್ನು ನಾವು ಮರೆಯಕೂಡದು. ಈ ಪ್ರಶ್ನೆಗಳನ್ನು ತೆಗೆದುಕೊಂಡೇ ಮುಂದೆ ಹೋಗೋಣ. ಈ ಅಧಿಕಾರ ಶಾಹಿ ನಮ್ಮ ಗರ್ಭವನ್ನೂ ಅಡ ಇಡಲು ನೋಡುತ್ತಿದೆ. ಹೆಣ್ಣುಮಕ್ಕಳೇ ಕೇಳಿ; ನೀವು ಎಂಥ ಮಗುವನ್ನು ಹೆರಬೇಕು ಎಂಬುದನ್ನು ಅವರು ನಿರ್ಧರಿಸಲಿದ್ದಾರೆ, ಆ ಮಗುವಿನಲ್ಲಿ ಎಂಥ ಗುಣಗಳಿರಬೇಕು ಎಂಬುದನ್ನು ಅವರು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಿರ್ಧರಿಸಲಿದ್ದಾರೆ, ನೀವು ಯಾವ ಮಂತ್ರವನ್ನು ಹೇಳಬೇಕು, ಗಂಡನ ಜೊತೆಗೆ ಯಾವಾಗ ಮಲಗಬೇಕು, ಏನನ್ನು ತಿನ್ನಬೇಕು, ಯಾವ ತರಹದ ಲೇಖನಗಳನ್ನು ಓದಬೇಕು, ನೀವು ಜನ್ಮ ಕೊಡಲಿರುವ ಮಗ ಭೀಮನಂತಾಗಿರಬೇಕೇ, ಅರ್ಜುನನಂತಾಗಿರಬೇಕೇ, ಯುಧಿಷ್ಠಿರನಂತಾಗಬೇಕೇ, ಕರ್ಣನಂತಾಗಬೇಕೇ ಎಂಬುದನ್ನು ಅವರೇ ನಿರ್ಧರಿಸಲಿದ್ದಾರೆ. ನೀವಲ್ಲ ನಿಮ್ಮ ಮಗುವಿನ ಕುರಿತು ನಿರ್ಧಾರ ತೆಗೆದುಕೊಳ್ಳುವವರು. ನಿಮ್ಮ ಕರ್ನಾಟಕದಲ್ಲಿಯೇ ಈ ಕುರಿತ ಪ್ರಯೋಗ 2 ಸ್ಥಳಗಳಲ್ಲಿ ನಡೆಯುತ್ತಿದೆ. ನಿಮ್ಮ ಮಹಿಳಾ ಅಂದೋಲನ ಸರಕಾರದ ಈ ನಡೆಯನ್ನು ಪ್ರಶ್ನಿಸಬೇಕು. ನಮ್ಮ ಗರ್ಭವನ್ನು ಅಡ ಇಡುತ್ತೀರಾ? ನಾವು ಮಕ್ಕಳನ್ನು ಹೆರಬೇಕೋ ಬೇಡವೋ, ಎಂಥ ಮಕ್ಕಳನ್ನು ಹೆರಬೇಕು ಎಂಬುದನ್ನು ನಾವು ನಿರ್ಧರಿಸುತ್ತೇವೆ, ನೀವಲ್ಲ. ಹೆಣ್ಣು ಭ್ರೂಣ, ಹೆಣ್ಣು ಶಿಶು ಹತ್ಯೆಗೆ ನಾವು ಅವಕಾಶ ಕೊಡುವುದಿಲ್ಲ, ಗಂಡು ಮಗು, ಹೆಣ್ಣು ಮಗು ಯಾರೇ ಆಗಿರಲಿ ನಾವು ಅವರ ಕಾಳಜಿ ಮಾಡುತ್ತೇವೆ ಎಂದು ನಾವು ಒತ್ತಿ ಹೇಳಬೇಕಿದೆ.

ಹಿಂದೂಸ್ತಾನದ ರಾಜಕಾರಣವನ್ನು ಹೇಸಿಗೆಯ ಮಟ್ಟಕ್ಕೆ ಇಳಿಸಲಾಗಿದೆ. ಹಿಂದುಸ್ತಾನದ ಪಾರ್ಲಿಮೆಂಟನ್ನು ದುರ್ಬಲಗೊಳಿಸಲಾಗಿದೆ. ಹಿಂದುಸ್ತಾನದ ಎಲ್ಲ ಡೆಮೋಕ್ರೇಟಿಕ್ ಸಂಸ್ಥೆಗಳನ್ನು ಇವರು ವಿನಾಶದ ಹಾದಿಗೆ ತಂದಿದ್ದಾರೆ. ಪ್ರಜಾ ಪ್ರಭುತ್ವದ, ಧರ್ಮ ನಿರಪೇಕ್ಷತೆಯ ವೈರಿಗಳಿಗೆ ಪಾಠ ಕಲಿಸಲೇ ಬೇಕು. ಇದೆಲ್ಲ ರಾಜಕೀಯ ಪ್ರಜ್ಞೆ ಇಲ್ಲದೇ ಸಾಧ್ಯವಾಗುವುದೇ? ಖಂಡಿತ ಇಲ್ಲ. ಅವರಿಗೆ ನಾವೀಗ ಹೇಳಬೇಕಿದೆ 'ಗುಜರಾತಿನಲ್ಲಿ ನೀವು ಆ ಮಕ್ಕಳನ್ನು ಹೊಡೆದಿರಲ್ಲ? ಅವರೇನು ತಪ್ಪು ಮಾಡಿದ್ದರು? ಸತ್ತ ಹಸುಗಳ ಅಂತ್ಯ ಸಂಸ್ಕಾರಕ್ಕೆಂದು ಅವರು ಹೊರಟಿದ್ದರು. ದಲಿತರನ್ನು ಹೊಡೆದು ಹಾಕಲು, ಅಕಲಾಕ್, ಪೆಹ್ಲೂ ಖಾನರನ್ನು ಹೊಡೆಯಲು ನೀವು ಏನೇನು ನೆಪಗಳನ್ನು ಹೇಳಿದಿರಿ? ನಿಮ್ಮ ಈ ನೆಪಗಳು ಎಷ್ಟು ದಿನ ಅಂತ ನಡೆಯಲಿವೆ?

ಸಮಾನತೆಯಲ್ಲಿ, ಧರ್ಮ ನಿರಪೇಕ್ಷತೆಯಲ್ಲಿ ನಂಬಿಕೆಯಿರುವ ನಾವು ಈ ಮನುವಾದಿಗಳಿಗೆ ಸವಾಲು ಒಡ್ಡಬೇಕಿದೆ, ನಿಮ್ಮ ಈ ವಿಚಾರಗಳಿಂದ ನಮ್ಮ ದೇಶದ ರಕ್ಷಣೆ ಸಾಧ್ಯವಿಲ್ಲ. ನಿಮ್ಮ ವಿಚಾರಗಳಿಂದ ನಮ್ಮ ದೇಶ ಹಿಂದಕ್ಕೆ ಹೋಗುತ್ತಿದೆ. ಜಗತ್ತಿನ ಓಟದಲ್ಲಿ ನಾವು ಹಿಂದೆ ಉಳಿಯುತ್ತಿದ್ದೇವೆ. ಹೀಗಾಗಲು ನಾವು ಬಿಡೆವು. ಈ ಜವಾಬ್ದಾರಿಯನ್ನು ಪುರುಷರೊಂದಿಗೆ ಮಹಿಳೆಯರೂ ಹೊರಬೇಕಿದೆ. ಆದ್ದರಿಂದಲೇ ಮಹಿಳಾ ಅಂದೋಲನಕ್ಕೆ ಇವತ್ತು ಮಹತ್ವ ಬಂದಿದೆ. ಈ ದಿನ ನಾವು ಹಾಡಿ ಕುಣಿದು ಸಂಭ್ರಮಿಸುವುದಷ್ಟೇ ಅಲ್ಲ. ನಮ್ಮ ಸಂಘರ್ಷಗಳನ್ನು ನೆನಪು ಮಾಡಿಕೊಳ್ಳುತ್ತೇವೆ. ನಮ್ಮ ಪ್ರಯಾಣನ್ನು ನೆನಪಿಸಿಕೊಳ್ಳುತ್ತೇವೆ, ನಮ್ಮ ಅವಶ್ಯಕತೆಗಳನ್ನು ನೆನಪಿಸಿಕೊಳ್ಳುತ್ತೇವೆ. ನಮ್ಮ ಸವಾಲುಗಳನ್ನು ನೆನಪಿಸಿಕೊಳ್ಳುತ್ತೇವೆ. ನಮ್ಮ ಸಂಕಷ್ಟಗಳನ್ನು ನೆನಪಿಸಿಕೊಂಡು ಅವುಗಳಿಂದ ಹೊರಬರುವ ದಾರಿ ಹುಡುಕುವಲ್ಲಿ ಸಫಲರಾಗುತ್ತೇವೆ. ನಮ್ಮ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅಂದೋಲನಗಳನ್ನು ಗಟ್ಟಿಗೊಳಿಸಲು ರಸ್ತೆಗಿಳಿಯುತ್ತೇವೆ. ಇಂದು ಪ್ರತಿ ಅಂದೋಲನದಲ್ಲಿಯೂ, ಅದು ಕಾರ್ಮಿಕರ ಅಂದೋಲನವಾಗಿರಬಹುದು, ರೈತರ, ವಿದ್ಯಾರ್ಥಿಗಳ, ಲೇಖಕರ ಅಂದೋಲನವಾಗಿರಬಹುದು, ಇಂಥ ಅನೇಕ ಅಂದೋಲನಗಳಲ್ಲಿ ಮಹಿಳೆ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳಬೇಕಿದೆ, ಅಲ್ಲಿ ಬರುವ ಸವಾಲುಗಳನ್ನು ಎದುರಿಸಬೇಕಿದೆ. ನಮ್ಮ ಡೆಮೋಕ್ರೇಟಿಕ್ ಸಂಸ್ಥೆಗಳ ಹನನವಾಗಿದೆ, ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ಆಗಿದೆ, ಪೋಲೀಸ್ ಮತ್ತು ನ್ಯಾಯ ವ್ಯವಸ್ಥೆಯೊಂದಿಗೆ ಆಟ ಆಡಲಾಗಿದೆ, ಸೈನಿಕರನ್ನು ಬಳಸಿಕೊಂಡು ವೋಟ್ ಬ್ಯಾಂಕ್ ಹೆಚ್ಚು ಮಾಡಿಕೊಳ್ಳಲಾಗುತ್ತಿದೆ.

ಇವೆಲ್ಲದರ ಜೊತೆಗೆ ನಮ್ಮ ದೇಶದ ಪ್ರಧಾನ ಸೇವಕರೆಂದು ಸಾರಿ ಸಾರಿ ಹೇಳಿಕೊಂಡವರು ಬರೀ ಸುಳ್ಳುಗಳನ್ನು ಹೇಳುತ್ತಿದ್ದಾರೆ. ಸತ್ಯಕ್ಕೆ ಈಗ ನಾಚಿಕೆಯಾಗುತ್ತಿದೆ. ಅದಕ್ಕೇ, ಇನ್ನು ಈ ಸುಳ್ಳಿನ ರಾಜಕಾರಣವನ್ನು ನೀವು ನಿಲ್ಲಿಸಿ. ಖುಲ್ಲಮ್ ಖುಲ್ಲಾ ಸುಳ್ಳು ಹೇಳಲಾಗುತ್ತಿದೆ. ಗುರು ನಾನಕ್, ಕಬೀರ ಮತ್ತು ಗೋರಖನಾಥರಿಗೆ ನೂರು ನೂರು ವರ್ಷದ ಅಂತರವಿದೆ. ಈ ಮೂವರೂ ಕೂಡಿ ಚರ್ಚೆ ಮಾಡುತ್ತಿದ್ದರಂತೆ! ನಮ್ಮ ಪ್ರಧಾನಿ ಹೇಳುತ್ತಾರೆ. ಇಷ್ಟೇ ಅಲ್ಲ, ಸ್ವಾಮಿ ವಿವೇಕಾನಂದರು ಸಾವರಕರರಿಂದ ಸಲಹೆ ಪಡೆಯುತ್ತಿದ್ದರಂತೆ! ಅದು ಹೇಗೋ? ಸಾವರಕರರು ಒಂದು ವರ್ಷದ ಮಗುವಾಗಿದ್ದಾಗ ವಿವೇಕಾನಂದರು ತೀರಿಹೋಗಿದ್ದರು. ಮುಂಬಯಿಯಲ್ಲಿ ಡಾಕ್ಟರರೊಂದಿಗೆ ಮಾತನಾಡುವಾಗ ನಮ್ಮ ಪ್ರಧಾನಮಂತ್ರಿ ಹೇಳುತ್ತಾರೆ– ನಿಮಗೇನು ಗೊತ್ತು? ಪ್ಲಾಸ್ಟಿಕ್ ಸರ್ಜರಿ ವಿದ್ಯೆ ನಮ್ಮ ದೇಶದಲ್ಲಿ ಏಳುಸಾವಿರ ವರ್ಷಕ್ಕೂ ಮೊದಲೇ ಇತ್ತು. ಆನೆಯ ಮರಿಯ ತಲೆಯನ್ನು ಮಾನವ ಮಗುವಿಗೆ ಆಗಿನ ಕಾಲದಲ್ಲಿ ಜೋಡಿಸಲಾಗಿತ್ತು! ಇದನ್ನು ನಮ್ಮ ಪ್ರಧಾನಮಂತ್ರಿ ಹೇಳುತ್ತಾರೆ! ಇನ್ನೂ ಕೇಳಿ.. ಏಳು ಸಾವಿರ ವರ್ಷಗಳ ಹಿಂದೆ ದೇಶಗಳು, ಖಂಡಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಿಯುತ್ತಿದ್ದವಂತೆ! ಆಗಲೇ ಇಷ್ಟೆಲ್ಲ ನಮ್ಮ ದೇಶ ಮುಂದುವರಿದಿದ್ದರೆ ರಾಮ ಸಬ್‌ಮರೀನ್, ರಾಕೆಟ್‌ಗಳನ್ನು ಬಳಸಿ ಯುದ್ಧ ಮಾಡಬಹುದಿತ್ತಲ್ಲ! ವಾನರ ಸೇನೆ ಸೇತುವೆ ಕಟ್ಟುವ ಅವಶ್ಯಕತೆ ಏನಿತ್ತು? ಇಂಥ ಸುಳ್ಳಿನಿಂದಾಗಿ ಸತ್ಯ ನಾಚಿಕೆ ಪಡುತ್ತಿದೆ. ಇವರ ಇಂಥ ಮಾತುಗಳಿಂದ ನಮ್ಮ ದೇಶದ ಹೆಸರಿಗೆ ಮಸಿ ಬಳಿದಂತಾಗಿದೆ. ವಿದೇಶಕ್ಕೆ ಹೋಗಿ ಭಾಷಣ ಮಾಡುತ್ತಾರೆ ನಮ್ಮ ಪ್ರಧಾನಿಗಳು. 700 ಕೋಟಿ ಭಾರತೀಯರಿಗೆ ತಾನು ಏನೇನು ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಾರೆ. ಇಡೀ ವಿಶ್ವದ ಜನಸಂಖ್ಯೆ 800 ಕೋಟಿ ಇದೆ. ಭಾರತದ ಜನಸಂಖ್ಯೆ 125 ಕೋಟಿ ಇದೆ. ಹಾಗಿದ್ದಲ್ಲಿ 700 ಕೋಟಿ ಭಾರತೀಯರು ಎಲ್ಲಿಂದ ಬಂದರು? ಬಡವರಿಗೆ ಮನೆಗಳೆಲ್ಲಿವೆ ಎಂದು ಕೇಳಿದರೆ ನಮ್ಮ ಪ್ರಧಾನ ಸೇವಕ ಪ್ರೆಸ್ ಕಾನ್ಫರನ್ಸ್ ಕರೆದು ಹೇಳುತ್ತಾರೆ– ನಾವು ಎಲ್ಲರಿಗೂ ಮನೆಗಳನ್ನು ಕೊಟ್ಟಿದ್ದೇವೆ. ನೂರಿಪ್ಪತ್ತೈದು ಕೋಟಿ ಕುಟುಂಬಗಳಿಗೆ ಹೊಸಮನೆಯ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೀಲಿಕೈ ಕೊಟ್ಟಿದ್ದೇವೆ ಎಂದು. ನಿಮ್ಮೆಲ್ಲರಿಗೂ ಪ್ರಧಾನಮಂತ್ರಿಗಳಿಂದ ಕೀಲಿ ಕೈ ಸಿಕ್ಕಿದೆ! ಬಜೆಟ್ ಸಂದರ್ಭದಲ್ಲಿ ದೊಡ್ಡ ದೊಡ್ಡ ಸುಳ್ಳುಗಳನ್ನು ಹೇಳಿ ನಮ್ಮ ಶ್ರಮಿಕರಿಗೂ, ಮಹಿಳೆಯರಿಗೂ ಮೋಸ ಮಾಡುತ್ತಾರೆ. ಈ ಸುಳ್ಳಿನ ಜಾಲದಲ್ಲಿ ಶ್ರಮಿಕರು, ರೈತರು, ವಿದ್ಯಾರ್ಥಿಗಳು, ಯುವಕರು ಶಿಕ್ಷಕರು ಯಾರೂ ಸಿಲುಕಿಕೊಳ್ಳಬಾರದು. ಲೇಖಕರು, ಪತ್ರಕಾರರು ಇವರ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡಿ ಸತ್ಯ ಹೊರತರಬೇಕು. ಇವರ ಆಳ್ವಿಕೆಯಲ್ಲಿ ನಮ್ಮ ದೇಶ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಯಾಕೆಂದರೆ ಇಂಥವರು ಸತ್ಯವನ್ನು ಮರೆಮಾಚಿ ಬಹಳ ಸಲೀಸಾಗಿ ಸುಳ್ಳು ಹೇಳುವವರು. ಇಂಥವರು ದೇಶವನ್ನು ಆಳುತ್ತಿದ್ದಾರೆ.

ಇಂಥ ಸ್ಥಿತಿಯಲ್ಲಿ ಮಹಿಳೆಯರ ಎದುರೂ ಸವಾಲುಗಳಿವೆ. ಕೊನೆಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

'ಅಚ್ಛೆ ದಿನ್ ಆಯೇಂಗೆ' ಎಂದು ಹೇಳಿದರು. ಅವೇನು ಬರಲಿಲ್ಲ. ಈಗ ಜನ 'ನಮ್ಮ ಕೆಟ್ಟ ದಿನಗಳನ್ನೇ ವಾಪಸ್ ಕೊಡಿ, ಒಳ್ಳೆಯ ದಿನಗಳು ನಿಮಗೇ ಇರಲಿ' ಎಂದು ಕೇಳುತ್ತಿದ್ದಾರೆ. ಅಚ್ಛೇ ದಿನ್ ಅಂತೂ ಬರಲಿಲ್ಲ. ಇವರು ಇನ್ನೊಂದು ಭರವಸೆಯನ್ನೂ ಕೊಟ್ಟಿದ್ದರು. ನಮ್ಮ ದೇಶದಲ್ಲಿ ತೊಡಗಿಸಿದ ಒಂದೊಂದು ರೂಪಾಯಿಯ 43 ಪೈಸೆಯಷ್ಟು ಹಣ ಬಂಡವಾಳ ಶಾಹಿಗಳಿಗೆ ಹೋಗುತ್ತಿದೆ, ನಮ್ಮ ಆಳ್ವಿಕೆ ಬಂದರೆ ಇದರ ಬಹುಪಾಲು ಹಣ ಜನ ಸಾಮಾನ್ಯರಿಗೆ ತಲುಪುವಂತೆ ಮಾಡುತ್ತೇವೆ ಎಂದು. 2014ರಲ್ಲಿ ರೂಪಾಯಿಯಲ್ಲಿ 48 ಪೈಸೆಯಷ್ಟು ಹಣ ಕೆನೆಪದರದ 10% ಶ್ರೀಮಂತರಿಗೆ ಹೋಗುತ್ತಿತ್ತು. 2015ರಲ್ಲಿ ಇದು 53 ಪೈಸೆಗೆ, 2016ರಲ್ಲಿ 58 ಪೈಸೆಗೆ, 2017ರಲ್ಲಿ 71 ಪೈಸೆಗೆ ಏರಿತು! 2018ರಲ್ಲಿ 77 ಪೈಸೆಯಷ್ಟು ಶ್ರೀಮಂತರ ಪಾಲಾಗುತ್ತಿದೆ. 1 ಕೋಟಿ 10 ಲಕ್ಷ ಜನರ ಉದ್ಯೋಗವನ್ನು ಕಸಿದುಕೊಳ್ಳಲಾಗಿದೆ. ಇದು ನಮ್ಮ ಹೇಳಿಕೆಯಲ್ಲ. ಸರಕಾರದ ವರದಿ. ಕೆಲಸ ಕಸಿದುಕೊಳ್ಳಲಾಗುತ್ತಿದೆ, ಬೆಲೆ ಏರಿಕೆ ಹೆಚ್ಚಾಗುತ್ತಿದೆ, ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಹೀಗಿರುವಾಗ ಪ್ರಧಾನಮಂತ್ರಿ ಮತ್ತು ಅವರ ತಂಡಕ್ಕೆ ಜನರನ್ನು ಯುದ್ಧದ ಉನ್ಮಾದಕ್ಕೊಳಪಡಿಸಿ ಚುನಾವಣೆ ಗೆಲ್ಲುವ ಒಂದೇ ದಾರಿ ಉಳಿದಿದೆ. ಈಗ ನಾವು ಬುದ್ಧಿವಂತರಾಗಬೇಕು. ನಮ್ಮ ಕರ್ತವ್ಯ ಪಾಲನೆಯ ಸಮಯ ಬಂದಿದೆ. ನಮ್ಮ ದೇಶವನ್ನು ಮಾರಾಟಕ್ಕೆ ಇಟ್ಟವರಿಗೆ, ಟ್ರಂಪ್ ಎದುರು ಸಲಾಮು ಹಾಕುವವರಿಗೆ, ಪ್ಯಾಲೆಸ್ತೀನಿಯನ್ನರನ್ನು ತುಳಿಯುತ್ತಿರುವವರಿಗೆ, ಇಸ್ರೈಲ್ ದೇಶದ ಗುಣಗಾನ ಮಾಡುವವರಿಗೆ ಪಾಠ ಕಲಿಸುವ ಸಮಯ ಬಂದಿದೆ.

1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಂಧರ್ಭದಲ್ಲಿ 'ಮಾಡು ಇಲ್ಲವೆ ಮಡಿ' ಪರಿಸ್ಥಿತಿ ಇತ್ತು. ಇವತ್ತಿನ ಸಂದರ್ಭವೂ ಮಾಡು ಇಲ್ಲವೇ ಮಡಿ ಸ್ಥಿತಿಗೇ ಬಂದಿದೆ. ನಮ್ಮ ದೇಶವನ್ನು ಉಳಿಸಬೇಕು ಇಲ್ಲವೇ ಮುಳುಗಲು ಬಿಡಬೇಕು. ಇಂದಿನ ಆಳುವ ಪಕ್ಷದ ಲಕ್ಷಣಗಳೆಲ್ಲ ಫ್ಯಾಸಿಸಂ, ನಾಜ಼ಿವಾದದ ದಾರಿಯಲ್ಲಿವೆ. ಸಂವಿಧಾನವನ್ನು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಛಿದ್ರ ಛಿದ್ರ ಮಾಡುವತ್ತ ನಡೆದಿವೆ. ಪತ್ರಿಕಾ ಸ್ವಾತಂತ್ರ್ಯವನ್ನು ಹೊಸಕಿ ಹಾಕಲು ನೋಡುತ್ತಿದೆ, ನ್ಯಾಯ ವ್ಯವಸ್ಥೆಯನ್ನು ಮುಗಿಸಲು ನೋಡುತ್ತಿದೆ. ನಮ್ಮ ದೇಶ ಈ ದಾರಿಯಲ್ಲಿ ನಡೆಯದಂತೆ ನಾವು ನೋಡಿಕೊಳ್ಳಬೇಕಿದೆ. ನಾನು ಹೇಳುತ್ತಿರುವುದು ಅತಿಶಯೋಕ್ತಿಯಲ್ಲ. 1940ರಲ್ಲಿ ಭಾರತದ ವಿಭಜನೆಯ ಮಾತು ಶುರು ಆಯಿತು. ಆದರೆ ಇವರು 1925ರಲ್ಲಿಯೇ ಹಿಂದೂ ರಾಷ್ಟ್ರದ ಮಾತನಾಡಲು ಶುರು ಮಾಡಿದ್ದರು. ಆರ್.ಎಸ್.ಎಸ್.ನ ಹಿಂದುತ್ವ ನಾಝಿ ಮತ್ತು ಫ್ಯಾಸಿಸ್ಟ್ ತತ್ವಗಳನ್ನು ಅನುಸರಿಸುತ್ತದೆ. ಇವರ ಹಿಂದುತ್ವಕ್ಕೂ ಹಿಂದೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ.  ಮುಸಲ್ಮಾನರು ತಮ್ಮ ವೈರಿಗಳು ಎಂದು ಇವರು ಆಗಲೇ ಹೇಳಿದ್ದರು. ಹಾಗೆಯೇ ಕ್ರೈಸ್ತರು ಮತ್ತು ಕೆಂಪು ಧ್ವಜದವರು ಎಂತಲೂ ಹೇಳಿದ್ದರು. ಈಗ ಹಿಂದೂ ರಾಜ್ಯವನ್ನು ಸ್ಥಾಪಿಸಲು ಹೊರಟಿದ್ದಾರೆ. ಹಿಂದೂ ಧರ್ಮವನ್ನು ಅನುಸರಿಸದೇ ಇದ್ದವರು, ಹಿಂದೂ ಧರ್ಮದ ವ್ಯಾಪಕತೆಯನ್ನು ತಿಳಿಯದೇ ಇದ್ದವರು, ನಮ್ಮ ದೇಶವನ್ನು ಏಕಧರ್ಮೀಯ ರಾಷ್ಟ್ರವನ್ನಾಗಿ ಮಾಡಲು ಹವಣಿಸುತ್ತಿದ್ದಾರೆ. ಸಂಘ ಪರಿವಾರದ ಜನರೇ ಹಿಂದೂ ಧರ್ಮದ ದೊಡ್ಡ ವಿರೋಧಿಗಳು. ಇವರನ್ನು ಆಡಳಿತದಿಂದ ಇಳಿಸುವಲ್ಲಿ, ಇವರ ವಿಚಾರ ಧಾರೆಯನ್ನು ಧ್ವಂಸ ಮಾಡುವುದರಲ್ಲಿಯೇ ಮಹಿಳಾ ಮುಕ್ತಿ ಅಡಗಿದೆ. ಹಿಂಸಾಚಾರವನ್ನು ಕಲಿಸುವ, ಸೈನ್ಯ ಕಟ್ಟುವ, ಗುಂಡು ಹಾರಿಸುವ, ಚಾರಿತ್ರ್ಯ ಹರಣ ಮಾಡುವ ವಿದ್ಯೆಯನ್ನು ಕಲಿಸಿದ ಇವರು ದೇಶ ಭಕ್ತರೇ? ಮೋದಿಯನ್ನು ಬೆಂಬಲಿಸುವವರು ದೇಶ ಭಕ್ತರು, ಉಳಿದವರು ದೇಶದ್ರೋಹಿಗಳು ಎಂದು ಬಿಂಬಿಸಲಾಗುತ್ತಿದೆ. ಜನ ಸಾಮಾನ್ಯರು ಈ ಸಮೂಹ ಸನ್ನಿಯಿಂದ ಹೊರಬಂದು ಯಾವುದು ಸರಿ ಎಂದು ಯೋಚಿಸಬೇಕಾಗಿದೆ. ಇದು ನಮ್ಮ ರಾಜಕೀಯ ಪ್ರಜ್ಞೆ, ಇವತ್ತು ನಮ್ಮನ್ನು ಆಳುತ್ತಿರುವ ಗುಂಪು ದಲಿತರು, ಅಲ್ಪ ಸಂಖ್ಯಾತರು, ಶ್ರಮಜೀವಿಗಳು, ಮಹಿಳೆಯರ ಸ್ವಾತಂತ್ರ್ಯವನ್ನು ರೈತರ ಒಳಿತಿಗಾಗಿ ಎಂದಿಗೂ ಶ್ರಮಿಸಲಿಲ್ಲ. ಇವರು ಬುದ್ಧಿಜೀವಿಗಳಿಗೆ ಹೆದರುವವರು, ಪತ್ರಕರ್ತರಿಗೆ ಹೆದರುವವರು. ಅದಕ್ಕೇ ಬಹಳಷ್ಟು ಮಾಧ್ಯಮಗಳನ್ನು 'ಮೋದಿ ಭಕ್ತ್' ಮಾಧ್ಯಮಗಳನ್ನಾಗಿ ಪರಿವರ್ತಿಸಿದ್ದಾರೆ. ಕೆಲವೇ ಕೆಲವು ಮಾಧ್ಯಮಗಳು ಇವರಿಗೆ ಸವಾಲು ಒಡ್ಡುತ್ತಿವೆ. ನೀವು ಮಾಧ್ಯಮವಾಗಬೇಕು, ನೀವು ಮೀಡಿಯಾ, ನೀವೇ ಟೆಲಿವಿಜನ್. ನೀವೇ ಪತ್ರಿಕೆಗಳು. ನೀವು ಹೊಸ ರೀತಿಯ ಪ್ರಚಾರ ಶುರು ಮಾಡಿ, ಮುಕ್ತಿ ಅಂದೋಲನಕ್ಕಾಗಿ ಮೈದಾನಕ್ಕೆ ಇಳಿಯಿರಿ, ಜನರಿಗೆ ಹೇಳಿ 'ಇದು ಮಾಡು ಇಲ್ಲವೇ ಮಡಿ ಆಂದೋಲನ' ಅಂತ. ಇದೇ ನಮ್ಮ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಕಲ್ಪವಾಗಲಿ.

ಧನ್ಯವಾದಗಳು.

*(ಭಾಷಣದ ಅನುವಾದ ಮತ್ತು ಬರಹ ರೂಪ: **ರಾಜೇಶ್ವರಿ ಜೋಶಿ**)*

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ವಿಶಿಷ್ಟ ಅನುಭವ

**– ಶಾರದಾ ಪಾಟೀಲ**

**ಕ.** ರಾ. ಮ. ದೌ. ಒಕ್ಕೂಟವು, ಮಹಿಳೆಯರಿಂದ, ಮಹಿಳೆಯರಿಗಾಗಿ ಹಾಗೂ ಮಹಿಳೆಯರಗೋಸ್ಕರ ಹೋರಾಡುತ್ತಿರುವ ಒಕ್ಕೂಟವಾಗಿದ್ದು, ಅಮಾಯಕ, ಮುಗ್ಧ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ಶೋಷಣೆಯಂತಹ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಜಾಗೃತಿ ಮೂಡಿಸುವ ಕೆಲಸ ಮಾಡುತ್ತಾ ಬಂದಿದೆ. ಮಹಿಳಾ ವರ್ಗಕ್ಕೆ ಜಾಗೃತಿ ಮೂಡಿಸುವ ಈ ಕಾರ್ಯ ಅಗತ್ಯ ಹಾಗೂ ಅವಶ್ಯಕವಾಗಿರುವುದರಿಂದ ಈ ತನ್ನ ಸೇವೆ ಕರ್ನಾಟಕ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಿಗೆ ಪಸರಿಸಲಿ ಎಂಬ ಆಶಯದೊಂದಿಗೆ ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಮಾರ್ಚ್ 8 ಹಾಗೂ 9 ರಂದು ಎರಡು ದಿನಗಳು ಆಚರಿಸಲಾಗುವ ಮಹಿಳಾ ಸಮ್ಮೇಳನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಾ ಬಂದಿದೆ. ಹಾಗೆಯೇ 2019ರ ಮಾರ್ಚ್ ಮಹಿಳಾ ಸಮಾವೇಶ ಆಚರಣೆ ನನ್ನ ಜಿಲ್ಲೆಯಾದ ಧಾರವಾಡದ ಸರದಿಯಾಗಿತ್ತು.

ಒಕ್ಕೂಟದ ಸಂಗಾತಿಗಳು ಹಾಗೂ ಸಮಾನ ಮನಸ್ಕ ಸ್ನೇಹಿತರೆಲ್ಲರ ಆಶಯ, ಧಾರವಾಡದಲ್ಲಿ ಜರುಗಬೇಕಾದ ಮಹಿಳಾ ಸಮಾವೇಶ ಹೆಚ್ಚು ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ಹಾಗೂ ಬಲವಾದ ಸಂದೇಶದೊಂದಿಗೆ ಯಶಸ್ವಿಯಾಗಿ ಆಚರಿಸುವಂತಾಗಬೇಕೆಂದಿತ್ತು. ಅದರಂತೆ, ಅದರ ಸಿದ್ಧತೆಗಾಗಿ ಚರ್ಚಿಸಲು ಧಾರವಾಡದ ಸಾಹಿತ್ಯ ಭವನದಲ್ಲಿ ಡಿಸೆಂಬರ್ 23, 2018 ರಂದು ಮೊದಲ ಸಭೆ ನಿಗದಿಯಾಯಿತು.

ಡಿಸೆಂಬರ್ 23, 2018ರ ಸಭೆಯಲ್ಲಿ ಸುಧೀರ್ಘವಾದ ಚರ್ಚೆಯೊಂದಿಗೆ ಎಲ್ಲರ ಒಕ್ಕೊರಲಿನಿಂದ ಅನೇಕ ಸಮಿತಿಗಳೂ ರಚನೆಯಾದವು. ಅವು ಆಹಾರ, ವಸತಿ, ಪ್ರಚಾರ, ಸಾರಿಗೆ ಸಂಪರ್ಕ, ರ್‍ಯಾಲಿ ನಿರ್ವಹಣೆ, ಸಾಂಸ್ಕೃತಿಕ, ಮಹಿಳೆಯರು, ಯುವಕ, ಯುವತಿಯರು ಸೇರಿದಂತೆ ಎಲ್ಲ ವರ್ಗದ ಜನರ ಕ್ರೋಢೀಕರಣ ಹಾಗೂ ಹಣಕಾಸು (ಲೆಕ್ಕಪತ್ರ ನಿರ್ವಹಣೆ) ಹೀಗೆ ಹತ್ತು ಹಲವಾರು ಸಮಿತಿಗಳು ರಚನೆಯಾಗಿ, 4,5 ಸದಸ್ಯರ ಗುಂಪು ಮಾಡಿ ಎಲ್ಲರ ಒಪ್ಪಿಗೆಯೊಂದಿಗೆ ಅವುಗಳ ನಿರ್ವಹಣೆಯ ಹೊಣೆಗಾರಿಕೆಯನ್ನು ಆಯಾ ಗುಂಪುಗಳಿಗೆ ವಹಿಸಿಕೊಡಲಾಯಿತು.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹಣಕಾಸು ಸಮಿತಿಯಲ್ಲಿ ನನ್ನೊಂದಿಗೆ ಸಂಗಾತಿಗಳಾದ ಶಾರದಾ ದಾಬಡೆ, ಜಯಶ್ರೀ ನಾಡಿಗ ಹಾಗೂ ರಾಜೇಶ್ವರಿ ಜೋಶಿ ಅವರಿದ್ದರು. ಲೆಕ್ಕಪತ್ರವೆಂದರೆ ಮೇಲ್ನೋಟಕ್ಕೆ ಅದೊಂದು ಖರ್ಚು–ವೆಚ್ಚ ಹಾಗೂ ಬಾಕಿ ಹಣವನ್ನು ತೋರಿಸಿದರಾಯಿತು. ಎನಿಸಬಹುದು. ಆದರೆ ನನ್ನ ಅನುಭವದ ಪ್ರಕಾರ ಲೆಕ್ಕಪತ್ರ ನಿರ್ವಹಣೆ ಅದೊಂದು ಸೂಕ್ಷ್ಮ, ಅತ್ಯಂತ ಕ್ಲಿಷ್ಟಕರವಾದ ಸವಾಲಿನ ಕೆಲಸ. ಲೆಕ್ಕಪತ್ರ ನಿರ್ವಹಿಸುವುದೆಂದರೆ, ಸದಾ ಚಾಕಚಕ್ಯತೆಯಿಂದ ಜಾಗರೂಕರಾಗಿರಬೇಕು. ಯಾವುದಕ್ಕೂ ಅಸಡ್ಡೆ ಮಾಡುವಂತಿಲ್ಲ. ಯಾಕೆಂದರೆ ಒಂದು ಯಶಸ್ವಿ ಕೆಲಸದ ಪ್ರಮುಖ ಪಾತ್ರವೇ ಹಣಕಾಸು. ಅಂತಹದೊಂದು ಹೊಣೆಗಾರಿಕೆ ಪ್ರಮುಖವಾಗಿ ನನ್ನ ಮೇಲಿತ್ತು. ಜೊತೆಗೆ ನನ್ನ ಸಮಿತಿಯ ಗೆಳತಿಯರು ಹಾಗೂ ಒಕ್ಕೂಟದ ಎಲ್ಲ ಸಂಗಾತಿಗಳ ಸಹಕಾರ, ಸಹಾಯಹಸ್ತ ಸದಾ ಇರುತ್ತಿತ್ತು. ಹೀಗಾಗಿ ಅದನ್ನು ಯಶಸ್ವಿಯಾಗಿ ನಿರ್ವಹಿಸುವ ಆತ್ಮವಿಶ್ವಾಸವೂ ನನ್ನಲ್ಲಿತ್ತು.

ಮೊದಲ ಸಭೆಯಲ್ಲಿ, ಹಿಂದಿನ ವರ್ಷದ ಮಾರ್ಚ್ ಮಹಿಳಾ ಸಮಾವೇಶ ಜರುಗಿದ ಶಿವಮೊಗ್ಗ ಜಿಲ್ಲೆಯಿಂದ ಅಪಾರ ಪ್ರೀತಿ ಮೌಲ್ಯವುಳ್ಳ ಪುಟ್ಟ ಹಣದ ಕಾಣಿಕೆ ವಾಣಿ ಪೆರಿಯೋಡಿ, ಅನುಪಮಾ ಹಾಗೂ ಇತರ ಸಂಗಾತಿಗಳಿಂದ ನಮ್ಮ ಗುಂಪಿಗೆ ವರ್ಗಾವಣೆ ಮಾಡಿ ಲೆಕ್ಕಪತ್ರ ನಿರ್ವಹಣೆಗೆ ಚಾಲನೆಯನ್ನು ನೀಡಲಾಯಿತು. ಅಂದಿನಿಂದ ಪ್ರಾರಂಭವಾದ ನಮ್ಮ ಹಣಕಾಸು ನಿರ್ವಹಣೆ ಕೆಲಸ ಭರಾಟೆಯಿಂದ ಸಾಗತೊಡಗಿತ್ತು. ಒಕ್ಕೂಟದ ಸಂಗಾತಿಗಳಲ್ಲಿ ಹಣದ ಕ್ರೋಢೀಕರಣಕ್ಕೆ ಹತ್ತು ಹಲವು ಯೋಜನೆಗಳ, ಯೋಚನೆಗಳ ಚರ್ಚೆ ನಡೆದವು. ಹಣದ ಕ್ರೋಢೀಕರಣ ಹೇಗೆ? ಆ ಸಂಗ್ರಹದ ಮೂಲಗಳು ಯಾವುವು? ಎಂದು ಚರ್ಚಿಸಿ ಈ ಕೆಳಗಿನಂತೆ ಸಮಾವೇಶದ ಖರ್ಚು–ವೆಚ್ಚಕ್ಕೆ ಅಗತ್ಯವಿರುವ ಹಣವನ್ನು ಈ ಮೂಲಗಳಿಂದ ಸಂಗ್ರಹಿಸುವುದು ಎಂದಾಯಿತು.

- ಶಾಲಾ ಕಾಲೇಜು ಮುಂತಾದ ವಿದ್ಯಾಸಂಸ್ಥೆಗಳು
- ಸಂಘ ಸಂಸ್ಥೆಗಳು
- ಮಹಿಳಾ ಮಂಡಲಗಳು
- ಚಿಲ್ಲರೆ ವ್ಯಾಪಾರಿಗಳು
- ಸ್ನೇಹಿತ ವರ್ಗ
- ಸಮಾನ ಮನಸ್ಕ ನಾಗರಿಕರು
- ಬಸ್ ಅಭಿಯಾನ
- ಅರಿವಿನ ಪಯಣ ಪುಸ್ತಕ ಹಾಗೂ ಕರವಸ್ತ್ರಗಳ ಮಾರಾಟದಿಂದ
- ಸ್ವಯಂ ದಾನಿಗಳು ಹಾಗೂ ಪ್ರಾಯೋಜಕರು.

ಹೀಗೆ ಅನೇಕ ಹತ್ತು ಹಲವು ಬಲ್ಲ ಮೂಲಗಳಿಂದ ಹಣದ ಕ್ರೋಢೀಕರಣ ಮಾಡುವುದೆಂದರಾಯಿತು. ಹಾಗೆಯೇ ಹಣದ ಕ್ರೋಢೀಕರಣ ಕೆಲಸ ಭರಾಟೆಯಿಂದ ಹಾಗೂ ಅತ್ಯಂತ ಭರವಸೆಯಿಂದ ಆರಂಭವಾಯಿತು. ಹಣದ ಹರಿವು ವಿಸ್ತರಿಸುತ್ತಾ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹೋಯಿತು ಅದರ ಹರಿವು ವಿಸ್ತರಿಸಿದಂತೆ ನನ್ನ ಕೆಲಸದ ಹೊಣೆಗಾರಿಕೆಯು, ವೇಗವೂ ಹೆಚ್ಚಿತು. ಸದಾ ಚುರುಕಾಗಿ ಲೆಕ್ಕಪತ್ರ ನಿರ್ವಹಿಸಬೇಕಾಗಿತ್ತು. ಸಂಗ್ರಹಿಸಿದ ಹಣವನ್ನು ಜಮಾ ತೆಗೆದುಕೊಂಡು ತಕ್ಷಣವೇ ರಶೀದಿ ನೀಡುವುದು. ಖರ್ಚು ವೆಚ್ಚಕ್ಕಾಗಿ, ಮುಂಗಡ ಕೊಡುವುದಕ್ಕೆ ಬಿಲ್ ಪಡೆದು ಹಣ ಕೊಡುವುದು. ಚಿಲ್ಲರೆ ಮಾರುಕಟ್ಟೆಯ ವ್ಯವಹಾರವಾಗಿದ್ದರೆ ಹಣ ಪಡೆಯುವವರ ಕಡೆಯಿಂದ ಬಿಳಿ ಕಾಗದದ ಮೇಲೆ ಖರೀದಿಸಿದ ವಸ್ತು ಹಾಗೂ ಅದರ ಮೊತ್ತ ಬರೆದು ಸಹಿ ಹಾಕಿ ಸಂಬಂಧಪಟ್ಟವರು ಹಣ ಪಡೆಯುತ್ತಿದ್ದರು. ಹೀಗೆ ಕೆಲವು ಬಿಳಿ ಕಾಗದಗಳು, ರಶೀದಿ ಪುಸ್ತಕಗಳೊಂದಿಗೆ ಅಕೌಂಟ್ ಪುಸ್ತಕ ಸದಾ ನನ್ನೊಂದಿಗೆ ಇರುತ್ತಿತ್ತು. ರಿಸಿಪ್ಟ್, ಪೇಮೆಂಟ್, ಬ್ಯಾಲೆನ್ಸ್, ಸಂಗ್ರಹದ ಮೂಲ, ರಶೀದಿ ಕೊಡುವುದು, ಬಿಲ್ ಪಡೆಯುವುದು ಹೀಗೆ ಸತತವಾದ ಕೆಲಸ ಅಚ್ಚುಕಟ್ಟಾಗಿ ನಡೆಯುತ್ತಾ ಹೋಯಿತು. ಆಗಾಗ್ಗೆ ನನ್ನ ಸಮಿತಿಯ ಸದಸ್ಯರ ಜೊತೆ ಹಾಗೂ ಒಕ್ಕೂಟದ ಗೆಳತಿಯರಲ್ಲಿ ಹಣಕಾಸಿನ ಅವಲೋಕನ ನಡೆಯುತ್ತಿತ್ತು.

ಜಮಾ, ಖರ್ಚು, ಉಳಿಕೆ, ಅದೇರೀತಿ ಮುಂಬರುವ ಖರ್ಚಗಳು, ಸಂಗ್ರಹಿಸಬೇಕಾದ ಮೂಲಗಳ ಕುರಿತು ಆಗಾಗ್ಗೆ ಒಕ್ಕೂಟದ ಸಂಗಾತಿಗಳು ಕರೆದ ಸಭೆಯಲ್ಲಿ ಚರ್ಚಿಸಿ ಎಲ್ಲರೂ ಪರಸ್ಪರರ ಅವಗಾಹನೆಗೆ ತರುವುದು ವಾಡಿಕೆಯಾಗಿತ್ತು. ಹೀಗೆ ಸಾವಿರದಿಂದ ಪ್ರಾರಂಭವಾದ ಹಣಕಾಸು, ಲಕ್ಷ ಲಕ್ಷದವರೆಗೆ ನಿರ್ವಹಿಸುವಂತಾಯಿತು. ಯಾವುದೇ ತೊಂದರೆ, ಅಡ್ಡಿ ಆತಂಕಗಳಿಲ್ಲದಂತೆ ಸಮಾವೇಶದ ಖರ್ಚು ಸರಿದೂಗಿಸು ವಂತಾಯಿತಲ್ಲದೇ, ಹೆಚ್ಚುವರಿ ಹಣವನ್ನು ಮುಂದಿನ ಸಮಾವೇಶಕ್ಕೆ ವರ್ಗಾಯಿಸು ವದೆಂದಾಯಿತು.

2019 ಮಾರ್ಚ್ ಮಹಿಳಾ ಸಮಾವೇಶ ಯಶಸ್ವಿಯಾಗಿ ಮುಗಿದನಂತರ, ಗಾಂಧಿ ಶಾಂತಿ ಪ್ರತಿಷ್ಠಾನ, ಧಾರವಾಡದಲ್ಲಿ ಕರೆದ ಅವಲೋಕನ ಸಭೆಯಲ್ಲಿ, ನನಗೆ ವಹಿಸಿದ ಲೆಕ್ಕಪತ್ರದ ವಿವರವನ್ನು ಒಕ್ಕೂಟದ ಎಲ್ಲ ಸಂಗಾತಿಗಳ ಮುಂದಿಟ್ಟಾಗ, ಅವರೆಲ್ಲರಿಂದ ಪಡೆದ ಶ್ಲಾಘನೆಯ ಮಾತುಗಳು ಹಾಗೂ ಒಂದು ಮೆಚ್ಚುಗೆಯ ಚಪ್ಪಾಳೆ ನನ್ನಲ್ಲಿ ಸಾರ್ಥಕತೆಯನ್ನು ಮೂಡಿಸಿತು. ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಆತ್ಮತೃಪ್ತಿ ನನ್ನಲ್ಲಿ ಮನೆ ಮಾಡಿತು.

ಹೀಗೆ ಲೆಕ್ಕಪತ್ರ ನಿರ್ವಹಣೆ ನನ್ನದೊಂದು ಅಭೂತಪೂರ್ವ ಅನುಭವ. ಸಮಾಜದ ಮಹಿಳಾ ವರ್ಗಕ್ಕೆ ನಿಸ್ವಾರ್ಥ ಮನೋಭಾವನೆಯ ಸೇವೆ ನೀಡುತ್ತಾ ಬಂದಿರುವ ಈ ನನ್ನ ಗೆಳತಿಯರೊಂದಿಗೆ ನನ್ನದೊಂದು ಅಳಿಲು ಸೇವೆ ನನಗೆ ಸಾರ್ಥಕ ಭಾವನೆ. ಆನಂದ ಹಾಗೂ ಆತ್ಮತೃಪ್ತಿಯನ್ನು ನೀಡಿದೆ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಕೊನೆಯ ಮಾತು

**ಕ**ಡೆಯದಾಗಿ ಧನ್ಯವಾದ ಅರ್ಪಣೆ. ಯಾರ್ಯಾರ ನೆನಸಬೇಕು ನಾವು? ನಮ್ಮ ಧಾರವಾಡಕ್ಕೆ ಸಮ್ಮೇಳನ ಮಾಡಲು ಗಿಡ ತಂದ ಸುನಂದಾ, ಶಾರದಾ ಪಾಟೀಲ, ಹೇಮಾ ಇವರನ್ನೇ? ವಿಶ್ವಾಸದಿಂದ ಗಿಡವನ್ನು ಕೊಟ್ಟ ಶಿವಮೊಗ್ಗದ ಸಂಗಾತಿ ಗೆಳತಿಯರನ್ನೇ? ಇವೆಲ್ಲಕ್ಕೂ ಮೂಲ ಕಾರಣೀಭೂತರಾದ ತ್ರಿಮೂರ್ತಿಗಳು–ಅನುಪಮ, ಸರಸ್ವತಿ ಮತ್ತು ವಾಣಿಯರನ್ನೇ? ಒಬ್ಬಿಬ್ಬರಲ್ಲ, ಒಂದೆರಡು ಸಂಘಟನೆಗಳಲ್ಲ ನಮ್ಮನ್ನು ಪ್ರೋತ್ಸಾಹಿಸಿ ಪೋಷಿಸಿದವರು. ಮುನ್ನಡೆಸಿದವರು. ಧಾರವಾಡ, ಕಲಘಟಗಿ, ಅಳ್ನಾವರ, ಹುಬ್ಬಳ್ಳಿ, ನವಲಗುಂದ, ತಾಲೂಕುಗಳ ಶಾಲಾ ಕಾಲೇಜುಗಳು, ಧಾರವಾಡದ ಸಮುದಾಯ, ದೇಣಿಗೆಯನ್ನು ಕೊಟ್ಟು ಪೋಷಿಸಿದ ಎಲ್ಲಾ ದಾನಿಗಳು, ಶಿಕ್ಷಕಿಯರ ತರಬೇತಿ ಸಂಸ್ಥೆ, ವಿದ್ಯಾವರ್ಧಕ ಸಂಘ, ನಗರಪಾಲಿಕೆ, ಬಸವ ಕೇಂದ್ರ, ಗುಂಪಿನವರಲ್ಲೊಬ್ಬರಾಗಿಯೇ ಹೋಗಿದ್ದ ಬಸವರಾಜ ಸೂಳಿಬಾವಿ, ಶಂಕರ ಹಲಗತ್ತಿ, ಕೆ.ಎಚ್.ಪಾಟೀಲರು, ಕೆ.ಎಸ್.ಆರ್.ಟಿ.ಸಿ ಯೂನಿಯನ್‌ನ ಪ್ರತಿಭಾ, ವೇದಿಕೆ ನಿರ್ಮಿಸಿಕೊಟ್ಟವರು, ಮಾಧ್ಯಮ ಮಿತ್ರರು, ಕೊಪ್ಪಳ ಮತ್ತು ಬೇರೆಬೇರೆ ಊರುಗಳಿಂದ ಬಂದಿದ್ದ ಒಕ್ಕೂಟದ ಸಂಗಾತಿಗಳು, ಎಲ್ಲರಿಗೂ ವಿನಯದಿಂದ ವಂದಿಸಿ, ಪ್ರೀತಿಯ ಧನ್ಯವಾದಗಳನ್ನು ಹೇಳಿ ಇಲ್ಲಿಗೆ ನಿಲ್ಲಿಸುತ್ತೇವೆ, ಮಂಡ್ಯದಲ್ಲಿ ಜೊತೆಯಾಗುವ ಕನಸಿನೊಂದಿಗೆ ಕೈಜೋಡಿಸುತ್ತಾ.. .. ..

**ಶಾರದಾ ಗೋಪಾಲ, ಸುನಂದಾ ಕಡಮೆ, ರಾಜೇಶ್ವರಿ ಜೋಶಿ**

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping